ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ವಾಸಿಯೇ ಆಗದ ಸಿಕಲ್ ಸೆಲ್ ಕಾಯಿಲೆಗೆ ಪರಿಹಾರ ಸಿಕ್ಕಿದೆಯಂತೆ



ಆಳ-ಅಗಲ: ಟಿಪ್ಪುವನ್ನು ಗುರಿಯಾಗಿಸಿ ನಡೆದ ಹೆಸರು ಕೆಡಿಸುವ ಕೆಲಸ
ಸರ್ಕಾರದ ವಿರುದ್ಧವೇ ಪೈಲಟ್ ಸತ್ಯಾಗ್ರಹ 11
ನಾಳೆ ಅಂತಿಮ ನಿರ್ಧಾರ: ಸವದಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,157 ▲	17,722 ▲	₹62,070 (ಬೆಂಗಳೂರು) ▲	₹76,400 (ಬೆಂಗಳೂರು) ▲	82.12 ▼

ಐದು ವರುಷ: ಬದಲಾದ ವರಸೆ 7
'ಹಾಸನ; ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ಗೆಲುವು ಕಷ್ಟ' 7

ಹಳಬರು ಹೊಸಬರ ಮಿಶ್ರಣ

ಬಿಜೆಪಿ ಮೊದಲ ಪಟ್ಟಿ ಪ್ರಕಟ: ವರುಣಕ್ಕೆ ಸೋಮಣ್ಣ, ಕನಕಪುರಕ್ಕೆ ಅಶೋಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಮತ್ತೆ ಅಧಿಕಾರ ಹಿಡಿಯಬೇಕೆಂಬ ಛಲ ತೊಟ್ಟಿರುವ ಬಿಜೆಪಿ ಅಳೆದು ತೂಗಿ 189 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಿದೆ. ಹಿರಿಯ ಶಾಸಕರು ಪ್ರತಿನಿಧಿಸುವ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಘೋಷಿಸಿಲ್ಲ. ಮೊದಲ ಪಟ್ಟಿಯಲ್ಲಿ ಎಂಟು ಶಾಸಕರಿಗೆ ಟಿಕೆಟ್ ನೀಡದೇ, ಹೊಸಮುಖಗಳಿಗೆ ಮಣೆ ಹಾಕಲಾಗಿದೆ. ಪಟ್ಟಿ ಬಿಡುಗಡೆ ಬೆನ್ನಲ್ಲೇ ಬಂಡಾಯವೂ ಭುಗಿಲೆದ್ದಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ವಸತಿ ಸಚಿವ ವಿ.ಸೋಮಣ್ಣ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಕಂದಾಯ ಸಚಿವ ಆರ್. ಅಶೋಕ ಅವರನ್ನು ಕಣಕ್ಕೆ ಇಳಿಸುವ ಮೂಲಕ ಕಾಂಗ್ರೆಸ್‌ನ 'ಜೋಡಿ ಎತ್ತು'ಗಳನ್ನು ಕಟ್ಟಿ ಹಾಕುವ ರಣತಂತ್ರ ಹೆಣೆದಿದೆ.

ಅಶೋಕ ಅವರು ಪದ್ಮನಾಭ-ನಗರ ಹಾಗೂ ಸೋಮಣ್ಣ ಅವರು ಚಾಮರಾಜನಗರದಿಂದಲೂ ಸ್ಪರ್ಧೆ ಮಾಡಲಿದ್ದಾರೆ. ಸಚಿವರ ಪೈಕಿ ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ ಬದಲು ಪುತ್ರ ಸಿದ್ಧಾರ್ಥ ಸಿಂಗ್ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಮೀನುಗಾರಿಕಾ ಸಚಿವ ಅಂಗಾರ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ.

ಚುನಾವಣಾ ರಾಜಕಾರಣದಿಂದ ನಿವೃತ್ತರಾಗುವುದಾಗಿ ಪ್ರಕಟಿಸಿರುವ ಈಶ್ವರಪ್ಪ ಪ್ರತಿನಿಧಿಸುವ ಶಿವಮೊಗ್ಗ ಕ್ಷೇತ್ರಕ್ಕೆ ಹುರಿಯಾಳುವಿನ ಹೆಸರನ್ನು ಘೋಷಿಸಿಲ್ಲ. ಈ ಸಲ ಕಣಕ್ಕೆ ಇಳಿಯದಂತೆ ಹೈಕಮಾಂಡ್ ಸೂಚಿಸಿದ್ದು, ನಾನು ಸ್ಪರ್ಧೆ ಮಾಡಿಯೇ ತೀರುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಹೈಕಮಾಂಡ್‌ಗೆ ಸಡ್ಡು ಹೊಡೆದಿದ್ದರು. ಅವರು ಪ್ರತಿನಿಧಿಸುವ ಹುಬ್ಬಳ್ಳಿ ಕ್ಷೇತ್ರಕ್ಕೂ ಅಭ್ಯರ್ಥಿಯನ್ನು ಅಂತಿಮಗೊಳಿಸದೆ ಕುತೂಹಲವನ್ನು ಉಳಿಸಲಾಗಿದೆ. ಹಾಲಿ ಶಾಸಕರು ಇರುವ ಮಹದೇವಪುರ (ಅರವಿಂದ ಲಿಂಬಾವಳಿ), ಬೈಂದೂರು (ಸುಕುಮಾರ ಶೆಟ್ಟಿ), ಮೂಡಿಗೆರೆ (ಎಂ.ಪಿ.ಕುಮಾರಸ್ವಾಮಿ) ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ. ಬಿಜೆಪಿ ಸರ್ಕಾರ ರಚನೆಗೆ ಕಾರಣರಾದ ಎಲ್ಲ ಶಾಸಕರಿಗೆ ಟಿಕೆಟ್ ನೀಡಲಾಗಿದೆ. ಹೊಸಕೋಟೆಯಲ್ಲಿ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಮಗನಿಗೆ ಟಿಕೆಟ್ ಕೇಳಿದ್ದರು. ಆದರೆ, ಪಕ್ಷವು ಅವರಿಗೇ ಟಿಕೆಟ್ ನೀಡಿದೆ.

70 ವರ್ಷ ದಾಟಿದವರಿಗೆ, ಹಲವು ಸಲ ಗೆದ್ದ ಹಿರಿಯ ಶಾಸಕರಿಗೆ ಈ ಸಲ ಅವಕಾಶ ನಿರಾಕರಿಸಲಾಗುತ್ತದೆ ಎಂದು ಸುದ್ದಿಗಳು ಹಬ್ಬಿದ್ದವು.


ಆರ್. ಅಶೋಕ


ವಿ. ಸೋಮಣ್ಣ

ಈಶ್ವರಪ್ಪ ನಿವೃತ್ತಿ, ಶೆಟ್ಟರ್ ಬಂಡಾಯ


ಕೆ.ಎಸ್. ಈಶ್ವರಪ್ಪ


ಜಗದೀಶ ಶೆಟ್ಟರ್

ಬೆಂಗಳೂರು: ವಿಧಾನಸಭಾ ಚುನಾವಣಾ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದಕ್ಕೂ ಮೊದಲೇ ಬಿಜೆಪಿ ವರಿಷ್ಠರು ಪಕ್ಷದ ಕೆಲವು ಹಿರಿಯ ಶಾಸಕರಿಗೆ ರಾಜಕೀಯ ನಿವೃತ್ತಿ ಘೋಷಿಸುವಂತೆ ಸೂಚನೆ ನೀಡಿದ್ದರು. ಅದರ ಬೆನ್ನಲ್ಲೇ ಕೆ.ಎಸ್.ಈಶ್ವರಪ್ಪ ಸ್ವಯಂ ನಿವೃತ್ತಿ ಘೋಷಿಸಿದರು. ಆದರೆ, ಜಗದೀಶ ಶೆಟ್ಟರ್ ಅವರು ಹೈಮಾಂಡ್ ಸೂಚನೆಗೆ ಸೆಡ್ಡು ಹೊಡೆದಿದ್ದಾರೆ.

ಈಶ್ವರಪ್ಪ ಅವರು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದು ಸ್ವಯಂ ಇಚ್ಛೆಯಿಂದ ರಾಜಕೀಯ ನಿವೃತ್ತಿ ಪಡೆಯುತ್ತಿರುವುದಾಗಿ ಪ್ರಕಟಿಸಿದರು.

ಆದರೆ, ಜಗದೀಶ ಶೆಟ್ಟರ್ ಅವರು, ರಾಜಕೀಯ ನಿವೃತ್ತಿಗೆ ಒಪ್ಪಿಗೆ ಸೂಚಿಸಿಲ್ಲ. 'ವರಿಷ್ಠರ ಸೂಚನೆಯಿಂದ ಬೇಸರವಾಗಿದ್ದು, ಮುಂದಿನ 10 ವರ್ಷ ರಾಜಕೀಯ ಮಾಡುವ ಇಚ್ಛೆ ಇದೆ. ಚುನಾವಣೆಗೆ ಸ್ಪರ್ಧಿಸುತ್ತೇನೆ' ಎಂದು ಹೇಳಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು ಈಗಾಗಲೇ ರಾಜಕೀಯ ನಿವೃತ್ತಿ ಘೋಷಿಸಿದ್ದರೂ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿರುವ ದಾವಣಗೆರೆ ಉತ್ತರ ಕ್ಷೇತ್ರದ ಎಸ್.ಎ.ರವೀಂದ್ರನಾಥ್ ಮತ್ತು ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸಶೆಟ್ಟಿ ಈ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಈಗಾಗಲೇ ಘೋಷಿಸಿದ್ದಾರೆ. ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಮೊದಲೇ ಘೋಷಿಸಿದ್ದರು. ಅಲ್ಲದೆ, ಲಂಚ ಪಡೆದ ಪ್ರಕರಣದಲ್ಲಿ ಅವರು ಲೋಕಾಯುಕ್ತದಿಂದ ಬಂಧನಕ್ಕೆ ಒಳಗಾಗಿದ್ದಾರೆ.

ಪ್ರಬಲ ಸಮುದಾಯಕ್ಕೆ ಸಿಂಹಪಾಲು

ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಲಿಂಗಾಯತ ಸಮುದಾಯಕ್ಕೆ 51, ಒಕ್ಕಲಿಗ ಸಮುದಾಯಕ್ಕೆ 41 ಸ್ಥಾನಗಳು ಸಿಕ್ಕಿವೆ.

ಕರಾವಳಿಯಲ್ಲಿ ಹೆಚ್ಚಿನ ಪ್ರಯೋಗ

ಬಿಜೆಪಿ ಪಾಲಿಗೆ ಹಿಂದುತ್ವದ ಪ್ರಯೋಗಶಾಲೆಯಾಗಿರುವ ಕರಾವಳಿಯ ಎರಡೂ ಜಿಲ್ಲೆಗಳಲ್ಲಿ ಹೊಸಮುಖಗಳಿಗೆ ಟಿಕೆಟ್ ಘೋಷಿಸುವ ಮೂಲಕ ಆ ಭಾಗದಲ್ಲೇ ಹೆಚ್ಚಿನ ಪ್ರಯೋಗ ನಡೆಸಿದೆ.

ಟಿಕೆಟ್ ಸಿಗದವರು

- ಎಸ್.ಅಂಗಾರ(ಸುಳ್ಯ)
- ಸಂಜೀವ್ ಮಠಂದೂರು (ಪುತ್ತೂರು)
- ಲಾಲಾಜಿ ಮೆಂಡನ್ (ಕಾಪು)
- ರಘುಪತಿ ಭಟ್(ಉಡುಪಿ)
- ಗೂಳಿಹಟ್ಟಿ ಶೇಖರ್ (ಹೊಸದುರ್ಗ)
- ಅನಿಲ್ ಬೆನಕೆ(ಬೆಳಗಾವಿ ಉತ್ತರ)
- ಮಹದೇವಪ್ಪ ಯಾದವಾಡ (ರಾಮದುರ್ಗ)
- ರಾಮಪ್ಪ ಲಮಾಣಿ (ಶಿರಹಟ್ಟಿ)

6ನೇ ಪುಟ ನೋಡಿ

189 ಕ್ಷೇತ್ರ	ಯಾರಿಗೆ ಎಷ್ಟು
ಹೊಸ ಮುಖ	52
ಒಬಿಸಿ	32
ಎಸ್‌ಸಿ	30
ಎಸ್‌ಟಿ	16
ವೈದ್ಯರು	9
ಸ್ನಾತಕೋತ್ತರ ಪದವೀಧರರು	31
ಮಹಿಳೆ	8
ವಕೀಲರು	5
ಶಿಕ್ಷಣ ತಜ್ಞರು	3
ಸಾಮಾಜಿಕ ಕಾರ್ಯಕರ್ತರು	8
ನಿವೃತ್ತ ಸರ್ಕಾರಿ ನೌಕರರು	3
ನಿವೃತ್ತ ಐಎಎಸ್ ಅಧಿಕಾರಿ	1
ನಿವೃತ್ತ ಐಪಿಎಸ್ ಅಧಿಕಾರಿ	1

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಾಸಕ ಲಿಂಗೇಶ್ ಸೇರಿ 16 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹಾಸನ: ಬೇಲೂರು ಶಾಸಕ ಕೆ.ಎಸ್. ಲಿಂಗೇಶ್ ಸೇರಿದಂತೆ 16 ಮಂದಿ ವಿರುದ್ಧ ಬೇಲೂರು ಪೊಲೀಸರು ಬಗರ್‌ಹುಕುಂ ಅಕ್ರಮಕ್ಕೆ ಸಂಬಂಧಿಸಿದಂತೆ ಭಾನುವಾರ (ಏ.9) ಎಫ್‌ಐಆರ್ ದಾಖಲಿಸಿ ಬೇಲೂರಿನ ಸಿಜೆಎಂ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಬಗರ್‌ಹುಕುಂ ಸಮಿತಿ ಅಧ್ಯಕ್ಷರೂ ಆಗಿರುವ ಶಾಸಕ ಕೆ.ಎಸ್. ಲಿಂಗೇಶ್, ಸದಸ್ಯರಾದ ಕುಮಾರ್, ಶೈಲಾ ಮೋಹನ್, ರಮೇಶ್ ಟಿ.ಆರ್., ಪರ್ವತಗೌಡ, ಚೇತನಾ, ಈಶ್ವರ ಪ್ರಸಾದ, ಲಿಂಗೇಶ್ ಎಸ್.ಎನ್., ಮಾಜಿ ಸದಸ್ಯರಾದ ರಂಗನಾಥ, ಭಾಗ್ಯಮ್ಮ, ತಹಶೀಲ್ದಾರ್‌ಗಳಾದ ಜಗದೀಶ್ ಬಿ., ಪರಮೇಶ್ ಎಚ್.ಎಸ್., ಉಮೇಶ್ ಜೆ., ಪುಟ್ಟಸ್ವಾಮಿ ಬಿ.ಎಸ್., ಮೋಹನ್‌ಕುಮಾರ್ ಹಾಗೂ ಇನ್ನೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಮಾಹಿತಿ ಹಕ್ಕು ಕಾರ್ಯಕರ್ತ ಕೋಲಾರದ ರಾಜಣ್ಣ ಕೆ.ಸಿ. ಅವರ ದೂರಿನ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ.

'ಬೇಲೂರು ತಾಲ್ಲೂಕಿನಲ್ಲಿ 2,750 ಎಕರೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ್ದಾರೆ. 2013ರಿಂದ 2018ರವರೆಗೆ ಶಾಸಕರಾಗಿದ್ದ ದಿ. ವೈ.ಎನ್. ರುದ್ರೇಶಗೌಡ, ಈಗಿನ ಶಾಸಕ ಕೆ.ಎಸ್. ಲಿಂಗೇಶ್, ಸಮಿತಿಯ ಸದಸ್ಯರು ಮತ್ತು ಕಂದಾಯ ಅಧಿಕಾರಿಗಳು ಶಾಮೀಲಾಗಿ ಈ ಅಕ್ರಮ ಎಸಗಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 156 (3)ರ ಅನುಸಾರ ತನಿಖೆ ನಡೆಸಿ 2023ರ ಜುಲೈ 7ಕ್ಕೆ ವರದಿ ಸಲ್ಲಿಸಿ' ಎಂದು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ' ನಡೆಸುವ ಬೆಂಗಳೂರಿನ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್ ಅವರು ಮಾರ್ಚ್ 30ರಂದು ಬೇಲೂರು ಪೊಲೀಸ್ ಠಾಣಾಧಿಕಾರಿಗೆ ನಿರ್ದೇಶಿಸಿದ್ದ ಮೇರೆಗೆ ಎಫ್‌ಐಆರ್ ದಾಖಲಾಗಿದೆ.

ಸಹಕಾರಿ ಬ್ಯಾಂಕ್‌ಗಳಲ್ಲಿ ಭಾರಿ ಅಕ್ರಮ

ದಾಖಲೆಗಳು ಇಲ್ಲದೇ ₹ 1,000 ಕೋಟಿ ಪಾವತಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಸಹಕಾರಿ ಬ್ಯಾಂಕ್‌ಗಳಲ್ಲಿ ಗ್ರಾಹಕರ ಗುರುತಿನ ದಾಖಲೆಗಳಿಲ್ಲದೇ ಚೆಕ್ ಡಿಸ್ಕೌಂಟ್ ಮೂಲಕ ₹ 1,000 ಕೋಟಿಗೂ ಹೆಚ್ಚಿನ ಮೊತ್ತವನ್ನು ಸಂಶಯಾಸ್ಪದ ರೀತಿಯಲ್ಲಿ ಪಾವತಿಸಿರುವುದನ್ನು ಆದಾಯ ತೆರಿಗೆ (ಐ.ಟಿ) ಇಲಾಖೆ ಪತ್ತೆ ಮಾಡಿದೆ.

ವಿವಿಧ ಸಹಕಾರಿ ಬ್ಯಾಂಕ್‌ಗಳಿಗೆ ಸಂಬಂಧಿಸಿದ 16 ಸ್ಥಳಗಳ ಮೇಲೆ ಮಾರ್ಚ್ 31ರಂದು ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದರು. ಈ ಸಂದರ್ಭದಲ್ಲಿ ವಶಪಡಿಸಿಕೊಂಡ ದಾಖಲೆಗಳು ಮತ್ತು ಡಿಜಿಟಲ್ ಸಾಕ್ಷ್ಯಗಳ ಪರಿಶೀಲನೆಯಿಂದ ಅಕ್ರಮ ನಡೆದಿರುವುದು ಕಂಡುಬಂದಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಮಂಗಳವಾರ ತಿಳಿಸಿದೆ.

ಸಂಶಯಾಸ್ಪದ ಮತ್ತು ಅಸ್ತಿತ್ವದಲ್ಲೇ ಇಲ್ಲದ ಉದ್ದಿಮೆಗಳ ಹೆಸರಿನಲ್ಲಿ ನೇರ ಪಾವತಿಯ (ಬೇರರ್) ಚೆಕ್‌ಗಳನ್ನು ಸಹಕಾರ ಬ್ಯಾಂಕ್‌ಗಳಲ್ಲಿ 'ಡಿಸ್ಕೌಂಟ್' ಮಾಡಲಾಗಿದೆ. ಬಳಿಕ ಆ ಮೊತ್ತವನ್ನು ಸಹಕಾರ ಬ್ಯಾಂಕ್‌ಗಳಲ್ಲಿಯೇ ಇರುವ ಸಹಕಾರ ಸೊಸೈಟಿಗಳ ಖಾತೆಗಳಿಗೆ ವರ್ಗಾಯಿಸಲಾಗಿದೆ. ನಂತರ ಈ ಮೊತ್ತವನ್ನು ಸಹಕಾರ ಸೊಸೈಟಿಗಳ ಖಾತೆಗಳಿಂದ ತೆಗೆದು ಉದ್ಯಮಿಗಳಿಗೆ ನೀಡಲಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿಗಳು, ಗುತ್ತಿಗೆದಾರರು ಈ ಅಕ್ರಮದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಬೃಹತ್ ಪ್ರಮಾಣದ ಚೆಕ್‌ಗಳನ್ನು ಡಿಸ್ಕೌಂಟ್ ಮಾಡುವ ಸಮಯದಲ್ಲಿ ಗ್ರಾಹಕರ ಗುರುತಿನ (ಕೆವೈಸಿ) ದಾಖಲೆಗಳನ್ನು ಪಡೆದಿಲ್ಲ. ಬೃಹತ್ ಪ್ರಮಾಣದ ನಗದು ಹಿಂಪಡೆಯುವುದರ ಮೂಲವನ್ನು ಮುಚ್ಚಿಡುವುದಕ್ಕಾಗಿ ಈ ರೀತಿ ಮಾಡಲಾಗಿದೆ. ಅಲ್ಲದೇ ಈ ಉದ್ಯಮಿಗಳು ನಕಲಿ ವೆಚ್ಚದ ದಾಖಲೆಗಳನ್ನು ಸೃಷ್ಟಿಸಿಕೊಳ್ಳಲು ಸಹಕಾರ ಬ್ಯಾಂಕ್‌ಗಳು ನೆರವು ನೀಡಿವೆ. ಬ್ಯಾಂಕ್ ಖಾತೆಗಳ ಮೂಲಕ ನಗದೀಕರಿಸಬಹುದಾದ ಚೆಕ್‌ಗಳ ಬಳಕೆಯಲ್ಲಿ ವೆಚ್ಚದ ದಾಖಲೆಗಳನ್ನು ತೋರಿಸಲು ಇರುವ ಮಿತಿಯನ್ನು ಮೀರಿ ವಹಿವಾಟು ನಡೆಸಲು ಈ ಮಾರ್ಗ ಅನುಸರಿಸಲಾಗಿದೆ ಎಂದು ಹೇಳಿದೆ.

ಚುನಾವಣಾ ಅಕ್ರಮಕ್ಕೆ ಬಳಸುವ ಶಂಕೆ

ಸಹಕಾರಿ ಸಂಸ್ಥೆಗಳನ್ನು ಬಳಸಿಕೊಂಡು ದೊಡ್ಡ ಮೊತ್ತದ ಹಣವನ್ನು ನಗದೀಕರಿಸಿ ಚುನಾವಣಾ ಅಕ್ರಮಕ್ಕೆ ಬಳಸುವ ಶಂಕೆಯ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಸಹಕಾರ ಬ್ಯಾಂಕ್‌ಗಳ ಮೇಲೆ ದಾಳಿ ನಡೆಸಿದ್ದರು.

ಚುನಾವಣಾ ಸಂದರ್ಭದಲ್ಲಿ ಹೆಚ್ಚಿನ ಮೊತ್ತದ ನಗದು ಸಂಗ್ರಹಿಸಲು ಸಹಕಾರಿ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತದೆ ಎಂಬ ಕಾರಣಕ್ಕಾಗಿ ತೀವ್ರ ನಿಗಾ ಇರಿಸಲಾಗುತ್ತದೆ. ಆದರೆ, ಈ ಬಾರಿ ತುಸು ಮುಂಚಿತವಾಗಿಯೇ ಬೃಹತ್ ಮೊತ್ತದ ಹಣ ಸಂಶಯಾಸ್ಪದ ರೀತಿಯಲ್ಲಿ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ.

4ನೇ ಪುಟ ನೋಡಿ

'ಚುನಾವಣೆ ಘೋಷಣೆಗೂ ಮುನ್ನ ಜಪ್ತಿ ಸಲ್ಲ'



ಬೆಂಗಳೂರು: 'ಚುನಾವಣೆಯ ದಿನಾಂಕ ಘೋಷಣೆಗೂ ಮುನ್ನ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ದಾಳಿ ನಡೆಸಿ ಯಾವುದೇ ವಸ್ತುಗಳನ್ನು ಜಪ್ತಿ ಮಾಡುವಂತಿಲ್ಲ ಹಾಗೂ ವಶಕ್ಕೆ ಪಡೆದುಕೊಳ್ಳಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ತಮಗೆ ಸೇರಿದ 530 ಅಕ್ಕಿ ಚೀಲಗಳನ್ನು ವಶಪಡಿಸಿಕೊಂಡ ಚುನಾವಣಾಧಿಕಾರಿ ಮತ್ತು ಪೊಲೀಸರ ಕ್ರಮವನ್ನು ಪ್ರಶ್ನಿಸಿ ಶಿವಾಜಿನಗರದ ಇಷ್ತಿಯಾಕ್ ಅಹ್ಮದ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಚುನಾವಣಾ ಪ್ರಕ್ರಿಯೆ ನಡೆಸುವ ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದ ಮಾತ್ರಕ್ಕೆ ಅಧಿಕಾರಿಗಳು ಚುನಾವಣೆ ಘೋಷಣೆಗೂ ಮೊದಲೇ ತಮಗೆ ದತ್ತವಾದ ಅಧಿಕಾರವನ್ನು ಚಲಾಯಿಸುವಂತಿಲ್ಲ. ಅಷ್ಟಕ್ಕೂ ಸಾಮಾನ್ಯ ಸಂದರ್ಭಗಳಲ್ಲಿ ಶೋಧ ನಡೆಸಿ ಜಪ್ತಿ ಮಾಡುವ ಅಧಿಕಾರವನ್ನು, ಅಗತ್ಯ ವಸ್ತುಗಳ ಕಾಯ್ದೆ-1955ರ ಅಡಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು ಯಾವತ್ತೂ ಹೊಂದಿವೆ. ಹೀಗಾಗಿ, ಚುನಾವಣಾಧಿಕಾರಿ ಮತ್ತು ಪೊಲೀಸರು ಈ ಅಧಿಕಾರವನ್ನು ಚುನಾವಣೆ ದಿನಾಂಕ ಘೋಷಣೆಗೂ ಮುನ್ನವೇ ಚಲಾಯಿಸಿದರೆ ಅದು ಕಾನೂನು ಬಾಹಿರವಾಗಲಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

4ನೇ ಪುಟ ನೋಡಿ

ಅರುಣಾಚಲಕ್ಕೆ ಶಾ: ಚೀನಾ ಆಕ್ಷೇಪ ತಿರಸ್ಕರಿಸಿದ ಭಾರತ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶಕ್ಕೆ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಭೇಟಿ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಚೀನಾದ ನಡೆಗೆ ತಿರುಗೇಟು ನೀಡಿರುವ ಭಾರತವು, ಅರುಣಾಚಲ ಪ್ರದೇಶವು ಹಿಂದೆಯೂ, ಇಂದೂ, ಮುಂದೆಯೂ ಭಾರತದ ಅವಿಭಾಜ್ಯ ಅಂಗವಾಗಿರಲಿದೆ ಎಂದು ಹೇಳಿದೆ.

ಶಾ ಅವರ ಭೇಟಿಗೆ ಚೀನಾವು ಕಾರಣವಿಲ್ಲದೆ ಆಕ್ಷೇಪ ಎತ್ತಿದೆ ಮತ್ತು ಇದರಿಂದ ವಾಸ್ತವ ಬದಲಾಗುವುದಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಹೇಳಿದ್ದಾರೆ.

'ಚೀನಾದ ಅಧಿಕೃತ ವಕ್ತಾರರು ನೀಡಿರುವ ಹೇಳಿಕೆಯನ್ನು ನಾವು ಸಂಪೂರ್ಣವಾಗಿ ಅಲ್ಲಗಳೆಯುತ್ತೇವೆ. ಭಾರತದ ನಾಯಕರು ಇತರ ರಾಜ್ಯಗಳಿಗೆ ಭೇಟಿ ನೀಡಿದಂತೆ ಅರುಣಾಚಲ ಪ್ರದೇಶಕ್ಕೂ ಭೇಟಿ ನೀಡುತ್ತಾರೆ' ಎಂದಿದ್ದಾರೆ.

ಅರುಣಾಚಲ ಪ್ರದೇಶದ ಗಡಿ ಗ್ರಾಮವಾಗಿರುವ ಕಿಬಿಥೂಗೆ ಸೋಮವಾರ ಭೇಟಿ ನೀಡಿದ್ದ ಶಾ ಅವರು, 'ಭಾರತದ ಪ್ರಾದೇಶಿಕ ಸಮಗ್ರತೆಯ ಮೇಲೆ ಕೆಟ್ಟ ದೃಷ್ಟಿ ಬೀರಲು ಮತ್ತು ನಮ್ಮ ದೇಶದ ಒಂದು ಅಂಗುಲ ನೆಲವನ್ನೂ ವಶಪಡಿಸಿಕೊಳ್ಳಲು ಯಾರೂ ಧೈರ್ಯ ತೋರಲಾರರು' ಎಂದಿದ್ದರು.

ಭಾರತದ ಗಡಿಯನ್ನು ಯಾರು ಬೇಕಾದರೂ ಅತಿಕ್ರಮಿಸಬಹುದು ಎಂಬ ಯುಗ ಕಳೆದಿದೆ ಎಂದಿದ್ದರು.

ಬುಧವಾರದ ಉಷ್ಣಾಂಶ 35° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಕಾಶ, ಬಿಸಿಲಿನ ತಾಪ ಇರಲಿದೆ

ಹವಾಮಾನ	ಗುರುವಾರ	ಶುಕ್ರವಾರ	ಶನಿವಾರ
	36° 23°	36° 23°	36° 23°

ಚುನಾವಣೆ: ಮಹಿಳಾ ಸುರಕ್ಷತೆಗೆ ಒತ್ತಾಯ

ಬೆಂಗಳೂರು: ವಿಧಾನಸಭಾ ಚುನಾವಣೆಯ ವೇಳೆ ಮಹಿಳೆಯರ ಘನತೆಗೆ ಕುಂದುಂಟು ಮಾಡುವ ಮಾತುಗಳನ್ನು ಆಡದಂತೆ ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಉಪಾಧ್ಯಕ್ಷೆ ವಿಮಲಾ.ಕೆ.ಎಸ್ ಒತ್ತಾಯಿಸಿದರು. ಮಹಿಳೆಯರಿಗೆ ಸುರಕ್ಷೆ, ಶೌಚಾಲಯ, ವಸತಿಗೆ ವ್ಯವಸ್ಥೆ ಮಾಡಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ಮನವಿ ಸಲ್ಲಿಸಿದರು.

ನಗರದಲ್ಲಿ ಕ್ರಾಂತಿ • ಅಂಚೆ ಕಚೇರಿ ನಿರ್ಮಾಣ; ಶೇ 30ರಿಂದ 40ರಷ್ಟು ವೆಚ್ಚ ಉಳಿತಾಯ

‘3ಡಿ’ ಕಾಂಕ್ರೀಟ್ ಪ್ರಿಂಟಿಂಗ್ ಕಟ್ಟಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 3‘ಡಿ’ ಕಾಂಕ್ರೀಟ್ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿಕೊಂಡು ದೇಶದ ಮೊದಲ ಅಂಚೆ ಕಚೇರಿ ಕಟ್ಟಡವನ್ನು ರಾಜಧಾನಿಯಲ್ಲಿ ನಿರ್ಮಿಸಲಾಗುತ್ತಿದೆ.

ಅಂದಾಜು 1,000 ಚದರ ಅಡಿ ವಿಸ್ತೀರ್ಣದಲ್ಲಿ ಹಲಸೂರು ಅಂಚೆ ಕಚೇರಿ ಕಟ್ಟಡವನ್ನು 3‘ಡಿ’ ವಿನ್ಯಾಸದಲ್ಲಿ ರೂಪಿಸಿ ನಿರ್ಮಿಸಲಾಗುತ್ತಿದೆ. ಎಲ್ ಅಂಡ್ ಟಿ ಕನ್‌ಸ್ಟ್ರಕ್ಷನ್ ಕಂಪನಿ ಕಟ್ಟಡ ನಿರ್ಮಾಣ ಜವಾಬ್ದಾರಿ ಹೊತ್ತುಕೊಂಡಿದೆ. ಕಟ್ಟಡದ ಕಾಮಗಾರಿಯೂ ಪ್ರಗತಿಯಲ್ಲಿದೆ.

ಸಾಮಾನ್ಯವಾಗಿ ಅಂಚೆ ಕಚೇರಿಯ ಕಟ್ಟಡವೊಂದಕ್ಕೆ ನಿರ್ಮಾಣವಾಗುತ್ತಿದ್ದ ವೆಚ್ಚಕ್ಕಿಂತ ಕಡಿಮೆ ವೆಚ್ಚವಾಗಲಿದೆ. ಶೇ 30ರಿಂದ 40ರಷ್ಟು ವೆಚ್ಚ ಉಳಿತಾಯವೂ ಆಗಲಿದೆ ಎಂದು ಗುತ್ತಿಗೆ ಕಂಪನಿ ತಿಳಿಸಿದೆ.

ಮಾರ್ಚ್ 20ರಿಂದ ಕಾಮಗಾರಿ ಆರಂಭವಾಗಿದೆ. ಕಡಿಮೆ ಸಂಖ್ಯೆ ಕಾರ್ಮಿಕರನ್ನು ಬಳಸಿಕೊಳ್ಳಲಾಗಿದೆ. ನಿರ್ಮಾಣದ ಕಾಮಗಾರಿ ಸಂದರ್ಭದಲ್ಲಿ ಶಬ್ದವೂ ಕಡಿಮೆ.

ಸಾಮಾನ್ಯವಾಗಿ ಕಟ್ಟಡ ನಿರ್ಮಾಣದಂತದಲ್ಲಿ ಸಿಮೆಂಟ್, ಯಂತ್ರಗಳು, ಕಾರ್ಮಿಕರ ಗುಂಪು, ಗದ್ದಲ, ಮರಳು, ಇಟ್ಟಿಗೆಯನ್ನು ಕಾಣುತ್ತೇವೆ. ಆದರೆ, ಇಲ್ಲಿ ಸಂಪೂರ್ಣ ಸ್ವಯಂ ಚಾಲಿತ (ರೋಬೋಟಿಕ್) ಪ್ರಿಂಟರ್ ಬಳಸಿಕೊಂಡು, 3‘ಡಿ’ ಮುದ್ರಣ ತಂತ್ರಜ್ಞಾನಕ್ಕೆ ಅನುಗುಣವಾಗಿ ಕಾಂಕ್ರೀಟ್ ಅನ್ನು ಪದರು ಪದರು […] ವಿಧಾನದಲ್ಲಿ ಭರ್ತಿ ಮಾಡಲಾಗುತ್ತದೆ. ಸ್ವಯಂ ಚಾಲಿತ 3‘ಡಿ’ ಪ್ರಿಂಟರ್ ಬಳಸಿಕೊಂಡು ಎರಕ ಹೊಯ್ಯಲಾಗುತ್ತಿದೆ ಎಂದು ಕಾರ್ಮಿಕರು ಹೇಳುತ್ತಾರೆ.

‘ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡರೆ, ಕಟ್ಟಡವು ಬೆಂಗಳೂರಿನ ಹೆಗ್ಗುರುತಾಗಲಿದೆ. ಈ ತಂತ್ರಜ್ಞಾನ ಬಳಸಿಕೊಂಡು ನಾವು ಕೈಗೆಟುಕುವ ಬೆಲೆಗೆ ವಸತಿ ಸೌಲಭ್ಯವನ್ನು ಜಿ+3 ಮಹಡಿಗಳು, ವಿಲ್ಲಾಗಳು, ಮಿಲಿಟರಿ ಬ್ಯಾರಕ್‌ಗಳು ಮತ್ತು ಏಕಮಹಡಿ ಶಾಲೆಗಳು, ಅಂಚೆ ಕಚೇರಿಗಳು ಮತ್ತು ಕಾರ್ಖಾನೆಗಳನ್ನು ನಿರ್ಮಿಸಲು ಸಶಕ್ತವಾಗಿದ್ದೇವೆ. ಈ ತಂತ್ರಜ್ಞಾನದ ಮೂಲಕ ಯಾವುದೇ ಶೈಲಿಯಲ್ಲೂ ಕಟ್ಟಡ ನಿರ್ಮಿಸಬಹುದು. ಈ ಅಂಚೆ ಕಚೇರಿಗೆ ಅಂದಾಜು ₹ 23 ಲಕ್ಷ ವೆಚ್ಚವಾಗಲಿದೆ. ಕೆಲವೇ ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ಎಲ್ ಅಂಡ್ ಟಿ ಕನ್‌ಸ್ಟ್ರಕ್ಷನ್ ನಿರ್ದೇಶಕ ಎಂ.ವಿ.ಸತೀಶ್ ಹೇಳುತ್ತಾರೆ.

‘ಈ ತಂತ್ರಜ್ಞಾನದ ಕಾಮಗಾರಿಗೆ ಕಡಿಮೆ ಸಾಮಗ್ರಿ ಬಳಕೆಯಾಗಲಿದೆ. ಜತೆಗೆ, ವಿದ್ಯುತ್ ಶಕ್ತಿ ಬಳಕೆಯೂ ಕಡಿಮೆ ಇರಲಿದೆ. ಈ ಅಂಚೆ ಕಚೇರಿ ಕಟ್ಟಡವು 3ಡಿ ತಂತ್ರಜ್ಞಾನ ಬಳಸಿಕೊಂಡು ನಿರ್ಮಿಸಲಾಗುತ್ತಿರುವ ಕರ್ನಾಟಕದ ಮೊದಲ ಸರ್ಕಾರಿ ಕಟ್ಟಡವಾಗಿದೆ’ ಎಂದು ಹೇಳುತ್ತಾರೆ.

ಈ ಪ್ರಯೋಗಿಕ ಕಟ್ಟಡದ ಯಶಸ್ಸು ಆಧರಿಸಿ ಅಂಚೆ ಇಲಾಖೆಯು ಮತ್ತಷ್ಟು ಕಟ್ಟಡಗಳನ್ನು ಇದೇ ಮಾದರಿಯಲ್ಲಿ ನಿರ್ಮಿಸಲು ಆಲೋಚಿಸಿದೆ.

‘ಅಂಚೆ ಇಲಾಖೆಗೆ ಸಂಬಂಧಿಸಿದ 400 ಖಾಲಿ ನಿವೇಶನಗಳಿವೆ. ಆ ಸ್ಥಳದಲ್ಲೂ ಅಂಚೆ ಕಚೇರಿ ಕಟ್ಟಡ ನಿರ್ಮಿಸಬೇಕಿದೆ. ಕಾಮಗಾರಿ ಮುಕ್ತಾಯವಾದ ಬಳಿಕ ವರದಿಯನ್ನು ಇಲಾಖೆಗೆ ಸಲ್ಲಿಸಲಾಗುವುದು. ಇಲಾಖೆ ಒಪ್ಪಿದರೆ ಇದೇ ಮಾದರಿಯ ಮತ್ತಷ್ಟು ಕಟ್ಟಡಗಳು ನಗರದಲ್ಲಿ ನಿರ್ಮಾಣವಾಗುವ ಸಾಧ್ಯತೆಯಿದೆ’ ಎಂದು ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್ ಹೇಳುತ್ತಾರೆ.

ಹಲಸೂರಿನ ಕೇಂಬ್ರಿಡ್ಜ್ ಲೇಔಟ್‌ನಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಅಲ್ಲಿನ ನಿವಾಸಿಯೊಬ್ಬರು ಮೊಬೈಲ್‌ನಲ್ಲಿ ಕಾಮಗಾರಿಯ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು. ಇದು ಬೆಂಗಳೂರಿನ ಹೆಮ್ಮೆ ಎಂದು ಬಣ್ಣಿಸಿದ್ದರು.

ಈ ಹೊಸ ತಂತ್ರಜ್ಞಾನವನ್ನು ಕಟ್ಟಡ ನಿರ್ಮಾಣ ಸಾಮಗ್ರಿಗಳು ಮತ್ತು ತಂತ್ರಜ್ಞಾನ ಉತ್ತೇಜನಾ ಮಂಡಳಿ (ಬಿಎಂಟಿಪಿಸಿ) ಅನುಮೋದಿಸಿದೆ ಹಾಗೂ ಅಂಚೆ ಕಚೇರಿ ಕಟ್ಟಡ ಸ್ವರೂಪದ ವಿನ್ಯಾಸವನ್ನು ಐಐಟಿ ಮದ್ರಾಸ್ ಮಾನ್ಯ ಮಾಡಿದೆ.



3‘ಡಿ’ ಕಾಂಕ್ರೀಟ್ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿಕೊಂಡು ನಿರ್ಮಿಸುತ್ತಿರುವ ಅಂಚೆ ಕಚೇರಿ ಕಟ್ಟಡ

ಎಲ್ ಆ್ಯಂಡ್‌ಟಿಯ ನಿರ್ಮಾಣ

- ತಮಿಳುನಾಡಿನ ಕಾಂಚೀಪುರಂನ ಎಲ್ ಆ್ಯಂಡ್ ಟಿನಲ್ಲಿ ಒಂದೇ ಅಂತಸ್ತಿನ ಕಟ್ಟಡ
- ತಮಿಳುನಾಡಿನ ಕಾಂಚೀಪುರಂನ ಎಲ್ ಆ್ಯಂಡ್‌ಟಿನಲ್ಲಿ ಜಿ + 1 ಕಟ್ಟಡ
- ತಮಿಳುನಾಡಿನ ಚೆನ್ನೈನಲ್ಲಿ ಎಲ್‌ಆ್ಯಂಡ್‌ಟಿ ರಿಯಾಲಿಟಿಗಾಗಿ ಪ್ರದರ್ಶನ ಫ್ಲಾಟ್

‘ಸಮುದಾಯ ಭವನ ಹುಡುಕಿ ಕೊಡಿ’

ಪೀಣ್ಯ ದಾಸರಹಳ್ಳಿ: ‘ಲಕ್ಷ್ಮಿಪುರ ಗ್ರಾಮದ ಪರಿಶಿಷ್ಟರ ಕಾಲೊನಿಯಲ್ಲಿ ಸಮುದಾಯ ಭವನ ನಿರ್ಮಿಸಲಾಗಿದೆ ಎಂದು ಸುಮಾರು ₹ 10 ಲಕ್ಷ ವೆಚ್ಚದ ಬಿಲ್ ಮಾಡಿಕೊಂಡಿರುವ ಶಾಸಕರು ಸಮುದಾಯ ಭವನವನ್ನು ಹುಡುಕಿಕೊಡಲಿ’ ಎಂದು ಬಾಗಲಗುಂಟೆ ವಾರ್ಡ್ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಘು ಸೂರ್ಯ ಆರೋಪ ಮಾಡಿದ್ದಾರೆ. ಮಾಹಿತಿ ಹಕ್ಕಿನಲ್ಲಿ ವಿವರ ತೆಗೆದುಕೊಂಡು ನೋಡಿದಾಗ ಹಲವು ದಿನಗಳ ಹಿಂದೆ ಬಿಲ್ ಪಡೆದಿರುವುದು ಗೊತ್ತಾಗಿದೆ. ಆದರೆ ಸಮುದಾಯ ಭವನ ನಿರ್ಮಾಣವಾಗಿಲ್ಲ ಎನ್ನುತ್ತಿದ್ದಾರೆ’ ಎಂದು ಹೇಳಿದರು.



ರಘು ಸೂರ್ಯ

ಲಾಲ್‌ಬಾಗ್: ಚರಂಡಿ ನಿರ್ಮಿಸಲು ₹90 ಲಕ್ಷ ಬಿಡುಗಡೆ

ಬೆಂಗಳೂರು: ‘ಲಾಲ್‌ಬಾಗ್‌ನ ಬ್ಯಾಂಡ್ ಸ್ಟ್ಯಾಂಡ್ ಹತ್ತಿರದ ತಗ್ಗು ಪ್ರದೇಶದ ಅಭಿವೃದ್ಧಿಗೆ ₹90 ಲಕ್ಷ ಅನುದಾನ ಬಿಡುಗಡೆಯಾಗಿದೆ’ ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ತಿಳಿಸಿದರು.

‘ಈ ಪ್ರದೇಶದಲ್ಲಿ ಮಳೆಗಾಲದಲ್ಲಿ ಕೊಳಚೆ ನೀರು ನಿಲ್ಲುತ್ತಿತ್ತು. ಅದನ್ನು ಸರಾಗವಾಗಿ ಹರಿದು ಹೋಗಲು ಚರಂಡಿ ನಿರ್ಮಿಸಲಾಗುವುದು. ಹೀಗಾಗಿ, ಈ ಸ್ಥಳದ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ. ಲಾಲ್‌ಬಾಗ್‌ನ ಮುಖ್ಯ ದ್ವಾರ, ಪಶ್ಚಿಮ ದ್ವಾರ ಮತ್ತು ಎನ್‌ಎಚ್‌ಎಂ ಕಚೇರಿ ಹತ್ತಿರ ಮೂರು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಅನುದಾನ ಬಿಡುಗಡೆಯಾಗಿದೆ’ ಎಂದು ಹೇಳಿದರು.



2022ರ ನವೆಂಬರ್ 15ರಂದು ‘ಪ್ರಜಾವಾಣಿ’ಯಲ್ಲಿ ‘ಹೂತೋಟ ಸಮಸ್ಯೆಗಳ ನೋಟ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ಸರಣಿ ವರದಿಗಳನ್ನು ಪ್ರಕಟಿಸಿತ್ತು. ಜನರಿಂದಲೇ ಅಲ್ಲಿನ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿತ್ತು.

‘ಒಳಮೀಸಲಾತಿ: 89 ಸಮುದಾಯಗಳಿಗೆ ಅನ್ಯಾಯ’

ಬೆಂಗಳೂರು: ‘ರಾಜ್ಯ ಸರ್ಕಾರ ಒಳಮೀಸಲಾತಿ ವರ್ಗೀಕರಣ ಮಾಡುವ ಮೂಲಕ 89 ಸಮುದಾಯಗಳಿಗೆ ಅನ್ಯಾಯ ಮಾಡಿದೆ’ ಎಂದು ಅಲೆಮಾರಿ ಬುಡಕಟ್ಟು ಮಹಾಸಭಾದ ಗೌರವಾಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಆರೋಪಿಸಿದರು.

‘ಅಧ್ಯಯನ ನಡೆಸದೇ ಪ್ರಾಯೋಗಿಕ ಅಂಕಿ–ಅಂಶಗಳಿಲ್ಲದೇ ಸರ್ಕಾರ ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡಿದೆ. ಸಚಿವ ಸಂಪುಟ ಸಭೆಯಲ್ಲಿ ಮಾದಿಗ ಸಂಬಂಧಿತ ಜಾತಿಗಳಿಗೆ ಶೇ 6.5, ಹೊಲೆಯ ಸಂಬಂಧಿತ ಜಾತಿಗಳಿಗೆ ಶೇ 5.5, ಸ್ಪೃಶ್ಯ ಜಾತಿಗಳಿಗೆ ಶೇ 4.5 ಮತ್ತು 89 ಜಾತಿಗಳಿಗೆ ಶೇ 1ರಷ್ಟು ಮೀಸಲಾತಿಯನ್ನು ಘೋಷಿಸಲಾಗಿದೆ. ಈ ಒಳಮೀಸಲಾತಿಯನ್ನು ಯಾವ ಕುಲಶಾಸ್ತ್ರೀಯ ಅಧ್ಯಯನದ ಆಧಾರದ ಮೇಲೆ ನಡೆದಿದೆ ಎಂಬುದನ್ನು ಸರ್ಕಾರ ಇದುವರೆಗೂ ಸ್ಪಷ್ಟಪಡಿಸಿಲ್ಲ’ ಎಂದರು.

ಸುದ್ದಿ 2 ನಿಮಿಷ

ನಿವೃತ್ತಿಗೆ ಒಂದು ದಿನವಿದ್ದರೂ ಬಡ್ತಿಗೆ ನೌಕರ ಅರ್ಹ –‘ಸುಪ್ರೀಂ’

ನವದೆಹಲಿ (ಪ್ರಜಾವಾಣಿ ವಾರ್ತೆ): ‘ನೌಕರನ ಸೇವಾವಧಿಯು ಒಂದು ದಿನವಷ್ಟೇ ಇದ್ದು, ಮಾರನೇ ದಿನವೇ ನಿವೃತ್ತರಾಗುತ್ತಾರೆ ಎಂಬ ಕಾರಣಕ್ಕೇ ನೌಕರನ ವಾರ್ಷಿಕ ವೇತನ ಬಡ್ತಿಯನ್ನು ನಿರಾಕರಿಸುವಂತಿಲ್ಲ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) ಈ ಸಂಬಂಧ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು ವಜಾ ಮಾಡಿತು.

‘ನಿಗದಿತ ಹಿಂದಿನ ಒಂದು ವರ್ಷದ ಅವಧಿಯಲ್ಲಿ ಸಲ್ಲಿಸಿರುವ ಸೇವೆ ಹಾಗೂ ಸನ್ನಡತೆಗಾಗಿ ನೌಕರ ವೇತನ ಬಡ್ತಿಗೆ ಅರ್ಹರಾಗಿರುತ್ತಾರೆ. ಮಾರನೇ ದಿನವೇ ನಿವೃತ್ತನಾಗುತ್ತಾನೆ ಎಂಬ ಕಾರಣಕ್ಕೇ ಅದನ್ನು ನಿರಾಕರಿಸಲಾಗದು‘ ಎಂದು ಪೀಠ ಅಭಿಪ್ರಾಯಪಟ್ಟಿತು.

ಸಿ.ಪಿ.ಮುಂದಿನಮನಿ ಮತ್ತು ಇತರರು ವೇತನ ಬಡ್ತಿಗೆ ಅರ್ಹರಾಗಿದ್ದರು. ಆದರೆ, ನಾಳೆಯೇ ನಿವೃತ್ತರಾಗುತ್ತಾರೆ ಎಂಬ ಕಾರಣ ನೀಡಿ ಕೆಪಿಟಿಸಿಎಲ್ ನಿರಾಕರಿಸಿತ್ತು. ‘ವೇತನ ಬಡ್ತಿ ಪಡೆಯುವ ದಿನ ನೌಕರ ಸೇವೆಯಲ್ಲಿ ಇರಬೇಕು’ ಎಂದು ಕೆಪಿಟಿಸಿಎಲ್ ಕಾರಣ ನೀಡಿತ್ತು.

ಕೆಪಿಟಿಸಿಎಲ್‌ನ ಈ ನಿರ್ಧಾರದ ವಿರುದ್ಧ ನೌಕರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರ ಸಿಬ್ಬಂದಿಗೆ ಒಂದು ವಾರ್ಷಿಕ ವೇತನ ಬಡ್ತಿ ನೀಡುವಂತೆ ಹೈಕೋರ್ಟ್ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಕೆಪಿಟಿಸಿಎಲ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.



ಬಿಜೆಪಿಯಿಂದ ‘ನಂದಿನಿ’ ನಂತರ ‘ಅಮೂಲ್’ ಮುಳುಗಡೆ: ಸಿದ್ದರಾಮಯ್ಯ

ಬೆಂಗಳೂರು(ಪ್ರಜಾವಾಣಿ ವಾರ್ತೆ) : ‘ಪ್ರಧಾನಿ ಮೋದಿಯವರ ಆಪ್ತ ಬಳಗದಲ್ಲಿರುವ ಅಂಬಾನಿಯ ಕಣ್ಣು ದೇಶದ ಹಾಲಿನ ಮೇಲೆ ಬಿದ್ದಿದೆ. ಬಿಜೆಪಿಯವರು ಅದಾನಿ, ಅಂಬಾನಿಗಳ ವ್ಯವಹಾರದ ಪರವಾಗಿದ್ದಾರೆ. ಹೀಗಾಗಿ ನಂದಿನಿಯನ್ನು ಮೊದಲು ಮುಳುಗಿಸಿ ನಂತರ ಅಮೂಲ್ ಮುಳುಗಿಸುತ್ತಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿ ಕಾರಿದ್ದಾರೆ.

‘ಕೇಂದ್ರ ಮತ್ತು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ, ರಾಜ್ಯದ ಹಾಲು ಉತ್ಪಾದಕರ ಬೆನ್ನೆಲುಬು ಮುರಿಯಲು ಪ್ರಯತ್ನಿಸುತ್ತಿದೆ ಎಂದು 2020ರಿಂದಲೂ ನಾನು ಹೇಳುತ್ತಲೇ ಬಂದಿದ್ದೇನೆ ಎಂದರು.

ಸದನದಲ್ಲಿಯೂ ಪ್ರಸ್ತಾಪಿಸಿದ್ದೇನೆ. ನನ್ನ ಸಲಹೆ, ಎಚ್ಚರಿಕೆಯನ್ನು ಪರಿಗಣಿಸುವ ಬದಲು ರೈತರನ್ನು ಶತ್ರುಗಳೆಂದು ಭಾವಿಸಿ, ಅವರ ಆರ್ಥಿಕ ಚೈತನ್ಯ ಮುರಿದು ಹಾಕಲು ಸನ್ನದ್ಧವಾಗಿ ನಿಂತಿದೆ’ ಎಂದಿದ್ದಾರೆ.

‘ಹಾಲು ಮಹಾಮಂಡಲಗಳನ್ನು ಒಗ್ಗೂಡಿಸುವುದಾಗಿ ಅಮಿತ್ ಶಾ ಹೇಳಿದ್ದರು. ಅದರ ಭಾಗವಾಗಿ ಈಗ ರಾಜ್ಯಕ್ಕೆ ಅಮೂಲ್ ವಕ್ಕರಿಸಿದೆ. ಈಗ ನಂದಿನಿ ಆತಂಕ ಎದುರಿಸುತ್ತಿದೆ. ಮೋದಿ ಮತ್ತು ಶಾ ನಮ್ಮ ನಂದಿನಿಯನ್ನಷ್ಟೆ ಅಲ್ಲ, ಅಮೂಲ್‌ನ್ನೂ ಮುಳುಗಿಸಲು ಯೋಜನೆ ಹಾಕಿಕೊಂಡಿರುವಂತಿದೆ’ ಎಂದೂ ಅವರು ಹೇಳಿದ್ದಾರೆ.

‘ಬಿಜೆಪಿಯವರು ಪಶುಪಾಲಕರ ಪರವಾಗಿದ್ದರೆ ಹಿಂಡಿ ಮತ್ತಿತರ ಪಶು ಆಹಾರಗಳ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ಯಾಕೆ ರದ್ದು ಮಾಡಿಲ್ಲ. ಪ್ರತಿ ಲೀಟರ್ ಹಾಲಿಗೆ ಕೊಡುವ ಪ್ರೋತ್ಸಾಹಧನವನ್ನು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಯಾಕೆ ಹೆಚ್ಚು ಮಾಡಲಿಲ್ಲ. ಮಕ್ಕಳಿಗೆ ಹಾಲು ಕೊಡುವುದನ್ನು ನಿಲ್ಲಿಸಿರುವುದು ಏಕೆ. ಮಕ್ಕಳ ಹಾಲಿಗೆ ಬಿಡುಗಡೆ ಮಾಡಬೇಕಾದ ಅನುದಾನ ನಿಲ್ಲಿಸಿರುವುದು ಏಕೆ’ ಎಂದೂ ಅವರು ಪ್ರಶ್ನಿಸಿದ್ದಾರೆ.

ನಗರದಲ್ಲಿ ಇಂದು

30ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಧ್ರುವಾ ಕೆ., ಯುಗಳ ಗಾಯನ: ನಾಗವಲ್ಲಿ ನಾಗರಾಜ್, ರಂಜಿನಿ ವಾಸುಕಿ, ಪಿಟೀಲು: ವೆಂಕಟೇಶ ಜೋಶಿಯರ್, ಮೃದಂಗ: ಎ. ರೇಣುಕಾ ಪ್ರಸಾದ್, ಖಂಜೀರಾ: ಎ.ಎಸ್.ಎನ್. ಸ್ವಾಮಿ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಎಸ್. ಶಂಕರ್, ಪಿಟೀಲು: ಜ್ಯೋತ್ಸನಾ ಶ್ರೀಕಾಂತ್, ಮೃದಂಗ: ಆನೂರು ಅನಂತ ಕೃಷ್ಣ ಶರ್ಮಾ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ವಿಶ್ವ ಅರಣ್ಯ, ಪೃಥ್ವಿ ದಿನಾಚರಣೆ: ಉದ್ಘಾಟನೆ: ಮಹೇಂದ್ರ ಮುನ್ನೋತ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ರಿತಿಕ ಮಂಜುಳಾ, ಬಿ.ಎಸ್. ಸತೀಶ್, ಸಿ.ಎಸ್. ಷಡಕ್ಷರಿ, ಸಿ. ಸೋಮಶೇಖರ್, ನಂದಿದುರ್ಗ ಬಾಲುಗೌಡ, ಪಿ. ರಮೇಶ್ ಕುಮಾರ್, ಆಯೋಜನೆ: ಯುವಚೇತನ ಯುವಜನ ಕೇಂದ್ರ, ಸ್ಥಳ: ಎನ್.ಜಿ.ಓ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

‘ಡೆಲಿವರಿಂಗ್ ಡೆಮಾಕ್ರಸಿ’ ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಶ್ರೀಶ್ರೀ ರವಿಶಂಕರ್ ಗುರೂಜಿ, ಅತಿಥಿಗಳು: ಧರ್ಮೇಂದ್ರ ಪ್ರಧಾನ್, ಶಾಲಿನಿ ರಜನೀಶ್, ರಿತು ಖಂಡೂರಿ ಭೂಷಣ್, ಆರ್. ಬಾಲಸುಬ್ರಮಣ್ಯಂ, ಆಯೋಜನೆ: ಗ್ರಾಮ, ಸ್ಥಳ: ಆರ್ಟ್ ಆಫ್ ಲಿವಿಂಗ್, ಕನಕಪುರ ರಸ್ತೆ, ಬೆಳಿಗ್ಗೆ 11

‘ಕಸವಿಕಾ’ ಚಿತ್ರಗಳ ಪ್ರದರ್ಶನ: ಅತಿಥಿಗಳು: ಎಂ.ಎಸ್. ಮೂರ್ತಿ, ಎಸ್.ಎನ್. ಶಶಿಧರ್, ವೃಂದಾ ಶೇಖರ್, ಆಯೋಜನೆ: ಕಲಾಧಾನ ಆರ್ಟ್ ಫೌಂಡೇಷನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಮುತ್ಯಾಲಮ್ಮ ದೇವಿಯ ರಥೋತ್ಸವ: ಭರತನಾಟ್ಯ ಪ್ರದರ್ಶನ, ಭಕ್ತಿ ಗೀತೆ: ಕಲ್ಯೆಧರನ್, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 5.30ರಿಂದ



ವಾರಿಜಾಶ್ರೀ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಯು.ಶ್ರೀನಿವಾಸ್ ಮತ್ತು ತಂಡ, ಸಂಗೀತ ಕಛೇರಿ: ವಾರಿಜಾಶ್ರೀ, ಮತ್ತೂರು ಶ್ರೀನಿಧಿ, ಬಿ.ಸಿ. ಮಂಜುನಾಥ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

‘ಬದುಕಿನ ಬಣ್ಣ’ ನಾಟಕ ಪ್ರದರ್ಶನ: ನಿರ್ದೇಶನ: ಶೇಖರ್, ಸಂಜಯ್, ಆಯೋಜನೆ: ಸ್ಟೇಜ್, ಸ್ಥಳ: ನಯನ ಸಭಾಂಗಣ, ಸಂಜೆ 6

ಪ್ರವಚನ ವಾಹಿನಿ: ‘ಸಮಾಜಕ್ಕೆ ಬಸವೇಶ್ವರರ ಸಂದೇಶಗಳು’ ಕುರಿತು ಪ್ರವಚನ: ಲಕ್ಷ್ಮೀನಾರಾಯಣ ಕೆ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಭಾರತೀಯ ಹವಾಮಾನ ಇಲಾಖೆ ಮಾಹಿತಿ • ಸ್ಕೈಮೆಟ್ ಸೂಚನೆಯಿಂದ ಮೂಡಿದ್ದ ಆತಂಕ ದೂರ

‘ನೈರುತ್ಯ ಮುಂಗಾರು– ವಾಡಿಕೆಯಂತೆ ಮಳೆ’

ನವದೆಹಲಿ (ಪಿಟಿಐ): ಮುಂಬರುವ ನೈರುತ್ಯ ಮುಂಗಾರು ಅವಧಿಯಲ್ಲಿ ವಾಡಿಕೆಯಷ್ಟು ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ಹೇಳಿದೆ. ಇದು, ಖಾಸಗಿ ಹವಾಮಾನ ಸಂಸ್ಥೆಯಾಗಿರುವ ಸ್ಕೈಮೆಟ್ ನೀಡಿರುವ ಮುನ್ಸೂಚನೆಗೆ ವ್ಯತಿರಿಕ್ತವಾಗಿದೆ.

ಹಿಂದೂ ಮಹಾಸಾಗರದ ಮೇಲ್ಮೈ ಉಷ್ಣಾಂಶದಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಉತ್ತರ ಗೋಳಾರ್ಧವು ಕಡಿಮೆ ಪ್ರಮಾಣದಲ್ಲಿ ಹಿಮಾಚ್ಛಾದಿತವಾಗಿದೆ. ಈ ಎರಡು ವಿದ್ಯಮಾನಗಳು ಎಲ್ ನಿನೊದಿಂದಾಗುವ ಪರಿಣಾಮವನ್ನು ತಗ್ಗಿಸುವ ಮೂಲಕ ವಾಡಿಕೆಯಂತೆ ಮಳೆ ಬೀಳುವುದಕ್ಕೆ ಪೂರಕವಾಗಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಈ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದೆಲ್ಲೆಡೆ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿದೆ. ಲಾ ನಿನಾ (ಸಾಗರ ಮತ್ತು ವಾತಾವರಣದ ವಿದ್ಯಮಾನ) ಪರಿಸ್ಥಿತಿ ಕೊನೆಗೊಂಡ ಕಾರಣ ಬರಗಾಲ ಆವರಿಸುವ ಸಾಧ್ಯತೆ ಶೇ 20ರಷ್ಟಿದೆ’ ಎಂದು ಸ್ಕೈಮೆಟ್ ಸೋಮವಾರ ನೀಡಿದ್ದ ಮುನ್ಸೂಚನೆ ಆತಂಕಕ್ಕೆ ಕಾರಣವಾಗಿತ್ತು.

ಈಗ, ನೈರುತ್ಯ ಮುಂಗಾರಿನಲ್ಲಿ ವಾಡಿಕೆ ಮಳೆಯಾಗಲಿದೆ ಎಂಬ ಐಎಂಡಿ ಮುನ್ಸೂಚನೆಯು ದೇಶದ ರೈತ ಸಮುದಾಯದಲ್ಲಿ ಮೂಡಿದ್ದ ಆತಂಕವನ್ನು ದೂರ ಮಾಡಲಿದೆ. ಏಕೆಂದರೆ, ದೇಶದ ಕೃಷಿ ವಲಯವು ನೈರುತ್ಯ ಮುಂಗಾರನ್ನೇ ಹೆಚ್ಚು ಅವಲಂಬಿಸಿದೆ.

‘ದೀರ್ಘಾವಧಿ ಸರಾಸರಿ (ಎಲ್‌ಪಿಎ) ಮಳೆ ಪ್ರಮಾಣ 87 ಸೆಂ.ಮೀ. ಇದೆ. ಈ ಬಾರಿಯ ನೈರುತ್ಯ ಮುಂಗಾರು ಅವಧಿಯಲ್ಲಿ (ಜೂನ್‌ನಿಂದ ಸೆಪ್ಟೆಂಬರ್), ದೀರ್ಘಾವಧಿ ಸರಾಸರಿಯ ಶೇ 96ರಷ್ಟು ಮಳೆಯಾಗುವ ನಿರೀಕ್ಷೆ ಇದೆ’ ಎಂದು ಭೂವಿಜ್ಞಾನಗಳ ಸಚಿವಾಲಯದ ಕಾರ್ಯದರ್ಶಿ ಎಂ.ರವಿಚಂದ್ರನ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ವಾಡಿಕೆ ಹಾಗೂ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆ ಶೇ 76 ರಷ್ಟಿದೆ’ ಎಂದು ಇಲಾಖೆಯ ಪ್ರಧಾನ ನಿರ್ದೇಶಕ ಎಂ.ಮಹಾಪಾತ್ರ ತಿಳಿಸಿದರು.

‘ಯುರೋಪ್ ಮತ್ತು ಏಷ್ಯಾ ಖಂಡಗಳನ್ನು ಒಳಗೊಂಡ ಉತ್ತರ ಗೋಳಾರ್ಧದಲ್ಲಿ, 2022 ಡಿಸೆಂಬರ್‌ನಿಂದ ಕಳೆದ ಮಾರ್ಚ್ ವರೆಗಿನ ಅವಧಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಹಿಮ ಆವರಿಸಿರುವುದು ಕಂಡು ಬಂದಿದೆ. ಈ ಪ್ರಾಕೃತಿಕ ವಿದ್ಯಮಾನವು ಮುಂಬರುವ ನೈರುತ್ಯ ಮುಂಗಾರು ಅವಧಿಯಲ್ಲಿ ಬೀಳುವ ಮಳೆಗೆ ಪೂರಕ ವಾತಾವರಣ ಸೃಷ್ಟಿಸಲಿದೆ’ ಎಂದು ವಿವರಿಸಿದರು.

ದೇಶದ ವಾಯವ್ಯ, ಪಶ್ಚಿಮಮಧ್ಯ ಹಾಗೂ ಈಶಾನ್ಯ ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣ ಮಳೆ ಬೀಳುವ ಸಾಧ್ಯತೆ ಇದೆ ಎಂದೂ ಅವರು ಹೇಳಿದರು.

ಎಲ್ ನಿನೊ: ದಕ್ಷಿಣ ಅಮೆರಿಕ ಬಳಿ ಪೆಸಿಫಿಕ್ ಸಾಗರದ ಮೇಲ್ಮೈ ಉಷ್ಣಾಂಶದಲ್ಲಿ ಆಗುವ ಹೆಚ್ಚಳವು ಮುಂಗಾರು ಮಾರುತಗಳನ್ನು ದುರ್ಬಲಗೊಳಿಸುತ್ತದೆ. ಈ ಪ್ರಾಕೃತಿಕ ವಿದ್ಯಮಾನವನ್ನು ಎಲ್ ನಿನೊ ಎನ್ನಲಾಗುತ್ತದೆ. ಇದರ ಪರಿಣಾಮ, ಭಾರತದಲ್ಲಿ ನೈರುತ್ಯ ಮುಂಗಾರು ಅವಧಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುತ್ತದೆ.

ಮುಂಗಾರಿನಲ್ಲಿ ಬಿದ್ದ ವಾಡಿಕೆ ಮಳೆ ಪ್ರಮಾಣ

ವರ್ಷ	ಪ್ರಮಾಣ (ಸೆಂ.ಮೀ.ನಲ್ಲಿ)
2019	97.18
2020	96.14
2021	87.45
2022	92.48


ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬುಧವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕ ಮಗಳೂರು, ಹಾಸನ, ಶಿವಮೊಗ್ಗ, ಕೊಡಗು ಜಿಲ್ಲೆಯ ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು, ಕರಾವಳಿ ಹಾಗೂ ಉತ್ತರ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ಕರಾವಳಿ ಜಿಲ್ಲೆಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಲಿದೆ. ಕಲಬುರಗಿ ಜಿಲ್ಲೆಯಲ್ಲಿ ಮಂಗಳವಾರ ಗರಿಷ್ಠ ಉಷ್ಣಾಂಶ 40.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಇಲಾಖೆ ತಿಳಿಸಿದೆ.

ಮುಖ್ಯಾಂಶಗಳು

- ಶೇ 20 ಬರ ಆವರಿಸುವ ಸಾಧ್ಯತೆ ಇದೆ ಎಂದು ಸ್ಕೈಮೆಟ್ ಹೇಳಿತ್ತು
- ರೈತರು ನಿರಾಳ



ನಗರದಲ್ಲಿ ಮಂಗಳವಾರ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ ಆಯೋಜಿಸಿದ್ದ ‘85ನೇ ಶ್ರೀ ರಾಮನವಮಿ ಸಂಗೀತೋತ್ಸವ’ ಕಾರ್ಯಕ್ರಮದಲ್ಲಿ ಬಾಲು ಮಾಸ್ತಿ ಮತ್ತು ತಂಡದವರು ಸಂಗೀತ ಕಛೇರಿ ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ/ರಂಜು ಪಿ

ಎಫ್‌ಐಆರ್ ಒಟ್ಟುಗೂಡಿಸಲು ಅರ್ಜಿ: ಪ್ರತಿಕ್ರಿಯೆ ಕೇಳಿದ ಸುಪ್ರೀಂ

ನವದೆಹಲಿ (ಪಿಟಿಐ): ತಮ್ಮ ವಿರುದ್ಧ ಬಿಹಾರ, ತಮಿಳುನಾಡಿನಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಟ್ಟುಗೂಡಿಸಬೇಕು ಎಂದು ಬಂಧನಕ್ಕೊಳಗಾಗಿರುವ ಯುಟ್ಯೂಬರ್ ಒಬ್ಬರು ಸಲ್ಲಿಸಿರುವ ಅರ್ಜಿ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಬಿಹಾರ, ತಮಿಳುನಾಡು ಮತ್ತು ಕೇಂದ್ರ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದೆ. ತಮಿಳುನಾಡಿನಲ್ಲಿ ವಲಸಿಗ ಕಾರ್ಮಿಕರ ಮೇಲೆ ದಾಳಿ ನಡೆಸಲಾಗಿದೆ ಎಂದು ಬಿಂಬಿಸಲಾದ ವಿಡಿಯೊವನ್ನು ಹರಿಬಿಟ್ಟ ಆರೋಪದ ಮೇಲೆ ಮನೀಶ್ ಕಶ್ಯಪ್ ಎಂಬ ಯುಟ್ಯೂಬರ್ ಅನ್ನು ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ಬಂಧಿಸಲಾಗಿತ್ತು.

ಕೋವಿಡ್: ವ್ಯವಸ್ಥೆ ಕುರಿತು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಸೇರಿ ನಗರದ ವಿವಿಧ ಆಸ್ಪತ್ರೆಗಳಲ್ಲಿ ಮಂಗಳವಾರ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದ ಸಿದ್ಧತೆಯ ತಾಲೀಮನ್ನು ನಡೆಸಿ, ವೈದ್ಯಕೀಯ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಲಾಯಿತು.

ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಸಿದ್ಧತಾ ತಾಲೀಮು ನಡೆಸುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿತ್ತು. ಹೀಗಾಗಿ, ಆಮ್ಲಜನಕ ಘಟಕಗಳ ಕಾರ್ಯನಿರ್ವಹಣೆ, ಹಾಸಿಗೆಗಳ ವ್ಯವಸ್ಥೆ, ವೈದ್ಯಕೀಯ ಸಿಬ್ಬಂದಿ ಲಭ್ಯತೆ ಸೇರಿ ಆಸ್ಪತ್ರೆಯಲ್ಲಿನ ವ್ಯವಸ್ಥೆಯ ಬಗ್ಗೆ ಪರಿಶೀಲಿಸಲಾಯಿತು. ಚಿಕಿತ್ಸೆ, ಆರೈಕೆಯ ಬಗ್ಗೆ ವೈದ್ಯರು, ಶುಶ್ರೂಷಕರು, ಸಿಬ್ಬಂದಿಯಲ್ಲಿ ಅರಿವು ಮೂಡಿಸಲಾಯಿತು. ಕೆ.ಸಿ. ಜನರಲ್, ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಸೇರಿ ಪ್ರಮುಖ ಆಸ್ಪತ್ರೆಗಳಲ್ಲಿ ಸಿದ್ಧತಾ ತಾಲೀಮು ಯಶಸ್ವಿಯಾಗಿ ನಡೆಯಿತು.

‘ಕೋವಿಡ್ ಚಿಕಿತ್ಸೆಗೆ ಒಂದು ಬ್ಲಾಕ್ ಮೀಸಲಿಡಲಾಗಿದೆ. ಸದ್ಯ 50 ಹಾಸಿಗೆಗಳನ್ನು ಗುರುತಿಸಲಾಗಿದೆ. 8 ಎಚ್‌ಡಿಯು, 4 ಐಸಿಯು ಹಾಸಿಗೆಗಳನ್ನು ಮೀಸಲಿಡಲಾಗಿದ್ದು, ಉಳಿದವು ಸಾಮಾನ್ಯ ಹಾಸಿಗೆಗಳಾಗಿವೆ. ಕೊರೊನಾ ಸೋಂಕಿತರು ಆಸ್ಪತ್ರೆಗೆ ಬಂದಾಗ ಉಪಚರಿಸುವ ರೀತಿ, ವಿವಿಧ ಕಾಯಿಲೆಗಳಿರುವ ರೋಗಿಗಳ ಆರೈಕೆಯ ಬಗ್ಗೆಯೂ ವೈದ್ಯಕೀಯ ಸಿಬ್ಬಂದಿಗೆ ತಿಳಿಸಲಾಯಿತು’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಮೇಶ್ ಕೃಷ್ಣ ತಿಳಿಸಿದರು. ವಾಣಿ ವಿಲಾಸ, ಮಿಂಟೊ, ಟ್ರಾಮಾ ಕೇರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿಯೂ ವ್ಯವಸ್ಥೆ ಬಗ್ಗೆ ಪರಿಶೀಲಿಸಲಾಯಿತು.

ಆರೆಸ್ಸೆಸ್ ಪಥಸಂಚಲನಕ್ಕೆ ‘ಸುಪ್ರೀಂ’ ಅಸ್ತು

ತಮಿಳುನಾಡು ಸರ್ಕಾರದ ಅರ್ಜಿ ವಜಾ •ಪ್ರಚೋದನೆಗೆ ಅವಕಾಶ ಬೇಡ –ಸೂಚನೆ

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅವಕಾಶ ನೀಡಿದ್ದ ಮದ್ರಾಸ್ ಹೈಕೋರ್ಟ್‌ನ ವಿಭಾಗೀಯ ಪೀಠದ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಎತ್ತಿಹಿಡಿಯಿತು. ಅಲ್ಲದೆ, ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತು.

ನ್ಯಾಯಮೂರ್ತಿಗಳಾದ ವಿ.ರಾಮಸುಬ್ರಹ್ಮಣಿಯನ್, ಪಂಕಜ್ ಮಿತ್ತಲ್ ಅವರಿದ್ದ ಪೀಠವು, ‘ಈ ಸಂಬಂಧ ಎಲ್ಲ ವಿಶೇಷ ಮೇಲ್ಮನವಿಗಳನ್ನು ವಜಾ ಮಾಡಲಾಗಿದೆ’ ಎಂದಿತು.

ಮಾರ್ಚ್ 27ರಂದು ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಪೀಠವು ತನ್ನ ತೀರ್ಪು ಕಾಯ್ದಿರಿಸಿತ್ತು. ಪಥಸಂಚಲನ ಕೈಗೊಳ್ಳಲು ಆರ್‌ಎಸ್‌ಎಸ್‌ಗೆ ಅವಕಾಶ ನೀಡಿದ್ದ ಮದ್ರಾಸ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಆರ್‌ಎಸ್‌ಎಸ್‌ನಿಂದ ಪಥಸಂಚಲನ ಮತ್ತು ರಾಜ್ಯದಾದ್ಯಂತ ಸಾರ್ವಜನಿಕ ಸಭೆ ನಡೆಸುವುದಕ್ಕೆ ರಾಜ್ಯ ಸರ್ಕಾರದ ವಿರೋಧವಿದೆ ಎಂದು ಮಾರ್ಚ್ 3ರಂದು ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಸರ್ಕಾರ ತಿಳಿಸಿತ್ತು. ಪೂರಕವಾಗಿ ಪ್ರತಿ ರಸ್ತೆ, ಬಡಾವಣೆಯಲ್ಲಿ ಇಂಥ ಪಂಥ ಸಂಚಲನಕ್ಕೆ ಅವಕಾಶ ಬೇಡ ಎಂಬ ಗುಪ್ತಚರದ ವರದಿಯನ್ನೂ ಉಲ್ಲೇಖಿಸಿತ್ತು.

ಆದೇಶ ತಮಿಳುನಾಡು ಸರ್ಕಾರ ‘ನೀತಿ’ಗೆ ನೀಡಿದ ಪೆಟ್ಟು: ವಿಎಚ್‌ಪಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ತಮಿಳುನಾಡಿನಲ್ಲಿ ಪಥಸಂಚಲನ ನಡೆಸುವ ಸಂಬಂಧ ಸುಪ್ರೀಂ ಕೋರ್ಟ್ ನೀಡಿದ ಆದೇಶವು, ‘ರಾಜ್ಯ ಸರ್ಕಾರದ ‘ಭಾರತ ವಿರೋಧಿ ಜಾತ್ಯತೀತ ನೀತಿ‘ಗಳಿಗೆ ಕೊಟ್ಟ ಪೆಟ್ಟು’ ಎಂದು ವಿಎಚ್‌ಪಿ ಬಣ್ಣಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ವಿಎಚ್‌ಪಿ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಲ್, ‘ಅಮೃತ ಮಹೋತ್ಸವ ಮತ್ತು ಅಂಬೇಡ್ಕರ್ ಜಯಂತಿ ಆಚರಿಸಲು ನಾಗರಿಕರಿಗೆ ಅವಕಾಶ ನೀಡುವುದಿಲ್ಲವೇ’ ಎಂದು ತಮಿಳುನಾಡು ಸರ್ಕಾರವನ್ನು ಪ್ರಶ್ನಿಸಿದ್ದಾರೆ.

‘ಪ್ರಾದೇಶಿಕ ಭಾಷೆಗಳಿಗೆ ಸ್ಥಾನ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಾದೇಶಿಕ ಭಾಷೆಗಳಿಗೆ ಸ್ಥಾನ ಕಲ್ಪಿಸುವ ರಾಷ್ಟ್ರೀಯ ಭಾಷಾ ನೀತಿ ಅಗತ್ಯವಿದೆ. ಈ ನೀತಿಯಲ್ಲಿ ಬ್ಯಾಂಕ್‌ಗಳನ್ನೂ ಒಳಗೊಂಡಂತೆ ಎಲ್ಲ ನೇಮಕಾತಿಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಅವಕಾಶ ಕಲ್ಪಿಸುವುದು ಕಡ್ಡಾಯವಾಗಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದ್ದಾರೆ.

‘ಸಿಆರ್‌ಪಿಎಫ್ ಹುದ್ದೆಗಳ ನೇಮಕಾತಿಗೆ ನಡೆಸಲಿರುವ ಪರೀಕ್ಷೆಯಲ್ಲಿ ಕನ್ನಡಕ್ಕೆ ಅವಕಾಶ ಕೊಡದೆ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ಪರೀಕ್ಷೆ ನಡೆಸುತ್ತಿರುವುದು ಖಂಡನೀಯ. ಇದು ಕನ್ನಡದ ಪ್ರಶ್ನೆ ಮಾತ್ರವಲ್ಲ, ದೇಶದ ಎಲ್ಲಾ ಪ್ರಾದೇಶಿಕ ಭಾಷೆಗಳ ಪ್ರಶ್ನೆಯಾಗಿದೆ. ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ಕೇಂದ್ರೀಕರಣ ನೀತಿಯ ಫಲ ಇದಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಪ್ರತಿ ರಾಜ್ಯಕ್ಕೂ ತನ್ನದೇ ಆದ ಸ್ವಾಯತ್ತ ಅಸ್ತಿತ್ವ ಇರಬೇಕು. ಪ್ರಾದೇಶಿಕ ಭಾಷೆ ಮತ್ತು ಸಾಂಸ್ಕೃತಿಕ ವಿಶಿಷ್ಟತೆಗೆ ಮನ್ನಣೆ ಕೊಡಬೇಕು. ಆದರೆ, ಇತ್ತೀಚಿನ ವರ್ಷಗಳಲ್ಲಿ ರಾಜ್ಯಗಳ ಶೈಕ್ಷಣಿಕ, ಭಾಷಿಕ ಮತ್ತು ಆರ್ಥಿಕ ಸ್ವಾಯತ್ತತೆಗೆ ಧಕ್ಕೆ ತರುವ ನೀತಿಗಳನ್ನು ಜಾರಿ ಮಾಡಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಜಿಎಸ್‌ಟಿ ಮತ್ತು ನೀಟ್ ಪದ್ಧತಿಗಳು ಕೇಂದ್ರೀಕೃತ ನೀತಿಯ ಫಲವಾಗಿದ್ದಾ, ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ಉದ್ಯೋಗಗಳಿಗೆ ನಡೆಸುವ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಸ್ಥಾನ ನೀಡದಿರುವುದು ಇದೇ ಕೇಂದ್ರೀಕೃತ ನೀತಿಯ ವಿಸ್ತರಣೆಯಾಗಿದೆ. ಆದ್ದರಿಂದ ನಾವೀಗ ಪ್ರಾದೇಶಿಕ ಭಾಷೆಗಳಿಗೆ ಸ್ಥಾನಮಾನ ಕಲ್ಪಿಸುವ ರಾಷ್ಟ್ರೀಯ ಭಾಷಾ ನೀತಿಗಾಗಿ ಒತ್ತಾಯಿಸಬೇಕು. ಶಿಕ್ಷಣ, ಉದ್ಯೋಗಾದಿ ಕ್ಷೇತ್ರಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಕಡ್ಡಾಯವಾಗಿ ಸ್ಥಾನ ಕಲ್ಪಿಸುವ ನೀತಿ ರೂಪುಗೊಂಡು, ಅನುಷ್ಠಾನವಾದರೆ ಪ್ರತಿ ಬಾರಿ ಹಕ್ಕೊತ್ತಾಯ ಮಂಡಿಸುವುದು ತಪ್ಪುತ್ತದೆ’ ಎಂದು ಹೇಳಿದ್ದಾರೆ.

‘ಕನ್ನಡವನ್ನೂ ಒಳಗೊಂಡಂತೆ ಪ್ರಾದೇಶಿಕ ಭಾಷೆಗಳಿಗೆ ಸೂಕ್ತ ಸ್ಥಾನ ಕಲ್ಪಿಸಿ, ಒಕ್ಕೂಟ ವ್ಯವಸ್ಥೆಗೆ ಬೆಲೆ ಕೊಡುವ ರಾಷ್ಟ್ರೀಯ ಭಾಷಾ ನೀತಿಗೆ ಹಕ್ಕೊತ್ತಾಯ ಮಂಡಿಸುವುದಾಗಿ ಇಲ್ಲಿನ ರಾಜಕೀಯ ಪಕ್ಷಗಳು ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ರೂಪ–ಸಿಂಧೂರಿ ಪ್ರಕರಣ: ಹೈಕೋರ್ಟ್ ತಡೆ

ಬೆಂಗಳೂರು: ಐಪಿಎಸ್ ಅಧಿಕಾರಿ ಡಿ.ರೂಪ ಅವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಯಾವುದೇ ಮಾನಹಾನಿಕರ ಹೇಳಿಕೆ ನೀಡದಂತೆ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಐಪಿಎಸ್ ಅಧಿಕಾರಿ ಡಿ.ರೂಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಡಿ. ರೂಪ ಮಾನ ಹಾನಿಕರ ಹೇಳಿಕೆಗಳನ್ನು ನೀಡದಂತೆ ನಿರ್ಬಂಧ ವಿಧಿಸಬೇಕು’ ಎಂದು ಕೋರಿ ವಿಚಾರಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ ಪ್ರತಿಬಂಧಕಾದೇಶ ನೀಡಿತ್ತು. ‘ಈ ಆದೇಶ ಏಕಪಕ್ಷೀಯವಾಗಿದೆ’ ಎಂದು ಆಕ್ಷೇಪಿಸಿ ಪ್ರಶ್ನಿಸಿ ರೂಪ ಹೈಕೋರ್ಟ್ ಮೆಟ್ಟಿಲೇರಿದ್ದರು.

‘ಮಹಾರಾಷ್ಟ್ರ ಸರ್ಕಾರದ ವಿರುದ್ಧ ಕ್ರಮ’

ಪ್ರಜಾವವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವ, ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಲು ಹೊರಟಿರುವ ಮಹಾರಾಷ್ಟ್ರ ಸರ್ಕಾರಕ್ಕೆ ಕಡಿವಾಣ ಹಾಕಲು ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದು ರಾಜ್ಯ ಗಡಿ ಸಂರಕ್ಷಣಾ ಮತ್ತು ಜಲ ಆಯೋಗದ ಅಧ್ಯಕ್ಷ ಶಿವರಾಜ ಪಾಟೀಲ ಭರವಸೆ ನೀಡಿದರು.

ನಗರದಲ್ಲಿ ಮಂಗಳವಾರ ಅವರು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ ಅವರ ಜತೆಗೆ ಚರ್ಚಿಸಿದರು.

‘ರಾಜ್ಯದ ಗಡಿ ಭಾಗದ 865 ಹಳ್ಳಿಗಳಿಗೂ ಅನ್ವಯವಾಗುವಂತೆ ಮಹಾರಾಷ್ಟ್ರ ಸರ್ಕಾರವು ‘ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ’ ಜಾರಿಗೊಳಿಸುವ ಮೂಲಕ ಕರ್ನಾಟಕದ ಆಡಳಿತದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಶಿವರಾಜ ಪಾಟೀಲ ಹೇಳಿದರು.

ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಅವರು ಮಹಾರಾಷ್ಟ್ರ ನಡೆಸುತ್ತಿರುವ ಹುನ್ನಾರವನ್ನು ವಿವರಿಸಿ, ‘ಸುಪ್ರೀಂ ಕೋರ್ಟ್ ಮುಂದಿರುವ ಗಡಿವಿವಾದ ಪ್ರಕರಣದಲ್ಲಿ ಸಾಕ್ಷಿ ಸೃಷ್ಟಿಸಲು ಮಹಾರಾಷ್ಟ್ರ ಸರ್ಕಾರವು ಈ ಆರೋಗ್ಯ ವಿಮೆ ಯೋಜನೆಯನ್ನು ₹ 54 ಕೋಟಿ ವೆಚ್ಚದಲ್ಲಿ ಜಾರಿಗೊಳಿಸಲು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಂಡಿದೆ. ಅದರಂತೆ ಇದೇ 3ರಂದು ಅಧಿಕೃತ ಆದೇಶವನ್ನು ಹೊರಡಿಸಿದೆ.865 ಹಳ್ಳಿ ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ದಾವೆ ದಾಖಲಿಸಿರುವ ಈ ಹಳ್ಳಿಗಳಲ್ಲಿಯ ಮರಾಠಿಗರು, ಮಹಾರಾಷ್ಟ್ರಕ್ಕೆ ಸೇರ ಬಯಸಿದ್ದಾರೆಂದು ದಾಖಲೆ ಸೃಷ್ಟಿಸಲು ಅಲ್ಲಿನ ಸರ್ಕಾರ ಕುತಂತ್ರ ನಡೆಸಿದೆ. ಈ ಕ್ರಮ ನ್ಯಾಯಾಂಗ ನಿಂದನೆಯಾಗಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಬೇಕು. ಆಡಳಿತಾತ್ಮಕ ಕ್ರಮಗಳ ಮೂಲಕ ಯೋಜನೆಯ ಜಾರಿಗೆ ತಡೆ ಹಾಕ ಬೇಕು’ ಎಂದು ಆಗ್ರಹಿಸಿದರು. ‘ಗಡಿ ವಿವಾದ ಪ್ರಕರಣದ ವಿಚಾರಣೆ ನಡೆದ ದಿನದಂದು ಮಹಾರಾಷ್ಟ್ರದ ಕ್ರಮವನ್ನು ನ್ಯಾಯಾಲಯದ ಗಮನಕ್ಕೆ ತರಲಾಗುವುದು’ ಎಂದು ಶಿವರಾಜ ಪಾಟೀಲ ತಿಳಿಸಿದರು.

ಫ್ರೀಡಂ ಆ್ಯಪ್ ಸಿಇಒ ಸುಧೀರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರೆಕಾಲಿಕ ಕೆಲಸ ಕೊಡುವ ಆಮಿಷವೊಡ್ಡಿ ತಮ್ಮ ಆ್ಯಪ್ ಪ್ರಚಾರಕ್ಕೆ ಬಳಸಿಕೊಂಡು ಹಣ ನೀಡದೇ ವಂಚಿಸಿರುವ ಆರೋಪದಡಿ ‘ಇಂಡಿಯನ್ ಮನಿ ಫ್ರೀಡಂ’ ಕಂಪನಿ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಿ.ಎಸ್. ಸುಧೀರ್ ಅವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವಂಚನೆಗೀಡಾಗಿರುವ ಯುವತಿ ಸೇರಿ 21 ಮಂದಿ ದೂರು ನೀಡಿದ್ದರು. ಅದರನ್ವಯ ಕಂಪನಿಯ ಸಂಸ್ಥಾಪಕರಾದ ಸುಧೀರ್ ಸೇರಿ 23 ಆರೋಪಿಗಳ ವಿರುದ್ಧ ಐದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಮಂಗಳವಾರ ಸುಧೀರ್ ಅವರನ್ನು ವಿಚಾರಣೆಗೆ ಕರೆಸಿ, ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳಾದ ಸುಧೀರ್ ಹಾಗೂ ಇತರರು, ಒಂದು ಪ್ರಕರಣದಲ್ಲಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು. ಆದರೆ, ಇನ್ನು ನಾಲ್ಕು ಪ್ರಕರಣಗಳಲ್ಲಿ ಜಾಮೀನು ಪಡೆದಿರಲಿಲ್ಲ. ಅದೇ ಪ್ರಕರಣಗಳಲ್ಲಿ ಇದೀಗ ಸುಧೀರ್ ಅವರನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಇವರನ್ನು ಕಸ್ಟಡಿಗೆ ಪಡೆಯಲಾಗುವುದು’ ಎಂದು ತಿಳಿಸಿದರು.

ಮನೆ ಮುಂದೆ ನಾಯಿ ಮಲವಿಸರ್ಜನೆ ಮಾಡಿದ್ದಕ್ಕೆ ಗಲಾಟೆ

ಕ್ರಿಕೆಟ್ ಬ್ಯಾಟ್‌ನಿಂದ ಹೊಡೆದು ವೃದ್ಧನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಮುನಿರಾಜು (68) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಚಿಕ್ಕಬಾಣಾವರ ಬಳಿಯ ಗಣಪತಿ ನಗರದ ನಿವಾಸಿ ಪ್ರಮೋದ್ (27), ರವಿಕುಮಾರ್ (38) ಹಾಗೂ ಪಲ್ಲವಿ (28) ಬಂಧಿತರು. ಮೂವರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಖಾಸಗಿ ಕಂಪನಿಯೊಂದರ ನಿವೃತ್ತ ಉದ್ಯೋಗಿ ಮುನಿರಾಜು, ಕುಟುಂಬದ ಜೊತೆ ಗಣಪತಿನಗರದಲ್ಲಿ ವಾಸವಿದ್ದರು. ಅವರ ಮನೆ ಸಮೀಪದಲ್ಲಿಯೇ ಆರೋಪಿಗಳು ನೆಲೆಸಿದ್ದಾರೆ.’

‘ಆರೋಪಿ ಪ್ರಮೋದ್, ನಾಯಿಗಳನ್ನು ಸಾಕಿದ್ದ. ಅವುಗಳನ್ನು ನಿತ್ಯವೂ ಸಂಜೆ ವಾಯುವಿಹಾರಕ್ಕೆ ಕರೆದೊಯ್ಯುತ್ತಿದ್ದ. ಇದೇ ವೇಳೆ ಮುನಿರಾಜು ಮನೆ ಎದುರು ಹಾದು ಹೋಗುತ್ತಿದ್ದ. ಕೆಲದಿನಗಳ ಹಿಂದೆ ಮುನಿರಾಜು ಮನೆ ಎದುರು ನಾಯಿ ಮಲವಿಸರ್ಜನೆ ಮಾಡಿತ್ತು. ಜೊತೆಗೆ, ಆರೋಪಿ ಅದೇ ಸ್ಥಳದಲ್ಲಿ ನಿಂತು ಸಿಗರೇಟ್ ಸೇದುತ್ತಿದ್ದ. ಇದನ್ನು ಮುನಿರಾಜು ಪ್ರಶ್ನಿಸಿದ್ದರು. ಅದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಆಗಿತ್ತು. ಎರಡೂ ಕಡೆಯವರು ಠಾಣೆಗೆ ದೂರು ನೀಡಿದ್ದರು’ ಎಂದರು.

ಜಗಳ ತೆಗೆದು ಕೊಲೆ: ‘ಏಪ್ರಿಲ್ 8ರಂದು ಮುನಿರಾಜು ಹಾಗೂ ಪ್ರಮೋದ್ ನಡುವೆ ಪುನಃ ಮಾತಿನ ಚಕಮಕಿ ನಡೆದಿತ್ತು. ಮುನಿರಾಜು ಮಗ ಮುರುಳಿ ಸ್ಥಳಕ್ಕೆ ಬಂದಿದ್ದರು. ಜಗಳ ವಿಕೋಪಕ್ಕೆ ಹೋಗಿತ್ತು. ಪ್ರಮೋದ್ ಸ್ನೇಹಿತ ರವಿಕುಮಾರ್ ಹಾಗೂ ಆತನ ಪತ್ನಿ ಪಲ್ಲವಿ ಸಹ ಜಗಳಕ್ಕೆ ಇಳಿದಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಪ್ರಮೋದ್, ಕ್ರಿಕೆಟ್ ಬ್ಯಾಟ್‌ನಿಂದ ಮುನಿರಾಜು ತಲೆಗೆ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದ ಕುಸಿದು ಬಿದ್ದಿದ್ದ ಮುನಿರಾಜು ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದರು.

ಮುಚ್ಚಳಿಕೆ ಬರೆಸಿಕೊಂಡ ಮರುದಿನವೇ ರೌಡಿ ಹತ್ಯೆ

ಬೆಂಗಳೂರು: ಹಲಸೂರು ಠಾಣೆ ವ್ಯಾಪ್ತಿಯಲ್ಲಿ ರೌಡಿ ಕಾರ್ತಿಕ್ ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಮಂಗಳವಾರ ಕೊಲೆ ಮಾಡಲಾಗಿದೆ.

‘ಸ್ಥಳೀಯ ನಿವಾಸಿ ಕಾರ್ತಿಕ್ ವಿರುದ್ಧ ಅತ್ಯಾಚಾರ, ಕೊಲೆ, ಸುಲಿಗೆ ಸೇರಿ 11 ಪ್ರಕರಣಗಳು ದಾಖಲಾಗಿದ್ದವು. ಈತನ ಹೆಸರು ರೌಡಿಪಟ್ಟಿಯಲ್ಲಿತ್ತು. ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಈತನನ್ನು ಸೋಮವಾರ ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸಿಕೊಂಡು ವಾಪಸ್ ಕಳುಹಿಸಲಾಗಿತ್ತು. ಇದಾದ ಮರುದಿನವೇ ಈತನ ಕೊಲೆಯಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ಕಾರ್ತಿಕ್‌ನನ್ನು 2021–22ರಲ್ಲಿ ನಗರದಿಂದ ಗಡಿಪಾರು ಮಾಡಲಾಗಿತ್ತು. ಅವಧಿ ಮುಗಿಯುತ್ತಿದ್ದಂತೆ ಕಾರ್ತಿಕ್ ವಾಪಸು ಬಂದಿದ್ದ. ಮಂಗಳವಾರ ಸಂಜೆ 6 ಗಂಟೆ ಸುಮಾರಿಗೆ ಜೋಗುಪಾಳ್ಯ ಮುಖ್ಯ ರಸ್ತೆಯಲ್ಲಿ ಕಾರ್ತಿಕ್ ಹೊರಟಿದ್ದ. ಇದೇ ವೇಳೆ ದಾಳಿ ಮಾಡಿದ್ದ ದುಷ್ಕರ್ಮಿಗಳು, ಆತನನ್ನು ಅಟ್ಟಾಡಿಸಿ ಮಾರಕಾಸ್ತ್ರಗಳಿಂದ ಹೊಡೆದು ಪರಾರಿಯಾಗಿದ್ದಾರೆ. ಹಳೇ ವೈಷಮ್ಯದಿಂದ ಕೊಲೆ ನಡೆದಿರುವ ಅನುಮಾನವಿದೆ’ ಎಂದು ತಿಳಿಸಿವೆ.

ವಾಹನ ಗುದ್ದಿ ಪಾದಚಾರಿ ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯ ಸಿಬಿಐ ಕಚೇರಿ ಸಮೀಪ ವಾಹನವೊಂದು ಗುದ್ದಿ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

‘ಸೋಮವಾರ ರಾತ್ರಿ ಅಪಘಾತ ಸಂಭವಿಸಿದ್ದು, ಮೃತ ಪಾದಚಾರಿ ಹೆಸರು ಗೊತ್ತಾಗಿಲ್ಲ. 25ರಿಂದ 30 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಪೋಷಕರನ್ನು ಪತ್ತೆ ಮಾಡುತ್ತಿದ್ದೇವೆ. ಸಮೇತ ಚಾಲಕ ಪರಾರಿಯಾಗಿದ್ದಾನೆ’ ಎಂದು ಆರ್.ಟಿ. ನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

ಪ್ರೇಮವಿವಾಹ: ಹತ್ಯೆ

ರಾಮನಗರ: ಪ್ರೇಮ ವಿವಾಹವಾಗಿದ್ದ ಯುವಕನನ್ನು ಆತನ ಭಾವಮೈದುನ ಮತ್ತು ಸಂಗಡಿಗರೇ ಮಂಗಳವಾರ ತಾಲ್ಲೂಕಿನ ಕೆ.ಜಿ. ಹೊಸಹಳ್ಳಿಯಲ್ಲಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಪ್ರಕರಣ ಸಂಬಂಧ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಾಲೂಕಿನ ಕೈಲಾಂಚ ಹೋಬಳಿಯ ಕೆ.ಜಿ. ಹೊಸಹಳ್ಳಿ ಗ್ರಾಮದ ಅಶ್ವತ್ಥ್ (27) ಮೃತ ಯುವಕ.

ಐಪಿಎಲ್ ಕ್ರಿಕೆಟ್ ಪಂದ್ಯಕ್ಕೆ ಬಾಂಬ್ ಬೆದರಿಕೆ: ಕ್ರೀಡಾಂಗಣದಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯ ನಡೆಯುತ್ತಿದ್ದ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಾಂಬ್ ಇರಿಸಿರುವ ಬಗ್ಗೆ ಸೋಮವಾರ ರಾತ್ರಿ ಕರೆ ಬಂದಿದ್ದರಿಂದ ಪೊಲೀಸರು ತೀವ್ರ ಶೋಧ ನಡೆಸಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಲಕ್ನೊ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ತಂಡಗಳ ನಡುವೆ ಸೋಮವಾರ ಪಂದ್ಯ ನಡೆದಿತ್ತು.

ರಾತ್ರಿ 10 ಗಂಟೆ ಸುಮಾರಿಗೆ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬರು, 'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಾಂಬ್ ಇರಿಸಿರುವ ವದಂತಿ ಹರಡಿದೆ' ಎಂದು ಮಾಹಿತಿ ನೀಡಿದ್ದರು.

ಎಚ್ಚೆತ್ತ ನಿಯಂತ್ರಣ ಕೊಠಡಿ ಸಿಬ್ಬಂದಿ, ಕ್ರೀಡಾಂಗಣ ವ್ಯಾಪ್ತಿಯ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಮಾಹಿತಿ ರವಾನಿಸಿದ್ದರು. ಅದೇ ಸಂದರ್ಭದಲ್ಲಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ನಡೆಯುತ್ತಿತ್ತು.

ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ತಪಾಸಣೆ ನಡೆಸಿದರು.

ಹೂವಿನ ಕುಂಡ, ಬ್ಯಾನರ್ ಹಾಗೂ ಕ್ರೀಡಾಂಗಣದ ಎಲ್ಲ ಕಡೆಯೂ ಶೋಧ ಕೈಗೊಂಡಿದ್ದರು.

ಬಾಂಬ್ ಬೆದರಿಕೆಯಿಂದಾಗಿ ಕ್ರೀಡಾಂಗಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಹಲವರು ಕ್ರೀಡಾಂಗಣದ ಒಳಗೆ ಪಂದ್ಯ ವೀಕ್ಷಿಸುತ್ತಿದ್ದರು. ಕ್ರೀಡಾಂಗಣದ ಹೊರಗಿದ್ದ ಜನ, ಪೊಲೀಸರ ಶೋಧ ಕಾರ್ಯಾಚರಣೆಯನ್ನು ಕಂಡು ಹೆದರಿದ್ದರು.

'ಬಾಂಬ್ ಬೆದರಿಕೆ ಬಂದಿದ್ದರಿಂದ ಒಂದು ಗಂಟೆ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಸಿಗಲಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆಯೆಂದು ಘೋಷಿಸಲಾಯಿತು. ಕರೆ ಮಾಡಿದ್ದು ಯಾರು ಎಂಬುದನ್ನು ಪತ್ತೆ ಮಾಡುತ್ತಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಥಾಯ್ಲೆಂಡ್‌ನಲ್ಲಿ ಮಂಗಳೂರಿನ ಯುವತಿ ಸಾವು



ಓಷಿನ್ ಪಿರೇರ

ಮಂಗಳೂರು: ಥಾಯ್ಲೆಂಡ್‌ನಲ್ಲಿ ಸ್ಕೂಬಾ ಡೈವಿಂಗ್ ಮಾಡುವ ಸಂದರ್ಭದಲ್ಲಿ ನಗರದ ಯುವತಿಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ. ಮೃತರನ್ನು ಗೋರಿಗುಡ್ಡೆ ನಿವಾಸಿ ಓಷಿನ್ ಪಿರೇರ (28) ಎಂದು ಗುರುತಿಸಲಾಗಿದೆ.

ಗೋರಿಗುಡ್ಡೆ 'ಹಿಲ್ ಸ್ಟೀಕ್' ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವಾಸವಿದ್ದ ಓಷಿನ್ ಅವರು ಒಲಿವಿಯಾ ಪಿರೇರ- ದಿ. ಆಸ್ಕರ ಮಾರ್ಟಿನ್ ಪಿರೇರ ದಂಪತಿಯ ಮಗಳು. ರಜೆ ಕಳೆಯಲು 2 ದಿನಗಳ ಹಿಂದಷ್ಟೇ ಥಾಯ್ಲೆಂಡ್‌ಗೆ ತೆರಳಿದ್ದರು.

ಹೈಕೋರ್ಟ್ ಬಣ್ಣನೆ: ಅರ್ಜಿ ವಜಾಗೊಳಿಸಿದ ಏಕಸದಸ್ಯ ನ್ಯಾಯಪೀಠ

ಡಿಜೆ ಹಳ್ಳಿ–ಕೆಜಿ ಹಳ್ಳಿ ಪ್ರಕರಣ ಭಯೋತ್ಪಾದನಾ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಜೀವನಹಳ್ಳಿ (ಡಿಜೆ ಹಳ್ಳಿ) ಮತ್ತು ಕಾಡುಗೊಂಡನ ಹಳ್ಳಿ (ಕೆಜಿ ಹಳ್ಳಿ) ಗಲಭೆ ಪ್ರಕರಣವನ್ನು, 'ದೇಶದ ಭದ್ರತೆಗೆ ಭಂಗ ಉಂಟು ಮಾಡಿರುವ ಭಯೋತ್ಪಾದನಾ ಕೃತ್ಯ' ಎಂದು ಬಣ್ಣಿಸಿರುವ ಹೈಕೋರ್ಟ್, ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ವಿಶೇಷ ನ್ಯಾಯಾಲಯದ ಆರೋಪ ಪರಿಗಣನೆ (ಸಂಜ್ಞೇಯ ಅಪರಾಧ) ಕ್ರಮವನ್ನು ಪ್ರಶ್ನಿಸಲಾಗಿದ್ದ ಅರ್ಜಿಯೊಂದನ್ನು ವಜಾಗೊಳಿಸಿದೆ.

ಈ ಸಂಬಂಧ ಪ್ರಕರಣದ 25ನೇ ಆರೋಪಿಯಾದ ಎಂ.ಎಸ್.ಪಾಳ್ಯ ನಿವಾಸಿ ಮೊಹಮ್ಮದ್ ಶರೀಫ್ ಪರವಾಗಿ ಪತ್ನಿ ಸಲ್ಮಾ ಖಾತೂನ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರ ವಿರುದ್ಧದ ಆರೋಪಗಳು ಯುಎಪಿಎ ಕಾಯ್ದೆ–1967ರ ಕಲಂ 15ಕ್ಕೆ ಪೂರಕವಾಗಿರುವುದು ಮೇಲ್ನೋಟಕ್ಕೇ ಕಂಡು ಬಂದಿವೆ' ಎಂದಿದೆ.

'ಅರ್ಜಿದಾರರ ವಿರುದ್ಧ ಹೊರಿಸಲಾಗಿರುವ ಯುಎಪಿಎ ಮತ್ತು ಸಾರ್ವಜನಿಕ ಆಸ್ತಿಯ ಹಾನಿ ತಡೆ ಕಾಯ್ದೆ–1984 ಹಾಗೂ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ವಿವಿಧ ಕಲಂಗಳ ಅಡಿಯ ಆರೋಪಗಳನ್ನು ಗಮನಿಸಿದಾಗ ಶರೀಫ್, ಪ್ರಕರಣದ ಇತರ ಆರೋಪಿಗಳ ಜೊತೆ ಒಡನಾಟ ಹೊಂದಿರುವುದು, ಫೋನ್ ಮೂಲಕ ಸಂಪರ್ಕ ಸಾಧಿಸಿರುವುದು ಮತ್ತು ಗಲಭೆಯ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ' ಎಂದು ಅಭಿಪ್ರಾಯಪಟ್ಟಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ತಾಹಿರ್ ಮೊಹಮ್ಮದ್, 'ಅರ್ಜಿದಾರರ ವಿರುದ್ಧ ಎನ್‌ಐಎ ಕಾಯ್ದೆ ಅಡಿಯಲ್ಲಿನ ಯಾವುದೇ ಆರೋಪಗಳಿಲ್ಲ. ಕೇವಲ ಐಪಿಸಿ ಅಡಿಯ ಆರೋಪಗಳನ್ನು ಅದರ ವ್ಯಾಪ್ತಿ ಹೊಂದಿದ ಮ್ಯಾಜಿಸ್ಟ್ರೇಟ್ ಅಥವಾ ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬಹುದು. ಈ ಕುರಿತು ಎನ್‌ಐಎ ನ್ಯಾಯಾಲಯ ವಿಚಾರಣೆ ನಡೆಸುವುದು ಕಾನೂನಿಗೆ ವಿರುದ್ಧವಾಗಿದೆ. ಆದ್ದರಿಂದ, ಎನ್‌ಐಎ ನ್ಯಾಯಾಲಯದಲ್ಲಿನ ಪ್ರಕ್ರಿಯೆ ವಜಾ ಮಾಡಬೇಕು' ಎಂದು ಕೋರಿದ್ದರು.

ಇದನ್ನು ಬಲವಾಗಿ ಆಕ್ಷೇಪಿಸಿದ್ದ ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, 'ಅರ್ಜಿದಾರರೂ ಸೇರಿದಂತೆ ಇತರೆ ಆರೋಪಿಗಳ ವಿರುದ್ಧದ ಆರೋಪಗಳು ಭಯೋತ್ಪಾದನಾ ಕೃತ್ಯ ವ್ಯಾಖ್ಯಾನದ ವ್ಯಾಪ್ತಿಗೆ ಒಳಪಡುತ್ತವೆ. ಅರ್ಜಿದಾರರು ಯಾವ ಪಾತ್ರ ನಿಭಾಯಿಸಿದ್ದಾರೆ ಎಂಬುದು ದೋಷಾರೋಪ ಪಟ್ಟಿಯಲ್ಲಿ ಸ್ಪಷ್ಟವಾಗಿದ್ದು, ಆ ಕಾರಣಕ್ಕಾಗಿಯೇ ಅವರ ವಿರುದ್ಧ ವಿಶೇಷ ನ್ಯಾಯಾಲಯ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದೆ. ಅಂತೆಯೇ ಅರ್ಜಿದಾರರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 2022ರ ಮಾರ್ಚ್ 30ರಂದು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ. ಆದ್ದರಿಂದ ಈ ಅರ್ಜಿ ವಜಾಗೊಳಿಸಬೇಕು' ಎಂದು ಕೋರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TRILLIUM PUBLIC SCHOOL, RT.Nagar Bangalore. Require ACADEMIC COORDINATORS, HIGH SCHOOL TEACHERS FOR LANGUAGES, MATH, SCIENCE, COMPUTERS. 9740111313/7204740112 trilliumschool3@gmail.com

INDIAN PUBLIC SCHOOL
www.indianpublic.school
CAREER OPPORTUNITIES
Want to join a team looking to bring in new ideas and perspectives into Schooling? Opportunities at **Indian Public School** below:
WE ARE HIRING
Immediate requirement for academic year 2023-24
Computer Teacher- BCA / BCS / MCA
Subject Teacher - Physics, Hindi, Maths, EVS
Special Educator - DSE / DCBR
Counselor - BA / B.Sc. (Psychology)
Pre primary - NTT / Montessori
Walk in interview 10:00 am to 1:00 pm
No. 7, 11th Cross, Kanakanagar, R T Nagar Post, Bangalore - 32. +91 73377 39943. Mail: principal@indianpublic.school

Smt. Bylamma Educational & Charitable Trust®
HARWARD INTERNATIONAL SCHOOL
CBSE Affiliation No.830335
REQUIRED
FOR THE ACADEMIC YEAR 2023 - 24
TGTS
English / Social Science / Kannada / Hindi / Computer Science / Physical Education-(Female)
Eligibility - Post Graduation + B.Ed + 2 years of experience in CBSE school
HARWARD PU & DEGREE COLLEGE
Integrated Science Faculties For JEE & NEET Coaching
Commerce Faculties
Eligibility - Post Graduation + 5 years experience
Accountant - Female candidate with institution experience (Qual - B.Com/ M.Com with tally)
Eligible candidates mail your application with updated Bio-data to :
email : infoharwardints@gmail.com
Contact : 9880112833 / 9945230286
Dasanapura, Tumkur Road, Bengaluru North - 562162

HERITAGE_PUBLIC SCHOOL,Srinidhi Layout, J.P.Nagar 8th_Phase, Konanakunte Bengaluru-62, Requires:-HIGH SCHOOL CO-ORDINATOR. MSc,BEd with`minimum 5years`of Experience at`High School Level_will_be Preferred`Hindi Teachers For`High School,Maths, Science, Social,Kannada & English`Teachers For`Middle &.Primary School,PE Teachers. Attractive Salary`Call: 080-26322111, 9901733776.

IMPACT INSTITUTIONS
Sahakara Nagar, Bangalore
WANTED
SYSTEM ADMINISTRATOR
For Computer Labs
Call: 94487 48297
To schedule your interviews
IMP-23402

"ENDEAVOUR'S INTERNATIONAL School" Sarjapura. Skilled Teachers required Nursary,Higher Primary: English,Hindi Maths,Science, Social. High School: English,Goegraphy Maths,Physics Chemistry,P.E. Salary:Acording to 6th pay commission of Karnataka. Contact:-8722140020/ 9945058552,E-Mail:- endeavoursintlschool@gmail.com

IMPACT GROUP OF INSTITUTIONS
invites applications from candidates eligible for the following positions for BE (CS, AIML, DSc, ME, EC),BCA and MBA.
1. PROFESSOR
2. ASSOCIATE PROFESSOR
3. ASSISTANT PROFESSOR
Walkin immediate between 10:00 am to 03:00 pm to
IMPACT CAMPUS,
Kodigehalli, Sahakarnagar, Bangalore 560092.
Ph: 080 - 23334101.
[AICTE rules apply for eligibility & compensation]"

SIDDAGANGA SREE SHIVAKUMARA SWAMIJI VIDYA PEETHA TRUST #1,1st Stage, 2nd Phase, Chandra`Layout, Bengaluru- 560072. Ph: 080-23397600, invites application for (I)Siddaganga Public School, Chandra Layout & Vijayangara: 1.Kannada Teacher: BA/M.A, B.Ed. 2.English Teacher: BA/MA, B.Ed. 3.Sanskrit Teacher: BA/MA.B.Ed 4.Hindi Teacher: BA/MA.B.Ed. 5.EVS Teacher: B.Sc. B.Ed. 6.General Science Teacher: B.Sc/M.Sc, B.Ed. 7.Mathematics Teacher: B.Sc./M.Sc, B.Ed. 8.Social Science Teacher: BA/MA, B.Ed. 9.Computer Teacher: BCA/MCA/B.E 10.Nursery Teacher: Any Degree with NTT/MTT,Trained. 11.Physical Instructor: B.P.Ed./M.P.Ed. 12.Librarian: B.Lib/M.Lib Science 13.Music & Dance Teacher: Vidwath 14.Yoga Teacher: Diploma in Yoga 15.Office Assistant: Any degree with Tally ERP-9 & computer knowledge 16.Resident Engineer: Diploma or BE Civil Engineering with minimum 5years' experience or just retired from Govt. Service 17.School Van Driver: Heavy Motor Vehicle License, PSV bus & driving experience in school bus 18.Maintenance Asst.- Diploma in Automobile or Mechanical Engineering preferred. (II)SSK PU College: 1.Lecturer in Mathematics & Statistics: M.Sc. B.Ed. 2.Lecturer in English: MA., B.Ed. 3.Lecturer in Computer Science: MCA 4.Lab. Assistant: PUC Science (III)SSK Degree College: Lecturer in Commerce: M.Com with SLET Interview date will be intimated. Interested candidates may send their resume, service & salary certificates & Testimonials to the Mail: sskvptrust.2001@gmail.com/ personally submit the above details to Trust office on or before 22/04/2023 between 9am to 4pm.

GURUKULA INTERNATIONAL SCHOOL Requires, NURSERY, English, Maths, Kannada COMPUTER TEACHERS for Primary and High School and LADY ACCOUNTANT with Kannada typing. 9th Cross, Near Magadi Road, Metro Station Bangalore-23. 7829338292 7676676629

ST.CHARLES HIGH SCHOOL #1086,1st Block,3rd Stage, Adarsha-Layout, Basaveshwaranagar, Bangalore-79.Invites application from NTT, TCH,BA B.Ed, BSC B.Ed,QUALIFIED and EXPERIENCED English medium TEACHERS to handle Nursery,Primary and High-School also wanted PE,HM and Co-ordinator. Phone:9886519766

WANTED FULL-TIME Lecturers in English, Computer Science, Political Science & Economics, Candidates with P.G, & B.Ed, Preferably youngsters can apply to the Secretary, Vidyavahini College Anandanagar Bangalore-24 Email: vvpucollege@gmail.com, Ph:9606516854 080-23433507

CAMLIN ENGLISH SCHOOL 6th 'C' Main Hampinagara Vijayanagar 2nd Stage Bangalore-104. Requires TEACHERS B.Sc., B.Ed. (Maths, Science) B.A., B.Ed. (English, Kannada, Social) TCH/D.Ed., NTT, Computers, Drawings, SECURITY GUARD, ATTENDER, AYA SCHOOL BUS DRIVER. Contact immediately/ Apply: 080-23301363

HOLY ANGEL'S High School Hampinagar, Vijayanagar, Bengaluru-560104. Phone: 23404465/23202042 holyangels.highschool rpclayout@gmail.com Requires Experienced Trained Teachers to handle Nursery, Primary, Higher Primary, High School and Music Teacher for the Academic Year 2023-24 STATE & ICSE. Qualification:NTT, B.A./B.Sc.,B.Ed. M.A./M.Sc.,M.Ed. Only English Medium Candidates need apply

GOODWILL ENGLISH HIGH SCHOOL, Yelahanka Oldtown Urgently requires English-BA B.Ed, Computer, Physical Education TEACHERS for High School. Walkin: 13th to 15th April 2023 between: 10am to 1pm. Contact: 9448620241.

TRAINED AND Experienced Post-graduate Teachers PRIMARY:Maths,Hindi, HIGH SCHOOL: Maths,Science, English,HM, Accountant,Coding and CS.Jnanabharathi. 9035033560, 8867569333

REPUTED ICSE School at Tumkur road requires experienced PRINCIPAL. Interested candidates Contact: 9108372746/ Email: purnima.pujarmay05@gmail.com

WANTED TRAINED ARTS AND SCIENCE GRADUATES TO TEACH IN HIGH SCHOOL. Apply in person: HEADMISTRESS, M.S.S. HIGH SCHOOL #8, 6th Cross, Prakashnagar, Bengaluru-21. 7676139966

WANTED TEACHERS with BA/MA (Eng/SS) Salary upto 28000/- Contact Sidhartha International School, Peenya,Dasarahalli. Contact 9620100046 / 9964670328.

WANTED: HM, Teachers, Receptionist for V.V. English School andHindi Teacher for Kannada Aided School, Vijayanagar, Bangalore-40. Contact No. 080- 23405860, 7022475881. Email: vves2008@gmail.com

WANTED SCIENCE Teacher For Highschool Sagar Convent Kanakapura Main B'lore- 82 Near APS Engineering College Good Salary: 9342552428

WANTED ACADEMIC Head, Teachers for all Subjects. Kindergarten to_Tenth Standard School, @_J.P.Nagar. 080-26590773, 9845042249.

THE GOLDEN VALLEY PUBLIC SCHOOL, Requires experienced TEACHERS for all subjects (Pre KG to 10th standard) Qualification: Graduate and Post-Graduation with D.Ed/ B.Ed/ M.Ed. Offering attractive salary. Shree Chakranagar, Andrahalli, Bangalore-91 Call: 9620456205, 9742707779

NIRMAN INTERNATIONAL PUBLIC SCHOOL, Near Automated RTO,7th Block, Vishweshwaraiah Layout, Bangalore-91 Requires Qualified TEACHERS for Nursery, English, Science, Social and PE. Contact: 8123030731/ 9986055970. Email: nirmanorganisation@gmail.com. Walk in Interview on all working days between 9:30am to 2:00pm.

JYOTI NIVAS PRE- UNIVERSITY COLLEGE
Hosur Road, Bangalore-560095
Ph: 25506100 E-Mail ID: louisa.regi@gmail.com info@jnpuc.org
Requires:
Lecturers in Statistic, Mathematics, English and History.
Qualification: PG First Class with B.Ed Preferred
Electrician: Minimum Qualification: PUC with Certification in Electricals
Apply to the Principal on or before 24.04.2023

WANTED LECTURERS in Physics, Chemistry Economics, Commerce English, Kannada, Computer Science, Hindi, Physical Education and Librarian for Vidyavana PU College Tirumalashettyhalli, Whitefield, Bengaluru. Email: vidyavanahr@gmail.com WhatsApp: 9663389388

ZEENA ENGLISH SCHOOL
(Recognized by the Government of Karnataka)
REQUIRES
1) HEAD MISTRESS / HEAD MASTER (aged < 50 years) – Qualified (B A & B Ed. / B Sc. & B Ed.) with at least 5 years relevant experience and well versed with the Board related work
2) Qualified & trained subject TEACHERS for General Science (B.Sc. & B Ed.) & Social Science (B A & B Ed.) for High School with at least 3 years of experience
3)Qualified, trained & experienced TEACHERS for Nursery (PUC, NTT & D Ed.)
Eligible & interested candidates may email their resume within 7 days to zeenaenglishschool2016@gmail.com OR 8123926408

MAHADEVA GROUP of Institutions, Hosakote Requires Experienced Lecturers and Teachers with UG & PG, B.Ed preferred and fluency in English is mandatory. School: P-Kg to Grade 10 All Subjects, PUC: Physics, Chemistry, Math's Biology, Economics, Computer Science, English Degree: Commerce & Management. EMail: srisaieducationtrust2015@gmail.com. 9980618815 /9945475096

FRANK PUBLIC SCHOOL, JP.Nagar 6th phase,requires HIGH SCHOOL ENGLISH, HINDI TEACHERS, PRIMARY SCHOOL TEACHERS. Email Resume: rumysud@gmail.com WhatsApp:9901692223

Accounts & Finance

WANTED ACCOUNTANT Qualification B.Com Graduates`Exp: 5-10years with`TDS`& GST Salary:45,000 Age Below`50years Family Accommodation Call:7338084555 9845053636`Mail saiconstructions7889@gmail.com Interview Time: 10am`to`1pm

WANTED ACCOUNTANT from South Bangalore, 2 to 3 Years experience, preferable to handle all the account related matters with Tally Erp-9/Prime, knowledge at Private Limited Company near Bannerghatta Road. Contact: 9880215703, Email-sales@vigirom.com, cc-accounts@vigirom.com.

WANTED ACCOUNTS OFFICER: 5-10 years experience, ACCOUNTS ASSISTANT: 3-5 years of experience for a Leading Construction Company. Experience in Tally, GST, MS office &admin activities. Call: 9880179435

DEEVIGE CLASSES Malleswaram requires Experienced Accountant. Best Remuneration. 7676557564/ 8762424646. Whatsapp only (Please don't Call)

HRD & Admin

SOURCE TECHNOLOGI Requires Accountants 5years experienced M.com/ CS and, H.R Minimum 2.5 years Experienced. Contact: 8296964536. Email: pallavi@sourcetechnologi.com

Multiple Vacancy

Authorised Dealer of hp
UNIQUE Computers Peenya, B'lore -58
REQUIRED
Back office / Call Co-ordinator
Account Assistant
Hardware /Network Engr
Delivery Boy
Candidates Should have 1-2 years Exp With analyzing skills & able to Multi-task
For more details contact
Ph: +91 9036003800
E:corporatesales@uniquec.com

A Reputed 27 Year old Company in Bangalore
URGENTLY REQUIRED
SALES EXECUTIVE
Attractive Compensation, Incentives & Career growth While minimum experience is 4-5 years, seniors also can apply Experience in selling to Interior Designers / Architects / Consultants & similar is mandatory.
TELE-SALES CALLERS
to work from office Setting up appointment with potential customers Compensation includes Salary & Incentives.
Send CV to Email : cm95.recruitments@gmail.com
Call : 99724 37094

Applications are invited for the following posts to work in a reputed House Building Co-operative Society in Bangalore.
SECRETARY
Qualification:
- Graduate with MBA / M.Com.
- Min 10 years of Exp in Accounts, Tally, with Co-operative training
- Clerical work such as Typing in English & Kannada
- Working knowledge in Computer
- Secretarial course preferred
- Must be capable of managing the Society.
- Age between 35-40yrs

ESTATE OFFICER
Qualification:
- Graduate with Min 10 years of Experience
- Experience in maintaining Marriage halls, preparation of Accounts, Filing of GST, TDS tax etc.
- Working knowledge in Computer.
- Must be capable of managing the Society's Marriage halls.
- Age between 30-40yrs

CIVIL ENGINEER
Qualification:
- BE Graduate in Civil Engineering.
- Working experience in field such as Supervision of layout works,
- Preparation of Estimate, Bills etc.
- Age between 25-40yrs

Salary according to educational Qualification & Experience.
Application with Expected salary & full details may be sent within 10 days:
housingsocietyblr@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Wanted

WANTED
The following candidates are urgently Required for the Reputed Private Engineering Company located in MG Road, Bengaluru.
1. Sr. Accountant having CA/ICWA/Articled Asst with min. 2yrs Experience.
2. Engineer (Civil) with BE/BTech having 2 yrs Experience.
3. Female Receptionist having Graduation (Accountancy background is necessary).
The interested candidates may send their resumes along with 2 Passport size Photograph to the Email:biscshine@gmail.com

Om Sai Ram
NEW BALDWIN GROUP OF SCHOOLS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
PRINCIPAL/ VICE PRINCIPAL
Candidates willing to upgrade themselve as Principal, having Post Graduates & BEd Working in reputed institution as Senior teacher & HODs can apply immediately.
PROs, SALES EXECUTIVES TELE CALLERS
to work in your local areas
♦ Required Qualification :- Any Graduate with Good Communicational Skills.
♦ Salary :- Attractive Salary With Incentives.
♦ Experience :- Priority Will be given to the Candidates Having Experience in Educational Sector.
APPLY IMMEDIATELY
Applying candidates should clearly specify the Position Applied for, branch Opted with updated resume
Contact : 98860 84799
centralhr.nbgi@gmail.com

Overseas

JOB OPENING
Required for East Africa, Tanzania, Dar-Es-Salaam, BWCCL Requires an Assistant Engineer for Hotel Industry possessing multi skill specilazation in HVAC
Contact: +255 684927448
Email Id: director@bwccl.co.tz

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

WANTED APARTMENT Maintenance Supervisor`Exp: 5-10years Salary 30,000 Age`Below 45years Two`wheeler is`Mandate Family Accommodation Call:7338084555 9845053636`Mail saiconstructions7889@gmail.com Interview Time: 10am`to`1pm

WANTED COMPUTER Typist Male/Female Supervisor/Helpers/ Delivery Boys Email: mundhralighting@gmail.com contact: 9986033339 /9611206161

WANTED TELEMARKETING People (Females) in and around Marathahalli Area, Good Communication skills in English, Graduates only, Salary best in Industry Call: 9916298104.

SHARANYA TELTRONICS Kumaraswamy Layout requires Sales, Service, Accounts and Office Executives. Call: 9845010634.

Marketing & Sales

JOB- VACANCY, Post- Sales Representative Qualification: HSC Pass, Graduation H.Q- Banglore Kokuyo Camlin Ltd Fine Art division Contact person- 1) Kiran (FSO)- 99029260442) DB Gowda (FSO)- 9110226430 Interview Address: OM ENTERPRISES, 154/1, 5th Main, 3rd stage, Behind Suguna Hospital, Rajajinagar, Bangalore 560010. Interview Date: 13/04/2023 to 15/04/2023 Timing: 10am to 5pm

EXPERIENCE FMCG SALES REPRESENTATIVE for Leading Coffee`Powder Manufacturer at`Bangalore. Language Knows Kannada, English,`Tulu. Apply Resume moderncoffee33@gmail.com Whatsapp: 9945469899.

WANTED MANAGERS, Teamleaders, Sales Executives and Telecallers to work in Jayanagar & Central City. Earn upto 20000-30000. Call 7406432056

Part-Time Jobs

EXCELLENT GREAT Opportunity Work From Home Earn Unlimited From 35k-40k Part/ Full Time: 8147236252/ 9886641282

EDUCATIONAL

Tuitions

NOW AT Your Door Step Best Home Tuitions Schools and Colleges Can Also Contact for Teaching Requirements By T.S.Shivashankar PHD (USA) Maths and Physics Expert Living in Mahalaxmi Layout: 9743095715, 40Years of International Experience Any Maths Physics Chemistry English French Hindi Civil Aero nautical Mechanical Electrical & Electronics All Subjects At All and Different Levels CBSE, ICSE, ISC, I.I.T, JEE Mains & Advance From 1st to 12th Standard Educated in USA, Brazil, Canada, England, France, Germany, Holland, Greece, Russia, Allso Kendriya Vidyalaya I.I.T Kanpur 1981, 12th Standard Pass out Father DR.T.K Srikantaiah Former Professor, Aero nautical Engg Dept I.I.T Kanpur (PhD Canada) At All Major Areas of Bangalore, Metro Routes From Mahalaxmi Layout and Towards Peenya, Yelahanka, Kengeri,

PERSONAL

Change of Name

CHANGE OF NAME
I, **DILIP PATIL,** Residing at J.P. Nagar 8th Phase, Bangalore- 83. In different documents my son's names mentioned as Rakshith and Rakshith Patil. here by declaring Rakshith and Rakshith Patil belong to my son only. In future he will be called **RAKSHITH PATIL** only vide affidavit dated 06-04-2023, before notary G Dayananda , Bangalore

I, NEERAJA D/o Saroja R/at A2, Leela Apartments, 44, 6th Cross, Ashram Colony, RMV 2nd Stage, Bengaluru- 560094, have changed my name to NEERAJA KIRAMAKKI vide affidavit dated: 11/4/2023 Before Notary Kundan Babu.M Bangalore

CHANGE OF NAME
I, **PARAMESWARAN PILLAI.K & PILLAI K.P.,** Age 68, R/a 87, 2nd Main, 1st Cross, Bangalore Road, Babanagar Layout,Yelahanka, Bangalore- 560063, declare that both these names pertain to me and henceforth I shall be known as **PARAMESWARAN PILLAI.K,** vide affidavit (IN-KA92586919587619U) dated 23.11.2022 before Notary G.P. Chaya, Bangalore.

I, SHWETA Nandakumar V W/o Nandakumar B.N R/at #T1. Ganapathy Residency, 3rd Floor, Uttarahalli Main Road, Behind Karnataka Bank, Canara Bank Colony, Bengaluru- 560061 Declaring that SHWETHA NANDAKUMAR V & SHWETA NANDAKUMAR V these both are the same & single person and Shweta Nandakumar V is correct & actual name vide affidavit dated: 15/12/2022 sworn before Notary G.DAYANANDA, BANGALORE

CHANGE OF NAME
I, **MARY PRIYA,** residing at #29, Rathan Singh Road, Near Frazer Town Mosque, Frazer Town, Bengaluru- 560005, have changed my name to **MARY PRIYA MICHAEL,** vide affidavit dated 11.04.2023 before Notary C.V. Earappa, Bangalore. Henceforth I shall be known as **MARY PRIYA MICHAEL** only.

I, KUMAR GAWRAV, residing at Bengaluru-4 have changed my name as KUMAR GAURAV, vide affidavit dated 11/04/2023 before Notary P.C.Ramaiah, Bengaluru

CHANGE OF NAME
I, **RAJARAM ALVA** S/o Sesanna Alva, resident of Flat No 11002, Prestige Monte Carlo, Doddaballapur Road, Near Ramanashree California Resort, Yelahanka New Town, Bengaluru-64, have changed my name to **AMMUNJE RAJARAM ALVA** vide affidavit dated 11.04.2023 before Notary K.Venkateshan, Bangalore.

I, NITHIANANTHAM RANGANATHAN have changed my name to NITHIANAND R vide affidavit dated: 11/4/2023 Before Notary Shreeshail.B. Gobbani Bangalore

REAL ESTATE SELLING

Commercial Building

Mysore Road

FOR SALE 60X40 BUILDING WITH 65HP POWER IN INDUSTRIALAREA MYSORE ROAD CALL:9886080542

Joint Development

Frazer Town

AVAILABLE 12000SQFT For JOINT DEVELOPMENT/ WAREHOUSE Opp. Venkteshpur Metrostation After Frazer Town Bangalore:9845251337

ASTRO YATRA



ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ: ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್(ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ.ನಂ. 102, ನಂ. 30, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು–04
ಮನೆ ವಿಳಾಸ: ಮನೆ ನಂ. 2544, ನಂದಗೋಕುಲ ನಿಲಯ, ಅಂಬರ್ ಲಾಜಿಸ್ಟಿಕ್ ಹತ್ತಿರ, ಕೆಳಮಹಡಿ, 13ನೇ ಮುಖ್ಯ ರಸ್ತೆ, 'ಇ' ಬ್ಲಾಕ್ (ಮೋರ್ ಸೂಪರ್ ಮಾರ್ಕೆಟ್ ಹಿಂಭಾಗ), ಕೊಡಿಗೇಹಳ್ಳಿ ಗೇಟ್, ಸಹಕಾರ ನಗರ, ಬೆಂಗಳೂರು–560092
Mob.: 98441 06430 / 81579 14600
ಭೇಟಿಯ ವೇಳೆ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)



ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಕಳುಹಿಸಿ.

ಕ್ಷೇತ್ರಗಳು: • ಬ್ಯಾಟರಾಯನಪುರ • ಬೊಮ್ಮನಹಳ್ಳಿ • ಮಲ್ಲೇಶ್ವರ

96060 38256

ಗೋವಿಂದರಾಜ ನಗರ



ಗೋವಿಂದರಾಜ ನಗರ ವಿಧಾನಸಭೆ ಕ್ಷೇತ್ರದಲ್ಲಿ ವ್ಯವಸ್ಥೆ, ಸೌಲಭ್ಯಗಳು ಹೆಚ್ಚಾಗಿದ್ದರೂ, ಮಹಿಳೆಯರು ಸೇರಿದಂತೆ ಜನರ ಸುರಕ್ಷತೆಗೆ ಹೆಚ್ಚು ಒತ್ತು ನೀಡಬೇಕಿದೆ. ಪುಂಡರ ಹಾವಳಿ ಹೆಚ್ಚಾಗಿದ್ದು, ಮಹಿಳೆಯರಿಗೆ ರಕ್ಷಣೆ ನೀಡುವ ಕ್ರಮಗಳಾಗಬೇಕು ಎಂಬುದು ಜನರ ನಿರೀಕ್ಷೆ.

ಮಹಿಳೆಯರಿಗೆ ತರಬೇತಿ ಕೇಂದ್ರ ಬೇಕು



ಮಹಿಳೆಯರಿಗೆ ಹೆಚ್ಚು ರಕ್ಷಣೆ ಸಿಗಬೇಕು. ನಿರ್ಭಯವಾಗಿ ಎಲ್ಲ ಕಡೆ ಸಂಚರಿಸುವ ವಾತಾವರಣ ನಿರ್ಮಾಣವಾಗಬೇಕು. ಸ್ತ್ರೀ ಶಕ್ತಿ ಸಂಘ ಸ್ಥಾಪಿಸಬೇಕು. ಅದರಲ್ಲಿ ಸಾಲ ಸೌಲಭ್ಯಗಳು ಸಿಗಬೇಕು ಮಹಿಳಾ ಭವನ ನಿರ್ಮಿಸಬೇಕು. ಹಲವು ಪುರುಷರು ದುಡಿದ ಹಣವನ್ನು ದುಶ್ಚಟಕ್ಕೆ ಹಾಳು ಮಾಡುತ್ತಾರೆ. ಅಂತಹ ಸಮಯದಲ್ಲಿ ಮಹಿಳೆಯರು ಸ್ವಂತ ಉದ್ಯೋಗ ಮಾಡಿಕೊಂಡು ಸಂಸಾರ ಮುನ್ನಡೆಸಬೇಕಿದೆ. ಆದ್ದರಿಂದ ಟೈಲರಿಂಗ್, ಕ್ಯಾಂಡಲ್ ತಯಾರಿಕೆ ಇನ್ನೂ ಇತರೆ ಸ್ವಯಂ ಉದ್ಯೋಗ ನಡೆಸಲು ಮಹಿಳೆಯರಿಗೆ ತರಬೇತಿ ಕೇಂದ್ರ ಆರಂಭಿಸಬೇಕು.

ವಿಜಯಲಕ್ಷ್ಮಿ, ಮೂಡಲಪಾಳ್ಯ

ಶಿಕ್ಷಣ ಎಲ್ಲರಿಗೂ ಸಿಗುವಂತಾಗಲಿ



ಇಂದಿನ ದಿನಗಳಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಅತ್ಯಂತ ಪ್ರಮುಖ. ಬಡ ಕುಟುಂಬ ಮತ್ತು ಮಧ್ಯಮ ಕುಟುಂಬ ಖಾಸಗಿ ಶಾಲೆಗಳಲ್ಲಿ ಹೆಚ್ಚು ಶುಲ್ಕ ಪಾವತಿಸಲು ಬಹಳ ಕಷ್ಟವಾಗುತ್ತಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಿಗೆ ಹೆಚ್ಚು ಆದ್ಯತೆ ನೀಡಿ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣ ಆರಂಭಿಸಬೇಕು ಮತ್ತು ಗ್ರಂಥಾಲಯ ಮಾಡಬೇಕು. ಕ್ಷೇತ್ರದಲ್ಲಿ ಸಾರ್ವಜನಿಕ ಶೌಚಾಲಯದ ಕೊರತೆ ಇದೆ. ಕ್ಷೇತ್ರದ ಬಹುತೇಕ ಪ್ರದೇಶದಲ್ಲಿ ಶೌಚಾಲಯವೇ ಇಲ್ಲ. ಪ್ರತಿ ಬಸ್ ನಿಲ್ದಾಣದಲ್ಲಿ ಕಡ್ಡಾಯವಾಗಿ ಶೌಚಾಲಯ ನಿರ್ಮಿಸಿ, ಸ್ವಚ್ಛತೆ ಕಾಪಾಡಬೇಕು.

ಮರಿಸ್ವಾಮಿ ಗೌಡ, ಗೋವಿಂದರಾಜನಗರ

ಪುಂಡರ ಹಾವಳಿ ನಿಯಂತ್ರಿಸಬೇಕು



ನಾಯಂಡಹಳ್ಳಿ ವ್ಯಾಪ್ತಿಯಲ್ಲಿ ಪುಂಡರ ಹಾವಳಿ ಹೆಚ್ಚಿದೆ. ಮಹಿಳೆಯರು ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಓಡಾಡಲು ಬಹಳಷ್ಟು ಕಷ್ಟವಾಗುತ್ತಿದೆ. ನಾಯಂಡಹಳ್ಳಿ ರೈಲ್ವೆ ನಿಲ್ದಾಣದಿಂದ ಇಳಿದು ಬರುವ ಪ್ರಯಾಣಿಕರ ಮೊಬೈಲ್ ಕಳ್ಳತನ ಹೆಚ್ಚಾಗುತ್ತಿದೆ. ಹೆಚ್ಚು ಪೊಲೀಸರನ್ನು ನೇಮಿಸಬೇಕು. ವಿನಾಯಕ ಬಡಾವಣೆಯಲ್ಲಿ ಪೊಲೀಸ್ ಚೌಕಿ ನಿರ್ಮಿಸಬೇಕು. ನಾಯಂಡಹಳ್ಳಿ ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಮಾಡಬೇಕು. ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಬಸ್ ನಿಲ್ದಾಣದಲ್ಲಿ ಉಚಿತವಾಗಿ ಶುದ್ಧ ಕುಡಿಯುವ ನೀರು ಪೂರೈಸಬೇಕು.

ಶ್ವೇತ, ನಾಯಂಡಹಳ್ಳಿ

ಶಿವಾಜಿನಗರ



ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಬಹುತೇಕ ಪ್ರದೇಶಗಳಲ್ಲಿ ಸ್ವಚ್ಛತೆಯದ್ದೇ ಕೊರತೆ. ಇದಕ್ಕೆ ಶಾಶ್ವತ ಪರಿಹಾರ ನೀಡಬೇಕಿದೆ. ಅಲ್ಲದೆ, ಅಕ್ರಮ ಚಟುವಟಿಕೆಗಳಿಗೆ ಭವಿಷ್ಯದ ಶಾಸಕರು ಬೆಂಬಲ ನೀಡದೆ, ಜನರ ರಕ್ಷಣೆಗೆ ಆದ್ಯತೆ ನೀಡಬೇಕು ಎಂಬುದು ನಾಗರಿಕರ ಆಶಯ.

ಅಕ್ರಮ ಚಟುವಟಿಕೆಗಳಿಂದ ದೂರವಿರಲಿ



ಶಿವಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿ ರಿಯಲ್ ಎಸ್ಟೇಟ್, ಮಟ್ಕಾ, ಜೂಜಾಟ ಹಿನ್ನೆಲೆಯುಳ್ಳವರು ಹಾಗೂ ಗುತ್ತಿಗೆದಾರರು ರಾಜಕೀಯ ಪಕ್ಷಗಳು ದೂರವಿಡಬೇಕು. ಅಂತವರನ್ನು ಜನಪ್ರತಿನಿಧಿಗಳು ಜತೆಯಲ್ಲಿಟ್ಟುಕೊಳ್ಳಬಾರದು. ಶಾಸಕರಾದವರು ಗುತ್ತಿಗೆದಾರರು, ಅಕ್ರಮ ಚಟುವಟಿಕೆ ನಡೆಸುವವರಿಗೆ ಬೆಂಬಲ ನೀಡದೆ, ಆಯ್ಕೆ ಮಾಡಿದ ಪ್ರಜೆಗಳ ರಕ್ಷಣೆಯತ್ತ ಕೆಲಸ ಮಾಡಬೇಕು. ಜನರಿಗೆ ಉಡುಗೊರೆ ನೀಡಿದರೆ ಕೆಲಸ ಮುಗಿಯಿತು ಎಂದು ಭಾವಿಸಬಾರದು. ಕಾನೂನನ್ನು ಎಲ್ಲರಿಗೂ ಅನ್ವಯವಾಗುವಂತೆ ಜಾರಿಗೊಳಿಸುವ ಕೆಲಸ ಮಾಡಬೇಕು.

ಹಾರಿಸ್ ಸಿದ್ದೀಖಿ, ಶಿವಾಜಿನಗರ

ಸ್ವಚ್ಛತೆ ನಿರ್ವಹಣೆ ಪ್ರಥಮವಾಗಲಿ

ಶಿವಾಜಿನಗರ ಬಸ್ ನಿಲ್ದಾಣ ಸರ್ಕಲ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಅಷ್ಟೇ ಅಲ್ಲದೆ, ಇಲ್ಲಿ ಬೌರಿಂಗ್ ಆಸ್ಪತ್ರೆ ಇದ್ದು, ಅಲ್ಲೂ ಸ್ವಚ್ಛತೆ ಇಲ್ಲ. ಎಲ್ಲಿ ನೋಡಿದರೂ ಕಸವೇ ಕಾಣುತ್ತದೆ. ಪಾದಚಾರಿಗಳು ಓಡಾಡಲು ಸಮಸ್ಯೆಯಾಗಿದೆ. ಸಾರ್ವಜನಿಕ ಶೌಚಾಲಯಗಳ ಅಗತ್ಯವಿದೆ.

ಕಲೀಂ ಉಲ್ಲಾ, ಶಿವಾಜಿನಗರ

ವಿಜಯನಗರ



ವಿಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿಗಳು ನಡೆದಿದ್ದರೂ ಗುಣಮಟ್ಟದ ಕೊರತೆ ಇದೆ. ಉತ್ತಮ ರಸ್ತೆಯಾದರೆ ಅದನ್ನೇ ಅಗೆಯಲಾಗುತ್ತದೆ. ಶಿಕ್ಷಣ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಅತ್ಯಾಧುನಿಕ ಸೌಲಭ್ಯಗಳು ಬೇಕಿದೆ ಎಂಬುದು ಜನರ ನಿರೀಕ್ಷೆ

ಕಾಮಗಾರಿ ಗುಣಮಟ್ಟಕ್ಕಿರಲಿ ಆದ್ಯತೆ



ಕ್ಷೇತ್ರ ಅಭಿವೃದ್ಧಿ ಹೊಂದಿದ್ದರೂ ಬಡಾವಣೆ ಒಳಗಿನ ರಸ್ತೆಗಳ ಗುಣಮಟ್ಟ ಸುಧಾರಿಸಬೇಕಿದೆ. ಉದ್ಯಾನಗಳ ಒಳಗೆ ಸ್ವಚ್ಛತೆ ಹಾಗೂ ಗುಣಮಟ್ಟದ ವ್ಯಾಯಾಮ ಪರಿಕರಗಳನ್ನು ಅಳವಡಿಸಬೇಕಿದೆ. ಪಾದಚಾರಿ ಮಾರ್ಗಗಳು ಕ್ಷೇತ್ರದಾದ್ಯಂತ ಇದ್ದರೂ ಉಪಯೋಗಕ್ಕೆ ಇಲ್ಲದಂತಾಗಿವೆ. ಮನೆ ಮುಂದೆ ಹಾಗೂ ಉದ್ಯಾನಗಳ ಸುತ್ತಮುತ್ತ ವಾಹನ ನಿಲುಗಡೆ ಅತಿಯಾಗಿ ಕಿರಿ ಕಿರಿ ಹೆಚ್ಚಾಗಿದೆ. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ಕೊಡಬೇಕಿದೆ. ಯಾವುದೇ ಕಾಮಗಾರಿ ನಡೆಸಿದರೂ ಅದರ ಗುಣಮಟ್ಟದ ಖಾತರಿ ಇರುವಂತೆ ನೋಡಿಕೊಳ್ಳಬೇಕು.

ಬಿ.ಎಸ್. ಪಾಟೀಲ್, ಹಂಪಿನಗರ

ಯೋಜನೆ: ನಾಗರಿಕರೊಂದಿಗೆ ಚರ್ಚಿಸಲಿ



ವಾರಕ್ಕೊಮ್ಮೆ ವಾರ್ಡ್ ಮಟ್ಟದ ಅಧಿಕಾರಿಗಳೊಂದಿಗೆ, ನಾಗರಿಕರ ಕುಂದುಕೊರತೆಗಳ ಸಭೆ ನಡೆಸಬೇಕು. ಶಾಸಕರ ಅನುದಾನ ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು. ಅದರಡಿ ಕೈಗೊಳ್ಳುವ ಕಾಮಗಾರಿಗಳ ಬಗ್ಗೆ ಜನರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು. ಕ್ಷೇತ್ರದಲ್ಲಿ ನಡೆಯುತ್ತಿರುವ ಕಾಮಗಾರಿ ಗುಣ್ಣಮಟ್ಟವನ್ನು ಪರಿಶೀಲಿಸಿ, ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಚಿರಶಾಂತಿಯ ವಾಹನ, ಅಂಬುಲೆನ್ಸ್ ಸೇವೆ ಸುರಕ್ಷತೆಗೆ ಆದ್ಯತೆ ನೀಡಬೇಕು. ಉದ್ಯಾನಗಳಲ್ಲಿ ಶೌಚಾಲಯ ನಿರ್ಮಾಣ ಮಾಡಿ, ಅವುಗಳನ್ನು ಸ್ವಚ್ಛವಾಗಿಡಬೇಕು.

ಎಂ.ಮಂಜುನಾಥ್, ಹಂಪಿನಗರ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕಿದೆ



ವಿಜಯನಗರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಗತ್ಯವಿದೆ. ಎಲ್ಲ ರೀತಿಯ ಚಿಕಿತ್ಸೆಗಳನ್ನು ನೀಡುವ ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸಬೇಕಿದೆ. ಇದರೊಂದಿಗೆ ತಾಯಿ–ಮಕ್ಕಳ ಆಸ್ಪತ್ರೆಯ ಅಗತ್ಯವೂ ಇದೆ. ಬಾಪೂಜಿ ನಗರ ಮತ್ತು ಆರ್‌ಪಿಸಿ ಬಡಾವಣೆ ಕೆಳಸೇತುವೆ ಬಳಿ ಸುರಕ್ಷತೆಗೆ ಪೊಲೀಸ್ ಚೌಕಿ ನಿರ್ಮಿಸಬೇಕು. ಕ್ಷೇತ್ರದ ಹೆಣ್ಣುಮಕ್ಕಳಿಗೆ ಬ್ಯೂಟಿ ಪಾರ್ಲರ್, ಫ್ಯಾಷನ್ ಡಿಸೈನ್ ತರಬೇತಿ ಕೇಂದ್ರ ನಿರ್ಮಿಸಿದರೆ ಸ್ವಂತ ಮಹಿಳೆಯರಿಗೆ ಸರಿಯಾದ ಉದ್ಯೋಗ ಸಿಗುತ್ತದೆ.

ಭಾಗ್ಯಲಕ್ಷ್ಮಿ, ವಿಜಯನಗರ

‘ಕ್ರೀಡಾಂಗಣದ ಅಗತ್ಯ ಇದೆ’



ಚುನಾವಣಾ ಸಮಯಕ್ಕೆ ಬಹಳಷ್ಟು ರಸ್ತೆಗೆ ಡಾಂಬರಿಕರಣ ಮಾಡುತ್ತಿದ್ದಾರೆ. ಬಹಳಷ್ಟು ಕಡೆ ಡಾಂಬರೀಕರಣ ಆದ ನಂತರ ಮತ್ತೆ ರಸ್ತೆ ಅಗೆದು ಕೇಬಲ್ ಅಳವಡಿಕೆ, ಪೈಪ್ ಅಳವಡಿಕೆ ರೀತಿಯ ಕೆಲಸಗಳನ್ನು ಪದೇಪದೇ ಮಾಡುತ್ತಿದ್ದು, ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. ಈ ರೀತಿಯ ಡಾಂಬರೀಕರಣ ಮೊದಲು ಕೈಗೊಂಡರೆ ಸಮಯ ಮತ್ತು ಹಣ ಎರಡು ಸರ್ಕಾರಕ್ಕೆ ಮತ್ತು ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸಿಕೊಳ್ಳಬೇಕು. ಬೀದಿ ದೀಪಗಳನ್ನು ಹಾಕಬೇಕು. ಯುವಕರಿಗೆ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾಂಗಣ ನಿರ್ಮಿಸಬೇಕು.

ವಸಂತ್ ಕುಮಾರ್, ವಿಜಯನಗರ

ಸೆಲೆಬ್ರಿಟಿ ಮಾತು



ಪ್ರಜಾಪ್ರಭುತ್ವ ಬಲಪಡಿಸೋಣ

ಅವಿನಾಶ್, ಚಿತ್ರನಟ

ನಮ್ಮ ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯ ರಾಷ್ಟ್ರ. ನಾಡಿನ ಆಡಳಿತಗಾರರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವ ಅತಿದೊಡ್ಡ ಹಕ್ಕು ಮತ್ತು ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಬನ್ನಿ 18 ವರ್ಷ ತುಂಬಿದ ಎಲ್ಲ ಜವಾಬ್ದಾರಿಯುತ ಮತದಾರರು ನಮ್ಮ ಕರ್ತವ್ಯ ನಿಭಾಯಿಸೋಣ. ಸರಿಯಾದ ಆಡಳಿತಗಾರರನ್ನು, ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡೋಣ. ನಮ್ಮ ಪ್ರಜಾಪ್ರಭುತ್ವ ಬಲಪಡಿಸೋಣ. ಮತದಾನ ನಮ್ಮ ಶಕ್ತಿ. ಮೇ 10ರಂದು ನಾನು ವೋಟ್ ಮಾಡುತ್ತೇನೆ. ಮರೆಯದೇ ನೀವೆಲ್ಲರೂ ವೋಟ್ ಮಾಡಿ.

ಶಂಕರ್ ರಾಜೀನಾಮೆ ಘೋಷಣೆ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು: ರಾಣೆಬೆನ್ನೂರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಆರ್.ಶಂಕರ್ ಅವರು, ಟಿಕೆಟ್ ಕೈತಪ್ಪಿರುವ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ. ಜತೆಗೆ, ಬೆಂಬಲಿಗರ ಸಲಹೆಯಂತೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ತೀರ್ಮಾನಿಸಿದ್ದಾರೆ.

2018ರಲ್ಲಿ ಕೆಪಿಜೆಪಿಯಿಂದ ಗೆದ್ದು ಶಾಸಕರಾಗಿದ್ದ ಅವರು ನಂತರ ಕಾಂಗ್ರೆಸ್ ಸೇರಿ ಅರಣ್ಯ ಸಚಿವರಾದರು. ನಂತರದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಬೆಂಬಲ ಸೂಚಿಸಿ, ಬಿಜೆಪಿ ಸರ್ಕಾರ ರಚನೆಗೆ ಕಾರಣರಾದರು.

2019ರ ಉಪಚುನಾವಣೆಯಲ್ಲಿ ಶಂಕರ್ ಬದಲು ಅರುಣಕುಮಾರ ಪೂಜಾರಗೆ ಬಿಜೆಪಿ ಟಿಕೆಟ್ ನೀಡಿ, ಶಂಕರ್‌ರನ್ನು ಪರಿಷತ್ ಸದಸ್ಯರನ್ನಾಗಿ ಮಾಡಿತ್ತು. ಈ ಬಾರಿ ಅವರು ಬಿಜೆಪಿ ಟಿಕೆಟ್‌ನ ಆಕಾಂಕ್ಷಿಯಾಗಿದ್ದರು.

ಬಿಜೆಪಿ: ಗೋವಿಂದರಾಜನಗರ, ಮಹದೇವಪುರ, ಹೆಬ್ಬಾಳ ಕ್ಷೇತ್ರಗಳಿಗೆ ಟಿಕೆಟ್ ಘೋಷಣೆ ಇಲ್ಲ

ಹಾಲಿ ಶಾಸಕರಿಗೆ ಮಣೆ, ಹೊಸಬರಿಗೆ ಮನ್ನಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಹಾಲಿ ಬಿಜೆಪಿ ಶಾಸಕರಿರುವ ಗೋವಿಂದರಾಜನಗರ ಹಾಗೂ ಮಹದೇವಪುರ ವಿಧಾನಸಭೆ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸದ ಪಕ್ಷ, ಉಳಿದ ಎಲ್ಲ ಹಾಲಿ ಶಾಸಕರಿಗೆ ಟಿಕೆಟ್ ನೀಡಿದೆ.

28 ಕ್ಷೇತ್ರಗಳಲ್ಲಿ ಪ್ರಸ್ತುತ ಬಿಜೆಪಿಯ 16 ಶಾಸಕರಿದ್ದು, ಗೋವಿಂದರಾಜನಗರದ ವಿ. ಸೋಮಣ್ಣ ಅವರನ್ನು ಚಾಮರಾಜನಗರ ಹಾಗೂ ವರುಣಾ ಕ್ಷೇತ್ರಕ್ಕೆ ಕಳುಹಿಸಲಾಗಿದೆ. ಪದ್ಮನಾಭನಗರದ ಆರ್. ಅಶೋಕ ಅವರನ್ನು ಹಾಲಿ ಕ್ಷೇತ್ರದ ಜೊತೆಗೆ ಕನಕಪುರದಲ್ಲಿ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ವಿರುದ್ಧ ಅಭ್ಯರ್ಥಿಯನ್ನಾಗಿಸಲಾಗಿದೆ. ಮಹದೇವಪುರ ಕ್ಷೇತ್ರದ ಹಾಲಿ ಶಾಸಕ ಅರವಿಂದ ಲಿಂಬಾವಳಿ ಅಥವಾ ಯಾರಿಗೂ ಟಿಕೆಟ್ ಘೋಷಿಸಲಾಗಿಲ್ಲ.

ಹೀಗಾಗಿ, ಗೋವಿಂದರಾಜನಗರ, ಮಹದೇವಪುರ ಹಾಗೂ ಹೆಬ್ಬಾಳ ವಿಧಾನಸಭೆ ಕ್ಷೇತ್ರಗಳಿಗೆ ಮಾತ್ರ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಈ ಹಿಂದೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸರ್ಕಾರ ರಚನೆಗೆ ಕಾರಣರಾಗಿದ್ದ ಎಲ್ಲ ವಲಸೆ ಶಾಸಕರಿಗೂ ಟಿಕೆಟ್ ನೀಡಲಾಗಿದೆ.

ಬೆಂಗಳೂರಿನ 28 ಕ್ಷೇತ್ರದಲ್ಲಿ ಭಾರಿ ಬದಲಾವಣೆಯಾಗುವ ನಿರೀಕ್ಷೆ ಪಕ್ಷದ ಕೆಲ ಕಾರ್ಯಕರ್ತರಲ್ಲಿತ್ತು. ಹಾಲಿ ಶಾಸಕರಲ್ಲಿ ಮೂರ್ನಾಲ್ಕು ಜನರಿಗೆ ಟಿಕೆಟ್ ಕೈತಪ್ಪಬಹುದು, ಬೇರೆ ಕ್ಷೇತ್ರಕ್ಕೆ ಹೋಗಬಹುದು ಅಥವಾ ಬೆಂಗಳೂರಿನಿಂದ ಹೊರಕ್ಷೇತ್ರಕ್ಕೆ ಕಳುಹಿಸಬಹುದು ಎನ್ನಲಾಗಿತ್ತು. ಆದರೆ, ಇವರಲ್ಲಿ ವಿ. ಸೋಮಣ್ಣ ಅವರಿಗೆ ಮಾತ್ರ ಬೆಂಗಳೂರು ಹೊರತಾದ ಎರಡು ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಲಾಗಿದೆ. ಆರ್. ಅಶೋಕ ಅವರಿಗೆ ಪದ್ಮನಾಭನಗರ ಕ್ಷೇತ್ರದ ಜೊತೆಗೆ ಕನಕಪುರ ಕ್ಷೇತ್ರ ನೀಡಲಾಗಿದೆ. ಇವೆರಡು ಬದಲಾವಣೆ ಬಿಟ್ಟರೆ ಪ್ರಮುಖವಾದ ಬದಲಾವಣೆಗಳಾಗಿಲ್ಲ.

ಜಯನಗರ ಕ್ಷೇತ್ರದಲ್ಲಿ ಮಾಜಿ ಕಾರ್ಪೊರೇಟರ್‌ಗಳ ಭಾರಿ ಪೈಪೋಟಿಯಲ್ಲಿ ಸಿ.ಕೆ. ರಾಮಮೂರ್ತಿ ಟಿಕೆಟ್ ಪಡೆದಿದ್ದಾರೆ. ಎನ್.ಆರ್. ರಮೇಶ್ ಅವರಿಗೆ ಟಿಕೆಟ್ ಕೈತಪ್ಪಿದ್ದು, ಈಗಾಗಲೇ ಪ್ರತಿಭಟನೆಗೆ ಕಾರಣವಾಗಿದೆ.

ನಗರದ ಮಾಜಿ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್ ಅವರಿಗೆ ಚಾಮರಾಜಪೇಟೆ ಕ್ಷೇತ್ರಕ್ಕೆ ಟಿಕೆಟ್ ನೀಡಲಾಗಿದೆ. ನಿವೃತ್ತಿ ನಂತರ ಎಎಪಿ ಪಕ್ಷ ಸೇರಿಕೊಂಡಿದ್ದರು. ನಂತರ ಅದನ್ನು ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದರು. ಇದೀಗ ಚಾಮರಾಜಪೇಟೆಯಲ್ಲಿ ಜಮೀರ್ ಅಹಮದ್ ಖಾನ್ ವಿರುದ್ಧ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ.

ಮತ್ತೆ ಅವಕಾಶ: ಬಿಬಿಎಂಪಿಯ ಆಡಳಿತ ಪಕ್ಷದ ನಾಯಕರಾಗಿದ್ದ ಪದ್ಮನಾಭರೆಡ್ಡಿ, ಎಚ್. ರವೀಂದ್ರ ಅವರಿಗೆ ಮತ್ತೆ ಅವಕಾಶ ನೀಡಲಾಗಿದೆ. ಕಳೆದ ಬಾರಿ ಈ ಇಬ್ಬರೂ ಪ್ರಬಲ ಸ್ಪರ್ಧೆ ನೀಡಿದ್ದರು.

ಸರ್ವಜ್ಞನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೆ.ಜೆ. ಜಾರ್ಜ್ ಅವರಿಗೆ ಪದ್ಮನಾಭರೆಡ್ಡಿ ಅವರು ಕಳೆದ ಬಾರಿ ಹೆಚ್ಚು ಪೈಪೋಟಿ ನೀಡಿ ಕಡಿಮೆ ಅಂತರದಲ್ಲಿ ಸೋತಿದ್ದರು. ಈ ಬಾರಿ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ವೃದ್ಧಿಯಾಗಿರುವುದರಿಂದ ಮತ್ತೆ ಪದ್ಮನಾಭರೆಡ್ಡಿ ಅವರಿಗೆ ಪಕ್ಷ ಮನ್ನಣೆ ನೀಡಿದೆ. ಇನ್ನು ವಿಜಯನಗರದಲ್ಲಿ ಕಾಂಗ್ರೆಸ್‌ನ ಎಂ. ಕೃಷ್ಣಪ್ಪ ಅವರ ವಿರುದ್ಧ ಕೆಲವೇ ಸಾವಿರ ಮತಗಳ ಅಂತರದಲ್ಲಿ ಸೋಲು ಕಂಡಿದ್ದ ಎಚ್. ರವೀಂದ್ರಗೆ ಟಿಕೆಟ್ ಘೋಷಿಸಿದೆ.

ನಾಲ್ಕನೇ ಬಾರಿ ಸ್ಪರ್ಧೆ: ದಾಸರಹಳ್ಳಿ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿದ್ದ ಎಸ್. ಮುನಿರಾಜು ಅವರು ಕಳೆದ ಬಾರಿ ಸೋತಿದ್ದರು. ಈ ಬಾರಿ ಅವರಿಗೆ ಮತ್ತೆ ಟಿಕೆಟ್ ಘೋಷಿಸಲಾಗಿದೆ.

ಜಯನಗರದಲ್ಲಿ ಪ್ರತಿಭಟನೆ

ಜಯನಗರ ಅಥವಾ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದ ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರನ್ನು ಯಾವ ಕ್ಷೇತ್ರಕ್ಕೂ ಪರಿಗಣಿಸದ್ದನ್ನು ವಿರೋಧಿಸಿ ಅವರ ಅಭಿಮಾನಿಗಳು, ಕಾರ್ಯಕರ್ತರು ಮಂಗಳವಾರ ರಾತ್ರಿ ಜಯನಗರದಲ್ಲಿ ಪ್ರತಿಭಟನೆ ನಡೆಸಿದರು.

‘ರಮೇಶ್ ಅವರಿಗೆ ಟಿಕೆಟ್ ಕೈತಪ್ಪಲು ಆರ್. ಅಶೋಕ ಹಾಗೂ ಬಿ.ವೈ. ವಿಜಯೇಂದ್ರ ಅವರೇ ಕಾರಣ’ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಎನ್. ಚಂದ್ರ


ಎಸ್. ರಘು


ರಾಮಮೂರ್ತಿ


ಮುನಿರಾಜು


ಎಚ್. ರವೀಂದ್ರ


ಶಿವಕುಮಾರ್


ಪದ್ಮನಾಭ ರೆಡ್ಡಿ

ಹೊಸ ಮುಖಗಳು

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರಕ್ಕೆ ನಗರದ ಪೊಲೀಸ್ ಮಾಜಿ ಕಮಿಷನರ್ ಭಾಸ್ಕರ್ ರಾವ್, ಜಯನಗರ ಕ್ಷೇತ್ರಕ್ಕೆ ಮಾಜಿ ಕಾರ್ಪೊರೇಟರ್ ಸಿ.ಕೆ. ರಾಮಮೂರ್ತಿ, ಶಿವಾಜಿನಗರ ಕ್ಷೇತ್ರಕ್ಕೆ ಮಾಜಿ ಕಾರ್ಪೊರೇಟರ್ ಎನ್. ಚಂದ್ರ, ಪುಲಕೇಶಿನಗರಕ್ಕೆ ಮುರಳಿ, ಬ್ಯಾಟರಾಯನಪುರಕ್ಕೆ ತಮ್ಮೇಶ್ ಗೌಡ, ಶಾಂತಿನಗರಕ್ಕೆ ಮಾಜಿ ಕಾರ್ಪೊರೇಟರ್ ಶಿವಕುಮಾರ್, ಗಾಂಧಿನಗರಕ್ಕೆ ಎ.ಆರ್. ಸಪ್ತಗಿರಿ ಗೌಡ, ಬಿಟಿಎಂ ಲೇಔಟ್‌ನಿಂದ ಶ್ರೀಧರ ರೆಡ್ಡಿ, ಆನೇಕಲ್‌ನಿಂದ ಹುಲ್ಲಳ್ಳಿ ಶ್ರೀನಿವಾಸ್ ಪ್ರಥಮ ಬಾರಿಗೆ ವಿಧಾನಸಭೆ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ.



ನಗರದ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಗಂಗಾಂಬಿಕೆ ಮಲ್ಲಿಕಾರ್ಜುನ್ ಜಯನಗರದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಮುಖಂಡರಾದ ಕೆಜಿಎಫ್ ಬಾಬು ಅವರೊಂದಿಗೆ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗಂಗಾಂಬಿಕೆ, ಕೆಜಿಎಫ್ ಬಾಬು ನಾಮಪತ್ರ ಸಲ್ಲಿಕೆಗೆ ಸಿದ್ಧತೆ

ಆಕಾಂಕ್ಷಿಗಳ ಪರಸ್ಪರ ಬೆಂಬಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚಿಕ್ಕಪೇಟೆ ಕ್ಷೇತ್ರ: ಘೋಷಣೆಯಾಗದ ಟಿಕೆಟ್
- ಪರಸ್ಪರ ಭಿನ್ನಾಭಿಪ್ರಾಯವಿಲ್ಲ ಎಂದ ಆಕಾಂಕ್ಷಿಗಳು



ಬೆಂಗಳೂರು: ಚಿಕ್ಕಪೇಟೆ ಕ್ಷೇತ್ರಕ್ಕೆ ಕಾಂಗ್ರೆಸ್ ಇನ್ನೂ ಅಭ್ಯರ್ಥಿಯ ಹೆಸರು ಘೋಷಿಸಿಲ್ಲ. ಈ ನಡುವೆ, ಟಿಕೆಟ್ ಘೋಷಣೆಗೂ ಮುನ್ನವೇ ಕ್ಷೇತ್ರದಿಂದ ಪ್ರತ್ಯೇಕವಾಗಿ ನಾಮಪತ್ರ ಸಲ್ಲಿಸಲು ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಹಾಗೂ ಕೆಜಿಎಫ್ ಬಾಬು ಸಿದ್ಧತೆ ನಡೆಸಿದ್ದಾರೆ. ಇಬ್ಬರೂ ಆಕಾಂಕ್ಷಿಗಳು ಪರಸ್ಪರ ಬೆಂಬಲ ಘೋಷಿಸಿಕೊಂಡಿದ್ದಾರೆ. ತಮ್ಮ ಬೆಂಬಲಿಗರ ಜತೆಗೂ ಸಮಾಲೋಚನೆ ನಡೆಸಿದ್ದಾರೆ.

‘ಏಪ್ರಿಲ್ 13ರಂದು ಬೆಳಿಗ್ಗೆ 11ಕ್ಕೆ ಸೌತ್ ಎಂಡ್ ಸರ್ಕಲ್ ಬಳಿಯ ಚುನಾವಣೆ ಅಧಿಕಾರಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸುತ್ತೇನೆ. ಅದಕ್ಕೂ ಮುನ್ನ ಜಯನಗರದ ಅಶೋಕ ಪಿಲ್ಲರ್ ಬಳಿಯಿಂದ ಕಾರ್ಯಕರ್ತರು ಹಾಗೂ ಅಭಿಮಾನಿಗಳ ಜತೆಗೆ ಪಾದಯಾತ್ರೆ ನಡೆಸಲಾಗುವುದು’ ಎಂದು ಗಂಗಾಂಬಿಕೆ ತಿಳಿಸಿದ್ದಾರೆ.

‘ಬಿ-ಫಾರಂ ಸಲ್ಲಿಸಲು ಏಪ್ರಿಲ್ 20ರ ತನಕ ಅವಕಾಶ ಇದೆ. ಚಿಕ್ಕಪೇಟೆಯಲ್ಲಿ ಎಲ್ಲ ವರ್ಗದ ಜನರೂ ನೆಲೆಸಿದ್ದಾರೆ. ನನಗೆ ಟಿಕೆಟ್ ನೀಡಿದರೆ ಕೆಜಿಎಫ್ ಬಾಬು ಅವರು ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದಾರೆ’ ಎಂದು ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕೆಜಿಎಫ್ ಬಾಬು ಮಾತನಾಡಿ, ‘ನನ್ನ ಜಮೀನು ವೀಕ್ಷಣೆಗೆ ತೆರಳಿದ್ದ ವೇಳೆ ಅಲ್ಲೇ ಇದ್ದ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದೇನೆ. ಅವರ ಆಶೀರ್ವಾದ ಪಡೆದುಕೊಂಡಿದ್ದೇನೆ. ನಾನು ಜೆಡಿಎಸ್‌ನಿಂದ ಟಿಕೆಟ್ ಕೇಳಿಲ್ಲ. ಗಂಗಾಂಬಿಕೆ ಹಾಗೂ ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಗಂಗಾಂಬಿಕೆ ಅವರು ಮೇಯರ್ ಆಗಿದ್ದ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಇಬ್ಬರಲ್ಲಿ ಯಾರಿಗಾದರೂ ಕಾಂಗ್ರೆಸ್ ಟಿಕೆಟ್ ನೀಡಲಿ. ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ’ ಎಂದು ಹೇಳಿದರು.

ಇನ್ನು ಬಸವನಗುಡಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಯು.ಬಿ. ವೆಂಕಟೇಶ್ ಏಪ್ರಿಲ್ 17ರಂದು ನಾಮಪತ್ರ ಸಲ್ಲಿಸಲಿದ್ದಾರೆ.

ಅಂದು ಬೆಳಿಗ್ಗೆ 9.30ಕ್ಕೆ ಗವಿ ಗಂಗಾಧರೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮೆರವಣಿಗೆ ಮೂಲಕ ತೆರಳಿ ಚೆನ್ನಮ್ಮನಕೆರೆ ಅಚ್ಚುಕಟ್ಟೆಯ 170–ಬಸವನಗುಡಿ ವಿಧಾನಸಭಾ ಕ್ಷೇತ್ರದ ಚುನಾವಣೆ ಅಧಿಕಾರಿಗೆ ನಾಮಪತ್ರ ಸಲ್ಲಿಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

‘ಸಿ.ಎಂ ಯಾರಾಗಬೇಕೆಂದು ಮಾತನಾಡದಿದ್ದರೆ ಒಳ್ಳೆಯದು’

ಪ್ರಜಾವಾಣಿ ವಾರ್ತೆ


ರಾಮಲಿಂಗಾ ರೆಡ್ಡಿ

ಬೆಂಗಳೂರು: ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಯಾರು ಮುಖ್ಯಮಂತ್ರಿ ಆಗಬೇಕು ಎಂಬ ಬಗ್ಗೆ ಚುನಾವಣೆ ಮುಗಿಯುವವರೆಗೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮಾತನಾಡದೇ ಇದ್ದರೆ ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಅಭಿಪ್ರಾಯಪಟ್ಟರು.

ಬೆಂಗಳೂರು ಪ್ರೆಸ್ ಕ್ಲಬ್ ಮಂಗಳವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಇದೆ. ಅಧಿಕಾರದ ಅವಧಿಯಲ್ಲಿ ಮಾಡಿದ್ದ ಅಭಿವೃದ್ಧಿ ಕೆಲಸಗಳು ಅನುಕೂಲಕರ ವಾತಾವರಣ ಸೃಷ್ಟಿಸಿದೆ. ಕಳೆದ ಚುನಾವಣೆಯಲ್ಲಿ ಟಿಪ್ಪು, ಲಿಂಗಾಯತ ಪ್ರತ್ಯೇಕ ಧರ್ಮ ವಿಚಾರವಾಗಿ ಅಪಪ್ರಚಾರದಿಂದ ಪಕ್ಷಕ್ಕೆ ಸೋಲುಂಟಾಯಿತು’ ಎಂದು ವಿಶ್ಲೇಷಿಸಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾದ ಅನಿವಾರ್ಯವಿದೆ. ಕಾಂಗ್ರೆಸ್ ಪಕ್ಷದಲ್ಲಿ ಸ್ಪರ್ಧೆ ಇದೆ ಎಂಬ ರೀತಿಯ ಭಾವನೆ ಯಾವುದೇ ರೀತಿಯಲ್ಲಿಯೂ ಜನರಲ್ಲಿ ಮೂಡಬಾರದು. ಒಂದೊಮ್ಮೆ ಮೂಡಿದರೆ, ಪಕ್ಷ ಅಧಿಕಾರಕ್ಕೆ ಬರಲು ಮಾರಕವಾಗಿ ಪರಿಣಮಿಸಬಹುದು’ ಎಂದೂ ಹೇಳಿದರು.

‘ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಸಾಲದ ಪ್ರಮಾಣವೂ ಹೆಚ್ಚಾಗಿದೆ. ಕೇಂದ್ರದ ನಾಯಕತ್ವದ ವಿರುದ್ಧವೂ ಜನ ಭ್ರಮನಿರಸರಾಗಿದ್ದಾರೆ. ರಾಜ್ಯ ಬಿಜೆಪಿಯಲ್ಲಿ ನಾಯಕತ್ವವೇ ಇಲ್ಲ’ ಎಂದ ಅವರು ‘ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ’ ಎಂದರು.

‘ಮುಖ್ಯಮಂತ್ರಿ ಆಗುವ ಎಲ್ಲ ಅರ್ಹತೆ ನನಗಿದೆ. ಆದರೆ, ಆ ಸ್ಥಾನಕ್ಕೆ ಇನ್ನೂ ಇಬ್ಬರು, ಮೂವರು ಆಕಾಂಕ್ಷಿಗಳಿದ್ದಾರೆ. ಇಂಥ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿ ಸ್ಥಾನ ಕೇಳಲು ಸಾಧ್ಯವಿಲ್ಲ. ನಾನು ಮುಖ್ಯಮಂತ್ರಿ ಸ್ಪರ್ಧೆಯಲ್ಲಿಯೂ ಇಲ್ಲ. ಮುಂಚೂಣಿಯಲ್ಲಿರುವ ನಾಯಕರ ಪೈಕಿ ಯಾರಾದರೊಬ್ಬರು ಆಗುತ್ತಾರೆ’ ಎಂದರು.

‘ಆರು ತಿಂಗಳು ಮೊದಲೇ ಪಕ್ಷದ ಅಭ್ಯರ್ಥಿಗಳನ್ನು ಘೋಷಣೆ ಮಾಡಬೇಕೆಂಬ ಒತ್ತಡ ಇತ್ತು. ಎರಡನೇ ಪಟ್ಟಿ ಬಿಡುಗಡೆಯಾದಾಗ ಸ್ವಲ್ಪಮಟ್ಟಿನ ಗೊಂದಲ ಆಗಿದ್ದು ನಿಜ’ ಎಂದರು.

ಪ್ರಚಾರದಲ್ಲಿ ಧನಾತ್ಮಕ ವಿಚಾರಗಳಿಗೆ ಒತ್ತು: ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಹಂತದ ಚುನಾವಣಾ ಪ್ರಚಾರದಲ್ಲಿ ಧನಾತ್ಮಕ ವಿಚಾರಗಳನ್ನು ಮಾತ್ರ ಪ್ರಸ್ತಾಪಿಸುತ್ತೇವೆ. ಯಾವುದೇ ಕಾರಣಕ್ಕೂ ನಕಾರಾತ್ಮಕ ವಿಷಯಗಳತ್ತ ಗಮನಕೊಡುವುದಿಲ್ಲ’ ಎಂದು ರಾಜ್ಯ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಪಕ್ಷದ ಮಾಧ್ಯಮ ಕೇಂದ್ರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮತದಾರರೂ ನಕಾರಾತ್ಮಕ ವಿಷಯಗಳನ್ನು ಬಯಸುವುದಿಲ್ಲ. ನಮಗಾಗಿ ಏನು ಮಾಡಿದ್ದೀರಿ ಮತ್ತು ಏನು ಮಾಡುತ್ತೀರಿ ಎಂಬುದಷ್ಟನ್ನೇ ಬಯಸುತ್ತಾರೆ. ಹೀಗಾಗಿ ನಾವೂ ಕೂಡ ಅದೇ ವಿಷಯಗಳನ್ನು ಪ್ರಸ್ತಾಪಿಸಲಿದ್ದೇವೆ’ ಎಂದರು.


‘ಜನರ ಕಷ್ಟಗಳನ್ನು ಬಗೆಹರಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿಜಿ ಅವರು ದೊಡ್ಡ ಹೆಜ್ಜೆ ಇಟ್ಟರು. ಗಾಂಧೀಜಿ ಹೇಳಿದಂತೆ ಸ್ವಚ್ಛತೆಗೆ ಆದ್ಯತೆ ಕೊಡಲಾಯಿತು’ ಎಂದರು.

‘ಶೌಚಾಲಯ ಮತ್ತು ಉಜ್ವಲಾ ಯೋಜನೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ವರದಾನವಾಯಿತು. ಶೌಚಾಲಯ ನಿರ್ಮಾಣದ ವಿಚಾರದಲ್ಲಿ ಮೋದಿ ಕ್ರಾಂತಿಯನ್ನೇ ಮಾಡಿದರು. ಶೌಚಾಲಯ ನಿರ್ಮಾಣಕ್ಕಾಗಿ ಎಸ್‌ಸಿ–ಎಸ್‌ಟಿ, ಹಿಂದುಳಿದ ಸಮುದಾಯಕ್ಕಾಗಿ ಹೆಚ್ಚಿನ ಆದ್ಯತೆ ನೀಡಿದರು. 11 ಕೋಟಿ ಶೌಚಾಲಯಗಳ ನಿರ್ಮಾಣ ಮಾಡುವ ಮೂಲಕ ಈ ಸಮುದಾಯ ಘನತೆಯಿಂದ ಜೀವನ ನಡೆಸುವ ವ್ಯವಸ್ಥೆ ಮಾಡಿದರು’ ಎಂದರು.

10 ದಿನ ಮುನ್ನ ಮತಚೀಟಿ ಮನೆಗೆ

ಐಟಿ-ಬಿಟಿ ಸಂಸ್ಥೆಗಳಿಗೆ ಮತದಾನ ಜಾಗೃತಿ: ತುಷಾರ್ ಗಿರಿನಾಥ್ ಹೇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮತ ಪಟ್ಟಿಯಲ್ಲಿ ಹೆಸರಿರುವವರಿಗೆ ಮತದಾನದ 10 ದಿನದ ಮುಂಚಿತವಾಗಿಯೇ ಮತಚೀಟಿಯನ್ನು ಅವರ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಬೆಂಗಳೂರು ಜಿಲ್ಲಾ ಚುನಾವಣಾ ಅಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

‘ವೋಟರ್ ಹೆಲ್ಪ್ ಲೈನ್’ ತಂತ್ರಾಂಶವನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಮೂಲಕ ಮತದಾನ ಮಾಡುವ ಮತಗಟ್ಟೆಯ ಮಾಹಿತಿ ಸೇರಿದಂತೆ ಇನ್ನಿತರೆ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಬಹುದು’ ಎಂದು ತಿಳಿಸಿದರು.

ಸ್ವೀಪ್ ಕಾರ್ಯಕ್ರಮದಡಿ ಒಆರ್‌ಆರ್‌ಸಿಎ ಸಹಯೋಗದೊಂದಿಗೆ ಮಾನ್ಯತಾ ಬಿಸಿನೆಸ್ ಪಾರ್ಕ್‌ನಲ್ಲಿ ನಡೆದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವದ ಯಶಸ್ಸು ಎಂದರೆ ಚುನಾವಣೆಯಲ್ಲಿ ಗರಿಷ್ಠ ಮತದಾನ. ಐಟಿ-ಬಿಟಿ ಸಂಸ್ಥೆ, ಕೈಗಾರಿಕಾ ಪ್ರದೇಶಗಳಲ್ಲಿ ಮತದಾನ ಜಾಗೃತಿ ಮೂಡಿಸಬೇಕು. ಹೆಚ್ಚು ಮತದಾನವಾಗುವಂತೆ ನೋಡಿಕೊಳ್ಳಬೇಕು. ಮೇ 10ರಂದು ಮತದಾನ ನಡೆಯಲಿದೆ. ಆ ದಿನ ಮತದಾನ ಮಾಡುವ ಉದ್ದೇಶಕ್ಕಾಗಿ ಐಟಿ-ಬಿಟಿ ಸಂಸ್ಥೆ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ರಜೆ ನೀಡಲಾಗುತ್ತದೆ. ಎಲ್ಲರೂ ಮತದಾನ ಮಾಡಬೇಕೆಂಬ ಉದ್ದೇಶದಿಂದ ರಜೆಯನ್ನು ನೀಡಲಾಗುತ್ತದೆ. ಆದರೆ, ಅದನ್ನು ಸಾಕಷ್ಟು ಮಂದಿ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎಂದರು.

‘ನಮ್ಮ ಬೆಂಗಳೂರು ಐಕಾನ್’ ರಂಜನಿ ರಾಮಾನುಜಂ ಮಾತನಾಡಿ, ‘ಪ್ರತಿಯೊಬ್ಬರೂ ತಪ್ಪದೆ ಮತ ಚಲಾಯಿಸೋಣ. ಎಲ್ಲರೂ ತಪ್ಪದೆ ಮತದಾನ ಮಾಡಿ ಶೇಕಡಾವಾರು ಮತದಾನ ಪ್ರಮಾಣ ಹೆಚ್ಚಿಸೋಣ. ಇದು ನಮ್ಮೆಲ್ಲ ಜವಾಬ್ದಾರಿಯಾಗಿದೆ’ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸಂಗಪ್ಪ, ವಲಯ ಆಯುಕ್ತ ಪಿ.ಎನ್. ರವೀಂದ್ರ, ಸ್ವೀಪ್ ನೋಡಲ್ ಅಧಿಕಾರಿ ಸಿದ್ದೇಶ್ವರ್, ಜಂಟಿ ಆಯುಕ್ತೆ ಪಲ್ಲವಿ, ಮತದಾನ ಜಾಗೃತಿ ಮೂಡಿಸುವ ‘ನಮ್ಮ ಬೆಂಗಳೂರು ಐಕಾನ್’ ಮಾಸ್ಟರ್ ಆನಂದ್, ಮೋಹನ್ ಕುಮಾರ್ ಇದ್ದರು.

ಜಾಗೃತಿ ಜಾಥಾ: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಸಿದ್ದಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರದಲ್ಲಿರುವ ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮತ್ತು ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಮತದಾನ ಜಾಗೃತಿ ಜಾಥಾ ನಡೆಯಿತು.

ಕೇಂದ್ರ ಮೀಸಲು ಪೊಲೀಸ್ ಪಡೆಯ 9,212 ಕಾನ್ಸ್‌ಟೆಬಲ್ ಹುದ್ದೆಗಳ ಭರ್ತಿ

ಕನ್ನಡಿಗರಿಗೆ 'ಹಿಂದಿ–ಇಂಗ್ಲಿಷ್' ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 9,212 ಕಾನ್ಸ್‌ಟೆಬಲ್ (ಟೆಕ್ನಿಕಲ್ ಮತ್ತು ಟ್ರೇಡ್ಸ್‌ಮನ್) ಹುದ್ದೆಗಳ ಭರ್ತಿಗೆ ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ಲಿಖಿತ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದ್ದು, ಇದರಿಂದಾಗಿ ಕನ್ನಡ ಭಾಷೆಯ ಅಭ್ಯರ್ಥಿಗಳು ಅವಕಾಶ ವಂಚಿತರಾಗಿದ್ದಾರೆ.

ನೇಮಕಾತಿ ಅಧಿಸೂಚನೆಯನ್ನು ಮಾರ್ಚ್ 15ರಂದು ಹೊರಡಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಏ. 25ರವರೆಗೆ ಅವಕಾಶ ನೀಡಲಾಗಿದೆ. ಕರ್ನಾಟಕದಲ್ಲಿ ಖಾಲಿ ಇರುವ ಸಿಆರ್‌ಪಿಎಫ್‌ನ 460 ಪುರುಷ, 6 ಮಹಿಳಾ ಕಾನ್ಸ್‌ಟೆಬಲ್ ಹುದ್ದೆಗಳನ್ನೂ ಭರ್ತಿ ಮಾಡಲಾಗುತ್ತಿದೆ. ಆದರೆ, ಭಾಷಾ ಸಮಸ್ಯೆ ಕನ್ನಡಿಗ ಅಭ್ಯರ್ಥಿಗಳಿಗೆ ಅಡ್ಡಿಯಾಗಿದೆ.

'ಕನ್ನಡದಲ್ಲೂ ಅವಕಾಶ ಕಲ್ಪಿಸಿ'

ಬೆಂಗಳೂರು: 'ಕೇಂದ್ರ ಮೀಸಲು ಪೊಲೀಸ್ ಪಡೆಯ ನೇಮಕಾತಿ ಪರೀಕ್ಷೆಯಲ್ಲಿ ಅರ್ಹ ಕನ್ನಡಿಗರು ಭಾಷಾ ಸಮಸ್ಯೆಯಿಂದ ಉದ್ಯೋಗ ವಂಚಿತರಾಗುತ್ತಿದ್ದಾರೆ. ಹೀಗಾಗಿ, ಪ್ರಧಾನಿ ನರೇಂದ್ರ ಮೋದಿ ಕೂಡಲೇ ಮಧ್ಯಪ್ರವೇಶಿಸಿ ಕನ್ನಡ ಭಾಷೆಯಲ್ಲಿಯೂ ಸಿಆರ್‌ಪಿಎಫ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಈ ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಯುವುದನ್ನು ಕಡ್ಡಾಯಗೊಳಿಸಿರುವುದನ್ನು ತಕ್ಷಣ ಸಡಿಲಿಸಿ, ಕನ್ನಡಿಗರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯ ಭಾಷೆಗಳನ್ನು ಮೂಲೆಗೆ ತಳ್ಳಿ ಹಿಂದಿ ಭಾಷೆಯನ್ನು ಹೇರುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದೆ. ಉದ್ಯಮ, ಉದ್ಯೋಗ, ಶಿಕ್ಷಣ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಿಂದಿ ಭಾಷೆಯ ಯಜಮಾನಿಕೆ ಹೆಚ್ಚಾಗುತ್ತಿದೆ. ಇದನ್ನು ಸಹಿಸಲು ಸಾಧ್ಯ ಇಲ್ಲ' ಎಂದೂ ಹೇಳಿದ್ದಾರೆ.

'ತಾರತಮ್ಯ ಸರಿಪಡಿಸಿ'

ಕೇಂದ್ರದ ಹುದ್ದೆಗಳ ನೇಮಕಾತಿಯಲ್ಲಿ ರಾಜ್ಯದ ಅಭ್ಯರ್ಥಿಗಳಿಗೆ ಹಿಂದಿನಿಂದಲೂ ಅನ್ಯಾಯವಾಗಿದೆ. ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳನ್ನು ಭಾರತದ ಒಕ್ಕೂಟದ ಆಡಳಿತ ಬಾಷೆಗಳಾಗಿ ಪರಿಗಣಿಸಿರುವುದು ಅನ್ಯಾಯಕ್ಕೆ ಕಾರಣ. ಈ ತಾರತಮ್ಯ ಸರಿಪಡಿಸಬೇಕು. ಪ್ರಾದೇಶಿಕ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು

ಅರುಣ್ ಜಾವಗಲ್, ಕರ್ನಾಟಕ ರಕ್ಷಣಾ ವೇದಿಕೆ ವಕ್ತಾರ

ಸಿಆರ್‌ಪಿಎಫ್ ಹುದ್ದೆಗಳಿಗೆ ಇದುವರೆಗೆ ದೈಹಿಕ ಪರೀಕ್ಷೆಯ ಆಧಾರದಲ್ಲಿ ನೇಮಕಾತಿ ನಡೆಯುತ್ತಿತ್ತು. ಆಯಾ ರಾಜ್ಯದ ಜನಸಂಖ್ಯೆ ಆಧಾರದಲ್ಲಿ ಎಲ್ಲ ರಾಜ್ಯಗಳ ಅಭ್ಯರ್ಥಿಗಳಿಗೂ ಸಮಾನ ಅವಕಾಶ ಸಿಗುವಂತೆ ನೋಡಿಕೊಳ್ಳಲಾಗುತ್ತಿತ್ತು. ಈಗ ನೇಮಕಾತಿ ಪ್ರಕ್ರಿಯೆಯ ಭಾಗವಾಗಿ ನಡೆಯುವ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು (ಸಿಬಿಟಿ) ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲೇ ಬರೆಯಬೇಕು. ಭಾಷಾ ತೊಡಕಿನಿಂದಾಗಿ ಕನ್ನಡ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಹಿಂದೇಟು ಹಾಕುತ್ತಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಕೇರಳ, ತೆಲಂಗಾಣ ಸೇರಿದಂತೆ ದಕ್ಷಿಣದ ರಾಜ್ಯಗಳ ಅಭ್ಯರ್ಥಿಗಳೂ ಇದೇ ಸಮಸ್ಯೆ ಎದುರಿಸುತ್ತಿದ್ದಾರೆ.

ಪರೀಕ್ಷೆಯನ್ನು ಐದು ಹಂತಗಳಲ್ಲಿ ನಡೆಸಲಾಗುತ್ತದೆ. 100 ಅಂಕಗಳ ಕಂಪ್ಯೂಟರ್ ಆಧಾರಿತ ಪರೀಕ್ಷೆ ಉತ್ತೀರ್ಣರಾದರೆ ಮಾತ್ರ ಮುಂದಿನ ಹಂತಗಳಾದ ದೈಹಿಕ ಪರೀಕ್ಷೆ, ಟ್ರೇಡ್ ಟೆಸ್ಟ್, ದಾಖಲೆ ಪತ್ರಗಳ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆಯ ಹಂತಗಳಿಗೆ ಅವಕಾಶ ದೊರೆಯುತ್ತದೆ. ಲಿಖಿತ ಪರೀಕ್ಷೆಯಲ್ಲಿ ಇಂಗ್ಲಿಷ್, ಹಿಂದಿ ಜ್ಞಾನ ಕುರಿತು 25 ಅಂಕಗಳಿಗೆ ಪ್ರಶ್ನೆಗಳು ಇರುತ್ತವೆ.

ಹಾಲಕ್ಕಿ ಮಹಿಳೆಯ ಶ್ರಮ ಶ್ಲಾಘಿಸಿದ ಆನಂದ್ ಮಹೀಂದ್ರ

ಅಂಕೋಲಾ ಬಸ್‌ನಿಲ್ದಾಣ: ಕಸ ಹೆಕ್ಕುವ ಕ್ರಮಕ್ಕೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಅಂಕೋಲಾ (ಉತ್ತರ ಕನ್ನಡ): ಪಟ್ಟಣದ ಬಸ್ ನಿಲ್ದಾಣದಲ್ಲಿ ನೇರಳೆ ಹಣ್ಣು ಮಾರಾಟ ಮಾಡುವ ಹಾಲಕ್ಕಿ ಸಮುದಾಯದ ಮಹಿಳೆಯೊಬ್ಬರು ಪ್ರಯಾಣಿಕರು ಬಿಸಾಡುವ ಕಸವನ್ನು ಹೆಕ್ಕಿ ಸ್ವಚ್ಛಗೊಳಿಸುತ್ತಿರುವುದಕ್ಕೆ ಉದ್ಯಮಿ ಆನಂದ್ ಮಹೀಂದ್ರ ಟ್ವೀಟ್ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬೆಳಸೆಯ ತೆಂಕನಾಡು ಗ್ರಾಮದ ಮೋಹಿನಿ ಕೃಷ್ಣಗೌಡ ಅವರು ಹಲವು ವರ್ಷಗಳಿಂದ ಬಸ್ ನಿಲ್ದಾಣದಲ್ಲಿ ನೇರಳೆ ಹಣ್ಣು ಸೇರಿದಂತೆ ಇನ್ನಿತರ ಕಾಡುಹಣ್ಣುಗಳನ್ನು ಎಲೆಗಳ ಪೊಟ್ಟಣದಲ್ಲಿ ಮಾರಾಟ ಮಾಡುತ್ತಾರೆ.

ಪ್ರಯಾಣಿಕರು ಬಿಸಾಡಿದ ಎಲೆಗಳನ್ನು ತಾವೇ ತೆಗೆದು ಕಸದ ಬುಟ್ಟಿಗೆ ಹಾಕುತ್ತಾರೆ. ಇದನ್ನು ಗಮನಿಸಿದ ಪ್ರಯಾಣಿಕ ಆದರ್ಶ ಹೆಗಡೆ, ಕಸದ ಬುಟ್ಟಿಗೆ ಎಲೆಗಳನ್ನು ಆಯ್ದು ಹಾಕುವ ದೃಶ್ಯವನ್ನು ಸೋಮವಾರ ಟ್ವೀಟ್ ಮಾಡಿದ್ದರು.

ಈ ಟ್ವೀಟ್ ಅನ್ನು ಮಂಗಳವಾರ ತಮ್ಮ ಖಾತೆಯಲ್ಲಿ ಹಂಚಿಕೊಂಡಿರುವ ಮಹೀಂದ್ರಾ ಕಂಪನಿಯ ಮುಖ್ಯಸ್ಥ ಆನಂದ್ ಮಹೀಂದ್ರ, 'ಇಂತಹವರಿಂದಲೇ ಸ್ವಚ್ಛ ಭಾರತ ಸಾಕಾರಗೊಳ್ಳುತ್ತಿದೆ. ಅವರಶ್ರಮ ವ್ಯರ್ಥವಾಗಬಾರದು. ಅಲ್ಲದೆ ಅವರ ಕೆಲಸಗಳು ಪ್ರಚಾರದಲ್ಲಿ ಹಿಂದುಳಿಯಬಾರದು. ಅವರಿಗೆ ನೆರವಾಗುವ ನಿಟ್ಟನಲ್ಲಿ ಏನು ಮಾಡಬಹುದು ಎಂಬ ಸಲಹೆಗಳಿದ್ದರೆ ನೀಡಿ' ಎಂದು ಬರೆದುಕೊಂಡಿದ್ದಾರೆ. ಆನಂದ್ ಟ್ವೀಟ್ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.



ಅಂಕೋಲಾದ ಬಸ್ ನಿಲ್ದಾಣದಲ್ಲಿ ಜಂಬು ನೇರಳೆ ಹಣ್ಣು ಮಾರಾಟಕ್ಕೆ ಕುಳಿತಿರುವ ಮೋಹಿನಿ ಕೃಷ್ಣ ಗೌಡ

ಲೋಕಾಯುಕ್ತ ದಾಳಿ: ₹ 30 ಲಕ್ಷ ನಗದು ವಶ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯನಗರ): ಪಟ್ಟಣದ ಹುಡ್ಕೋ ಬಡಾವಣೆಯಲ್ಲಿರುವ ಮುದ್ದೇಬಿಹಾಳ ತಾಲ್ಲೂಕು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ಎಇಇ ಜೆ. ಪಿ. ಶೆಟ್ಟಿ ಅವರ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿದ್ದಾರೆ.

ಅವರ ಮನೆಯಲ್ಲಿ ₹30 ಲಕ್ಷ ನಗದು ಮತ್ತು ಅಪಾರ ಪ್ರಮಾಣದ ಚಿನ್ನಾಭರಣ ಲಭಿಸಿದೆ. ಪರಿಶೀಲನೆ ಮುಂದುವರಿದಿದೆ. ವಿಜಯಪುರ ಜಿಲ್ಲಾ ಲೋಕಾಯುಕ್ತ ಎಸ್.ಪಿ ಅನಿತಾ ಹದ್ದಣ್ಣನವರ, ಸಿಪಿಐ ಆನಂದ ಠಕ್ಕಣ್ಣನವರ ಹಾಗೂ ಇತರ ಅಧಿಕಾರಿಗಳು ದಾಳಿ ನಡೆಸಿದ ತಂಡದಲ್ಲಿದ್ದರು.

ಕ್ಯಾತನಢೋಣಿ ಹಾಗೂ ಬೂದಿಹಾಳ ಗ್ರಾಮದ ಕುಡಿಯುವ ನೀರು ಸರಬರಾಜು ಗುತ್ತಿಗೆ ಕಾಮಗಾರಿಯಲ್ಲಿ ಗುತ್ತಿಗೆದಾರನಿಗೆ ₹ 60 ಸಾವಿರ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ಗುತ್ತಿಗೆದಾರರಿಂದ ₹ 30 ಸಾವಿರ ತೆಗೆದುಕೊಂಡು, ಬಾಕಿ ₹ 30 ಸಾವಿರ ಹಣ ಕೊಟ್ಟರೆ ಮಾತ್ರ ಬಿಲ್ ಮಾಡುವುದಾಗಿ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಕಾರ್ಯಾಚರಣೆ ವೇಳೆ ಮತ್ತೆ ಆನೆ ದಾಳಿ: ಡಾ. ವಿನಯ್‌ಗೆ ಗಾಯ

ಜಿನಹಳ್ಳಿ ಬಳಿ ಸೆರೆಸಿಕ್ಕ ಕಾಡಾನೆ


ಪ್ರಜಾವಾಣಿ ವಾರ್ತೆ

ದಾವಣಗೆರೆ/ಶಿವಮೊಗ್ಗ: ವಿದ್ಯಾರ್ಥಿನಿಯೊಬ್ಬಳ ಸಾವಿಗೆ ಕಾರಣವಾಗಿದ್ದ ಕಾಡಾನೆಯನ್ನು ಶಿವಮೊಗ್ಗ–ದಾವಣಗೆರೆ ಜಿಲ್ಲೆಗಳ ಗಡಿಭಾಗದಲ್ಲಿರುವ ನ್ಯಾಮತಿ ತಾಲ್ಲೂಕಿನ ಜಿನಹಳ್ಳಿ ಬಳಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಮಂಗಳವಾರ ಯಶಸ್ವಿಯಾಗಿದ್ದಾರೆ.

ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಆನೆಯು ದಿಢೀರ್ ದಾಳಿ ನಡೆಸಿದ್ದರಿಂದ ಶಿವಮೊಗ್ಗದ ಸಕ್ರೆಬೈಲು ಆನೆ ಕ್ಯಾಂಪ್‌ನ ಪಶು ವೈದ್ಯಾಧಿಕಾರಿ ಡಾ. ಎಸ್. ವಿನಯ್ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಬೆನ್ನುಮೂಳೆಗೆ ಗಾಯವಾಗಿದ್ದರಿಂದ ಅವರನ್ನು ಶಿವಮೊಗ್ಗದ ನಂಜಪ್ಪ ಲೈಫ್ ಕೇರ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ ಮೂಲಕ ಚನ್ನಗಿರಿ ತಾಲ್ಲೂಕಿನ ಸೋಮಲಾಪುರಕ್ಕೆ ಶನಿವಾರ ಬಂದಿದ್ದ ಕಾಡಾನೆ, ಬೆಳಿಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ದ್ವಿತೀಯ ಪಿಯು ವಿದ್ಯಾರ್ಥಿನಿ ಕವನಾ ಮೇಲೆ ದಾಳಿ ನಡೆಸಿದ್ದರಿಂದ ಮೃತಪಟ್ಟಿದ್ದಳು. ಸಕ್ರೆಬೈಲು ಕಾಡಾನೆ ಕ್ಯಾಂಪ್‌ನಿಂದ ಕರೆತಂದಿದ್ದ ಭಾನುಮತಿ, ಬಹದ್ದೂರ್, ಸಾಗರ್, ಸೋಮಣ್ಣ ಹಾಗೂ ಬಾಲಣ್ಣ ಹೆಸರಿನ ಆನೆಗಳ ನೆರವಿನಿಂದ ಕಾರ್ಯಾಚರಣೆ ನಡೆಸಿ ಜಿನಹಳ್ಳಿಯ ಚಿಕ್ಕಯ್ಯನ ದೇವಸ್ಥಾನದ ಬಳಿ ಕಾಡಾನೆಯನ್ನು ಸೆರೆ ಹಿಡಿಯಲಾಯಿತು.

ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದ ಪಶುವೈದ್ಯ ಡಾ.ಮುರಳಿ ಮನೋಹರ್ ನೇತೃತ್ವದಲ್ಲಿ ಮುಂದುವರಿದ ಕಾರ್ಯಾಚರಣೆಯಲ್ಲಿ ಆನೆಯನ್ನು ಮಧ್ಯಾಹ್ನದ ಹೊತ್ತಿಗೆ ಸೆರೆಹಿಡಿಯಲಾಯಿತು. ಬಳಿಕ ಸಾಕಾನೆಗಳು ಹಾಗೂ ಕ್ರೇನ್ ನೆರವಿನಿಂದ ಕಾಡಾನೆಯನ್ನು ಲಾರಿಯಲ್ಲಿ ನಿಲ್ಲಿಸಿ ಸಕ್ರೆಬೈಲು ಆನೆ ಕ್ಯಾಂಪ್‌ಗೆ ಸಾಗಿಸಲಾಯಿತು.



ಸಾಕಾನೆಗಳ ನೆರವಿನಿಂದ ಕಾಡಾನೆ (ಮಧ್ಯದಲ್ಲಿರುವುದು) ಸೆರೆಹಿಡಿಯಲಾಯಿತು.



ಡಾ.ಎಸ್. ವಿನಯ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜೀವ ಉಳಿಸಿದ ಗನ್ ಸದ್ದು

ಆನೆಗಾಗಿ ಡ್ರೋನ್ ಮೂಲಕ ಹುಡುಕಾಟ ನಡೆಸಿದ್ದ ಸಿಬ್ಬಂದಿಗೆ ಮಂಗಳವಾರ ಬೆಳಿಗ್ಗೆ ಜಿನಹಳ್ಳಿಯ ಕೆರೆಯ ಬಳಿ ಆನೆ ಇರುವುದು ಗೊತ್ತಾಯಿತು. ಡಾ. ಎಸ್. ವಿನಯ್ ನೇತೃತ್ವದ ಸಿಬ್ಬಂದಿ ಆನೆಗೆ ಅರಿವಳಿಕೆ ನೀಡಿದಾಗ ಅದು ಕುಸಿದುಬಿದ್ದಿದೆ.

ಪ್ರಜ್ಞೆ ತಪ್ಪಿರಬಹುದು ಎಂದು ಭಾವಿಸಿ ಹತ್ತಿರ ಹೋದಾಗ ಆನೆ ಏಕಾಏಕಿ ಎದ್ದುನಿಂತು ದಾಳಿ ನಡೆಸಿತು. ಸ್ಥಳದಲ್ಲಿದ್ದ ಕೆಲವು ಸಿಬ್ಬಂದಿ ಅಲ್ಲಿಂದ ಕಾಲ್ಕಿತ್ತರು. ಕಾಲು ಜಾರಿ ಬಿದ್ದ ಡಾ.ವಿನಯ್ ಅವರ ಮೇಲೆ ಆನೆ ದಾಳಿ ಮಾಡಿತು. ಜೊತೆಯಲ್ಲಿದ್ದವರು ಏರ್ ಗನ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿದಾಗ ಆನೆಯು ಬೆದರಿ ಓಡಿತು. ವಿನಯ್ ಜೀವ ಉಳಿಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ದಾಖಲೆಗಳಿಲ್ಲದೇ ₹ 1,000 ಕೋಟಿ ಪಾವತಿ!

ಒಂದನೇ ಪುಟದಿಂದ...

ಆಡಳಿತ ಮಂಡಳಿಗಳೂ ಭಾಗಿ: ಉದ್ಯಮಿಗಳು ತೆರಿಗೆ ವಂಚಿಸಲು ಹಾಗೂ ಹಣದ ಮೂಲವನ್ನು ರಹಸ್ಯವಾಗಿಡಲು ಈ ಮಾರ್ಗವನ್ನು ಬಳಸಿಕೊಂಡಿದ್ದಾರೆ. ಸಹಕಾರಿ ಬ್ಯಾಂಕ್‌ಗಳ ಆಡಳಿತ ಮಂಡಳಿಗಳ ಸದಸ್ಯರೇ ತಮ್ಮ ರಿಯಲ್ ಎಸ್ಟೇಟ್ ಉದ್ಯಮ ಮತ್ತು ಇತರ ವಹಿವಾಟುಗಳಿಂದ ಬರುವ ಹಣವನ್ನು ಸಕ್ರಮಗೊಳಿಸಿಕೊಳ್ಳಲು ಸಹಕಾರಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಪತ್ತೆಯಾಗಿದೆ. ಆ ರೀತಿಯ ಹಣವನ್ನು ಸಹಕಾರಿ ಬ್ಯಾಂಕ್‌ಗಳ ದಾಖಲೆಗಳಲ್ಲಿ ತೋರಿಸಿ ಸಕ್ರಮಗೊಳಿಸಲಾಗುತ್ತಿದೆ. ಬಳಿಕ ಅದನ್ನು ಬ್ಯಾಂಕ್‌ಗಳ ಆಡಳಿತ ಮಂಡಳಿ ಸದಸ್ಯರ ಉದ್ದಿಮೆಗಳ ಖಾತೆಗಳಿಗೆ ವರ್ಗಾಯಿಸುತ್ತಿರುವುದು ಕಂಡುಬಂದಿದೆ ಎಂದು ಸಿಬಿಡಿಟಿ ತಿಳಿಸಿದೆ.

ಸರಿಯಾದ ನಿಯಮ ಪಾಲಿಸದೇ, ಸೂಕ್ತ ದಾಖಲೆಗಳಿಲ್ಲದೇ ನಿಶ್ಚಿತ ಠೇವಣಿ ರಸೀದಿ (ಎಫ್‌ಡಿಆರ್) ನೀಡಿ, ಬಳಿಕ ಅವುಗಳ ಆಧಾರದಲ್ಲೇ ಬೃಹತ್ ಮೊತ್ತದ ಸಾಲ ನೀಡುತ್ತಿರುವುದನ್ನೂ ಆದಾಯ ತೆರಿಗೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ₹ 15 ಕೋಟಿಗೂ ಹೆಚ್ಚು ಮೊತ್ತದ ಸಾಲವನ್ನು ಈ ರೀತಿ ನೀಡಲಾಗಿದೆ. ದಾಳಿಯ ವೇಳೆ ದಾಖಲೆಗಳಲ್ಲಿ ತೋರಿಸದ ₹ 3.3 ಕೋಟಿ ನಗದು ಮತ್ತು ₹ 2 ಕೋಟಿ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದೆ.

'ಚುನಾವಣೆ ಘೋಷಣೆಗೂ ಮುನ್ನ ಜಪ್ತಿ ಸಲ್ಲ'

ಒಂದನೇ ಪುಟದಿಂದ...

'ಈಗಾಗಲೇ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ಚೀಲಗಳನ್ನು ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ಹಂಚಿಕೆ ಮಾಡಬಾರದು. ಅರ್ಜಿದಾರರು ಮತ್ತು ಚುನಾವಣಾಧಿಕಾರಿ ಇಬ್ಬರೂ ಈ ಷರತ್ತಿಗೆ ಬದ್ಧವಾಗಿರಬೇಕು' ಎಂದು ಚುನಾವಣಾಧಿಕಾರಿ ಮತ್ತು ಪೊಲೀಸರಿಗೆ ನಿರ್ದೇಶಿಸಿರುವ ನ್ಯಾಯಪೀಠ, 'ಅರ್ಜಿದಾರರು ಷರತ್ತು ಉಲ್ಲಂಘಿಸಿ ಅಕ್ಕಿ ವಿತರಿಸಿದ್ದೇನಾದರೂ ಗಮನಕ್ಕೆ ಬಂದರೆ ಚುನಾವಣಾಧಿಕಾರಿ ಮತ್ತು ಪೊಲೀಸರು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಕ್ತರಾಗಿದ್ದಾರೆ' ಎಂದು ಹೇಳಿದೆ.



ಪ್ರಕರಣವೇನು?: ಅರ್ಜಿಯಲ್ಲಿ ತಾನೊಬ್ಬ ಸಮಾಜ ಸೇವಕ ಎಂದು ಹೇಳಿಕೊಂಡಿರುವ ಬೆಂಗಳೂರಿನ ಶಿವಾಜಿ ನಗರದ ನಿವಾಸಿ ಇಷ್ತಿಯಾಕ್ ಅಹ್ಮದ್, ಬಡವರಿಗೆ ಹಂಚಲು ತಲಾ 25 ಕೆ.ಜಿಯ 530 ಅಕ್ಕಿ ಚೀಲಗಳನ್ನು ದಾಸ್ತಾನು ಮಾಡಿದ್ದರು. ದಾಸ್ತಾನು ಮಳಿಗೆ ಮೇಲೆ 2023ರ ಮಾರ್ಚ್ 19ರಂದು ದಾಳಿ ನಡೆಸಿದ್ದ ಚುನಾವಣಾಧಿಕಾರಿ ಮತ್ತು ಪೊಲೀಸರು ದಾಳಿ ನಡೆಸಿ ಈ ಚೀಲಗಳನ್ನು ಜಪ್ತಿ ಮಾಡಿದ್ದರು.

ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರು, 'ನಾನು ಯುಗಾದಿ, ರಂಜಾನ್, ದಸರಾ ಮತ್ತು ಕ್ರಿಸ್‌ಮಸ್ ಹಬ್ಬಗಳ ಸಂದರ್ಭದಲ್ಲಿ ಬಡವರಿಗೆ ಅಕ್ಕಿ ಮತ್ತು ಬಟ್ಟೆ ವಿತರಿಸುವುದನ್ನು ಕಳೆದ 15 ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದೇನೆ. ಆದರೆ, ಚುನಾವಣಾಧಿಕಾರಿ ಮತ್ತು ಪೊಲೀಸರು ಮಾರ್ಚ್ 19ರಂದು ಏಕಾಏಕಿ ದಾಸ್ತಾನು ಮಳಿಗೆ ಮೇಲೆ ದಾಳಿ ನಡೆಸಿ ಅಕ್ಕಿ ಚೀಲಗಳನ್ನು ಜಪ್ತಿ ಮಾಡಿ ದಾಸ್ತಾನು ಮಳಿಗೆಗೆ ಬೀಗ ಹಾಕಿದ್ದಾರೆ. ಚುನಾವಣಾಧಿಕಾರಿಯ ಈ ಕ್ರಮ ಕಾನೂನು ಬಾಹಿರ. ಆದ್ದರಿಂದ, ವಶಪಡಿಸಿಕೊಂಡಿರುವ ಅಕ್ಕಿಯ ಚೀಲಗಳನ್ನು ಬಿಡುಗಡೆ ಮಾಡುವಂತೆ ನಿರ್ದೇಶಿಸಬೇಕು' ಎಂದು ಕೋರಿದ್ದರು.


ಇ.ಡಿ ವಿಚಾರಣೆಗೆ ಹಾಜರಾದ ತೇಜಸ್ವಿ

ನವದೆಹಲಿ: 'ಉದ್ಯೋಗಕ್ಕಾಗಿ ಭೂಮಿ' ಹಗರಣದ, ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಮಂಗಳವಾರ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ವಿಚಾರಣೆಗೆ ಹಾಜರಾದರು.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ತೇಜಸ್ವಿ ಅವರನ್ನು ಸಿಬಿಐ ಕಳೆದ ತಿಂಗಳು ವಿಚಾರಣೆಗೊಳಪಡಿಸಿತ್ತು. ಸಿಬಿಐನ ಎಫ್‌ಐಆರ್ ಆಧರಿಸಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕ್ರಿಮಿನಲ್ ಸೆಕ್ಷನ್‌ಗಳ ಅಡಿಯಲ್ಲಿ ಇ.ಡಿ ತೇಜಸ್ವಿ ವಿರುದ್ಧ ಪ್ರತ್ಯೇಕ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ತೇಜಸ್ವಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ರಾಜ್ಯದಲ್ಲಿ ಅಮೂಲ್ ಹಾಲು ಮತ್ತು ಮೊಸರು ಮಾರಾಟಕ್ಕೆ ಮುಂದಾಗಿರುವುದರಿಂದ ನಂದಿನಿ ಬ್ರ್ಯಾಂಡ್‌ಗೆ ಪೆಟ್ಟು ಬೀಳಲಿದೆ ಎನ್ನುವ ಆತಂಕ ನಿಜವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ರವಿವರ್ಮ ಕುಮಾರ್‌ಗೆ 2023ನೇ ಸಾಲಿನ 'ಬೋಧಿವೃಕ್ಷ' ಪ್ರಶಸ್ತಿ


ಬೆಂಗಳೂರು: ಸ್ಫೂರ್ತಿಧಾಮ ಸಂಸ್ಥೆ 'ಅಂಬೇಡ್ಕರ್ ಹಬ್ಬ'ದ ಅಂಗವಾಗಿ ನೀಡುವ 2023ನೇ ಸಾಲಿನ 'ಬೋಧಿವೃಕ್ಷ' ಹಾಗೂ 'ಬೋಧಿ ವರ್ಧನ' ಪ್ರಶಸ್ತಿಗೆ ಸಾಧಕರು ಮತ್ತು ಹೋರಾಟಗಾರರ ಹೆಸರು ಪ್ರಕಟಿಸಿದೆ.

'ಬೋಧಿವೃಕ್ಷ' ಪ್ರಶಸ್ತಿಗೆ ವಕೀಲ ರವಿವರ್ಮ ಕುಮಾರ್ ಭಾಜನರಾಗಿದ್ದಾರೆ. ಹಲವಾರು ಪ್ರಕರಣಗಳಲ್ಲಿ ಇವರು ಶೋಷಿತರ ಪರ ಬಲವಾದ ವಾದ ಮಂಡಿಸಿದ್ದರು. 2013–2015ರ ತನಕ ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಆಗಿದ್ದರು ಎಂದು ಸಂಸ್ಥೆಯ ಅಧ್ಯಕ್ಷ ಎಸ್. ಮರಿಸ್ವಾಮಿ ತಿಳಿಸಿದ್ದಾರೆ.

ಕೋಲಾರ ಜಿಲ್ಲೆಯ ಹೋರಾಟಗಾರ ಎನ್. ಮುನಿಸ್ವಾಮಿ, ಪತ್ರಕರ್ತ ಜಿ. ಮಹಾಂತೇಶ್, ಕುಂದಗೋಳ ತಾಲ್ಲೂಕಿನ ತೀರ್ಥ ಗ್ರಾಮದ 'ಬೀಬಿಫಾತಿಮಾ ಸ್ವಸಹಾಯ ಸಂಘ'ದ ಸ್ಥಾಪಕಿ ಬೀಬಿಜಾನ್ ಹಳೇಮನಿ, ಉಡುಪಿ ಜಿಲ್ಲೆಯ ಹಂಗಾರಕಟ್ಟೆಯ ವೈದ್ಯ ಡಾ.ನಾಗೇಶ್ ಕುಂದಾಪುರ, ಹಾವೇರಿ ಜಿಲ್ಲೆ ರಾಣೆಬೆನ್ನೂರಿನ ಸಾಮಾಜಿಕ ಕಾರ್ಯಕರ್ತೆ ಕೆ.ಸಿ. ಅಕ್ಷತಾ ಅವರನ್ನು 'ಬೋಧಿವರ್ಧನ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಬೋಧಿವೃಕ್ಷ ಪ್ರಶಸ್ತಿಯು ₹ 1 ಲಕ್ಷ ನಗದು, ಫಲಕ ಹಾಗೂ ಬೋಧಿವರ್ಧನ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಏ.14ರಂದು ಸಂಜೆ 6ಕ್ಕೆ ಸ್ಫೂರ್ತಿಧಾಮದಲ್ಲಿ ನಡೆಯಲಿದೆ ಎಂದು ಮರಿಸ್ವಾಮಿ ತಿಳಿಸಿದ್ದಾರೆ.





ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS

34) $\cot^{-1}(21) + \cot^{-1}(13) + \cot^{-1}(-8) =$

(A) 0 (B) $\cot^{-1} 26$

(C) π (D) none of these

Ans: (A) 0

Expln:- **(….Contd)**

$$\cot^{-1}(21)+\cot^{-1}(13)+\cot^{-1}(-8)=\tan^{-1}\frac{1}{21}+\tan^{-1}\frac{1}{13}-\tan^{-1}\frac{1}{8}$$

$$\tan^{-1}\frac{1}{21}+\tan^{-1}\frac{1}{13}=\tan^{-1}\left(\frac{\frac{1}{21}+\frac{1}{13}}{1-\frac{1}{21}\times\frac{1}{13}}\right)=\tan^{-1}\left(\frac{13+21}{273-1}\right)$$

$$=\tan^{-1}\left(\frac{34}{272}\right)=\tan^{-1}\left(\frac{1}{8}\right).$$

$$\therefore \text{Given expression}=\tan^{-1}\frac{1}{8}-\tan^{-1}\frac{1}{8}=0.$$


35) $\tan\left(\cos^{-1}\left(\frac{1}{5\sqrt{2}}\right)-\sin^{-1}\left(\frac{4}{\sqrt{17}}\right)\right)$ is

(A) $\frac{\sqrt{29}}{3}$ (B) $\frac{29}{3}$ (C) $\frac{\sqrt{3}}{29}$ (D) $\frac{3}{29}$

Ans : (D) $\frac{3}{29}$


Expln :– Let $\cos^{-1}\left(\frac{1}{5\sqrt{2}}\right)=\theta.$

Then $\cos\theta=\frac{1}{5\sqrt{2}}.$



Let $\sin^{-1}\frac{4}{\sqrt{17}}=\alpha.$

Then $\sin\alpha=\frac{4}{\sqrt{17}}.$



Required is $\tan(\theta-\alpha)=\frac{\tan\theta-\tan\alpha}{1+\tan\theta\tan\alpha}=\frac{7-4}{1+28}=\frac{3}{29}$

36) $11^3+12^3+13^3+\ldots+20^3$ is

(A) An even integer

(B) An odd integer divisible by 5

(C) Multiple of 10

(D) An odd integer but not a multiple of 5

Ans: (B) An odd integer divisible by 5

Expln:- We know that the sum of cube of first 'n' natural numbers is $\frac{n^2(n+1)^2}{4}$.

$$\therefore 11^3+12^3+\ldots+20^3=(1^3+2^3+\ldots+20^3)-(1^3+2^3+3^3+\ldots+10^3)$$

$$=\frac{20^2\times21^2}{4}-\frac{10^2\times11^2}{4}$$

$$=\frac{400\times441}{4}-\frac{100\times121}{4}=4175.$$

37) IF(x_1, y_2), (x_2, y_2) and (x_3, y_3) are the vertices of triangle whose area is `k' square units, then

$$\begin{bmatrix} x_1 & y_1 & 4 \\ x_2 & y_2 & 4 \\ x_3 & y_3 & 4 \end{bmatrix}$$

A) $32k^2$ B) $16k^2$

C) $64k^2$ D)$48k^2$

Ans:- C

Expln:- Taking common 4 from 3rd column of the determinant we have

$$\Delta=4^2\begin{bmatrix} x_1 & y_1 & 4 \\ x_2 & y_2 & 4 \\ x_3 & y_3 & 4 \end{bmatrix}^2$$

But area of the triangle

$$\text{is}\ \frac{1}{2}\begin{bmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{bmatrix}-k \quad \therefore \begin{bmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{bmatrix}-2k$$

$$\therefore \Delta=4^2(2k)^2=4^3k^2=64k^2$$


38) In a class of 175 students the following data show the number of students opting for one or more subjects: Mathematics 100, Physics 70, Chemistry 40, Mathematics and Physics 30, Mathematics and Chemistry 28, Physics and Chemistry 23, Mathematics, Physics and Chemistry 18. The number of students who have opted for mathematics alone is

(A) 35 (B) 48

(C) 60 (D) 22

Ans: (C) 60

Expln:- Let M, P, C denote the set of students opting for Mathematics, Physics and Chemistry as shown in the figure.



Let the small letter denote the number of students.

Then a + b + c + d = 100

b + c + e + f = 70

c + d + f + g = 40

b + c = 30

c + d = 28

c + f = 23

c = 18

Solving, f = 5, d = 10, b = 12, g = 7, e = 35, a = 60.

Mathematics alone is 60.

39). If a set A has 4 elements, then the total number of proper subsets of set A is

(A) 16 (B) 14

(C) 15 (D) 17

Ans: (C) 15

Expln :- Proper subsets = $2^4 - 1 = 15$

BIOLOGY

46) Which vector can clone a small fragment of DNA?

a) Bacterial artificial chromosome

b) Yeast artificial chromosome

c) Plasmid d) Cosmid

Ans: c

Expln:- Plasmid (autonomously replicating circular extra – Chromosomal DNA.) which carries antibiotic-resistant gene and origin of replication i.e., the ability of autonomous replication and its Size is smaller than Chromosomal DNA. One of the earliest commonly used cloning vectors is the PBR 322 plasmid.

47) Continuous self-pollination results in

a) Inbreeding depression

b) Self-incompatibility

c) Formation of unisexual flowers

d) Gametes loose vigour

Ans: a

Expln:- Continuous self–pollination results in inbreeding depression. So, flowering plants have developed the following devices to discourage self-pollination and to encourage cross-pollination:-

(i) In some species, pollen release and stigma receptivity are not synchronised.

(ii) In some other species, the anther and stigma are placed at a different position, So that the pollen cannot come in contact with the stigma of the same flower.

(iii) The third devices to prevent inbreeding is self-incompatibility It prevents self- pollen from fertilizing the ovules by inhibiting pollen germination or pollen tube growth in the pistil.

(iv) Dicliny (unisexuality) i.e. flowers are unisexual, So that self-pollination is not possible.

48) Waste water treatment generates as large quantity of sludge. Which can be treated by –

a) Digesters b) activated sludge

C) chemicals d) oxidation pond

Ans:- d

49) Methanogenic bacteria are not found in –

a) rumen of cattle b) gobar gas plant

c) bottom of water logged paddy fields

d) activated sludge

Ans:- d

50) The primary treatment of waste water involves the removal of –

a) dissolved impurities b) stable particles

c) toxic substances d) harmful bacteria

Ans:- b

51) Identify the wrong statement.

a) Alleles IA and IB produce sugars

b) Both IA and IB are present together and they express because of codominance

c) Alleles b and c also produce sugar

d). When IB and b or i are present only IB is expressed

Ans: c

Expln:- ABO blood grouping is a type of blood grouping system in which blood is of 4 types A, B, AB and O blood group. These blood groups are controlled by the gene l. The surface of the RBC Contains Sugar polymer. The gene I has 3 types of alleles A, B and i. Different forms of Sugars are present on RBC Surface of alleles IA and IB. However, C does not produce sugar.

52) The codon AUG has a dual function. It is an initiation codon and also codes for

a) Formaldehyde b). Methionine

c) Phenylalanine d) Serine

Ans: b

Expln:- Initiation Codon is the 1st codon on mRNA. In Eukaryotes, AUG is the start codon of mRNA which codes for amino acid methionine and modified into formylmethionine in prokaryotes. It is the first codon at which the translation of proteins begins, it is paired during the translation with the t RNA with anticodon UAG, i.e, it acts as an initiator of protein synthesis as well as a codon for methionine and modified into formylmethionine in prokaryotes.

53) BOD of waste water is estimated by measuring the amount of -

a) total organic matter

b) biodegradable organic matter

c) oxygen evolution d) oxygen consumption

Ans:- d

54) Which one of the following alcoholic drinks is produced without distillation?

a) Wine b) Whisky

c) Rum d) Brandy

Ans:- a

55) The technology of biogas production from cow dung was developed in India largely due to the efforts of –

a) Gas Authority of India

b) Oil and Natural Gas Commission

c) Indian Agricultural Research Institute and Khadi and Village Industries Commission.

d) Indian Oil Corporation

Ans:- c

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಗುಣವಿಲ್ಲದ ರೋಗಕ್ಕೆ ಕಾಯಕ ಚಿಕಿತ್ಸೆ

ಕೊಳ್ಳೇಗಾಲ ಶರ್ಮ

ಇದುವರೆಗೂ ಚಿಕಿತ್ಸೆಯೇ ಇಲ್ಲ ಎಂದು ಪರಿಗಣಿಸಿಬಿಟ್ಟಿದ್ದ 'ಸಿಕಲ್ ಸೆಲ್'ಗೆ ಕಾಯಿಲೆಗೆ ಜೀನ್ ಚಿಕಿತ್ಸೆಯನ್ನು ಅಮೆರಿಕೆ ಮತ್ತು ಯುರೋಪಿನ ಎರಡು ಕಂಪೆನಿಗಳು ಸಿದ್ಧಪಡಿಸಿವೆಯಂತೆ.

ಮಧ್ಯಪ್ರದೇಶದ ಬುಡಕಟ್ಟು ಜನಾಂಗ ಹಾಗೂ ಕರ್ನಾಟಕದ ಸೋಲಿಗರಲ್ಲಿ ಹೆಚ್ಚಿರುವ ಗುಣಪಡಿಸಲಾಗದ 'ಸಿಕಲ್ ಸೆಲ್ ಕಾಯಿಲೆ'ಗೆ ಎಂದು ಫೆಬ್ರುವರಿಯಲ್ಲಿ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ, ಯೋಜನೆಯೊಂದನ್ನು ಪ್ರಕಟಿಸಿತು. ದೇಶದಲ್ಲಿ ಈ ರೋಗ ಖಾತ್ರಿಯಾಗಿರುವ ಅಂದಾಜು ಎರಡು ಸಾವಿರ ರೋಗಿಗಳ ಕಾಯಿಲೆಯ ಚಿಕಿತ್ಸೆ, ಹಾಗೂ ಅಂತಹವರನ್ನು ಪತ್ತೆ ಮಾಡುವ ಪ್ರಯತ್ನಗಳನ್ನು ಇನ್ನಷ್ಟು ಬಲಗೊಳಿಸುವ ಯೋಜನೆ ಇದು. ಇಷ್ಟು ಅಲ್ಪ ಸಂಖ್ಯೆಯ ಕಾಯಿಲೆಗೆಂದು ವಿಶೇಷ ಯೋಜನೆ ಏಕೆ ಎನ್ನುವ ಪ್ರಶ್ನೆಗೆ ಉತ್ತರ ಇಷ್ಟೆ. ಇದೊಂದು ಅನುವಂಶೀಯ ಕಾಯಿಲೆ. ಕರ್ನಾಟಕದ ಸೋಲಿಗ ಸಮುದಾಯದಲ್ಲಿ ಸುಪ್ತವಾಗಿರುವ ಇದು, ಕೆಲವರಲ್ಲಿ ಮಾತ್ರ ವ್ಯಕ್ತವಾಗುತ್ತದೆ. ರಕ್ತಹೀನತೆ, ಕೆಲವೊಮ್ಮೆ ಪಾರ್ಶ್ವವಾಯು, ವಿಪರೀತ ಸಂಧಿವಾತದಂತಹ ನೋವಿನಿಂದ ಅಂತಹ ನತದೃಷ್ಟರನ್ನು ಕಾಡುತ್ತದೆ.

ಈ ಕಾಯಿಲೆಯನ್ನು 'ಹೀಮೋಗ್ಲೋಬಿನೋಪಥಿ' ಅರ್ಥಾತ್ ಹೀಮೋಗ್ಲೋಬಿನ್ನಿನ ದೋಷ ಎಂದು ಕರೆಯುತ್ತಾರೆ. ದೇಹದ ವಿವಿಧ ಅಂಗಗಳು ಜೀವಂತವಾಗಿರಲು ಅಗತ್ಯವಾದ ಆಕ್ಸಿಜನನ್ನು ಪೂರೈಸುವ ರಕ್ತದಲ್ಲಿರುವ ಹೀಮೊಗ್ಲೋಬಿನ್ ಎನ್ನುವ ಪ್ರೊಟೀನಿನಲ್ಲಿ ದೋಷವಿರುವುದರಿಂದ ಉಂಟಾಗುವ ಕಾಯಿಲೆ ಇದು. ಈ ದೋಷ ಉಂಟಾಗುವುದಕ್ಕೆ ಕಾರಣ, ಅದನ್ನು ತಯಾರಿಸುವ ಜೀನು ಅಥವಾ ತಳಿಗುಣದಲ್ಲಿ ದೋಷವಿರುತ್ತದೆ. ಫಲವಾಗಿ ಹೀಮೊಗ್ಲೋಬಿನ್ನಿನಲ್ಲಿ ಇರುವ ನಾಲ್ಕು ಎಳೆ ಪ್ರೊಟೀನುಗಳಲ್ಲಿ ಎರಡು ತುಸು ವಿಭಿನ್ನವಾಗಿ ಮಡಿಚಿಕೊಳ್ಳುತ್ತವೆ. ಇಡೀ ರಕ್ತಕೋಶವೇ ಆಕಾರ ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ ದುಂಡುಬಿಲ್ಲೆಗಳಂತೆ ಸುಂದರವಾಗಿ ತೋರುವ ಕೋಶಗಳು, ಬಿದಿಗೆ ಚಂದ್ರನಂತೆ ಆಕಾರವನ್ನೂ ಗಾತ್ರವನ್ನೂ ಕಳೆದುಕೊಳ್ಳುತ್ತವೆ. ರಕ್ತಕೋಶಗಳು ಒಟ್ಟಾಗಿ ಹೆಪ್ಪುಗಟ್ಟುವಂತೆ ಮಾಡುತ್ತದೆ.

ಈ ತೊಂದರೆಗೆ ಜೀನಿನಲ್ಲಿರುವ 'ಒಂದಕ್ಷರ' ದೋಷ ಕಾರಣ ಎಂದು ಸುಮಾರು 65 ವರ್ಷಗಳ ಹಿಂದೆಯೇ ಪತ್ತೆ ಮಾಡಲಾಗಿತ್ತು. ಒಂದಕ್ಷರ ದೋಷ ಎಂದರೆ ಇನ್ನೇನಲ್ಲ. ಪ್ರೊಟೀನಿನಲ್ಲಿ ಜೋಡಿಸಲಾಗಿರುವ ಅಮೈನೊ ಆಮ್ಲಗಳು ಯಾವುವು ಎಂಬ ನಿರ್ದೇಶ ಜೀನಿನಲ್ಲಿ ಇರುತ್ತದೆ. ಈ ನಿರ್ದೇಶದಲ್ಲಿ ಎಲ್ಲೋ ಒಂದು ಅಮೈನೊ ಆಮ್ಲದ ಬದಲಿಗೆ ಇನ್ನೊಂದು ಆಮ್ಲದ ನಿರ್ದೇಶ ಇದೆ ಅಷ್ಟೆ. ಅದರ ಫಲವಾಗಿ ಇಡೀ ಪ್ರೊಟೀನು ಎಳೆ ತಪ್ಪಾಗಿ ಮಡಚಿಕೊಳ್ಳುತ್ತದೆ. ಹೀಮೊಗ್ಲೋಬಿನೊಪಥಿ ಉಂಟಾಗುತ್ತದೆ.

ಹಾಗಿದ್ದರೆ ಜೀನಿನಲ್ಲಿರುವ ಈ ದೋಷವನ್ನು ತಿದ್ದಿಬಿಟ್ಟರೆ ಕಾಯಿಲೆ ಗುಣವಾಗುವುದೇ? ಇದೇ ಆಸೆ. ಈ ತರ್ಕ ನಿಜವೋ ಸುಳ್ಳೋ ಎನ್ನುವುದನ್ನು ಪರೀಕ್ಷಿಸಲು ಕೂಡ ಇದುವರೆವಿಗೆ ಅವಕಾಶಗಳಿರಲಿಲ್ಲ. ಏಕೆಂದರೆ ಜೀವಕೋಶದಲ್ಲಿರುವ ಲಕ್ಷಾಂತರ ಜೀನುಗಳಲ್ಲಿ ನಿರ್ದಿಷ್ಟವಾದುದನ್ನಷ್ಟೆ ತಿದ್ದುವುದು ಕಷ್ಟವಾಗಿತ್ತು. ಅದನ್ನು ಏನಿದ್ದರೂ ಗರ್ಭಸ್ಥ ಭ್ರೂಣದಲ್ಲಿಯಷ್ಟೆ ಮಾಡಬೇಕಾಗುತ್ತಿತ್ತು. ಭ್ರೂಣಾವಸ್ಥೆಯಲ್ಲಿಯೇ ಹೀಗೆ ಪತ್ತೆ ಮಾಡುವುದಾಗಲಿ, ತಿದ್ದುವುದಾಗಲಿ ಸುಲಭವೂ ಅಲ್ಲ; ಕಾನೂನಿನ ಪ್ರಕಾರ ನೈತಿಕವೂ ಅಲ್ಲ. ಹೀಗಾಗಿ ಇದುವರೆವಿಗೂ ಸಿಕಲ್ ಸೆಲ್ ಕಾಯಿಲೆಗೆ ಕೇವಲ ನೋವು ಕಡಿಮೆಗೊಳಿಸುವ ಅಥವಾ ಲಕ್ಷಣಗಳನ್ನು ಕಡಿಮೆ ಮಾಡುವ ಚಿಕಿತ್ಸೆಗಳಷ್ಟೆ ಇದ್ದುವು. ರಕ್ತಹೀನತೆ ಇದ್ದಲ್ಲಿ ರಕ್ತ ಕಸಿ ಮಾಡುವುದು, ನೋವು ಇದ್ದಾಗ ನೋವುಶಮನಕಗಳನ್ನು ಕೊಡುವುದು, ರಕ್ತ ಹೆಪ್ಪುಗಟ್ಟದಂತೆ 'ಹೈಡ್ರಾಕ್ಸಿ ಯೂರಿಯಾ' ಎನ್ನುವ ಔಷಧ ನೀಡುವುದಷ್ಟೆ ಸಾಧ್ಯವಾಗುತ್ತಿತ್ತು. ರೋಗಿಗಳಿಗೆ ಇದು ಸ್ವಲ್ಪ ಸಾಂತ್ವನ ನೀಡುತ್ತಿದ್ದಾದರೂ, ಕಾಯಿಲೆ ಗುಣವಾಯಿತೆಂದಾಗಲಿ, ಸಮುದಾಯದಲ್ಲಿ ಅದು ಮತ್ತೆ ಮರಳುವುದಿಲ್ಲವೆಂದಾಗಲಿ ಖಾತ್ರಿ ಇರುತ್ತಿರಲಿಲ್ಲ.

ಇದೀಗ ವರದಿಯಾಗಿರುವ ಚಿಕಿತ್ಸೆಗಳು ಜೀನಿನಲ್ಲಿರುವ ದೋಷಗಳನ್ನು ನೇರವಾಗಿ ತಿದ್ದಿವೆ. ಅದಕ್ಕಾಗಿ 'ಕ್ರಿಸ್ಪರ್ ಕ್ಯಾಸ್-9' ಅಥವಾ 'ಕ್ರಿಸ್ಪರ್' ಎನ್ನುವ ವಿನೂತನ ತಂತ್ರಜ್ಞಾನವನ್ನು ಬಳಸುತ್ತಿವೆ. ಯುರೋಪಿನ 'ಕ್ರಿಸ್ಪರ್ ಥೆರಪ್ಯೂಟಿಕ್ಸ್' ಹಾಗೂ ಅಮೆರಿಕೆಯ 'ವರ್ಟೆಕ್ಸ್' ಎಂಬ ಸಂಸ್ಥೆಗಳು ಈ ಸಾಧನೆಯನ್ನು ಮಾಡಿವೆ. ಕ್ರಿಸ್ಪರ್ ಥೆರಪ್ಯೂಟಿಕ್ಸ್ ಕ್ರಿಸ್ಪರ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಅದರಿಂದ ಜೀನುಗಳನ್ನು ನಿರ್ದಿಷ್ಟ ಸ್ಥಾನದಲ್ಲಿಯೇ ತಿದ್ದಬಹುದು ಎಂದು ನಿರೂಪಿಸಿದ್ದಕ್ಕಾಗಿ 2020ನೇ ಇಸವಿಯಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ ಎಮ್ಯಾನುಯೆಲ್ ಚಾರ್ಪೆಂಟಿಯರ್ ಹಾಗೂ ಜೆನ್ನಿಫರ್ ಡೌಡ್ನಾ ಸ್ಥಾಪಿಸಿದ ಸಂಸ್ಥೆ. ಇದರ ಮುಖ್ಯಸ್ಥರು ಭಾರತೀಯ ಮೂಲದ ಸಮರ್ಥ್ ಕುಲಕರ್ಣಿ.

ಕ್ರಿಸ್ಪರ್ ಥೆರಪ್ಯೂಟಿಕ್ಸ್ ಹಾಗೂ ವರ್ಟೆಕ್ಸ್ ಸಂಸ್ಥೆಗಳೆರಡೂ ಮಾಡಿರುವುದು ಇಷ್ಟೆ. ಹತ್ತಾರು ವರ್ಷಗಳಿಂದ ಸಿಕಲ್ ಸೆಲ್ ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ದೇಹದಿಂದ ರಕ್ತಕೋಶಗಳನ್ನು ಹುಟ್ಟಿಸುವ ಆಕರ ಅಥವಾ ಸ್ಟೆಮ್ ಸೆಲ್ ಗಳನ್ನು ಹೊರತೆಗೆದು ಅವುಗಳಲ್ಲಿರುವ 'ಬಿಸಿಎಲ್11ಎ' ಎನ್ನುವ ಜೀನನ್ನು ಕ್ರಿಸ್ಪರ್ ತಂತ್ರಜ್ಞಾನದಿಂದ ತಿದ್ದಿದ್ದಾರೆ. ಅದು ಕೆಲಸ ಮಾಡದಂತೆ ನಿರ್ಬಂಧಿಸಿದ್ದಾರೆ. ಬಿಸಿಎಲ್11ಎ ಭ್ರೂಣಾವಸ್ಥೆಯಲ್ಲಿ ಹೀಮೊಗ್ಲೋಬಿನ್ ತಯಾರಿಸುವ ಜೀನಿಗೆ ಅಡ್ಡಿಯಾಗುವಂತಹ ಪ್ರೊಟೀನನ್ನು ತಯಾರಿಸುತ್ತದೆ. ಈ ಅಡ್ಡಿಯನ್ನು ನಿವಾರಿಸಿದಲ್ಲಿ ಜೀವಕೋಶಗಳು ಭ್ರೂಣಾವಸ್ಥೆಯ ಹೀಮೊಗ್ಲೋಬಿನನ್ನು ತಯಾರಿಸಬಲ್ಲುವು. ಇದರ ಕೊರತೆಯಿಂದಾಗಿಯೇ ಸಿಕಲ್ ಸೆಲ್ ಕಾಯಿಲೆಯಲ್ಲಿ ಎಲ್ಲ ಲಕ್ಷಣಗಳೂ ತೋರುತ್ತವೆ. ಆದ್ದರಿಂದ ಕ್ರಿಸ್ಪರ್ ತಂತ್ರಜ್ಞಾನದಿಂದ ಈ ಜೀನನ್ನಷ್ಟೆ ತಿದ್ದಿ, ತಿದ್ದಿದ ರಕ್ತಕೋಶಗಳನ್ನು ಮರಳಿ ಕಸಿಮಾಡಿದರೆ, ರೋಗಿಗಳ ದೇಹದಲ್ಲಿ ಎಂದಿನಂತೆ ಹೀಮೊಗ್ಲೋಬಿನ್ ಪೂರೈಕೆ ಆಗುತ್ತದೆ ಎನ್ನುವುದು ತರ್ಕ.



> ಕರ್ನಾಟಕದ ಸೋಲಿಗ ಸಮುದಾಯದಲ್ಲಿ ಕಾಣಿಸಿಕೊಳ್ಳುವ, ವಾಸಿಯೇ ಆಗದ, ಸಿಕಲ್ ಸೆಲ್ ಕಾಯಿಲೆಗೆ ಈಗ ಪರಿಹಾರದ ದಾರಿಯೊಂದು ಪತ್ತೆಯಾಗಿದೆಯಂತೆ...

ಇದುವರೆವಿಗೂ ಈ ಕಲ್ಪನೆಯನ್ನು ನನಸಾಗಿಸಲು ಹಲವು ತೊಂದರೆಗಳಿದ್ದುವು. ಮೊದಲನೆಯದಾಗಿ ನಿರ್ದಿಷ್ಟವಾದ ಜೀನನ್ನಷ್ಟೆ ತಿದ್ದುವುದು ಕಷ್ಟವಾಗಿತ್ತು. ಜೀನ್ ತಿದ್ದುಪಡಿ ಮಾಡಿದರೂ, ಅದು ಯಾವ ಜೀನನ್ನು ತಾಕುತ್ತಿದೆ ಎಂದು ಹೇಳಲಾಗುತ್ತಿರಲಿಲ್ಲ. ಹೀಗಾಗಿ ಇತರೆ ಹಲವು ವಿಧಾನಗಳಲ್ಲಿ ರಕ್ತಕೋಶಗಳು ಹೀಮೊಗ್ಲೋಬಿನನ್ನು ತಯಾರಿಸುವಂತೆ ಮಾಡಲು ಪ್ರಯತ್ನಿಸಲಾಗಿತ್ತು. ಕ್ರಿಸ್ಪರ್ ಥೆರಪ್ಯೂಟಿಕ್ಸ್ ಹಾಗೂ ವರ್ಟೆಕ್ಸ್ ಕಂಪೆನಿಗಳ ಎಕ್ಸಾ-ಸೆಲ್ ಎನ್ನುವ ಪ್ರಯೋಗಗಳು ಈಗ ಆಸೆಯನ್ನು ಹುಟ್ಟಿಸಿವೆ. ಈ ಕಂಪೆನಿಗಳು ಸುಮಾರು ಹದಿನೈದು ವರ್ಷಗಳಿಂದಲೂ ಸಿಕಲ್ ಸೆಲ್ ಕಾಯಿಲೆ ಹಾಗೂ 'ಥಲಾಸೀಮಿಯಾ' ಎನ್ನುವ ಇನ್ನೊಂದು ರಕ್ತದೋಷದಿಂದ ನರಳುತ್ತಿದ್ದ 75 ರೋಗಿಗಳಲ್ಲಿ ಕ್ರಿಸ್ಪರ್ ತಂತ್ರಜ್ಞಾನ ಬಳಸಿ ತಿದ್ದಿದ ರಕ್ತಕೋಶಗಳನ್ನು ಕಸಿ ಮಾಡಿ ಚಿಕಿತ್ಸೆ ನೀಡಿದ್ದಾರೆ. ಎರಡು ವರ್ಷಗಳವರೆಗೆ ಅವರ ತೊಂದರೆಗಳು ಕಡಿಮೆಯಾಗುವುವೇ ಎಂದು ಗಮನಿಸಿದ್ದಾರೆ.

ತೀವ್ರತರನ ಕಾಯಿಲೆ ಇರುವ ರೋಗಿಗಳ ರಕ್ತದಲ್ಲಿ ಹೀಮೋಗ್ಲೋಬಿನ್ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಹೀಗಾಗಿ ಅವರಿಗೆ ಆಗಾಗ್ಗೆ ರಕ್ತಕಸಿ ಅಥವಾ ರಕ್ತದಾನ ಮಾಡಬೇಕಾಗುತ್ತದೆ. ಎಕ್ಸಾ-ಸೆಲ್ ಚಿಕಿತ್ಸೆಯನ್ನು ಒಮ್ಮೆ ನೀಡಿದ ಮೂವತ್ತಮೂರು ಮಂದಿ ಸಿಕಲ್ ಸೆಲ್ ಕಾಯಿಲೆ ರೋಗಿಗಳ ರಕ್ತದಲ್ಲಿ ಹೀಮೊಗ್ಲೋಬಿನ್ ಪ್ರಮಾಣ ಎಷ್ಟು ಇತ್ತೆಂದರೆ, ಅವರ್ಯಾರೂ ರಕ್ತದಾನವನ್ನು ಪಡೆಯಲೇ ಇಲ್ಲ. ಸಾಮಾನ್ಯವಾಗಿ ಪ್ರತಿ ಮಿ.ಲೀ. ರಕ್ತದಲ್ಲಿ ನಾಲ್ಕೋ ಐದೋ ಗ್ರಾಂ ಅಷ್ಟೆ ಇರುತ್ತಿದ್ದ ಹೀಮೊಗ್ಲೋಬಿನ್ ಮೂವತ್ತಮೂರು ರೋಗಿಗಳಲ್ಲಿ ಹನ್ನೊಂದು ಗ್ರಾಂನಷ್ಟು ಇತ್ತು ಎಂದು ಇವರ ಪರೀಕ್ಷೆಗಳು ವರದಿ ಮಾಡಿವೆ. ಹಾಗೆಯೇ ರಕ್ತಕಣಗಳು ಗಂಟುಗಟ್ಟಿ ನೋವು ಅನುಭವಿಸಬೇಕಾದ ಘಟನೆಗಳೂ ಕಡಿಮೆಯಾದವಂತೆ. ಎಲ್ಲ ರೋಗಿಗಳೂ ಎಕ್ಸಾ-ಸೆಲ್ ಚಿಕಿತ್ಸೆಗೂ ಮುನ್ನ ಏನಿಲ್ಲವೆಂದರೂ ವರ್ಷಕ್ಕೆ ನಾಲ್ಕೈದು ಬಾರಿ ನೋವಿಗಾಗಿ ಚಿಕಿತ್ಸೆ ಪಡೆಯಲು ಆಸ್ಪತ್ರೆಯನ್ನು ಸೇರುತ್ತಿದ್ದರು. ಹಾಗಿದ್ದರೆ ಇದು ನಮ್ಮ ಸೋಲಿಗರ ಸಂಕಟವನ್ನೂ ದೂರ ಮಾಡಬಹುದೇ? ಅದು ಇನ್ನೂ ದೂರದ ಆಸೆ ಎನ್ನಿ. ಏಕೆಂದರೆ ಈ ಚಿಕಿತ್ಸೆಗೆ ಏನಿಲ್ಲವೆಂದರೂ ಅಂದಾಜು ಎರಡು ಕೋಟಿ ರೂಪಾಯಿ(ಹದಿನೆಂಟು ಲಕ್ಷ ಡಾಲರು)ಗಳ ವೆಚ್ಚ ತಗುಲಿದೆ ಎಂದು 'ನೇಚರ್' ವರದಿ ಮಾಡಿದೆ.

ಅದಷ್ಟೆ ಅಲ್ಲ. ಒಮ್ಮೆ ಈ ಚಿಕಿತ್ಸೆ ನೀಡಿದರೆ ಸಾಕೆ? ಮತ್ತೆ ಅದನ್ನು ಮರುಕಳಿಸಬೇಕೆ? ಹಾಗಿದ್ದರೆ ಯಾವಾಗ ಎನ್ನುವುದೂ ಗೊತ್ತಿಲ್ಲ. ಜೊತೆಗೆ, ತಿದ್ದಿದ ರಕ್ತಕೋಶಗಳು ಹೀಮೊಗ್ಲೋಬಿನ್ ತಯಾರಿಸಿದ್ದು ಸತ್ಯ. ಅದರ ಜೊತೆಗೇ ಇದೇ ರೀತಿ ಸುಪ್ತವಾಗಿದ್ದ ಇನ್ಯಾವಾವ ಪ್ರೊಟೀನುಗಳನ್ನು ಅವು ತಯಾರಿಸುತ್ತಿವೆಯೋ ಗೊತ್ತಿಲ್ಲ. ಅಂತಹದ್ದೇನೂ ಆಗಿಲ್ಲವೆನ್ನುವದೂ ಗ್ಯಾರಂಟಿ ಆಗಬೇಕು. ಇವೆಲ್ಲವೂ ಆಗುವವರೆಗೂ ಇದು ಇನ್ನೂ ಪ್ರಾಯೋಗಿಕ ಚಿಕಿತ್ಸೆ ಎಂದೇ ಹೇಳಬಹುದು. ಇವೆಲ್ಲ ಆದ ಮೇಲೂ ಈ ಚಿಕಿತ್ಸೆ ಭಾರತಕ್ಕೆ ಬರಲು ಹಲವಾರು ವರ್ಷಗಳೇ ಬೇಕಾಗಬಹುದು. ಇದೀಗವಷ್ಟೆ ಈ ಕಾಯಿಲೆಯನ್ನು ಪತ್ತೆ ಮಾಡುವ ಸರಳ ವಿಧಾನವನ್ನು ಬೆಂಗಳೂರಿನ 'ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್'ನ ವಿಜ್ಞಾನಿಗಳು ರೂಪಿಸಿದ್ದಾರೆ. ಈ ದೋಷಪೂರ್ಣ ಜೀನು ಎಷ್ಟು ಜನರಲ್ಲಿ ಇದೆ ಎನ್ನುವುದು ಇನ್ನೂ ಖಾತ್ರಿಯಿಲ್ಲ. ಇದುವರೆವಿಗೂ ಸುಮಾರು ಹತ್ತು ಲಕ್ಷ ಮಂದಿಯನ್ನು, ಅಂದರೆ ಭಾರತದ ಒಟ್ಟಾರೆ ಜನಸಂಖ್ಯೆಯ ಶೇಕಡ 0.1ರಷ್ಟು ಜನರನ್ನಷ್ಟೆ ಪರಿಶೀಲಿಸಲಾಗಿದೆ. ಸುಲಭ ಪತ್ತೆಯ ವಿಧಾನಗಳ ಕೊರತೆ ಇದ್ದುದರಿಂದ ಹೀಗಾಗಿತ್ತು. ಈಗ ಪತ್ತೆಯ ಕಾರ್ಯ ನಡೆಯಲಿದೆ. ಆದರೆ ಚಿಕಿತ್ಸೆ? ಹಳೆಯ ಚಿಕಿತ್ಸೆಯೇ ಅವಶ್ಯವಿರುವ ರೋಗಿಗಳಿಗೆ ತಲುಪದೇ ಇರುವಾಗ, ಹೊಸ ಜೀನ್ ಚಿಕಿತ್ಸೆ ಒಂದೋ ಮರೀಚಿಕೆಯೋ, ದೂರದ ಬೆಟ್ಟವೋ ಆಗುತ್ತದಷ್ಟೆ!

ಸ್ಪರ್ಧೆ ಮಾಡೇ ಮಾಡುವೆ: ಶೆಟ್ಟರ್ ಘೋಷಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನನಗೆ ಟಿಕೆಟ್ ಕೊಡಬಾರದು ಅನ್ನೋ ವಿಚಾರ ಇದ್ದಿದ್ದರೆ 2–3 ತಿಂಗಳ ಹಿಂದೆಯೇ ಹೇಳಬೇಕಿತ್ತು. ನಾಮಪತ್ರ ಸಲ್ಲಿಸಲು ಎರಡು ದಿನ ಬಾಕಿ ಇರುವಾಗ ಹೇಳಿದ್ದು ಬೇಸರ ತರಿಸಿದೆ. ಹೀಗಾಗಿ ಸ್ಪರ್ಧೆ ಮಾಡೇ ಮಾಡುತ್ತೇನೆ' ಎಂದು ಜಗದೀಶ ಶೆಟ್ಟರ್ ಘೋಷಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಳಿಗ್ಗೆ ದೆಹಲಿಯಿಂದ ಪಕ್ಷದ ವರಿಷ್ಠರು ದೂರವಾಣಿ ಕರೆ ಮಾಡಿ, ನೀವು ಸೀನಿಯರ್, ಬೇರೆಯವರಿಗೆ ಅವಕಾಶ ಕೊಡಿ ಅಂದರು. ಬೇರೆ ಯಾರು ಅನ್ನೋ ಬಗ್ಗೆ ಹೆಸರು ಹೇಳಿಲ್ಲ' ಎಂದರು.

'ನಾನು ಮೂವತ್ತು ವರ್ಷಗಳಿಂದ ಪಕ್ಷ ಕಟ್ಟಿ ಬೆಳೆಸಿದ್ದೇನೆ. ನನ್ನಲ್ಲಿ ಏನಾದರೂ ಕೊರತೆ ಇದೆಯೇ? ಕ್ಷೇತ್ರದಲ್ಲಿ ನನ್ನ ವಿರುದ್ಧದ ಅಲೆ ಇದೆಯೇ? ಎಂದು ಕೇಳಿದೆ. ಅದಕ್ಕೆ ಅವರು ಇಲ್ಲ, ನಿಮ್ಮ ಬಗ್ಗೆ ಪಾಸಿಟಿವ್ ರಿಪೋರ್ಟ್ ಇದೆ ಎಂದರು. ಹಾಗಿದ್ದರೆ ಏಕೆ ಬದಲಾಯಿಸುತ್ತಿದ್ದೀರಿ? ಎಂದು ಕೇಳಿದೆ. ಮತ್ತೊಮ್ಮೆ ಚರ್ಚೆ ಮಾಡಿ, ತಿಳಿಸುವುದಾಗಿ ಹೇಳಿದ್ದಾರೆ' ಎಂದು ತಿಳಿಸಿದರು.

ಬಿಎಸ್‌ವೈ ಜೊತೆ ಮಾತನಾಡಿದ್ದೇನೆ: 'ಇವತ್ತಿನ ಬೆಳವಣಿಗೆ ಬಗ್ಗೆ ಬಿ.ಎಸ್. ಯಡಿಯೂರಪ್ಪ ಜೊತೆ ಮಾತಾಡಿದ್ದೇನೆ. ಏನು ಮಾತನಾಡಿದ್ದೇನೆ ಎನ್ನುವುದನ್ನು ಈಗಲೇ ಹೇಳಲ್ಲ. ರಾಜಕಾರಣದಲ್ಲಿ ಯಾವಾಗ ಏನು ಆಗುತ್ತೆ ಗೊತ್ತಿಲ್ಲ. ಕಾದು ನೋಡಿ. ಸಮಯ ಬಂದಾಗ ಎಲ್ಲ ವಿವರವಾಗಿ ಹೇಳುವೆ' ಎಂದು ಹೇಳಿದರು.

'ಈಶ್ವರಪ್ಪ ಅವರದ್ದು ವೈಯಕ್ತಿಕ ವಿಚಾರ. ಅವರ ನಿರ್ಧಾರದ ಬಗ್ಗೆ ನಾನು ಮಾತಾಡಲ್ಲ. ಜನ ಸಂಘದ ಕಾಲದಿಂದಲೂ ನಮ್ಮ ಕುಟುಂಬ ಬಿಜೆಪಿಯಲ್ಲಿದೆ. ಇಂತಹ ಕುಟುಂಬಕ್ಕೆ ಅನ್ಯಾಯ ಆಗಲ್ಲ ಅನ್ನೋ ಭರವಸೆ ಇದೆ' ಎಂದರು.

'ಹುಬ್ಬಳ್ಳಿಯಲ್ಲಿ ಅಷ್ಟೇ ಅಲ್ಲ, ಉತ್ತರ ಕರ್ನಾಟಕದ ತುಂಬ ನಾನು ಮೂವತ್ತು ವರ್ಷಗಳಿಂದ ಪಕ್ಷ ಕಟ್ಟಿ ಬೆಳೆಸಿದ್ದೇನೆ. ಬಿ.ಎಸ್. ಯಡಿಯೂರಪ್ಪ, ಅನಂತಕುಮಾರ್ ಅವರ ಜೊತೆಗೂಡಿ ಪಕ್ಷ ಕಟ್ಟಿದ್ದೇನೆ. ನೂರಾರು ಜನರಿಗೆ ಟಿಕೆಟ್ ಕೊಡುವ ವ್ಯವಸ್ಥೆಯಲ್ಲಿದ್ದೆ. ಆರು ಸಲ ಸ್ಪರ್ಧಿಸಿ ಗೆದ್ದುಬಂದಿದ್ದೇನೆ. ನನ್ನ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ. ಪಕ್ಷಕ್ಕೆ ನಿಷ್ಠನಾಗಿ (ಲಾಯಲ್) ದುಡಿದಿದ್ದೇನೆ. ಲಾಯಲ್ ಆಗಿ ದುಡಿದವರಿಗೆ ಗೌರವ ಇಲ್ಲವೇನೋ, ಇಷ್ಟು ವರ್ಷ ಪಕ್ಷ ಕಟ್ಟಿದ್ದಕ್ಕೆ ಬೆಲೆಯೇ ಇಲ್ವಾ ಅನಿಸ್ತು' ಎಂದು ಅವರು ಬೇಸರ ವ್ಯಕ್ತಪಡಿಸಿದರು.



ಶಾಸಕ ಜಗದೀಶ ಶೆಟ್ಟರ್ ಅವರು ಮಂಗಳವಾರ ಸಂಜೆ ತಮ್ಮ ನಿವಾಸದಲ್ಲಿ ಬೆಂಬಲಿಗರೊಂದಿಗೆ ಸಭೆ ನಡೆಸಿದರು – ಪ್ರಜಾವಾಣಿ ಚಿತ್ರ

ನಡ್ಡಾ ಭೇಟಿಗೆ ಹೋಗುವೆ: ಶೆಟ್ಟರ್

ಹುಬ್ಬಳ್ಳಿ: 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕರೆ ಮಾಡಿ, ಕೆಲ ವಿಚಾರಗಳನ್ನು ಚರ್ಚಿಸಲು ದೆಹಲಿಗೆ ಬನ್ನಿ ಎಂದಿದ್ದಾರೆ. ಅವರ ಭೇಟಿಗೆ ಬುಧವಾರ ದೆಹಲಿಗೆ ಹೋಗುವೆ' ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ಬಿಜೆಪಿ ಮೊದಲ ಪಟ್ಟಿ ಮಂಗಳವಾರ ರಾತ್ರಿ ಬಿಡುಗಡೆಯಾದ ಬಳಿಕ, ತಮ್ಮ ನಿವಾಸದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮುಕ್ತವಾಗಿ ಚರ್ಚೆ ಮಾಡುವುದಾದರೆ ಬರುತ್ತೇನೆ ಎಂದು ಅವರಿಗೆ ಹೇಳಿದ್ದೇನೆ' ಎಂದು ಹೇಳಿದರು. 'ಸದ್ಯ ಘೋಷಿಸಿರುವ ಪಟ್ಟಿಯಲ್ಲಿ ನನ್ನ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಘೋಷಿಸಿಲ್ಲ. ಸ್ವತಃ ನಡ್ಡಾ ಅವರೇ ಕರೆ ಮಾಡಿ ಕರೆದಿದ್ದಾರೆ. ಈಗಾಗಲೇ ನನ್ನ ನಿಲುವು ತಿಳಿಸಿದ್ದೇನೆ. ನಾನು ಸ್ಪರ್ಧಿಸುವುದಂತೂ ಖಚಿತ' ಎಂದರು.

'ಸ್ವ ಇಚ್ಛೆಯಿಂದ ಚುನಾವಣೆ ನಿವೃತ್ತಿ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳುವ ಉದ್ದೇಶಕ್ಕಾಗಿ ಸ್ವ ಇಚ್ಛೆಯಿಂದಲೇ ಚುನಾವಣಾ ರಾಜಕೀಯದಿಂದ ನಿವೃತ್ತನಾಗುತ್ತಿರುವೆ. ಈ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದಿರುವೆ' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

'ಪುತ್ರ ಕಾಂತೇಶ ಅವರಿಗೆ ಶಿವಮೊಗ್ಗ ನಗರ ಕ್ಷೇತ್ರದ ಟಿಕೆಟ್ ಸಿಗುವ ಬಗ್ಗೆ ನನಗೆ ಗೊತ್ತಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಪೂರ್ಣ ಬಹುಮತ ಪಡೆದು, ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕೆಂಬ ಉದ್ದೇಶದಿಂದ ಇದು ನನ್ನ ಕಿಂಚಿತ್ ಸೇವೆ' ಎಂದು ಹೇಳಿದರು.

'ಈ ಬಾರಿ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಪಕ್ಷದ ರಾಜ್ಯ ಚುನಾವಣಾ ಸಮಿತಿ ಸಭೆಯಲ್ಲಿ ಹೇಳಿದ್ದೆ. ಅದಕ್ಕೆ ಒಪ್ಪಿಗೆ ಸಿಕ್ಕಿರಲಿಲ್ಲ.

> **ಅಡ್ವಾಣಿ, ಮುರಳಿಮನೋಹರ ಜೋಶಿಗಿಂತ ದೊಡ್ಡವನಾ ನಾನು..ಇಬ್ಬರೂ ನೇಪಥ್ಯಕ್ಕೆ ಸರಿದಾಗ ಒಂದು ಮಾತಾಡಿದ್ದರಾ? ಈಗಲೂ ಗುಂಡುಕಲ್ಲು ಇದ್ದ ಹಾಗೆ ಇದ್ದಾರೆ**
> **ಕೆ.ಎಸ್.ಈಶ್ವರಪ್ಪ,** ಶಾಸಕ
> (ಮಂಗಳವಾರ ರಾತ್ರಿ ಬೆಂಬಲಿಗರ ಸಭೆಯಲ್ಲಿ ಹೇಳಿದ್ದು)

ಆದರೆ, ನನ್ನ ಮನಸ್ಸು ಒಪ್ಪದ ಕಾರಣ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ಇಂದು ಪತ್ರ ಬರೆದಿರುವೆ. ಈ ನಿರ್ಧಾರ ರಾಜ್ಯದಲ್ಲಿರುವ ನನ್ನ ಬೆಂಬಲಿಗರಿಗೆ ಸ್ಫೂರ್ತಿಯಾಗಲಿದೆ' ಎಂದು ತಿಳಿಸಿದರು.

ಶಿವಮೊಗ್ಗ ಕ್ಷೇತ್ರಕ್ಕೆ ಯಾರು?: 'ನಿಮ್ಮ ಪುತ್ರ ಈ.ಕಾಂತೇಶ ಅವರಿಗೆ ಅವಕಾಶ ಸಿಗಲಿದೆಯೇ ಎಂಬುದನ್ನು ಸ್ಪಷ್ಟಪಡಿಸಿ' ಎಂದು ಬೆಂಬಲಿಗರು ಪಟ್ಟು ಹಿಡಿದಾಗ, ಅವರನ್ನು ಸಮಾಧಾನಪಡಿಸಿದ ಈಶ್ವರಪ್ಪ, 'ಪ್ರತಿ ವಿಧಾನಸಭಾ ಕ್ಷೇತ್ರದಿಂದ ಮೂರು ಹೆಸರುಗಳು ಕೇಂದ್ರ ಚುನಾವಣಾ ಸಮಿತಿಗೆ ಹೋಗಿವೆ. ಅಲ್ಲಿ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದರು.



ಶಿವಮೊಗ್ಗದ ನಿವಾಸದಲ್ಲಿ ಮಂಗಳವಾರ ಕೆ.ಎಸ್.ಈಶ್ವರಪ್ಪ ಚುನಾವಣಾ ರಾಜಕೀಯದಿಂದ ನಿವೃತ್ತಿ ಪ್ರಕಟಿಸಿದರು.

ಅವಕಾಶ ನೀಡಿದರೆ ವರುಣದಿಂದ ಕಣಕ್ಕೆ ರಘು ಆಚಾರ್

ಮೈಸೂರು: 'ಜೆಡಿಎಸ್ ಅವಕಾಶ ನೀಡಿದರೆ ವರುಣ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯುವೆ' ಎಂದು ಮುಖಂಡ ಜಿ.ರಘು ಆಚಾರ್ ಹೇಳಿದರು.

ಹುಣಸೂರಿನ ಕಲ್ಲಹಳ್ಳಿಯಲ್ಲಿರುವ ದೇವರಾಜ ಅರಸು ಸಮಾಧಿಗೆ ಮಂಗಳವಾರ ಪೂಜೆ ಸಲ್ಲಿಸಿ, 'ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕು ಎಂದು ಪ್ರತಿಪಾದಿಸುವವ ನಾನು. ಜನಸಂಖ್ಯೆ ಕಡಿಮೆ ಇರುವ ರಾಜ್ಯದ 197 ಜಾತಿಗಳಿಗೆ ಸೇರಿದವರಿಗೆ ಕಾಂಗ್ರೆಸ್ ಟಿಕೆಟ್ ನೀಡಿಲ್ಲ. ಇದು ಸ್ವಾಭಿಮಾನದ ಪ್ರಶ್ನೆಯಾಗಿದ್ದು, ಪತ್ನಿ ಚಿತ್ರದುರ್ಗದಿಂದ ಸ್ಪರ್ಧಿಸಲಿದ್ದಾರೆ. ವರುಣದಿಂದ ಅವಕಾಶ ಕೊಟ್ಟರೆ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸುವೆ' ಎಂದರು.

ರಾಜಕೀಯ ಗುರುಗಳಿಗೆ ಕೃತಜ್ಞತೆ ಸಲ್ಲಿಸಿ ಭಾವುಕರಾದ ಮಾಜಿ ಡಿಸಿಎಂ

ನಾಳೆ ಅಂತಿಮ ನಿರ್ಧಾರ: ಸವದಿ

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): 'ಅಥಣಿ ಕ್ಷೇತ್ರದ ಜನ ನನ್ನನ್ನು 20 ವರ್ಷಗಳಿಂದ ಸಾಕಿ, ಇಷ್ಟು ಎತ್ತರಕ್ಕೆ ಬೆಳೆಸಿದ್ದಾರೆ. ಎಲ್ಲ ಸಮಾಜದವರೊಂದಿಗೆ ಚರ್ಚಿಸಿ ಏ. 13ರಂದು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇನೆ' ಎಂದು ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಹೇಳಿದರು.



ಲಕ್ಷ್ಮಣ ಸವದಿ

ಪಟ್ಟಣದಲ್ಲಿ ಮಂಗಳವಾರ ನಡೆದ ಆದಿ ಬಣಜಿಗ ಸಮಾಜದ ಸಭೆಯಲ್ಲಿ ಮಾತನಾಡಿದ ಅವರು, 'ನನ್ನ ರಾಜಕೀಯ ಗುರು ಅನಂತಕುಮಾರ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇನ್ನೊಬ್ಬ ಗುರು ಇದ್ದಾರೆ. ಅವರನ್ನು ಬಿಟ್ಟು ದೂರ ಹೋಗುತ್ತಿದ್ದೇನೆ. ದಯವಿಟ್ಟು ಕ್ಷಮಿಸಿ ಗುರುಗಳೆ' ಎಂದು ಅವರು ಭಾವುಕರಾಗಿ ಹೇಳಿದ್ದು ಚರ್ಚೆಗೆ ಎಡೆಮಾಡಿಕೊಟ್ಟಿತು.

'ಲಕ್ಷ್ಮಣ ಸವದಿಗೆ ಟಿಕೆಟ್ ಕೊಡುವುದಿಲ್ಲ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಅವರು ನನ್ನ ಆತ್ಮೀಯ ಗೆಳೆಯ. ಟಿಕೆಟ್ ಇಲ್ಲ ಎಂದಾಗ ನೋವಾಯಿತು. ಇನ್ನೂ ಮೂರು ದಿನ ಸಮಯವಿದೆ. ಬಿಜೆಪಿ ನಿಷ್ಠಾವಂತರನ್ನು ಕಳೆದುಕೊಳ್ಳಬಾರದು' ಎಂದೂ ಹೇಳಿದರು.

'ಅಥಣಿಯಲ್ಲಿ 2019ರ ಉಪಚುನಾವಣೆಯಲ್ಲಿ ಯಡಿಯೂರಪ್ಪ, ಜಗದೀಶ ಶೆಟ್ಟರ್ ಸೇರಿದಂತೆ ಎಲ್ಲ ನಾಯಕರು ಮಾತು ಕೊಟ್ಟಿದ್ದರು. 'ಅಥಣಿ ಪುಣ್ಯಭೂಮಿ. ಶಿವಯೋಗಿಗಳ ನೆಲದಲ್ಲಿ ನಿಂತು ಹೇಳುತ್ತೇವೆ; 2023ರ ಚುನಾವಣೆಯಲ್ಲಿ ಲಕ್ಷ್ಮಣ ಸವದಿಗೆ ಟಿಕೆಟ್ ಕೊಡಿಸುತ್ತೇವೆ' ಎಂದಿದ್ದರು. ಇದು ಸುಳ್ಳಾಗಿದ್ದರೆ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲಿ' ಎಂದು ಸವಾಲು ಹಾಕಿದರು.

'ಈಗ ಜನರ ತೀರ್ಮಾನವೇ ನನ್ನದು ಕೂಡ. ನೀವು ಎತ್ತಿಕೊಂಡರೆ ಉಡಿಯಲ್ಲಿ ಇರುತ್ತೇನೆ. ಒಗೆದರೆ ಪಾದದಡಿ ಬಿದ್ದಿರುತ್ತೇನೆ' ಎಂದರು.

'ನೀವು ಕಾಂಗ್ರೆಸ್ ಸೇರುವುದು ನಿಜವೇ' ಎಂದು ಸಭೆಯ ನಂತರ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಸೂಚ್ಯವಾಗಿ ಉತ್ತರಿಸಿದ ಸವದಿ, 'ನನ್ನ ನಿರ್ಧಾರ ಮುಂಗಾರು ಮಳೆ ಇದ್ದಂತೆ. ಯಾವಾಗ ಬೇಕಾದರೂ ಸುರಿಯಬಹುದು' ಎಂದರು.

ಸವದಿ ಕಾಂಗ್ರೆಸ್ ಸೇರುವುದು ನನಗೆ ಗೊತ್ತಿಲ್ಲ: ಸತೀಶ

ಬೆಳಗಾವಿ: 'ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರುವ ಬಗ್ಗೆ ನಮ್ಮ ಹಂತದಲ್ಲಿ ಮಾತುಕತೆ ಆಗಿಲ್ಲ. ಹಿರಿಯ ನಾಯಕರ ಜತೆ ಮಾತುಕತೆ ಆದ ಬಗ್ಗೆಯೂ ಗೊತ್ತಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರುತ್ತಾರೆ ಎಂಬ ವಿಷಯ ಮಾಧ್ಯಮ ಮೂಲಕವೇ ತಿಳಿದಿದೆ' ಎಂದರು.

ಶಾಸಕರಾದ ರಮೇಶ ಜಾರಕಿಹೊಳಿ ಅಥವಾ ಬಾಲಚಂದ್ರ ಜಾರಕಿಹೊಳಿ ಅವರನ್ನೇ ಯಮಕನಮರಡಿಯಲ್ಲಿ ನಿಮ್ಮ ವಿರುದ್ಧ ಕಣಕ್ಕಿಳಿಸುವ ಯತ್ನ ನಡೆಸಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇದು ಬಿಜೆಪಿ ಆಂತರಿಕ ವಿಚಾರ. ಯಾರನ್ನು ಬೇಕಾದರೂ ನಮ್ಮ ವಿರುದ್ಧ ಕಣಕ್ಕೆ ಇಳಿಸಲಿ. ಚುನಾವಣೆಯಲ್ಲಿ ಗೆಲುವು ಸಾಧಿಸುವುದೇ ನಮ್ಮ ಗುರಿ' ಎಂದರು.


ಬಿಜೆಪಿ ಸೇರಲ್ಲ: ಎಚ್‌.ಎಂ.ರೇವಣ್ಣ ಸ್ಪಷ್ಟನೆ

ಇಂದಿರಾಗಾಂಧಿ ಮತ್ತು ಡಿ. ದೇವರಾಜ ಅರಸು ಕಾಲದಲ್ಲಿ ಇದ್ದಂತೆ ಕಾಂಗ್ರೆಸ್ ನಾಯಕತ್ವ ಇಂದು ಕಾಣಿಸುತ್ತಿಲ್ಲ

'ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಕರೆತಂದಿದ್ದೇ ಮುಳುವಾಯಿತು'

ಮಾಗಡಿ (ರಾಮನಗರ): 'ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯ ಅವರನ್ನು ನಾನು ಮತ್ತು ಎಚ್.ವಿಶ್ವನಾಥ್ ಸೇರಿ ಕಾಂಗ್ರೆಸ್ ಪಕ್ಷಕ್ಕೆ ಕರೆ ತಂದಿದ್ದೇ ನಮಗೆ ರಾಜಕೀಯವಾಗಿ ಮುಳುವಾಯಿತು' ಎಂದು ಮಾಜಿ ಸಚಿವ ಎಚ್.ಎಂ.ರೇವಣ್ಣ ಹೇಳಿದ್ದಾರೆ.

'ಯಾವುದೇ ಕಾರಣಕ್ಕೂ ನಾನು ಬಿಜೆಪಿ ಸೇರುವುದಿಲ್ಲ. ಹರಿಹರದ ಹಾಲಿ ಶಾಸಕರಿಗೆ ಟಿಕೆಟ್ ನೀಡದಿದ್ದರೆ ಅಲ್ಲಿ ಸ್ಪರ್ಧಿಸಲು ನನಗೆ ಅವಕಾಶ ಮಾಡಿಕೊಡುವಂತೆ ಕೇಳಿದ್ದೇನೆ' ಎಂದು ರೇವಣ್ಣ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.



ಎಚ್‌.ಎಂ. ರೇವಣ್ಣ

'ಮಾಗಡಿ ವಿಧಾನಸಭಾ ಕ್ಷೇತ್ರ ಬಿಟ್ಟು ನಾನು ದೊಡ್ಡ ತಪ್ಪು ಮಾಡಿದೆ. ಮಾಗಡಿ ಬಿಟ್ಟಮೇಲೆ ಹೆಬ್ಬಾಳದಲ್ಲಿ ಸ್ಪರ್ಧಿಸಿ ನಾಲ್ಕು ಸಾವಿರ ಮತಗಳಿಂದ ಸೋತೆ. ಮತ್ತೊಮ್ಮೆ ಅಲ್ಲಿಯೇ ಸ್ಪರ್ಧಿಸಿದ್ದರೆ ಗೆಲ್ಲುತ್ತಿದ್ದೆ. ಅವಕಾಶ ತಪ್ಪಿಸಿದರು. ಕಳೆದ ಬಾರಿ ಬಾರಿ ಚನ್ನಪಟ್ಟಣ ಕ್ಷೇತ್ರಕ್ಕೆ ತಳ್ಳಿದರು. ಅಹಿಂದ ವರ್ಗಗಳಿಗೆ ಕೆಲವು ನಾಯಕರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡದೆ ವಂಚಿಸುವುದು ಬೇಸರ ತಂದಿದೆ' ಎಂದರು.

ಹಳಬರು ಹೊಸಬರ ಮಿಶ್ರಣ

ಒಂದನೇ ಪುಟದಿಂದ...

ಗುಜರಾತ್ ಮಾದರಿಯಲ್ಲಿ ಕರ್ನಾಟಕದಲ್ಲೂ ಪ್ರಯೋಗ ನಡೆಸಲಾಗುತ್ತದೆ ಎಂದು ಚರ್ಚೆಗಳು ನಡೆದಿದ್ದವು. ಆದರೆ, ಅಂತಹ 'ಸಾಹಸ'ಕ್ಕೆ ಪಕ್ಷ ಧೈರ್ಯ ಮಾಡಿಲ್ಲ. ಹಿರಿಯ ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಎಸ್.ಸುರೇಶ ಕುಮಾರ್, ತಿಪ್ಪಾರೆಡ್ಡಿ, ನಾಗೇಶ್ ಅವರಿಗೆ ಟಿಕೆಟ್ ನೀಡುವ ಮೂಲಕ ಹಿರಿತನಕ್ಕೆ ಮನ್ನಣೆ ನೀಡಿದೆ. ಚಾಮರಾಜಪೇಟೆಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ ರಾವ್, ಜಿ.ಪರಮೇಶ್ವರ ಪ್ರತಿನಿಧಿಸುವ ಕೊರಟಗೆರೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್.ಅನಿಲ್ ಕುಮಾರ್ ಹಾಗೂ ಮಧುಗಿರಿ ಕ್ಷೇತ್ರದಲ್ಲಿ ಸ್ವಯಂನಿವೃತ್ತಿ ಪಡೆದಿರುವ ಕೆಎಎಸ್ ಅಧಿಕಾರಿ ಎಲ್.ಸಿ.ನಾಗರಾಜ್ ಅವರಿಗೆ ಟಿಕೆಟ್ ನೀಡಲಾಗಿದೆ.

ಕೃಷ್ಣಬೈರೇಗೌಡ ಪ್ರತಿನಿಧಿಸುವ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಈ ಸಲ ಹೊಸ ಮುಖಕ್ಕೆ (ತಮ್ಮೇಶ ಗೌಡ) ಅವಕಾಶ ನೀಡಿದೆ.

ಹೈಕಮಾಂಡ್ ಒಪ್ಪಿಗೆ ನೀಡಿದರೆ ಕೋಲಾರದಲ್ಲಿ ಸ್ಪರ್ಧೆಗೆ ಸಿದ್ಧ ಎಂದು ಸಿದ್ದರಾಮಯ್ಯ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಇಲ್ಲಿ ಅಭ್ಯರ್ಥಿಯನ್ನು ಯಾರೆಂದು ಕಾಂಗ್ರೆಸ್ ಪಕ್ಷವು ಅಂತಿಮಗೊಳಿಸಿಲ್ಲ. ಕೋಲಾರದಲ್ಲಿ ಕುರುಬ ಸಮುದಾಯಕ್ಕೆ ಸೇರಿದ, ಮಾಜಿ ಶಾಸಕ ವರ್ತೂರು ಪ್ರಕಾಶ್ ಅವರನ್ನು ಹುರಿಯಾಳುವನ್ನಾಗಿ ಬಿಜೆಪಿ ಕಣಕ್ಕೆ ಇಳಿಸಿದೆ.

ನಾಲ್ಕು ದಿನಗಳ ನಿರಂತರ ಕಸರತ್ತು ಹಾಗೂ ಸರಣಿ ಸಭೆಗಳ ಬಳಿಕ ಪಕ್ಷವು ಮೊದಲ ಪಟ್ಟಿ ಪ್ರಕಟಿಸಿದೆ. ಬಿಜೆಪಿ ಪ್ರಧಾನ ಕಚೇರಿಯಲ್ಲಿ ಮಂಗಳವಾರ ರಾತ್ರಿ 9 ಗಂಟೆಗೆ ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರು.

ಕಮಲ ಪಡೆಯ ಹುರಿಯಾಳುಗಳ ಪಟ್ಟಿಯನ್ನು ಅಖೈರುಗೊಳಿಸುವ ಸಲುವಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರೊಂದಿಗೆ ಬೆಳಿಗ್ಗೆಯಿಂದ ಸಂಜೆಯ ವರೆಗೆ ಸಭೆ ನಡೆಸಿದರು. ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಬಸವರಾಜ ಬೊಮ್ಮಾಯಿ, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿನ ಸಭೆ ಬಳಿಕ ಪಟ್ಟಿ ಬಿಡುಗಡೆಯಾಗಲಿದೆ. ಎರಡು ಹಂತದಲ್ಲಿ ಪಟ್ಟಿ ಬಿಡುಗಡೆಯಾಗಲಿದೆ' ಎಂದು ತಿಳಿಸಿದ್ದರು.

ಅರುಣಾಚಲ ಪ್ರದೇಶದ ಪ್ರವಾಸ ಮುಗಿಸಿ ಮಂಗಳವಾರ ರಾತ್ರಿ ನವದೆಹಲಿಗೆ ಮರಳಿದ ಅಮಿತ್ ಶಾ ಅವರು ನಡ್ಡಾ ನಿವಾಸದಲ್ಲಿ ರಾಜ್ಯ ನಾಯಕರ ಜತೆಗಿನ ಸಭೆಯಲ್ಲಿ ಭಾಗಿಯಾದರು. ನಡ್ಡಾ ಹಾಗೂ ಅಮಿತ್ ಶಾ ಅವರು ಮೊದಲ ಪಟ್ಟಿಗೆ ಅನುಮೋದನೆ ನೀಡಿದರು.

2022ರ ಅಂತ್ಯದಲ್ಲಿ ನಡೆದ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ 43 ಹಾಲಿ ಶಾಸಕರಿಗೆ ಪಕ್ಷವು ಟಿಕೆಟ್ ನಿರಾಕರಿಸಿತ್ತು. ಹೊಸ ಮುಖಗಳಿಗೆ ಮಣೆ ಹಾಕಿತ್ತು. ಪಕ್ಷವು ಪ್ರಚಂಡ ಬಹುಮತ ಗಳಿಸಿತ್ತು.

ಬಳ್ಳಾರಿ ಗ್ರಾಮಾಂತರಕ್ಕೆ ರಾಮುಲು ವಲಸೆ

ನವದೆಹಲಿ: ಸಾರಿಗೆ ಸಚಿವ ಆರ್.ಶ್ರೀರಾಮುಲು ಅವರು ಈ ಸಲ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಅವರು ಕಳೆದ ಬಾರಿ ಮೊಳಕಾಲ್ಮುರು ಕ್ಷೇತ್ರದಿಂದ ಸ್ಪರ್ಧಿಸಿ ಜಯಿಸಿದ್ದರು.

ಹುಕ್ಕೇರಿ ಶಾಸಕರಾಗಿದ್ದ ಸಚಿವ ಉಮೇಶ ಕತ್ತಿ ಕೆಲವು ತಿಂಗಳ ಹಿಂದೆ ನಿಧನರಾಗಿದ್ದರು. ಅಲ್ಲಿ ಅವರ ಮಗನಿಗೆ ಟಿಕೆಟ್ ನೀಡಲಾಗಿದೆ. ಸವದತ್ತಿ ಯಲ್ಲಮ್ಮ ಕ್ಷೇತ್ರದ ಶಾಸಕರಾಗಿದ್ದ ಉಪಸಭಾಧ್ಯಕ್ಷ ಆನಂದ ಮಾಮನಿ ಕೆಲವು ತಿಂಗಳ ಹಿಂದೆ ನಿಧನರಾಗಿದ್ದರು. ಅಲ್ಲಿ ಅವರ ಪತ್ನಿಯನ್ನು ಹುರಿಯಾಳುವನ್ನಾಗಿ ಮಾಡಲಾಗಿದೆ.

ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ ಅರಕಲಗೂಡಿನ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಹಾಗೂ ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರ ಹೆಸರು ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ. ನಾಗಮಂಗಲದಲ್ಲಿ ಶಿವರಾಮೇಗೌಡ ಪತ್ನಿ ಸುಧಾ ಶಿವರಾಮೇಗೌಡ ಅವರನ್ನು ಕಣಕ್ಕೆ ಇಳಿಸಲಾಗಿದೆ.

ಮಾಜಿ ಸಂಸದ ಮುದ್ದಹನುಮೇಗೌಡ ಅವರು ಕಳೆದ ವರ್ಷ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಅವರು ಕುಣಿಗಲ್ ಕ್ಷೇತ್ರದಿಂದ ಸ್ಪರ್ಧೆ ಮಾಡುವರು ಎಂಬ ಸುದ್ದಿಗಳು ಹರಡಿದ್ದವು. ಅವರ ಹೆಸರು ಪಟ್ಟಿಯಲ್ಲಿ ಇಲ್ಲ.

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಹಾಸನದಿಂದ ರಾಮಸ್ವಾಮಿ ಹಾಗೂ ತುಮಕೂರಿನಿಂದ ಮುದ್ದಹನುಮೇಗೌಡ ಸ್ಪರ್ಧಿಸುವ ಸಾಧ್ಯತೆ ಇದೆ.

ಅಥಣಿ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಆ ಕ್ಷೇತ್ರದಲ್ಲಿ ಬಿಜೆಪಿ ಸರ್ಕಾರ ರಚನೆಗೆ ಕಾರಣರಾದ ಶಾಸಕರಲ್ಲಿ ಒಬ್ಬರಾದ ಮಹೇಶ ಕುಮಠಳ್ಳಿ ಅವರಿಗೆ ಪಕ್ಷವು ಮಣೆ ಹಾಕಿದೆ.

₹5 ಕೋಟಿ ನಗದು ವಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಗೋಕಾಕ ಕ್ಷೇತ್ರದ ಅಂಕಲಗಿ ಪೊಲೀಸ್ ಠಾಣೆ ವ್ಯಾಪ್ತಿಯ ಯದ್ದಲಗುಡ್ಡ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ರಾತ್ರಿ ದಾಖಲೆ ಇಲ್ಲದ ₹ 5 ಕೋಟಿ ನಗದನ್ನು ಚುನಾವಣಾ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ. ಈ ಹಣವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಸೇರಿದ್ದು ಎನ್ನಲಾಗಿದೆ.

ಬ್ಯಾಂಕಿನ ಸಿಬ್ಬಂದಿ ಯಾವುದೇ ಸಕ್ಷಮ ಪ್ರಾಧಿಕಾರ ಅನುಮತಿ ಪಡೆಯದೇ ಮತ್ತು ಚುನಾವಣಾ ಆಯೋಗದ ಮಾರ್ಗಸೂಚಿ ಪಾಲನೆ ಮಾಡದೇ ಈ ಹಣವನ್ನು ವರ್ಗಾವಣೆ ಮಾಡುತ್ತಿದ್ದರು. ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಹಾಗೂ ಫ್ಲೈಯಿಂಗ್ ಸ್ಕ್ವಾಡ್ ಟೀಮ್‌ನ ಸಿಬ್ಬಂದಿ ತಪಾಸಣೆ ಮಾಡಲಾಗಿ, ಸೂಕ್ತ ದಾಖಲೆಗಳೂ ಸಿಗಲಿಲ್ಲ. ಹೀಗಾಗಿ, ಹಣ ವಶಕ್ಕೆ ಪಡೆದು ಗೋಕಾಕ ಉಪಖಜಾನೆಯ ಭದ್ರತಾ ಕೋಣೆಯಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಾಖಲೆಯಿಲ್ಲದ ₹53.88 ಲಕ್ಷ ನಗದು ವಶ (ಚಿಕ್ಕೋಡಿ ವರದಿ): ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹50 ಲಕ್ಷ ಹಣವನ್ನು ತಾಲ್ಲೂಕಿನ ಸದಲಗಾ–ದತ್ತವಾಡ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ. ಬೋರಗಾಂವದಿಂದ ಸದಲಗಾಕ್ಕೆ ಪ್ರಯಾಣಿಸುತ್ತಿದ್ದ ವ್ಯಕ್ತಿ ಬಳಿ ಹಣ ಪತ್ತೆಯಾಗಿದೆ. ಸದಲಗಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ

ಶಿಗ್ಗಾವಿ	ಬಸವರಾಜ ಬೊಮ್ಮಾಯಿ
ನಿಪ್ಪಾಣಿ	ಶಶಿಕಲಾ ಜೊಲ್ಲೆ
ಚಿಕ್ಕೋಡಿ-ಸದಲಗ	ರಮೇಶ್ ಕತ್ತಿ
ಅಥಣಿ	ಮಹೇಶ ಕುಮಠಳ್ಳಿ
ಕಾಗವಾಡ	ಶ್ರೀಮಂತ ಪಾಟೀಲ
ಕುಡಚಿ (ಎಸ್‌ಸಿ)	ಪಿ. ರಾಜೀವ್
ರಾಯಭಾಗ (ಎಸ್‌ಸಿ)	ದುರ್ಯೋಧನ ಐಹೊಳೆ
ಹುಕ್ಕೇರಿ	ನಿಖಿಲ್ ಕತ್ತಿ
ಅರಭಾವಿ	ಬಾಲಚಂದ್ರ ಜಾರಕಿಹೊಳಿ
ಗೋಕಾಕ	ರಮೇಶ ಜಾರಕಿಹೊಳಿ
ಯಮಕನಮರಡಿ (ಎಸ್‌ಟಿ)	ಬಸವರಾಜ ಹುಂದ್ರಿ
ಬೆಳಗಾವಿ ಉತ್ತರ	ಡಾ. ರವಿ ಪಾಟೀಲ
ಬೆಳಗಾವಿ ದಕ್ಷಿಣ	ಅಭಯ ಪಾಟೀಲ
ಬೆಳಗಾವಿ ಗ್ರಾ.	ನಾಗೇಶ್ ಮನ್ನೋಳ್ಕರ್
ಖಾನಾಪುರ	ವಿಠಲ ಹಲಗೇಕರ್
ಕಿತ್ತೂರು	ಮಹಾಂತೇಶ್ ದೊಡ್ಡಗೌಡರ
ಬೈಲಹೊಂಗಲ	ಜಗದೀಶ್ ಚನ್ನಪ್ಪ ಮೆಟಗುಡ್ಡ
ಸವದತ್ತಿ-ಯಲ್ಲಮ್ಮ	ರತ್ನಾ ವಿಶ್ವನಾಥ್ ಮಾಮನಿ
ರಾಮದುರ್ಗ	ಚಿಕ್ಕರೇವಣ್ಣ
ಮುಧೋಳ (ಎಸ್‌ಸಿ)	ಗೋವಿಂದ ಕಾರಜೋಳ
ತೇರದಾಳ	ಸಿದ್ದು ಸವದಿ
ಜಮಖಂಡಿ	ಜಗದೀಶ್ ಗುಡಗುಂಟಿ
ಬೀಳಗಿ	ಮುರುಗೇಶ ನಿರಾಣಿ
ಬಾದಾಮಿ	ಶಾಂತಾ ಗೌಡ ಪಾಟೀಲ
ಬಾಗಲಕೋಟೆ	ವೀರಭದ್ರಯ್ಯ ಚರಂತಿಮಠ
ಹುನಗುಂದ	ದೊಡ್ಡನಗೌಡ ಜಿ. ಪಾಟೀಲ
ಮುದ್ದೇಬಿಹಾಳ	ಎ.ಎಸ್. ಪಾಟೀಲ ನಡಹಳ್ಳಿ
ಬಬಲೇಶ್ವರ	ವಿಜು ಗೌಡ ಎಸ್. ಪಾಟೀಲ
ವಿಜಯಪುರ ನಗರ	ಬಸನಗೌಡ ಪಾಟೀಲ ಯತ್ನಾಳ
ಸಿಂದಗಿ	ರಮೇಶ ಭೂಸನೂರ
ಫಜಲಪುರ	ಮಾಲೀಕಯ್ಯ ಗುತ್ತೇದಾರ

ಜೇವರ್ಗಿ	ಶಿವನಗೌಡ ಪಾಟೀಲ ರಡ್ಡೇವಾಡಗಿ
ಸುರಪುರ (ಎಸ್‌ಟಿ)	ನರಸಿಂಹ ನಾಯಕ (ರಾಜೂ ಗೌಡ)
ಶಹಾಪುರ	ಅಮೀನ್‌ರೆಡ್ಡಿ ಯಾಲಗಿ
ಯಾದಗಿರಿ	ವೆಂಕಟರೆಡ್ಡಿ ಮುದ್ನಾಳ
ಚಿತ್ತಾಪುರ (ಎಸ್‌ಸಿ)	ಮಣಿಕಂಠ ರಾಠೋಡ್
ಚಿಂಚೋಳಿ (ಎಸ್‌ಸಿ)	ಡಾ.ಅವಿನಾಶ್ ಜಾಧವ್
ಕಲಬುರಗಿ ಗ್ರಾಮಾಂತರ (ಎಸ್‌ಸಿ)	ಬಸವರಾಜ ಮತ್ತಿಮೂಡ
ಕಲಬುರಗಿ ದಕ್ಷಿಣ	ದತ್ತಾತ್ರೇಯ ಪಾಟೀಲ ರೇವೂರ
ಕಲಬುರಗಿ ಉತ್ತರ	ಚಂದ್ರಕಾಂತ್ ಪಾಟೀಲ
ಆಳಂದ	ಸುಭಾಷ್ ಗುತ್ತೇದಾರ
ಬಸವಕಲ್ಯಾಣ	ಶರಣು ಸಲಗರ
ಹುಮ್ನಾಬಾದ್	ಸಿದ್ದು ಪಾಟೀಲ
ಬೀದರ್ ದಕ್ಷಿಣ	ಡಾ. ಶೈಲೇಂದ್ರ ಬೆಲ್ದಾಳೆ
ಔರಾದ್ (ಎಸ್‌ಸಿ)	ಪ್ರಭು ಚವ್ಹಾಣ್
ರಾಯಚೂರು ಗ್ರಾಮಾಂತರ (ಎಸ್‌ಟಿ)	ತಿಪ್ಪರಾಜು ಹವಾಲ್ದಾರ್
ರಾಯಚೂರು	ಡಾ. ಶಿವರಾಜ ಪಾಟೀಲ
ದೇವದುರ್ಗ (ಎಸ್‌ಟಿ)	ಕೆ. ಶಿವನಗೌಡ ನಾಯಕ
ಲಿಂಗಸುಗೂರು (ಎಸ್‌ಸಿ)	ಮಾನಪ್ಪ ಡಿ. ವಜ್ಜಲ್
ಸಿಂಧನೂರು	ಕೆ. ಕರಿಯಪ್ಪ
ಮಸ್ಕಿ (ಎಸ್‌ಟಿ)	ಪ್ರತಾಪಗೌಡ ಪಾಟೀಲ
ಕುಷ್ಟಗಿ	ದೊಡ್ಡನಗೌಡ ಪಾಟೀಲ
ಕನಕಗಿರಿ (ಎಸ್‌ಸಿ)	ಬಸವರಾಜ ದಢೇಸಗೂರು
ಯಲಬುರ್ಗಾ	ಹಾಲಪ್ಪ ಬಸಪ್ಪ ಆಚಾರ್
ಶಿರಹಟ್ಟಿ (ಎಸ್)	ಡಾ. ಚಂದ್ರು ಲಮಾಣಿ
ಗದಗ	ಅನಿಲ್ ಮೆಣಸಿನಕಾಯಿ
ನರಗುಂದ	ಸಿ.ಸಿ. ಪಾಟೀಲ
ನವಲಗುಂದ	ಶಂಕರ ಪಾಟೀಲ ಮುನೇನಕೊಪ್ಪ

ಕುಂದಗೋಳ	ಎಂ.ಆರ್. ಪಾಟೀಲ
ಧಾರವಾಡ	ಅಮೃತ ಅಯ್ಯಪ್ಪ ದೇಸಾಯಿ
ಹುಬ್ಬಳ್ಳಿ-ಧಾರವಾಡ ಪೂರ್ವ (ಎಸ್‌ಸಿ)	ಡಾ. ಕ್ರಾಂತಿ ಕಿರಣ್
ಹುಬ್ಬಳ್ಳಿ-ಧಾರವಾಡ ಪಶ್ಚಿಮ	ಅರವಿಂದ ಬೆಲ್ಲದ
ಹಳಿಯಾಳ	ಸುನೀಲ್ ಹೆಗ್ಡೆ
ಕಾರವಾರ	ರೂಪಾಲಿ ನಾಯ್ಕ
ಕುಮಟಾ	ದಿನಕರ ಶೆಟ್ಟಿ
ಭಟ್ಕಳ	ಸುನೀಲ್ ನಾಯ್ಕ
ಶಿರಸಿ	ವಿಶ್ವೇಶ್ವರ ಹೆಗಡೆ ಕಾಗೇರಿ
ಯಲ್ಲಾಪುರ	ಶಿವರಾಂ ಹೆಬ್ಬಾರ್
ಬ್ಯಾಡಗಿ	ವಿರೂಪಾಕ್ಷಪ್ಪ ಬಳ್ಳಾರಿ
ಹಿರೇಕೆರೂರು	ಬಿ.ಸಿ. ಪಾಟೀಲ
ರಾಣೆಬೆನ್ನೂರು	ಅರುಣ್ ಕುಮಾರ್ ಪೂಜಾರ
ಹಡಗಲಿ (ಎಸ್‌ಸಿ)	ಕೃಷ್ಣಾ ನಾಯ್ಕ್
ಕಂಪ್ಲಿ (ಎಸ್‌ಟಿ)	ಟಿ.ಎಚ್. ಸುರೇಶ್ ಬಾಬು
ಸಿರುಗುಪ್ಪ (ಎಸ್‌ಟಿ)	ಎಂ.ಎಸ್. ಸೋಮಲಿಂಗಪ್ಪ
ಬಳ್ಳಾರಿ (ಎಸ್‌ಟಿ)	ಬಿ. ಶ್ರೀರಾಮುಲು
ಬಳ್ಳಾರಿ ನಗರ	ಗಾಲಿ ಸೋಮಶೇಖರ ರೆಡ್ಡಿ
ಸಂಡೂರು (ಎಸ್‌ಟಿ)	ಶಿಲ್ಪಾ ರಾಘವೇಂದ್ರ
ಕೂಡ್ಲಿಗಿ (ಎಸ್‌ಟಿ)	ಲೋಕೇಶ್ ವಿ. ನಾಯಕ್
ಮೊಳಕಾಲ್ಮುರು (ಎಸ್‌ಟಿ)	ಎಸ್. ತಿಪ್ಪೇಸ್ವಾಮಿ
ಚಳ್ಳಕೆರೆ (ಎಸ್‌ಟಿ)	ಅನಿಲ್ ಕುಮಾರ್
ಚಿತ್ರದುರ್ಗ	ಜಿ.ಎಚ್. ತಿಪ್ಪಾರೆಡ್ಡಿ
ಹಿರಿಯೂರು	ಪೂರ್ಣಿಮಾ ಶ್ರೀನಿವಾಸ್
ಹೊಳಲ್ಕೆರೆ (ಎಸ್‌ಸಿ)	ಎಂ. ಚಂದ್ರಪ್ಪ
ಜಗಳೂರು (ಎಸ್‌ಟಿ)	ಎಸ್.ವಿ. ರಾಮಚಂದ್ರ
ಹರಿಹರ	ಬಿ.ಪಿ. ಹರೀಶ್
ಹೊನ್ನಾಳಿ	ಎಂ.ಪಿ. ರೇಣುಕಾಚಾರ್ಯ
ಶಿವಮೊಗ್ಗ ಗ್ರಾ (ಎಸ್‌ಸಿ)	ಅಶೋಕ್ ನಾಯ್ಕ್
ಭದ್ರಾವತಿ	ಮಂಗೋಟೆ ರುದ್ರೇಶ್
ತೀರ್ಥಹಳ್ಳಿ	ಆರಗ ಜ್ಞಾನೇಂದ್ರ

ಶಿಕಾರಿಪುರ	ಬಿ.ವೈ. ವಿಜಯೇಂದ್ರ
ಸೊರಬ	ಕುಮಾರ್ ಬಂಗಾರಪ್ಪ
ಸಾಗರ	ಹರತಾಳು ಎಚ್. ಹಾಲಪ್ಪ
ಕುಂದಾಪುರ	ಕಿರಣ್ ಕುಮಾರ್ ಕೊಡ್ಗಿ
ಉಡುಪಿ	ಯಶ್ಪಾಲ್ ಸುವರ್ಣ
ಕಾಪು	ಗುರ್ಮೆ ಸುರೇಶ್ ಶೆಟ್ಟಿ
ಕಾರ್ಕಳ	ವಿ. ಸುನಿಲ್ ಕುಮಾರ್
ಶೃಂಗೇರಿ	ಡಿ.ಎನ್. ಜೀವರಾಜ್
ಚಿಕ್ಕಮಗಳೂರು	ಸಿ.ಟಿ. ರವಿ
ತರೀಕೆರೆ	ಡಿ.ಎಸ್. ಸುರೇಶ್
ಕಡೂರು	ಬೆಳ್ಳಿ ಪ್ರಕಾಶ್
ಚಿಕ್ಕನಾಯಕನಹಳ್ಳಿ	ಜೆ.ಸಿ. ಮಾಧುಸ್ವಾಮಿ
ತಿಪಟೂರು	ಬಿ.ಸಿ. ನಾಗೇಶ್
ತುರುವೇಕೆರೆ	ಮಸಾಲಾ ಜಯರಾಂ
ಕುಣಿಗಲ್	ಡಿ.ಕೃಷ್ಣಕುಮಾರ್
ತುಮಕೂರು ನಗರ	ಜಿ.ಬಿ. ಜ್ಯೋತಿಗಣೇಶ್
ತುಮಕೂರು ಗ್ರಾ.	ಬಿ. ಸುರೇಶ್ ಗೌಡ
ಕೊರಟಗೆರೆ	ಬಿ.ಎಚ್. ಅನಿಲ್ ಕುಮಾರ್
ಶಿರಾ	ರಾಜೇಶಗೌಡ
ಪಾವಗಡ	ಕೃಷ್ಣ ನಾಯಕ್
ಮಧುಗಿರಿ	ಎಲ್.ಸಿ. ನಾಗರಾಜ್
ಗೌರಿಬಿದನೂರು	ಶಶಿಧರ್
ಬಾಗೇಪಲ್ಲಿ	ಸಿ. ಮುನಿರಾಜು
ಚಿಕ್ಕಬಳ್ಳಾಪುರ	ಕೆ. ಸುಧಾಕರ್
ಚಿಂತಾಮಣಿ	ವೇಣುಗೋಪಾಲ್
ಶ್ರೀನಿವಾಸಪುರ	ಗುಂಜೂರು ಶ್ರೀನಿವಾಸರೆಡ್ಡಿ
ಮುಳಬಾಗಿಲು	ಶೀಗೇಹಳ್ಳಿ ಸುಂದರ್
ಬಂಗಾರಪೇಟೆ	ಎಂ. ನಾರಾಯಣಸ್ವಾಮಿ
ಕೋಲಾರ	ವರ್ತೂರು ಪ್ರಕಾಶ್
ಮಾಲೂರು	ಕೆ.ಎಸ್. ಮಂಜುನಾಥ ಗೌಡ
ಯಲಹಂಕ	ಎಸ್.ಆರ್. ವಿಶ್ವನಾಥ್
ಕೆ.ಆರ್.ಪುರ	ಬೈರತಿ ಬಸವರಾಜ್
ಬ್ಯಾಟರಾಯನಪುರ	ತಮ್ಮೇಶ್ ಗೌಡ

ಯಶವಂತಪುರ	ಎಸ್.ಟಿ. ಸೋಮಶೇಖರ್
ಆರ್.ಆರ್. ನಗರ	ಮುನಿರತ್ನ ನಾಯ್ಡು
ದಾಸರಹಳ್ಳಿ	ಎಸ್. ಮುನಿರಾಜು
ಮಹಾಲಕ್ಷ್ಮೀ ಲೇ ಔಟ್	ಕೆ.ಗೋಪಾಲಯ್ಯ
ಮಲ್ಲೇಶ್ವರ	ಸಿ.ಎನ್. ಅಶ್ವತ್ಥನಾರಾಯಣ
ಪುಲಕೇಶಿ ನಗರ	ಮುರಳಿ
ಸರ್ವಜ್ಞನಗರ	ಪದ್ಮನಾಭ ರೆಡ್ಡಿ
ಸಿ.ವಿ.ರಾಮನ್ ನಗರ	ಎಸ್.ರಘು
ಶಿವಾಜಿನಗರ	ಎನ್. ಚಂದ್ರ
ಶಾಂತಿನಗರ	ಶಿವಕುಮಾರ್
ಗಾಂಧಿನಗರ	ಎ.ಆರ್. ಸಪ್ತಗಿರಿಗೌಡ
ರಾಜಾಜಿನಗರ	ಎಸ್.ಸುರೇಶ್‌ಕುಮಾರ್
ವಿಜಯನಗರ	ಎಚ್.ರವೀಂದ್ರ
ಚಾಮರಾಜಪೇಟೆ	ಭಾಸ್ಕರ ರಾವ್
ಚಿಕ್ಕಪೇಟೆ	ಉದಯ ಗರುಡಾಚಾರ್
ಬಸವನಗುಡಿ	ಎಲ್.ಎ. ರವಿಸುಬ್ರಹ್ಮಣ್ಯ
ಪದ್ಮನಾಭಗರ	ಆರ್.ಅಶೋಕ
ಬಿ.ಟಿ.ಎಂ. ಲೇ ಔಟ್	ಶ್ರೀಧರ ರೆಡ್ಡಿ
ಜಯನಗರ	ಸಿ.ಕೆ. ರಾಮಮೂರ್ತಿ
ಬೊಮ್ಮನಹಳ್ಳಿ	ಸತೀಶ ರೆಡ್ಡಿ
ಬೆಂಗಳೂರು ದಕ್ಷಿಣ	ಎಂ.ಕೃಷ್ಣಪ್ಪ
ಆನೇಕಲ್	ಹುಲ್ಲಳ್ಳಿ ಶ್ರೀನಿವಾಶ್
ಹೊಸಕೋಟೆ	ಎಂ.ಟಿ.ಬಿ. ನಾಗರಾಜ್
ದೇವನಹಳ್ಳಿ	ಪಿಳ್ಳ ಮುನಿಶ್ಯಾಮಪ್ಪ
ದೊಡ್ಡಬಳ್ಳಾಪುರ	ಧೀರಜ್ ಮುನಿರಾಜು
ನೆಲಮಂಗಲ	ಸಪ್ತಗಿರಿ ನಾಯ್ಕ್
ಮಾಗಡಿ	ಪ್ರಸಾದ್ ಗೌಡ
ರಾಮನಗರ	ಗೌತಮಗೌಡ
ಕನಕಪುರ	ಆರ್. ಅಶೋಕ
ಚನ್ನಪಟ್ಟಣ	ಸಿ.ಪಿ. ಯೋಗೇಶ್ವರ್
ಮಳವಳ್ಳಿ	ಮುನಿರಾಜು
ಮದ್ದೂರು	ಎಸ್.ಪಿ. ಸ್ವಾಮಿ
ಮೇಲುಕೋಟೆ	ಇಂದ್ರೇಶ್ ಕುಮಾರ್

ಮಂಡ್ಯ	ಅಶೋಕ ಜಯರಾಂ
ಶ್ರೀರಂಗಪಟ್ಟಣ	ಇಂಡವಾಳು ಸಚ್ಚಿದಾನಂದ
ನಾಗಮಂಗಲ	ಸುಧಾ ಶಿವರಾಂ
ಕೆ.ಆರ್. ಪೇಟೆ	ಕೆ.ಸಿ. ನಾರಾಯಣಗೌಡ
ಬೇಲೂರು	ಹುಲ್ಲಹಳ್ಳಿ ಸುರೇಶ್
ಹಾಸನ	ಜೆ. ಪ್ರೀತಂಗೌಡ
ಹೊಳೆನರಸೀಪುರ	ದೇವರಾಜೇಗೌಡ
ಅರಕಲಗೂಡು	ಯೋಗಾ ರಮೇಶ್
ಸಕಲೇಶ ಪುರ	ಸಿಮೆಂಟ್ ಮಂಜು
ಬೆಳ್ತಂಗಡಿ	ಹರೀಶ್ ಪೂಂಜ
ಮೂಡಬಿದರೆ	ಉಮಾನಾಥ ಕೋಟ್ಯಾನ್
ಮಂಗಳೂರು ಉತ್ತರ	ಡಾ. ಭರತ್ ಶೆಟ್ಟಿ
ಮಂಗಳೂರು ದಕ್ಷಿಣ	ವೇದವ್ಯಾಸ ಕಾಮತ್
ಮಂಗಳೂರು	ಸತೀಶ್ ಕುಂಪಲ
ಬಂಟ್ವಾಳ	ರಾಜೇಶ ನಾಯಕ
ಪುತ್ತೂರು	ಆಶಾ ತಿಮ್ಮಪ್ಪ
ಸುಳ್ಯ	ಭಾಗೀರಥಿ ಮುರುಳ್ಯ
ಮಡಿಕೇರಿ	ಅಪ್ಪಚ್ಚು ರಂಜನ್
ವಿರಾಜಪೇಟೆ	ಕೆ.ಜಿ. ಬೋಪಯ್ಯ
ಪಿರಿಯಾಪಟ್ಟಣ	ಸಿ.ಎಚ್. ವಿಜಯಶಂಕರ್
ಕೆ.ಆರ್. ನಗರ	ವೆಂಕಟೇಶ್ ಹೊಸಳ್ಳಿ
ಹುಣಸೂರು	ದೇವರಹಳ್ಳಿ ಸೋಮಶೇಖರ್
ನಂಜನಗೂಡು	ಬಿ. ಹರ್ಷವರ್ಧನ
ಚಾಮುಂಡೇಶ್ವರಿ	ಕವೀಶ್ ಗೌಡ
ಚಾಮರಾಜ	ಎಲ್. ನಾಗೇಂದ್ರ
ನರಸಿಂಹರಾಜ	ಸಂದೇಶ ಸ್ವಾಮಿ
ವರುಣ	ವಿ. ಸೋಮಣ್ಣ
ಟಿ. ನರಸೀಪುರ	ರೇವಣ್ಣ
ಹನೂರು	ಪ್ರೀತಂ ನಾಗಪ್ಪ
ಕೊಳ್ಳೇಗಾಲ	ಎನ್. ಮಹೇಶ್
ಚಾಮರಾಜನಗರ	ವಿ.ಸೋಮಣ್ಣ
ಗುಂಡ್ಲುಪೇಟೆ	ಸಿ.ಎಸ್. ನಿರಂಜನಕುಮಾರ್

ಐದು ವರುಷ: ಬದಲಾದ ವರಸೆ

ಪ್ರಜಾ ಪತ್ರ

ಮಾದರಿ ಚುನಾವಣೆಗೆ ನಾಂದಿ ಹಾಡಬೇಕಿದೆ



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಚುನಾವಣೆಗೆ ಅಣಿಯಾಗುತ್ತಿದ್ದು, ಮಾದರಿ ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರು ಮತದಾನ ಮಾಡುವ ಮೂಲಕ ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಉಚಿತ ಶಿಕ್ಷಣ, ಆರೋಗ್ಯ, ವಸತಿ, ಪರಿಸರ ಸಂರಕ್ಷಣೆ, ರೈತರಿಗೆ ಬೆಂಬಲ ಬೆಲೆ, ಯುವಜನರಿಗೆ ಉದ್ಯೋಗ ಅವಕಾಶ, ದ್ವೇಷರಹಿತ ಸಮಾಜ ನಿರ್ಮಾಣ, ಸರ್ವರಿಗೂ ಸಮಬಾಳು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಪ್ರಾತಿನಿಧ್ಯ ನೀಡುವ ಜನನಾಯಕರನ್ನು ಆಯ್ಕೆ ಮಾಡಬೇಕು.

ಕವಿತಾ ಡಿ., ಮೈಸೂರು

ಸದೃಢ ಸರ್ಕಾರ ನಿರ್ಮಾಣಕ್ಕೆ ಪಣತೊಡಿ



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರೇ ಪ್ರಭುಗಳು. ಅವರು ಚಲಾಯಿಸುವ ಪ್ರತಿಯೊಂದು ಮತಕ್ಕೂ ಮೌಲ್ಯವಿದೆ. 18 ವರ್ಷ ಮೇಲ್ಪಟ್ಟ ಎಲ್ಲ ಅರ್ಹ ಮತದಾರರು ತಪ್ಪದೆ ಮತದಾನ ಮಾಡಿ ಸದೃಢ ಸರ್ಕಾರ ನಿರ್ಮಾಣಕ್ಕೆ ಪಣತೊಡಬೇಕು. ಸರ್ವಾಧಿಕಾರಿ ಧೋರಣೆ ಮತ್ತು ಏಕವ್ಯಕ್ತಿಯ ನಾಮ ಜಪದ ವಿರುದ್ಧ ಮತದಾರರು ಚುನಾವಣೆಯಲ್ಲಿ ಪಾಠ ಕಲಿಸಬೇಕು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎನ್ನುವ ಹಾಗೂ ಡಾ. ಬಾಬ್ ಸಾಹೇಬ್ ಅಂಬೇಡ್ಕರ್ ಅವರ ಆಶಯಗಳಂತೆ ನಡೆಯುವ ನಾಯಕರನ್ನು ಆರಿಸುವ ಕೆಲಸ ಆಗಬೇಕು.

ರಮೇಶ ಪಿ.ಗೌಡೂರು, ರಾಯಚೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

• ವಿ.ಎಸ್. ಸುಬ್ರಹ್ಮಣ್ಯ

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ಕಾವು ಏರತೊಡಗಿದ್ದು, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪ್ರಮುಖ ಪಕ್ಷಗಳು ಗೆಲುವಿನ ದಡ ಮುಟ್ಟಲು ಪ್ರಬಲ 'ಅಸ್ತ್ರ'ಗಳನ್ನು ಆಯ್ದುಕೊಂಡು ಎದುರಾಳಿಗಳನ್ನು ಕಟ್ಟಿಹಾಕುವ ಹವಣಿಕೆಯಲ್ಲಿವೆ. 2018ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಚುನಾವಣಾ ಕಣದಲ್ಲಿ ಬಳಕೆಯಾಗುವ ಅನೇಕ ಅಸ್ತ್ರಗಳು ಕೈ ಬದಲಿಸಿವೆ.

ಬಿಜೆಪಿ ಮತ್ತು ಕಾಂಗ್ರೆಸ್ ನೇರಾನೇರ ವಾಕ್ಸಮರದಲ್ಲೇ ಮತದಾರರನ್ನು ಸೆಳೆಯಲು ಹೊರಟಿವೆ. ಭ್ರಷ್ಟಾಚಾರ, ಧರ್ಮ, ಮತೀಯ ಗೂಂಡಾಗಿರಿ ಸೇರಿದಂತೆ ಅನೇಕ ವಿಷಯಗಳಲ್ಲಿ ಎರಡೂ ಪಕ್ಷಗಳು ಸವಾಲು–ಜವಾಬಿಗೆ ಇಳಿದಿವೆ. ಜೆಡಿಎಸ್ ತನ್ನ ಎಂದಿನ ಶೈಲಿಯಲ್ಲೇ ಎರಡೂ ರಾಷ್ಟ್ರೀಯ ಪಕ್ಷಗಳ ವಿರುದ್ಧ ತೊಡೆ ತಟ್ಟಿದೆ. 'ಪ್ರಾದೇಶಿಕ ಪಕ್ಷ'ದ ಅಸ್ತ್ರವನ್ನೇ ಅದು ಬಲವಾಗಿ ನೆಚ್ಚಿಕೊಂಡಿದೆ.

2018ರ ಚುನಾವಣೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಕಟ್ಟಿಹಾಕಲು ಬಿಜೆಪಿಯು ಭ್ರಷ್ಟಾಚಾರದ ಆರೋಪವನ್ನೇ ಪ್ರಮುಖವಾಗಿ ಆಯ್ದುಕೊಂಡಿತ್ತು. ಪ್ರಧಾನಿ ನರೇಂದ್ರ ಮೋದಿಯವರೇ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಶೇಕಡ 10ರಷ್ಟು ಲಂಚ ಪಡೆಯುತ್ತಿರುವ ಆರೋಪ ಮಾಡಿದ್ದರು. 'ಸೀದಾರೂಪಯ್ಯಾ ಸರ್ಕಾರ್' ಎಂಬ ಪ್ರಧಾನಿಯವರ ಹೇಳಿಕೆ ಇಡೀ ಚುನಾವಣಾ ಪ್ರಚಾರವನ್ನು ಆವರಿಸಿಕೊಂಡಿತ್ತು. ಅದಕ್ಕೆ ಜೋಡಿಸಿಕೊಂಡು ಹಲವು ಹಗರಣಗಳ ಆರೋಪ ಮಾಡಿದ್ದ ಬಿಜೆಪಿ, ಚುನಾವಣೆಯಲ್ಲಿ ಮೇಲುಗೈ ಸಾಧಿಸುವ ಪ್ರಯತ್ನ ಮಾಡಿತ್ತು.

ಈ ಬಾರಿಯ ಚುನಾವಣೆಯಲ್ಲಿ ಹಿಂದೆ ಮೋದಿಯವರು ಬಳಸಿದ್ದ ಅಸ್ತ್ರವನ್ನೇ ಕಾಂಗ್ರೆಸ್ ಪ್ರಬಲವಾಗಿ ಉಪಯೋಗಿಸಿದೆ. '10 ಪರ್ಸೆಂಟ್ ಸರ್ಕಾರ್' ಎಂದು ಮೋದಿಯವರಿಂದ ಮೂದಲಿಕೆಗೆ ಒಳಗಾಗಿದ್ದ ಕಾಂಗ್ರೆಸ್, 'ಬಿಜೆಪಿಯದು 40 ಪರ್ಸೆಂಟ್ ಸರ್ಕಾರ' ಎಂದು ಬಿಂಬಿಸುವಲ್ಲಿ ಮುನ್ನಡೆಯನ್ನಂತೂ ಸಾಧಿಸಿದೆ. ಅದಕ್ಕಾಗಿ, 'ಪೇಸಿಎಂ' ಮಾದರಿ ಅಭಿಯಾನವನ್ನು ಸಮರ್ಥವಾಗಿ ಬಳಸಿಕೊಂಡಿದೆ. ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಇಂತಹ ಆರೋಪ ಮಾಡಿ ವರ್ಷದ ಹಿಂದೆ ಪ್ರಧಾನಿಗೆ ಬರೆದ ಪತ್ರ ಮತ್ತು ನಂತರದಲ್ಲಿ ಈ ಕುರಿತು ಎದ್ದ ಚರ್ಚೆಯ ಕಾವು ತಣ್ಣಗಾಗದಂತೆ ಹಿಡಿದಿಡುವ ಪ್ರಯತ್ನವನ್ನು 'ಕೈ' ನಾಯಕರು ಮಾಡುತ್ತಿದ್ದಾರೆ. ಸಾಲು ಸಾಲಾಗಿ ಹೊರಬಂದ ಹಗರಣಗಳು ಹಾಗೂ ಚುನಾವಣೆಯ ಹೊಸ್ತಿಲಲ್ಲೇ ದಾಖಲಾದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣವನ್ನು ಶೇ 40ರ ಲಂಚದ ಆರೋಪಕ್ಕೆ ಪೂರಕವಾಗಿ ಬಿಂಬಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ.

ಉಚಿತ ಕೊಡುಗೆಗಳು, ನೇರವಾಗಿ ಹಣದ ನೆರವಿನ ಭರವಸೆಗಳ ಜತೆಯಲ್ಲೇ ಚುನಾವಣಾ ಕಾಲಘಟ್ಟದಲ್ಲೇ ಎದ್ದು ಬರುತ್ತಿರುವ ನಂದಿನಿ– ಅಮೂಲ್, ಕನ್ನಡದ ಅಸ್ಮಿತೆ– ಹಿಂದಿ ಹೇರಿಕೆಯಂತಹ ವಿಚಾರಗಳನ್ನು ಚುನಾವಣಾ ಪ್ರಚಾರದ ಪ್ರಬಲ ಅಸ್ತ್ರಗಳಾಗಿ ಬಳಸಿಕೊಳ್ಳುವ ಹವಣಿಕೆಯೂ ನಡೆಯುತ್ತಿದೆ.

ಬಿಜೆಪಿ 2018ರಲ್ಲಿ

- ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ವಿರುದ್ಧ ಶೇಕಡ ಹತ್ತರಷ್ಟು (ಸೀದಾರೂಪಯ್ಯಾ) ಲಂಚದ ಆರೋಪ.
- ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಲು ಶಿಫಾರಸು ಮಾಡುವ ಮೂಲಕ ಹಿಂದೂ ಧರ್ಮ ಒಡೆಯಲು ಯತ್ನಿಸಿದ ಆರೋಪ.
- ಟಿಪ್ಪು ಸುಲ್ತಾನ್ ಜಯಂತಿ ಆಚರಣೆ.
- ಹಿಂದುತ್ವ ಪರ ಸಂಘಟನೆಗಳ ಕಾರ್ಯಕರ್ತರ ಕೊಲೆಗೆ ಕುಮ್ಮಕ್ಕು ನೀಡಿದ ಆರೋಪ.
- ಸಿದ್ದರಾಮಯ್ಯ ಅವರಿಗೆ ಹ್ಯೂಬ್ಲೋ ವಾಚು ಉಡುಗೊರೆ ನೀಡಿದ ಪ್ರಕರಣ.
- ಪಿಎಫ್‌ಐ ಕಾರ್ಯಕರ್ತರ ವಿರುದ್ಧದ ಮೊಕದ್ದಮೆಗಳನ್ನು ಹಿಂಪಡೆದ ಆರೋಪ.
- ಅರ್ಕಾವತಿ ಬಡಾವಣೆಯ 'ರೀಡೂ' ಹೆಸರಿನಲ್ಲಿ ಡಿನೋಟಿಫೈ ಮಾಡಿದ ಆರೋಪ.
- ಐಎಎಸ್ ಅಧಿಕಾರಿ ಡಿ.ಕೆ. ರವಿ ಹಾಗೂ ಡಿವೈಎಸ್‌ಪಿ ಎಂ.ಕೆ. ಗಣಪತಿ ಆತ್ಮಹತ್ಯೆ ಪ್ರಕರಣ.
- ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ ಉಕ್ಕಿನ ಮೇಲ್ಸೇತುವೆ; ಲಂಚಕ್ಕಾಗಿಯೇ ಈ ಯೋಜನೆ ಎಂಬ ಆರೋಪ

2023

- ಪರಿಶಿಷ್ಟರ ಮೀಸಲಾತಿ ಹೆಚ್ಚಳಕ್ಕೆ ಕೈಗೊಂಡಿರುವ ನಿರ್ಧಾರ
- ಪರಿಶಿಷ್ಟ ಜಾತಿಯ ಒಳ ಮೀಸಲಾತಿಗೆ ನಿರ್ಧಾರ
- ಒಕ್ಕಲಿಗರು, ಲಿಂಗಾಯತರ ಮೀಸಲಾತಿ ಪ್ರಮಾಣ ಹೆಚ್ಚಳ
- 'ಡಬಲ್ ಎಂಜಿನ್' ಸರ್ಕಾರಕ್ಕೆ ಬೆಂಬಲ ಯಾಚನೆ
- ರಸ್ತೆ, ರೈಲು ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿ
- ಕುಟುಂಬ ರಾಜಕಾರಣಕ್ಕೆ ಇತಿಶ್ರೀ ಹಾಡುವುದು
- ಮುಸ್ಲಿಮರ ಮೀಸಲಾತಿ ರದ್ದುಪಡಿಸಿ, ಇಡಬ್ಲ್ಯುಎಸ್‌ಗೆ ಸೇರ್ಪಡೆ
- ಹಿಜಾಬ್ ನಿಷೇಧ, ಆಝಾನ್ ನಿರ್ಬಂಧ, ಪಠ್ಯಪುಸ್ತಕ ಪರಿಷ್ಕರಣೆ

ಕಾಂಗ್ರೆಸ್ 2018ರಲ್ಲಿ

- ಅನ್ನಭಾಗ್ಯ ಸೇರಿದಂತೆ ಬಡವರಿಗಾಗಿ ಹಲವು ಯೋಜನೆಗಳ ಅನುಷ್ಠಾನ
- ಇಂದಿರಾ ಕ್ಯಾಂಟೀನ್ ಮೂಲಕ ರಿಯಾಯ್ತಿ ದರದಲ್ಲಿ ಆಹಾರ ವಿತರಣೆ
- ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಪರಿಶಿಷ್ಟ ಪಂಗಡಗಳ ಉಪ ಯೋಜನೆ ಕಾಯ್ದೆ ಅನುಷ್ಠಾನ
- ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಾತಿ
- ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡುವಂತೆ ಕೇಂದ್ರಕ್ಕೆ ಶಿಫಾರಸು
- ಜೆಡಿಎಸ್ ಬಿಜೆಪಿಯ 'ಬಿ' ಟೀಂ ಎಂಬ ಆರೋಪ
- ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡಬೇಕೆಂದು ಶಿಫಾರಸು

2023

- ಬಿಜೆಪಿ ಸರ್ಕಾರದ ವಿರುದ್ಧದ ಶೇಕಡ 40ರಷ್ಟು ಲಂಚದ ಆರೋಪ
- ಯಡಿಯೂರಪ್ಪ ಅವರನ್ನು ಬಿಜೆಪಿ ಮೂಲೆಗೆ ತಳ್ಳಿದೆ ಎಂಬ ಪ್ರತಿಪಾದನೆ
- ಗುತ್ತಿಗೆದಾರರ ಆತ್ಮಹತ್ಯೆ ಪ್ರಕರಣಗಳು
- ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣ
- ಪಿಎಸ್‌ಐ ನೇಮಕಾತಿ ಅಕ್ರಮ, ಸ್ಯಾಂಟ್ರೋ ರವಿ ಪ್ರಕರಣ
- ಬೆಲೆ ಏರಿಕೆ ನಿಯಂತ್ರಣದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ವಿಫಲ ಎಂಬ ಆರೋಪ
- ನಿರುದ್ಯೋಗ ನಿವಾರಣೆ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡದ ಆರೋಪ
- ರಾಜ್ಯದ ಕೆಎಂಎಫ್ ಅನ್ನು ಗುಜರಾತ್‌ನ ಅಮೂಲ್ ಜತೆ ವಿಲೀನಕ್ಕೆ ಯತ್ನಿಸುತ್ತಿರುವ ಆರೋಪ
- ಹಿಂದಿ ಹೇರಿಕೆ ಯತ್ನ
- ಮುಸ್ಲಿಮರ ಮೀಸಲಾತಿಯನ್ನು ರದ್ದುಪಡಿಸಿ, ಅನ್ಯಾಯ ಮಾಡಲಾಗಿದೆ ಎಂಬ ಆರೋಪ

ಜೆಡಿಎಸ್ 2018

- ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು ಸಿದ್ದರಾಮಯ್ಯ ಸರ್ಕಾರ 'ರೀಡೂ' ಹೆಸರಿನಲ್ಲಿ ಡಿನೋಟಿಫೈ ಮಾಡಿದ ಆರೋಪ
- ರಾಜ್ಯ ಸರ್ಕಾರದ ವಿರುದ್ಧದ ಭ್ರಷ್ಟಾಚಾರದ ಆರೋಪ
- ಸಿದ್ದರಾಮಯ್ಯ ಅವರಿಗೆ ಹ್ಯೂಬ್ಲೋ ವಾಚು ಉಡುಗೊರೆ ನೀಡಿದ ಪ್ರಕರಣ
- ಅಧಿಕಾರಕ್ಕೆ ಬಂದ ಕೂಡಲೇ ಕೃಷಿ ಸಾಲ ಮನ್ನಾ ಭರವಸೆ
- ರಾಷ್ಟ್ರೀಯ ಪಕ್ಷಗಳಿಂದ ಕರ್ನಾಟಕದ ನಿರ್ಲಕ್ಷ್ಯ ಆರೋಪ

2023

- ರಾಷ್ಟ್ರೀಯ ಪಕ್ಷಗಳು ಕರ್ನಾಟಕವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿರುವ ಆರೋಪ
- ಕರ್ನಾಟಕದ ಮೇಲೆ ಹಿಂದಿ ಹೇರಲು ಬಿಜೆಪಿ ಸರ್ಕಾರ ಪ್ರಯತ್ನಿಸುತ್ತಿರುವ ಆರೋಪ
- ರೈತರ ಜೀವನ ಸುಧಾರಣೆಗೆ ಸಮಗ್ರ ಯೋಜನೆ ಜಾರಿಗೊಳಿಸುವ ಭರವಸೆ
- ಕೆಎಂಎಫ್ ಅನ್ನು ಅಮೂಲ್ ಜತೆ ವಿಲೀನಕ್ಕೆ ಯತ್ನಿಸುತ್ತಿರುವ ಆರೋಪ
- ಉಚಿತ ಕೊಡುಗೆಗಳ ಭರವಸೆ

ನಗದು, ಸ್ವತ್ತುಗಳ ವಶದಲ್ಲಿ ಐದು ಪಟ್ಟು ಹೆಚ್ಚಳ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನಿಯೋಜಿಸಿರುವ ಜಾಗೃತ ದಳಗಳು ಹಾಗೂ ಸ್ಥಾಪಿಸಿರುವ ತನಿಖಾ ಠಾಣೆಗಳಲ್ಲಿ ಈ ಬಾರಿ ದಾಖಲೆಯ ಪ್ರಮಾಣದ ನಗದು, ಸ್ವತ್ತುಗಳನ್ನು ವಶಕ್ಕೆ ಪಡೆಯಲಾಗಿದೆ. 2018ರ ಚುನಾವಣೆಗೆ ಹೋಲಿಸಿದರೆ 5.4 ಪಟ್ಟಿನಷ್ಟು ಹೆಚ್ಚಿನ ಮೌಲ್ಯದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.


2018ರ ವಿಧಾನಸಭಾ ಚುನಾವಣೆಗೆ ಮಾರ್ಚ್ 27ರಂದು ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಅಂದಿನಿಂದ ಏಪ್ರಿಲ್ 9ರವರೆಗೆ ₹ 20.12 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಾರಿ ಮಾರ್ಚ್ 29ರಂದು ವೇಳಾಪಟ್ಟಿ ಪ್ರಕಟಿಸಿದ್ದು, ಏಪ್ರಿಲ್ 9ರವರೆಗೆ ₹ 108.78 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

ನಗದು, ಮದ್ಯ, ವಿವಿಧ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ 965 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

2018ರ ಚುನಾವಣೆ (ಮಾರ್ಚ್ 27ರಿಂದ ಏಪ್ರಿಲ್ 9) ₹ ಗಳಲ್ಲಿ	
ನಗದು	4.83 ಕೋಟಿ
ಉಚಿತ ಕೊಡುಗೆಗಳು	12.23 ಕೋಟಿ
ಮದ್ಯ	55 ಲಕ್ಷ
ಮಾದಕವಸ್ತು	20 ಲಕ್ಷ
ಚಿನ್ನ	2.20 ಕೋಟಿ
ಬೆಳ್ಳಿ	11 ಲಕ್ಷ
ಒಟ್ಟು	20.12 ಕೋಟಿ

2023ರ ಚುನಾವಣೆ (ಮಾರ್ಚ್ 29ರಿಂದ ಏಪ್ರಿಲ್ 9ರವರೆಗೆ) ₹ ಗಳಲ್ಲಿ	
ನಗದು	37.24 ಕೋಟಿ
ಉಚಿತ ಕೊಡುಗೆಗಳು	15.80 ಕೋಟಿ
ಮದ್ಯ	26.68 ಕೋಟಿ
ಮಾದಕವಸ್ತು	11.54 ಕೋಟಿ
ಚಿನ್ನ	14.96 ಕೋಟಿ
ಬೆಳ್ಳಿ	2.56 ಕೋಟಿ
ಒಟ್ಟು	108.78 ಕೋಟಿ

ಸೆಲೆಬ್ರಿಟಿ ಮಾತು



ಪ್ರಜ್ಞಾವಂತಿಕೆ ಪ್ರದರ್ಶಿಸುವ ಸಮಯ

ಶಿವಾನಂದ ಹೆಗಡೆ ಕೆರೆಮನೆ
ಯಕ್ಷಗಾನ ಕಲಾವಿದ

ಚುನಾವಣೆ ಪ್ರತಿಯೊಬ್ಬ ಪ್ರಜೆ ತನ್ನ ಪ್ರಜ್ಞಾವಂತಿಕೆ ಪ್ರದರ್ಶಿಸುವ ಸಮಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಿಕ್ಕಿರುವ ಅತ್ಯಮೂಲ್ಯ ಅವಕಾಶ ಮತದಾನ. ಈ ಅವಕಾಶವನ್ನು ಆಲಸ್ಯದಿಂದ ಕಳೆದುಕೊಳ್ಳಬಾರದು. ಮತದಾನದ ದಿನ ವಿವೇಚನೆಯೊಂದಿಗೆ ಹಾಗೂ ಯಾವುದೇ ಆಮಿಷಕ್ಕೆ ಒಳಗಾಗದೆ ಮತದಾನ ಮಾಡಬೇಕು. ಸುಂದರ, ಸದೃಢ ಹಾಗೂ ಶಿಸ್ತಿನ ಸಮಾಜ ಕಟ್ಟಲು ಪಾಲುದಾರರಾಗಬೇಕು.

ಚಿತ್ತಾಪುರ: ರೌಡಿಶೀಟರ್ ಮಣಿಕಂಠಗೆ ಬಿಜೆಪಿ ಟಿಕೆಟ್



ಕಲಬುರಗಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರ ಎದುರು ಬಿಜೆಪಿಯು ರೌಡಿ ಶೀಟರ್, ಈಚೆಗೆ ಯಾದಗಿರಿ ಜಿಲ್ಲಾ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ಮಣಿಕಂಠ ರಾಠೋಡ ಅವರನ್ನು ಕಣಕ್ಕಿಳಿಸಿದೆ.

ಅವರನ್ನು ಕಲಬುರಗಿ ಪೊಲೀಸ್ ಕಮಿಷನರ್ ಆಗಿದ್ದ ಡಾ.ವೈ.ಎಸ್. ರವಿಕುಮಾರ್ ಅವರು ಗಡಿಪಾರು ಮಾಡಿದ್ದರು. ಇದಕ್ಕೆ ಮಣಿಕಂಠ, ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು.

ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಣಿಕಂಠ ವಿರುದ್ಧ ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಚಿತ್ತಾಪುರ ಕ್ಷೇತ್ರದಲ್ಲಿ ವಿಧಾನಪರಿಷತ್ ಸದಸ್ಯ ಸುನೀಲ್ ವಲ್ಯಾಪುರೆ, ಮುಖಂಡರಾದ ಅರವಿಂದ ಚವ್ಹಾಣ, ಮಾಜಿ ಶಾಸಕ ದಿ. ವಾಲ್ಮೀಕಿ ನಾಯಕ್ ಪುತ್ರ ವಿಠ್ಠಲ ನಾಯಕ್ ಪ್ರಬಲ ಆಕಾಂಕ್ಷಿಗಳಾಗಿದ್ದರು.

'ಹಾಸನ; ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ಗೆಲುವು ಕಷ್ಟ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಾಸನ ಕ್ಷೇತ್ರದಲ್ಲಿ ನಮ್ಮ ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ಗೆಲುವು ಕಷ್ಟ. ಇಲ್ಲಿ ಕುಟುಂಬದ ಪ್ರತಿಷ್ಠೆಗಿಂತ ಗೆಲುವು ಮುಖ್ಯ. ಅದಕ್ಕಾಗಿಯೇ, ಜನಾಭಿಪ್ರಾಯ ಆಧರಿಸಿ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಲು ನಾನು ತೀರ್ಮಾನಿಸಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಸಿದ್ಧಾರೂಢ ಮಠದ ಬಳಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮ ಕುಟುಂಬದ ಮೇಲೆ ಸವಾಲು ಹಾಕಿದ ವ್ಯಕ್ತಿಗೆ ಉತ್ತರ ಕೊಡಲು ಒಂದೂವರೆ ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಸಾಮಾನ್ಯ ಕಾರ್ಯಕರ್ತನನ್ನು ನಿಲ್ಲಿಸುವ ಬಗ್ಗೆ ಆಗಲೇ ಸುಳಿವು ನೀಡಿದ್ದೆ. ಈಗಲೂ ಅದಕ್ಕೆ ಬದ್ಧ. ಒಂದು ವೇಳೆ ಕುಟುಂಬಕ್ಕೆ ಟಿಕೆಟ್ ಕೊಟ್ಟರೆ, ಮತ್ತೆ ಕುಟುಂಬದವರಿಗೆ ಮಣೆ ಹಾಕಿದರು ಎಂಬುದಾಗಿ ಮಾಧ್ಯಮದವರು ಹೇಳುತ್ತಾರೆ. ನಾನ್ಯಾಕೆ ನಿಮಗೆ ಆಹಾರವಾಗಲಿ' ಎಂದರು.



ಚುನಾವಣಾ ಪ್ರಚಾರಕ್ಕಾಗಿ ಮಂಗಳವಾರ ಹುಬ್ಬಳ್ಳಿಗೆ ಬಂದಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ. ಕುಮಾರಸ್ವಾಮಿ ಅವರು, ಇಂಡಿ ಪಂಪ್ ವೃತ್ತದಲ್ಲಿರುವ ಹಜರತ್ ಸಯ್ಯದ್ ಫತೇಶಾವಲಿ ದರ್ಗಾಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು – ಪ್ರಜಾವಾಣಿ ಚಿತ್ರ

'ಹಾಸನದಲ್ಲಿ ಸದೃಢ ಕಾರ್ಯಕರ್ತರು ಇದ್ದಾರೆ. ಅವರ ಅಭಿಪ್ರಾಯಕ್ಕೆ ಬೆಲೆ ಕೊಟ್ಟರೆ ಗೆಲುವು ಸರಾಗ. ಇಲ್ಲಿ ನನ್ನ ಮತ್ತು ರೇವಣ್ಣ ಕುಟುಂಬದ ಪ್ರತಿಷ್ಠೆ ಮುಖ್ಯವಲ್ಲ. ಅದಕ್ಕಿಂತ, ಪಕ್ಷದ ಗೆಲುವು ಮುಖ್ಯ. ಅಲ್ಲಿನ ವಾಸ್ತವ ಮತ್ತು ಜನಾಭಿಪ್ರಾಯ ಗಮನಿಸಿ ಹೇಳುತ್ತಿರುವೆ. ಗೆಲುವಿಗಿಂತ ಸ್ವಾರ್ಥವೇ ಮುಖ್ಯವಾದರೆ ಏನೂ ಮಾಡಲಾಗದು. ರೇವಣ್ಣ ಅವರು ಹೊಳೆನರಸೀಪುರ ಮತ್ತು ಹಾಸನದಲ್ಲಿ ಸ್ಪರ್ಧಿಸುವ ಬಗ್ಗೆ ಚರ್ಚೆ ಆಗಿಲ್ಲ' ಎಂದು ತಿಳಿಸಿದರು.

'ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಅದು ಈ ಮಣ್ಣಿನ ಗುಣ. ಕುಟುಂಬದ ಆಪ್ತರಂತೆ ಇದ್ದು ಶಕುನಿ ಕೆಲಸ ಮಾಡುತ್ತಿರುವವರು ಯಾರೆಂದು ಗೊತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಮೋದಿ ಕಾಡಿನ ಬದಲು ಬಡವರತ್ತ ಹೋಗಬೇಕಿತ್ತು'

ಹುಬ್ಬಳ್ಳಿ: 'ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ಹುಲಿ ಸಂರಕ್ಷಿತ ಅರಣ್ಯದಲ್ಲಿ ಕ್ಯಾಮೆರಾ ಹಿಡಿದು ಓಡಾಡುವ ಬದಲು, ಬಡ ಜನರು ವಾಸಿಸುವ ಕಡೆಗೆ ಹೋಗಬೇಕಿತ್ತು. ಅವರ ಕಷ್ಟ ಆಲಿಸಬೇಕಿತ್ತು' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಗಣೇಶಪೇಟೆಯಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಚಾರ ಸಮಾವೇಶದಲ್ಲಿ ಮಾತನಾಡಿದರು.

ಎಐಎಂಐಎಂ ಜೊತೆ ಚರ್ಚೆ: 'ಚುನಾವಣೆಯಲ್ಲಿ ಎಐಎಂಐಎಂ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಕುರಿತು ಚರ್ಚೆ ನಡೆಯುತ್ತಿದೆ. ಅವರು ಮೂರ್ನಾಲ್ಕು ಕ್ಷೇತ್ರ ಬಿಟ್ಟು ಕೊಡಿ ಎನ್ನುತ್ತಿದ್ದಾರೆ. ಸದ್ಯದಲ್ಲೇ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.




ನಾಟಕ ಮೂಲಕ ಜಾಗೃತಿ

ಬೆಂಗಳೂರಿನ ಗೆದ್ದಲಹಳ್ಳಿಯಲ್ಲಿ ಮಂಗಳವಾರ ಬಿಬಿಎಂಪಿ ಆಯೋಜಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ 'ಗೆಜ್ಜೆ ಹೆಜ್ಜೆ' ತಂಡದ ಕಲಾವಿದರು ಬೀದಿ ನಾಟಕದ ಮೂಲಕ ಮತದಾನ ಮಾಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಮಾತಿನೇಟು



ಸಮಯ ನೋಡಿ ದಲಿತ ಸಿ.ಎಂ ಅಸ್ತ್ರವನ್ನು ಕಾಂಗ್ರೆಸ್ ನವರು ಪ್ರಯೋಗಿಸುತ್ತಿದ್ದಾರೆ. 2018ರಲ್ಲಿ ಇದೇ ಕಾಂಗ್ರೆಸ್ ನಾಯಕರು ಹಾಗೂ ದೇವೇಗೌಡರ ಜೊತೆ ಸಭೆ ನಡೆದಿತ್ತು. ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಮುಖ್ಯಮಂತ್ರಿ ಮಾಡಲು ದೇವೇಗೌಡರು ಹೇಳಿದಾಗ, ಅವರ ಮಾತನ್ನೂ ಯಾರೂ ಕೇಳಲಿಲ್ಲ. ದಲಿತರನ್ನು ಮುಖ್ಯಮಂತ್ರಿ ಮಾಡುವ ಅವಕಾಶ ಕೈಯಲ್ಲಿದ್ದಾಗ ಏನೂ ಮಾಡದವರು, ಈಗ ಮಾಡುತ್ತಾರೆಯೇ? ಇದೆಲ್ಲ ಸಮಯಸಾಧಕ ರಾಜಕಾರಣವಷ್ಟೆ.

ಎಚ್.ಡಿ. ಕುಮಾರಸ್ವಾಮಿ,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಗಾಳಿ ಮಾತು

ಸುಧಾಕರ್ ಗೂಢಚಾರಿಕೆ



ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ವಿರೋಧ ಪಕ್ಷದವರು, ಮಾಧ್ಯಮದವರ ಚಲನವಲನಗಳ ಮೇಲೆ ಸಚಿವ ಡಾ.ಕೆ.ಸುಧಾಕರ್ ಕಡೆಯ 200ಕ್ಕೂ ಹೆಚ್ಚು ಮಂದಿ ಗೂಢಚಾರಿಕೆ ನಡೆಸಿದ್ದಾರೆ ಎನ್ನುವ ಅಂತೆ ಕಂತೆ ಜೋರಾಗಿಯೇ ಸದ್ದು ಮಾಡುತ್ತಿವೆ.

ಎದುರಾಳಿ ಅಭ್ಯರ್ಥಿ ಯಾವ ಗ್ರಾಮಗಳಲ್ಲಿ ಯಾರ ಮನೆಗೆ ಭೇಟಿ ನೀಡಿದ್ದಾರೆ? ಯಾವ ಮುಖಂಡರು ಯಾರ ಜತೆ ನಿಕಟವಾಗಿದ್ದಾರೆ? ಎದುರಾಳಿ ಪಕ್ಷಗಳ ಮುಖಂಡರ ಚಲನವಲನಗಳೇನು? ಯಾವ ಮಾಧ್ಯಮಗಳಲ್ಲಿ ವರದಿ ಹೇಗೆ ಬರುತ್ತಿದೆ? ಪತ್ರಕರ್ತರು ಯಾರನ್ನು ಭೇಟಿ ಮಾಡುತ್ತಾರೆ? ಅವರ ಹಿನ್ನಲೆ ಏನು? ಯಾವ ರಾಜಕೀಯ ಮುಖಂಡರ ಮೇಲೆ ಪ್ರಕರಣ ಇವೆ ಮುಂತಾದ ಗೂಢಚಾರಿಕೆ ಜೋರಾಗಿದೆಯಂತೆ.

ಈಗಾಗಲೇ ಸಚಿವರು ಖಾಸಗಿ ಸಮೀಕ್ಷೆ ಸಹ ನಡೆಸಿದ್ದಾರಂತೆ. ಸಮೀಕ್ಷೆಯ ಪ್ರಕಾರ ಅವರು ಗೆದ್ದಾಗಿದೆ. ಲೀಡ್ ಪ್ರಮಾಣ ಲೆಕ್ಕಾಚಾರ ಹಾಕುತ್ತಿದ್ದಾರಂತೆ. ಸಚಿವರ 'ಆಪ್ತ' ವಲಯದ ಮೇಲೆಯೇ ಗೂಢಚಾರಿಕೆ ನಡೆಯುತ್ತಿದೆ ಎನ್ನುವ ಮಾತುಗಳಿವೆ. ಜತೆಯಲ್ಲಿದ್ದು 'ಕೈ' ಕೊಡುವ ಅನುಮಾನದ ಮೇಲೆ 'ಆಪ್ತರ' ಮೇಲೆಯೇ ಗೂಢಚಾರಿಕೆ ನಡೆಸುತ್ತಿದ್ದಾರೆ. ಖಾಸಗಿ ಸಂಸ್ಥೆಗಳಿಂದ ಈ ಸಮೀಕ್ಷೆ, ಗೂಢಚಾರಿಕೆ ನಡೆದಿದೆ ಎನ್ನಲಾಗಿದೆ.

'ಬಹಳಷ್ಟು ಮತದಾರರು ಬಹಿರಂಗವಾಗಿ ನಮ್ಮ ಜತೆ ಗುರುತಿಸಿಕೊಳ್ಳಲು ಹೆದರುತ್ತಿದ್ದಾರೆ. ಬಹಿರಂಗವಾಗಿ ಬಂದರೆ ನಮಗೆ ತೊಂದರೆ ಮಾಡುತ್ತಾರೆ ಎನ್ನುತ್ತಿದ್ದಾರೆ' ಎಂದು ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರು ದೂರಿದ್ದರು. 'ನಮ್ಮ ಸುತ್ತಲೂ ಅವರ ಜನ (ಸುಧಾಕರ್ ಕಡೆಯವರು) ಇರ್ತಾರೆ' ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು ನುಡಿಯುತ್ತಿದ್ದಾರೆ.

ಕ್ಷೇತ್ರದ ಕೂಗು

- **ಕ್ಷೇತ್ರ: ಕಡೂರು**
- **ಶಾಸಕ: ಬೆಳ್ಳಿ ಪ್ರಕಾಶ್** (ಬಿಜೆಪಿ)

ಕಡೂರು ಭಾಗದಲ್ಲಿ ಗಾರ್ಮೆಂಟ್ಸ್ ಉದ್ಯಮ ಅಥವಾ ಕೈಗಾರಿಕೆ ಸ್ಥಾಪಿಸಿ ಉದ್ಯೋಗ ಸೃಜನೆಗೆ ಒತ್ತು ನೀಡಬೇಕು ಎಂಬ ಬೇಡಿಕೆ ಸಾಕಾರವಾಗಿಲ್ಲ. ತರಕಾರಿ ಶೇಖರಣೆ ನಿಟ್ಟನಲ್ಲಿ ಸರ್ಕಾರಿ ಶಿಥಲೀಕರಣ ಘಟಕ ನಿರ್ಮಾಣ ಬೇಡಿಕೆ ಈಡೇರಿಲ್ಲ. ಇದರಿಂದ ರೈತರು ನಷ್ಟ ಅನುಭವಿಸುವುದು ತಪ್ಪುತ್ತಿಲ್ಲ.



- **ಕ್ಷೇತ್ರ: ತರೀಕೆರೆ**
- **ಶಾಸಕ: ಡಿ.ಎಸ್.ಸುರೇಶ್** (ಬಿಜೆಪಿ)

ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿದ್ದ ಅಜ್ಜಂಪುರ ತಾಲ್ಲೂಕು ಕೇಂದ್ರವಾಗಿ ಘೋಷಿಸಿ ಆರು ವರ್ಷಗಳಾಗಿವೆ. ತಾಲ್ಲೂಕು ಕಚೇರಿಗೆ ಮಿನಿವಿಧಾನಸೌಧ ಕಟ್ಟಡ, ತಾಲ್ಲೂಕು ಆಸ್ಪತ್ರೆ ಮೊದಲಾದವುಗಳನ್ನು ನಿರ್ಮಾಣ ಬೇಡಿಕೆ ಈಡೇರಿಲ್ಲ. ಅಮೃತ್ ಮಹಲ್ ಕೇಂದ್ರ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕು ಎಂಬ ಕೂಗು ಅರಣ್ಯರೋದನವಾಗಿದೆ.



- **ಕ್ಷೇತ್ರ: ಮೂಡಿಗೆರೆ**
- **ಶಾಸಕ: ಎಂ.ಪಿ.ಕುಮಾರಸ್ವಾಮಿ** (ಬಿಜೆಪಿ)

ಕಾಳ್ಗಿಚ್ಚು ನಿಯಂತ್ರಣಕ್ಕೆ ಬೆಂಕಿ ತಡೆ ಪಡೆ ರಚನೆ ಬೇಡಿಕೆ ನನೆಗುದಿಗೆ ಬಿದ್ದಿದೆ. ಮಾನವ– ವನ್ಯಜೀವಿ ಸಂಘರ್ಷಕ್ಕೆ ವ್ಯವಸ್ಥಿತ ಪರಿಹಾರ ರೂಪಿಸಿಲ್ಲ. ಬಹಳಷ್ಟು ವಸತಿ, ನಿವೇಶನರಹಿತರ ಸೂರಿನ ಕನಸು ಸಾಕಾರವಾಗಿಲ್ಲ. ಅತಿವೃಷ್ಟಿಯಿಂದಾಗಿ ಬೀದಿಗೆ ಬಿದ್ದಿರುವ ಹಲವು ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಿಲ್ಲ.



- **ಕ್ಷೇತ್ರ: ಕಾಪು**
- **ಶಾಸಕರ ಹೆಸರು: ಲಾಲಾಜಿ ಆರ್.ಮೆಂಡನ್** (ಬಿಜೆಪಿ)

ಕಾಪು ತಾಲ್ಲೂಕಿನ ಯರ್ಮಾಳು, ಕೈಪುಂಜಾಲು, ಉಚ್ಚಿಲ, ಮೂಳೂರು, ಪಡುಬಿದ್ರಿ ಹಾಗೂ ಕಾಪು ಭಾಗಗಳಲ್ಲಿ ಪ್ರತಿ ಮಳೆಗಾಲದಲ್ಲಿ ಕಡಲ್ಕೊರೆತ ಸಂಭವಿಸಿ ಸ್ಥಳೀಯ ಮೀನುಗಾರರ ಮನೆಗಳಿಗೆ ನೀರು ನುಗ್ಗಿ ಅಪಾರ ಹಾನಿ ಸಂಭವಿಸುತ್ತಿದೆ. ಮೀನುಗಾರಿಕಾ ಸಂಪರ್ಕ ರಸ್ತೆಗಳು ಹಾಳಾಗಿ ಮೀನುಗಾರಿಕೆಗೆ ಅಡ್ಡಿಯಾಗುತ್ತಿದೆ. ಪಲಿಮಾರು ಶಾಂಭವಿ ನದಿಗೆ ಹಾಗೂ ಕಾಮಿನಿ ನದಿಗೆ ತಡೆಗೋಡೆ ನಿರ್ಮಾಣ ಮಾಡುವ ಮೂಲಕ ಉಪ್ಪುನೀರು ಕೃಷಿಭೂಮಿಗೆ ನುಗ್ಗುವುದನ್ನು ತಡೆಯಬೇಕಿದೆ.



- **ಕ್ಷೇತ್ರ: ಬೈಂದೂರು**
- **ಶಾಸಕ: ಸುಕುಮಾರ ಶೆಟ್ಟಿ** (ಬಿಜೆಪಿ)

ಬೈಂದೂರಿನಲ್ಲಿ ಪ್ರತಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದ್ದು, ಶಾಶ್ವತ ಪರಿಹಾರ ಸಿಕ್ಕಿಲ್ಲ. ಕೊಡೇರಿ ಕಿರು ಬಂದರನ್ನು ಮೇಲ್ದರ್ಜೆಗೇರಿಸಬೇಕು. ಪ್ರತಿ ಮಳೆಗಾದಲ್ಲಿ ಸೌಪರ್ಣಿಕ ನದಿ ಉಕ್ಕಿ ಬೈಂದೂರು ತಾಲ್ಲೂಕಿನಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುತ್ತದೆ. ನಾವುಂದ, ಸಾಲ್ಬುಡ, ಕುದ್ರುಗಳು ಮುಳುಗಡೆಯಾಗುತ್ತವೆ. ಮಳೆ ನೀರು ಗ್ರಾಮಗಳಿಗೆ ನುಗ್ಗದಂತೆ ಶಾಶ್ವತ ಪರಿಹಾರ ರೂಪಿಸಬೇಕು, ಕಾಲುಸಂಕಗಳ ಮೇಲೆ ಅವಲಂಬಿತ ಗ್ರಾಮಗಳಿಗೆ ಸೇತುವೆ ನಿರ್ಮಾಣ ಮಾಡಬೇಕು, ನಗರಕ್ಕೆ ಅಗತ್ಯ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂಬ ಕೂಗು ಹಾಗೇ ಇದೆ.




- **ಕ್ಷೇತ್ರ: ಕುಂದಾಪುರ**
- **ಶಾಸಕ: ಹಾಲಾಡಿ ಶ್ರೀನಿವಾಸ ಶೆಟ್ಟಿ** (ಬಿಜೆಪಿ)

ಕುಂದಾಪುರ ತಾಲ್ಲೂಕಿನಲ್ಲಿ 1979ರಲ್ಲಿ ಆರಂಭವಾದ ವಾರಾಹಿ ನೀರಾವರಿ ಯೋಜನೆ ನಾಲ್ಕು ದಶಕ ಕಳೆದರೂ ಪೂರ್ಣಗೊಂಡಿಲ್ಲ. ಯೋಜನೆ ಪೂರ್ಣಗೊಂಡರೆ ಸಾವಿರಾರು ಹೆಕ್ಟೇರ್ ಕೃಷಿ ಭೂಮಿಗೆ ನೀರು ಸಿಗಲಿದೆ. ಉಡುಪಿ ನಗರಕ್ಕೂ ಕುಡಿಯುವ ನೀರು ಲಭ್ಯವಾಗಲಿದೆ. ಕುಂದಾಪುರ ಪಟ್ಟಣಕ್ಕೆ ವ್ಯವಸ್ಥಿತ ಒಳಚರಂಡಿ ಅಗತ್ಯವಿದೆ. ಪ್ರವಾಸೋದ್ಯಮ ಕ್ಷೇತ್ರಗಳ ಅಭಿವೃದ್ಧಿಗೆ ಆದ್ಯತೆ ಸಿಗಬೇಕಿದೆ.




- **ಕ್ಷೇತ್ರ: ಕಾರ್ಕಳ**
- **ಶಾಸಕ: ವಿ.ಸುನಿಲ್ ಕುಮಾರ್** (ಬಿಜೆಪಿ)

ಕಾರ್ಕಳ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ಒತ್ತು ಸಿಗಬೇಕಿದೆ. ಪಟ್ಟಣದ ರಸ್ತೆಗಳು ತೀರಾ ಕಿರಿದಾಗಿದ್ದು ವಿಸ್ತರಣೆಯ ಅಗತ್ಯವಿದೆ. ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ನೂರಾರು ಬಾವಿಗಳು ಕಲುಷಿತಗೊಂಡಿವೆ. ಪ್ರತಿ ಬೇಸಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ. ಕಾರ್ಕಳದ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಕೆಲಸ ಆಗಬೇಕಿದೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದಲ್ಲಿ ಭದ್ರತೆ ಎಂಬುದು ಇರುವುದಿಲ್ಲ, ಇರುವುದು ಏನಿದ್ದರೂ ಅವಕಾಶ ಮಾತ್ರ.

-ಮಾರ್ಕ್ ಟ್ವೆಯ್ನ್

ಪರಮಾಧಿಕಾರ ಕೊಟ್ಟುಕೊಂಡ ಸರ್ಕಾರ ಹೊಸ ಅಧಿಸೂಚನೆ ಹಿಂಪಡೆವುದು ಸೂಕ್ತ

ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿಸೂತ್ರಗಳ ಸಂಹಿತೆ) ನಿಯಮಗಳಿಗೆ ತಿದ್ದುಪಡಿ ತಂದು ಕೇಂದ್ರ ಸರ್ಕಾರವು ಕಳೆದ ವಾರ ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಈ ನಿಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಧ್ಯಮ ಸ್ವಾತಂತ್ರ್ಯದ ಪಾಲಿಗೆ ಬೆದರಿಕೆಯಂತೆ ಇವೆ. ಅಧಿಸೂಚನೆಯ ಪ್ರಕಾರ, ಸರ್ಕಾರವೇ ನೇಮಿಸಿದ ಸತ್ಯಶೋಧನಾ ತಂಡವು ಸರ್ಕಾರಕ್ಕೆ ಸಂಬಂಧಿಸಿದ ನಕಲಿ, ತಪ್ಪು ಅಥವಾ ತಪ್ಪುದಾರಿಗೆ ಎಳೆಯುವ ಆನ್‌ಲೈನ್ ವಸ್ತು-ವಿಷಯಗಳನ್ನು ಗುರುತಿಸಲು ಅವಕಾಶ ಇದೆ. ಸಾಮಾಜಿಕ ಜಾಲತಾಣ ಕಂಪನಿಗಳು ಅಥವಾ ಇಂಟರ್ನೆಟ್ ಸೇವೆ ಒದಗಿಸುವ ಕಂಪನಿಗಳು ಸರ್ಕಾರ ಸೂಚನೆ ನೀಡಿದ ನಂತರದಲ್ಲಿ ಇಂತಹ ವಸ್ತು-ವಿಷಯಗಳನ್ನು ಅಳಿಸಿಹಾಕಬೇಕು. ಇಲ್ಲದಿದ್ದರೆ ಈ ಕಂಪನಿಗಳಿಗೆ, ಕಾನೂನಿನ ಅಡಿ ಸಿಗುವ ಕೆಲವು ರಕ್ಷಣೆಗಳು ಇಲ್ಲವಾಗುತ್ತವೆ. ವಾಸ್ತವದಲ್ಲಿ ಈ ರಕ್ಷಣೆಗಳು ಇಂತಹ ಕಂಪನಿಗಳಿಗೆ, ಮೂರನೆಯ ವ್ಯಕ್ತಿಯು ಈ ಕಂಪನಿಗಳ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ವಸ್ತು-ವಿಷಯಗಳ ವಿಚಾರದಲ್ಲಿ ಹೊಣೆಗಾರಿಕೆಯಿಂದ ಮುಕ್ತಿ ನೀಡುವಂಥವು. ಸರ್ಕಾರ ಈಗ ಇರಿಸಿರುವ ಹೆಜ್ಜೆಯು ತಪ್ಪು. ಇದು ಒಪ್ಪಿತ ಸಹಜ ನ್ಯಾಯಕ್ಕೆ ವಿರುದ್ಧ. ಈಗ ಜಾರಿಯಲ್ಲಿ ಇರುವ ನಿಯಮಗಳು, ನ್ಯಾಯಾಲಯಗಳು ಹಿಂದೆ ನೀಡಿರುವ ತೀರ್ಪುಗಳಿಗೆ ವಿರುದ್ಧವಾಗಿವೆ. ಸಾಂವಿಧಾನಿಕ ಹಕ್ಕುಗಳನ್ನು ಇವು ಉಲ್ಲಂಘಿಸುತ್ತವೆ. ತಿದ್ದುಪಡಿ ಮಾಡಲಾಗಿರುವ ನಿಯಮಗಳು ಮಾಹಿತಿ ತಂತ್ರಜ್ಞಾನ ಕಾಯ್ದೆಯಲ್ಲಿ (2000) ವಿವರಿಸಲಾಗಿರುವ ಪ್ರಕ್ರಿಯೆಗಳನ್ನು ಉಲ್ಲಂಘಿಸುವಂತಿವೆ. ಆನ್‌ಲೈನ್ ಮೂಲಕ ಪ್ರಕಟಿಸಿದ ವಸ್ತು-ವಿಷಯಗಳನ್ನು ಅಳಿಸಿಹಾಕುವ ವಿಚಾರದಲ್ಲಿ ಶ್ರೇಯಾ ಸಿಂಘಾಲ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ 2015ರಲ್ಲಿ ನೀಡಿರುವ ಮಾರ್ಗಸೂಚಿಗಳಿಗೆ ಇವು ಅನುಗುಣವಾಗಿಲ್ಲ.



ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಧಿಸೂಚನೆಯಲ್ಲಿ ಪ್ರಕಟಿಸಿರುವ ನಿಯಮಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಧ್ಯಮ ಸ್ವಾತಂತ್ರ್ಯದ ಪಾಲಿಗೆ ಬೆದರಿಕೆಯಂತೆ ಇವೆ

ಈ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಯಾವುದು ತಪ್ಪು ಹಾಗೂ ಯಾವುದು ಸರಿ ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ತನಗೆ ತಾನೇ ಯಾವುದೇ ಸಮರ್ಥನೆ ಇಲ್ಲದೆ ಕೊಟ್ಟುಕೊಂಡಿದೆ. ಇಂತಹ ವಸ್ತು-ವಿಷಯಗಳ ಅತ್ಯುನ್ನತ ಸಂಪಾದಕನ ಕೆಲಸವನ್ನು ಸರ್ಕಾರವು ವಹಿಸಿಕೊಂಡಿದೆ. ತನಗೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಸರ್ಕಾರವು ತಾನೇ ತೀರ್ಮಾನಿಸುತ್ತದೆ, ತಾನೇ ಶಿಕ್ಷೆ ವಿಧಿಸುತ್ತದೆ. ಸಂಬಂಧಪಟ್ಟವರಿಗೆ ಇದನ್ನು ನ್ಯಾಯಾಲಯ ಸೇರಿದಂತೆ ಯಾವುದೇ ವೇದಿಕೆಗಳಲ್ಲಿ ಪ್ರಶ್ನಿಸುವ ಅವಕಾಶ ಇರುವುದಿಲ್ಲ. ಇದು ನ್ಯಾಯಸಮ್ಮತ ನಡೆಯಲ್ಲ. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಕ್ಷೇತ್ರವೊಂದರಲ್ಲಿ ತನಗೆ ಪರಮಾಧಿಕಾರವನ್ನು ಸರ್ಕಾರವು ಕೊಟ್ಟುಕೊಂಡಿದೆ. ಆನ್‌ಲೈನ್ ಲೋಕದಲ್ಲಿ ಮಧ್ಯವರ್ತಿ ಕಂಪನಿಗಳಾದ ಇಂಟರ್ನೆಟ್ ಸೇವಾದಾತರು, ಶೋಧ ಸೇವೆ ಒದಗಿಸುವ ಕಂಪನಿಗಳು, ಸಾಮಾಜಿಕ ಜಾಲತಾಣ ಕಂಪನಿಗಳು ಮಾಹಿತಿಯನ್ನು ಸರಿಯಾಗಿ ಪರಾಮರ್ಶಿಸುವ ಜವಾಬ್ದಾರಿ ಹೊಂದಿವೆ ಎಂದು ಸರ್ಕಾರ ಹೇಳಿದೆ. ಇದು ಸರಿಯಾದ ಮಾತು. ಆದರೆ ನಕಲಿ ಸುದ್ದಿ ಯಾವುದು, ತಪ್ಪುದಾರಿಗೆ ಎಳೆಯುವ ಸುದ್ದಿ ಯಾವುದು ಎಂಬುದಕ್ಕೆ ಸ್ಪಷ್ಟವಾದ ವ್ಯಾಖ್ಯಾನ ಇಲ್ಲ. ಇವುಗಳಿಗೆ ಸ್ಪಷ್ಟವಾದ ವ್ಯಾಖ್ಯಾನ ಇಲ್ಲದಿರುವಾಗ ಹಾಗೂ ಯಾವುದು ನಕಲಿ, ಯಾವುದು ತಪ್ಪುದಾರಿಗೆ ಎಳೆಯುವಂಥದ್ದು ಎಂಬುದನ್ನು ತೀರ್ಮಾನಿಸಲು ವಿಸ್ತೃತವಾದ ಪ್ರಕ್ರಿಯೆಗಳು ಇಲ್ಲದಿರುವಾಗ, ಮೇಲ್ಮನವಿ ಸಲ್ಲಿಸಲು ಅವಕಾಶ ಇಲ್ಲದಿರುವಾಗ ಸರ್ಕಾರ ಕೈಗೊಳ್ಳುವ ತೀರ್ಮಾನಗಳಲ್ಲಿ ಪಾರದರ್ಶಕತೆ ಇರುವುದಿಲ್ಲ. ಸರ್ಕಾರ ಕೈಗೊಳ್ಳುವ ತೀರ್ಮಾನಗಳು ಮನಸ್ಸಿಗೆ ಬಂದಂತೆ ಕೈಗೊಳ್ಳುವ ತೀರ್ಮಾನಗಳಂತೆ ಆಗುತ್ತವೆ. ಇಂತಹ ಅಧಿಕಾರವು ದುರ್ಬಳಕೆ ಆಗುತ್ತದೆ ಎಂಬುದರಲ್ಲಿ ಅನುಮಾನ ಬೇಡ.

ಸರ್ಕಾರ ಇರಿಸಿರುವ ಹೆಜ್ಜೆಯು ಸೆನ್ಸಾರ್ ವಿಧಿಸುವುದಕ್ಕೆ ಸಮ ಎಂದು ಭಾರತೀಯ ಸಂಪಾದಕರ ಕೂಟ ಹೇಳಿದೆ. ಈ ವಿಚಾರವಾಗಿ ಸಮಾಲೋಚನೆಯೇ ನಡೆದಿಲ್ಲ ಎಂದು ಅದು ಹೇಳಿದೆ. ಕೆಲವು ವಾರಗಳ ಹಿಂದೆ ಒಂದಿಷ್ಟು ನಿಯಮಗಳನ್ನು ಪ್ರಕಟಿಸಿದ್ದ ಸರ್ಕಾರವು ಇದೇ ಬಗೆಯ ವ್ಯಾಪಕ ಅಧಿಕಾರವನ್ನು ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊಕ್ಕೆ ನೀಡಿತ್ತು (ಪಿಐಬಿ). ಈಗಿನ ನಿಯಮಗಳಲ್ಲಿ ಪಿಐಬಿಗೆ ಯಾವುದೇ ಪಾತ್ರವಿಲ್ಲದಿದ್ದರೂ, ಪರಿಣಾಮಗಳು ಮಾತ್ರ ಒಂದೇ. ಮಾಧ್ಯಮ ಸಂಸ್ಥೆಗಳು ಸುದ್ದಿಯನ್ನು ಬಿತ್ತರಿಸುವುದಕ್ಕೆ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತವೆ. ಹೀಗಾಗಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ವಸ್ತು-ವಿಷಯಗಳ ಮೇಲಿನ ನಿರ್ಬಂಧವು ಮಾಧ್ಯಮ ಸಂಸ್ಥೆಗಳ ಮೇಲೆಯೂ ಪರಿಣಾಮ ಉಂಟುಮಾಡುತ್ತದೆ. ಇದು ನಿರ್ಬಂಧ ಎಂಬ ಪದವನ್ನು ಬಳಸದೆಯೇ ನಿರ್ಬಂಧವನ್ನು ವಿಧಿಸಿದಂತಿದೆ. ಮಾಧ್ಯಮ ಸ್ವಾತಂತ್ರ್ಯದ ಮಹತ್ವವನ್ನು ಸಾರಿ ಹೇಳುವ ಹಲವು ತೀರ್ಪುಗಳನ್ನು ನ್ಯಾಯಾಲಯಗಳು ಈಚಿನ ದಿನಗಳಲ್ಲಿ ನೀಡಿವೆ. ಆದರೆ ಈ ನಿಯಮಾವಳಿಗಳು ಅವೆಲ್ಲವನ್ನೂ ಉಪೇಕ್ಷಿಸಿವೆ. ಅಧಿಕಾರದ ದುರ್ಬಳಕೆ ಆಗುವುದಿಲ್ಲ ಎಂದು ಸರ್ಕಾರ ನೀಡಿರುವ ಭರವಸೆಯನ್ನು ಒಪ್ಪಲು ಆಗುವುದಿಲ್ಲ. ಈ ಅಧಿಸೂಚನೆಯನ್ನು ಸರ್ಕಾರವು ಹಿಂಪಡೆಯಬೇಕು.

ಸೆಣಸಾಡಲು ಅಣಿಯಾಗಿರುವ ಜನನಾಯಕರಿಗೆ ಇರುವ ಅದಮ್ಯ ಆಕರ್ಷಣೆಯಾದರೂ ಏನು?

ಪ್ರಜಾಪ್ರಭುತ್ವಕ್ಕೆ ಬೇಕು 'ಸಾರ್ವಜನಿಕ ಪ್ರಜ್ಞೆ'



ವಿಶ್ಲೇಷಣೆ

ದು.ಸರಸ್ವತಿ

ಸರ್ವರ ಸ್ವಾತಂತ್ರ್ಯ, ಸಮಾನತೆ, ಬಂಧುತ್ವದ ಪ್ರಜಾಪ್ರಭುತ್ವ... ಇವು ಆಡುವಾಗ ಸುಲಭವಾಗಿ, ಅಳವಡಿಸಿಕೊಳ್ಳುವಾಗ ಭಾರವೆನಿಸಿ, ಜೀವಿಸಿದಂತೆಲ್ಲಾ ಹಗುರಾಗಿ ಬಿಡುಗಡೆಯತ್ತ ಸಾಗಿಸುವ ಜೀವಪರ ಮಂತ್ರಗಳು. ಸಂವಿಧಾನದ ಪೀಠಿಕೆಯಾದ 'ಭಾರತದ ಜನತೆಯಾದ ನಾವು...' ಎಂದು ಪ್ರತಿಸಲವೂ ಓದುವಾಗ, ಸಂವಿಧಾನವನ್ನು ಬಗಲಲ್ಲಿ ಹಿಡಿದು ತೋರುಬೆರಳಲ್ಲಿ ನೇರವಾಗಿ ಪ್ರಜಾಪ್ರಭುತ್ವವು ನಡೆಯಬೇಕಾದ ದಾರಿಯನ್ನು ತೋರುವ ಬಾಬಾಸಾಹೇಬರು ಕಣ್ಮುಂದೆ ನಿಂತು, ಆಡುವ ಮಾತಿನ ತೂಕದ ಬಗ್ಗೆ ಎಚ್ಚರಿಸುತ್ತಾರೆ.

ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವವಾಗಿರುವ 'ಸಾರ್ವಭೌಮ, ಪ್ರಜಾಸತ್ತಾತ್ಮಕ ಸಮಾಜವಾದಿ, ಧರ್ಮನಿರಪೇಕ್ಷ ಗಣರಾಜ್ಯ'ವಾದ ಭಾರತದಲ್ಲೀಗ ಚುನಾವಣೆಯ ಉರಿ ಗ್ಯಾಸ್ ಚೇಂಬರ್ ಆಗಿ ಪ್ರಜಾಪ್ರಭುತ್ವ ಉಸಿರುಗಟ್ಟುತ್ತಿದೆಯೇ ಎಂದುಕೊಳ್ಳುವಾಗ, ಬಾಬಾಸಾಹೇಬರು ಭರವಸೆಯ ಆಕ್ಸಿಜನ್ ಆಗಬಲ್ಲರೆಂಬುದಕ್ಕೆ ಕೆಳಗಿನ ಎರಡು ಉಲ್ಲೇಖಗಳು ಸಾಕ್ಷಿ.

ನಾಗಪುರದಲ್ಲಿ 1942ರಲ್ಲಿ 'ದಿ ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸಸ್ ಕಾನ್ಫರೆನ್ಸ್'ನಲ್ಲಿ ಮಾತನಾಡಿದ ಸಂದರ್ಭದಲ್ಲಿ ಬಾಬಾಸಾಹೇಬರು, ಭಾರತೀಯರು ಪ್ರಜಾಪ್ರಭುತ್ವದ ಪರವಾಗಿ ನಿಲ್ಲಬೇಕೆಂದು ಕರೆ ನೀಡುತ್ತಾ ಹೇಳಿದ ಮಾತುಗಳಿವು- 'ಈಗಿನ ನಾಜಿಗಳೊಂದಿಗಿನ ಯುದ್ಧವು ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರದ ನಡುವಿನ ಯುದ್ಧವಾಗಿದೆ. ಇದು ಜನಾಂಗೀಯ ದುರಹಂಕಾರವನ್ನು ಆಧರಿಸಿದ ಅತ್ಯಂತ ಬರ್ಬರ ಸ್ವರೂಪದ, ನಾಶ ಮಾಡಲೇಬೇಕಾಗಿರುವ ಹೇಯ ನಾಜಿ ಸರ್ವಾಧಿಕಾರವಾಗಿದೆ. ಈ ನಾಜಿವಾದವು ಗೆದ್ದರೆ, ಅದು ನಮ್ಮ ಭವಿಷ್ಯಕ್ಕೆ ಎಂತಹ ವಿಪತ್ತನ್ನು ತರಲಿದೆ ಎಂಬುದನ್ನು ನಾವು ಮರೆಯುತ್ತಿದ್ದೇವೆ. ಅದರ ಜನಾಂಗೀಯವಾದವು ಬಹಳ ಮುಖ್ಯವಾಗಿ ಭಾರತೀಯರಿಗೆ ಅಪಾಯಕಾರಿಯಾದುದು. ಇದು ಪರಿಸ್ಥಿತಿಯ ಸ್ಪಷ್ಟ ಚಿತ್ರಣವೆಂದಾದರೆ, ಆಗ ನಮ್ಮ ಮೇಲೆ ಬಹುದೊಡ್ಡ ಜವಾಬ್ದಾರಿ ಇದೆ. ಅದೆಂದರೆ, ಮನುಷ್ಯ ಸಂಬಂಧ ಕುರಿತ ಆಡಳಿತ ತತ್ವವಾಗಿ ಈ ಭೂಮಿಯಿಂದ ಪ್ರಜಾಪ್ರಭುತ್ವವು ಮರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ. ನಾವು ಅದನ್ನು ನಂಬುತ್ತೇವೆಂದರೆ ಅದಕ್ಕೆ ನಿಷ್ಠೆಯಿಂದಿರಬೇಕು ಮತ್ತು ನಾವು ಮಾಡುವ ಯಾವುದರಿಂದಲೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ತತ್ವಗಳ ಬುಡಮೇಲು ಮಾಡುವ ಪ್ರಜಾಪ್ರಭುತ್ವದ ಶತ್ರುಗಳಿಗೆ ಸಹಾಯವಾಗಕೂಡದು. ಪ್ರಜಾಪ್ರಭುತ್ವ ಉಳಿದರೆ ಅದರ ಫಲವನ್ನು ನಾವು ಖಂಡಿತ ಪಡೆಯುತ್ತೇವೆ. ಪ್ರಜಾಪ್ರಭುತ್ವ ಸತ್ತರೆ ಅದು ನಮ್ಮ ವಿನಾಶ. ಆ ಬಗ್ಗೆ ಅನುಮಾನವೇ ಬೇಡ'.


ಪೂನಾ ಡಿಸ್ಟ್ರಿಕ್ಟ್ ಲಾ ಲೈಬ್ರರಿ ಸದಸ್ಯರಿಗಾಗಿ 1952ರ ಡಿಸೆಂಬರ್ 22ರಂದು ಪ್ರಜಾಪ್ರಭುತ್ವ ಕುರಿತ ವಿಷಯ ಮಂಡನೆಯಲ್ಲಿ ಬಾಬಾಸಾಹೇಬರು 'ಪ್ರಜಾಪ್ರಭುತ್ವ ಎಂದರೆ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ರಕ್ತಪಾತವಿಲ್ಲದೆ ಕ್ರಾಂತಿಕಾರಕ ಬದಲಾವಣೆಗಳನ್ನು ತರುವ ಸರ್ಕಾರದ ಸ್ವರೂಪ ಮತ್ತು ವಿಧಾನವಾಗಿದೆ' ಎಂದು ವಿವರಿಸಿ, ಅದರ ಯಶಸ್ವಿ ನಿರ್ವಹಣೆಗೆ ಅವಶ್ಯಕ ಸ್ಥಿತಿಗಳ ಕುರಿತು ಹೇಳಿದರು. ಅವೆಂದರೆ:

ಎಲ್ಲಾ ಸವಲತ್ತುಗಳನ್ನು ಹೊಂದಿರುವ ವರ್ಗ ಮತ್ತು ಎಲ್ಲಾ ಹೊರೆಗಳನ್ನು ಹೊರುವ ವರ್ಗಗಳಂತಹ ಕಣ್ಣಿಗೆ ರಾಚುವ ಅಸಮಾನತೆಗಳು ಸಮಾಜದಲ್ಲಿ ಇರಲೇಕೂಡದು. ಪ್ರಜಾಪ್ರಭುತ್ವವು ವಂಶಪಾರಂಪರ್ಯ ಅಧಿಕಾರ ಮತ್ತು ನಿರಂಕುಶ ಅಧಿಕಾರಕ್ಕೆ ವಿರುದ್ಧವಾದುದು. ಪ್ರಜಾಪ್ರಭುತ್ವದಲ್ಲಿ ಯಾರಿಗೂ ಆಳಲು ಯಾವುದೇ ಶಾಶ್ವತ ಅಧಿಕಾರ ಇರುವುದಿಲ್ಲ. ವಿರೋಧ ಪಕ್ಷವನ್ನು ಹೊಂದಿರುವುದು ಬಹಳ ಮುಖ್ಯ. ಸರ್ಕಾರವು ತಾನು ಮಾಡುವ ಪ್ರತಿಯೊಂದು ಕಾರ್ಯವನ್ನೂ ತನ್ನ ಪಕ್ಷಕ್ಕೆ ಸೇರದ ಜನರಿಗೆ ಮನವರಿಕೆ ಮಾಡಬೇಕು. ಕಾನೂನಿನಡಿಯ ಸಮಾನತೆಯ ಜೊತೆಗೆ ಆಡಳಿತದಲ್ಲಿ ಜನರನ್ನು ಸಮಾನತೆಯಿಂದ ನಡೆಸಿಕೊಳ್ಳಬೇಕು.

ಸಂವಿಧಾನದಲ್ಲಿ ಅಡಕವಾಗಿರುವ ಕಾನೂನಾತ್ಮಕ ಸವಲತ್ತುಗಳು ಅಸ್ಥಿಪಂಜರವಷ್ಟೇ. ಅದರ ಮಾಂಸ ಇರುವುದು ಸಂವಿಧಾನಾತ್ಮಕ ನೈತಿಕತೆಯಲ್ಲಿ. ಅದನ್ನು ಎಲ್ಲರೂ ಅನುಸರಿಸಬೇಕು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದಬ್ಬಾಳಿಕೆ ಇರಕೂಡದು. ಪ್ರಜಾಪ್ರಭುತ್ವಕ್ಕೆ 'ಸಾರ್ವಜನಿಕ ಪ್ರಜ್ಞೆ' ಇರಬೇಕು. ಅಂದರೆ, ಯಾರಿಗೇ ಆಗಲಿ ತೊಂದರೆ ಉಂಟುಮಾಡುವ ಪ್ರತೀ ತಪ್ಪಿಗೂ ಕ್ಷೋಭೆಗೊಳ್ಳುವ ಪ್ರಜ್ಞೆ. ಆ ತಪ್ಪಿನಿಂದ ತಾನೇ ತೊಂದರೆಗೊಳಗಾಗದೇ ಹೋದರೂ ತೊಂದರೆಗೊಳಗಾದವರನ್ನು ಅದರಿಂದ ಬಿಡಿಸಲು ಕೈಜೋಡಿಸಲು ಸಿದ್ಧವಾಗುವಂತಹ ಪ್ರಜ್ಞೆ.

ಬಾಬಾಸಾಹೇಬರ ಈ ಮಾತುಗಳ ಹಿನ್ನೆಲೆಯಲ್ಲಿ ಪ್ರಸ್ತುತ ಚುನಾವಣೆಯ ಸಂದರ್ಭವನ್ನು ನೋಡುವಾಗ, ರಾಜಕೀಯ ನಾಯಕರ ಓಡಾಟ, ವಾದ, ವಾಗ್ಯುದ್ಧಗಳಿಗೆ, ಹೆಣೆಯಬೇಕಾದ ತಂತ್ರಗಳಿಗೆ ದಿನದ ಇಪ್ಪತ್ತನಾಲ್ಕು ಗಂಟೆಗಳು ಸಾಲದೇನೋ ಎನಿಸುತ್ತದೆ. ವಯಸ್ಸು, ಕಾಯಿಲೆ, ಸಮಯ ಲೆಕ್ಕಿಸದಿರುವ ಅವರ ಹುಮ್ಮಸ್ಸು, ಚೈತನ್ಯ ಕಂಡು ಯಾವ 'ಮತ್ತಿನ ಮೋಡಿ'ಗೆ ಒಳಗಾಗಿದ್ದಾರೆಂದು ಸೋಜಿಗವಾಗುತ್ತದೆ.

ಚುನಾವಣೆಗೆ ನಿಲ್ಲಲು ಟಿಕೆಟ್ ಸಿಗದೆ ಜನಸೇವೆ ಮಾಡಲು ಅವಕಾಶ ತಪ್ಪಿಹೋಯಿತೆಂದು ಗೋಳಾಡುವವರು, ಕ್ರೋಧಗೊಂಡವರು, ಸೇಡು ತೀರಿಸಿಕೊಳ್ಳಲೆಂದು ಮತ್ತೊಂದು ಕಡೆಗೆ ಜಿಗಿಯುವವರು,



ಲಾಟುಗಟ್ಟಲೆ ಸೀರೆ, ಬೆಳ್ಳಿ, ಕುಕ್ಕರ್, ನೋಟುಗಳು, ಬಾಡೂಟ, ತೀರ್ಥಕ್ಷೇತ್ರ ಪ್ರವಾಸದ ಆಯೋಜನೆಗಳು, ದೇವಾಲಯ, ಪ್ರತಿಮೆ, ಸೇತುವೆಗಳ ಅರ್ಪಣೆ, ಪೂಜೆಯ ಪ್ರಸಾದಗಳ ಕಸರತ್ತುಗಳು, ದೇವರ ಫೋಟೊ, ಆಣೆ, ಪ್ರಮಾಣ, ಭಾವುಕ ಮಾತುಗಳನ್ನು ನೋಡುವಾಗ, ಎಷ್ಟೆಲ್ಲ ಜನ ಹಿಂದೆಯೂ ಈಗಲೂ ಮುಗಿಬಿದ್ದು ಜನಸೇವೆಗೆ ಮುಂದಾಗಿದ್ದಾರೆ ಎನಿಸುತ್ತದೆ. ಆದರೂ ಹೊಟ್ಟೆಪಾಡಿಗೆ ರಟ್ಟೆ ನಂಬಿದವರು ಕಾಲನ್ನೇ ನೆಚ್ಚಿ ಕೊರೊನಾ ಸಂದರ್ಭದಲ್ಲಿ ನೂರಾರು ಮೈಲುಗಳು ಯಾಕೆ ನಡೆದರು? ಅಧಿಕೃತ ಗುರುತಿನ ಚೀಟಿ ಇಲ್ಲವೆಂದು ಹೊಟ್ಟೆ ಹಸಿವನ್ನೇ ತಳ್ಳಿಹಾಕಿದ ಸರ್ಕಾರದ ವಿರುದ್ಧ ಉಣ್ಣುವ ಅನ್ನಕ್ಕಾಗಿ ಹೈಕೋರ್ಟ್‌ಗೆ ಮೊರೆ ಹೋಗುವಂತಾಗಿದ್ದು ಏಕೆ? ಊರಲ್ಲೇ ಉಳಿದು ಉಣ್ಣಲು ಎರಡು ಹೊತ್ತಿನ ಅನ್ನ, ತೊಡಲು ಎರಡಾದರೂ ಸೀರೆ, ರವಿಕೆ, ಒಳಲಂಗಗಳನ್ನು ದೊರಕಿಸಿಕೊಡುವ ನೂರು ದಿನಗಳ ಉದ್ಯೋಗ ಖಾತರಿಯ ಅನುದಾನಕ್ಕೆ ಯಾಕೆ ಬಜೆಟ್‌ನಲ್ಲಿ ಕಡಿತ?

ತಮ್ಮ ಜೀವನದ ಅಮೂಲ್ಯ ಕಾಲದಲ್ಲಿ ದುಡಿದು ಆರ್ಥಿಕತೆಗೆ ಬೆನ್ನೆಲುಬಾದವರು ಯಾಕೆ ಪಿಂಚಣಿ ಬೇಕೆಂದು ಮುಪ್ಪಿನಲ್ಲೂ ಧರಣಿ ಕೂತರು? ನಾಲ್ಕು ಸಾವಿರ ರೂಪಾಯಿ ವೇತನ ಹೆಚ್ಚಾಗಬೇಕಾದ ಕಡೆ ಬರೀ ಐನೂರು ಏರಿಸಿದ ಸರ್ಕಾರದ ವಿರುದ್ಧ ಗಾರ್ಮೆಂಟ್ಸ್ ಮಹಿಳೆಯರು ಯಾಕೆ ಕೋಪದ ನಿಟ್ಟುಸಿರು ಬಿಡುತ್ತಿದ್ದಾರೆ? ಹೊಟ್ಟೆಗಾಗಿ ಅನ್ನ ಬೆಳೆವವರ ಭೂಮಿಯನ್ನು ಕಸಿಯುತ್ತಿರುವುದರ ವಿರುದ್ಧ ನಮ್ಮ ಭೂಮಿ ನಮಗಿರಲೆಂದು ರೈತರ‍್ಯಾಕೆ ಹೋರಾಡುತ್ತಿದ್ದಾರೆ? ಡಿಜಿಟಲ್ ಹೈಟೆಕ್ ಯುಗದಲ್ಲೂ ಮಲದ ಗುಂಡಿಗೆ ಬಿದ್ದು ಸಾಯುವ ಸಫಾಯಿ ಕರ್ಮಚಾರಿಗಳ್ಯಾಕೆ ಗಮನಕ್ಕೂ ಬೀಳುವುದಿಲ್ಲ? ಮಾಲೂರು ತಾಲ್ಲೂಕೊಂದರಲ್ಲೇ ಒಂದೇ ವಾರದಲ್ಲಿ ದಲಿತರ ಮೇಲೆ ಆರು ದೌರ್ಜನ್ಯ ಪ್ರಕರಣಗಳು ನಡೆದದ್ದು ಮನವನ್ನು ಯಾಕೆ ಕಲಕುವುದಿಲ್ಲ? ದನದ ಮಾಂಸವ ಸಾಗಿಸಲು ಪರವಾನಗಿ ಪಡೆದರೂ ಅಟ್ಟಾಡಿಸಿ ಕೊಂದ ನರಹಂತಕರಿಗೆ ಪರವಾನಗಿ ಹೇಗೆ ಸಿಗುತ್ತದೆ?

ತಪ್ಪಿದ್ದೆಲ್ಲಿ? ಎಡವಿದ್ದೆಲ್ಲಿ? ಮರುಳಾದೆವೆಲ್ಲಿ? ನಿರಾಕರಿಸಿದ್ದು, ಕಡೆಗಣಿಸಿದ್ದು, ಬಿಸಾಕಿದ್ದು, ಧಿಕ್ಕರಿಸಿದ್ದು ಏನನ್ನ ಎಂದು ಪ್ರಜಾಪ್ರಭುತ್ವದ ಕನ್ನಡಿಯಲ್ಲಿ ನೋಡಿಕೊಳ್ಳಬೇಕಿದೆ. ಅಬ್ಬರ ಹೆಚ್ಚಿದಷ್ಟೂ ಮೌನವಾಗಿ, ಉರಿ ಧಗಧಗಿಸಿದಷ್ಟೂ ನೀರ ತಂಪಾಗಿ ಹರಿಯಬೇಕು. ಶತ್ರುವ ಹೊರ ನಿಲ್ಲಿಸಿ ಹೊಡೆದುರುಳಿಸಲು ಹತಾರಗಳ ಸಿದ್ಧ ಮಾಡಿಕೊಳ್ಳುತ್ತಿರುವ ಹೊತ್ತಿನಲ್ಲೇ ಒಳ ಶತ್ರುವ ಮಣಿಸಲು ಹತಾರ ಹುಡುಕಬೇಕಾಗಿದೆ.

ಜನಪರವಾಗಿ ಹೋರಾಡಿದವರು ಇಷ್ಟೂ ಕಾಲ ಆಡಿದ ಮತ್ತು ಹಾಡಿದ ಸಮಾನತೆ, ಸಾಮಾಜಿಕ ನ್ಯಾಯ, ಬಂಧುತ್ವದ ತೂಕ ಅರಿತು, ನರನಾಡಿಗಳಿಗೆ ಇಳಿಸಿ, ಜನರತ್ತ ನಡೆದು, ಮೂಗಿಗೆ ಕವಡೆ ಕಟ್ಟಿ ಎತ್ತು, ಕತ್ತೆಗಳಂತೆ ದುಡಿಯಬೇಕು. ಜನರ ವಿವೇಕ ಮತ್ತು ನಾಡಿಮಿಡಿತಗಳೊಂದಿಗೆ ತತ್ವಸಿದ್ಧಾಂತಗಳ ತಿಕ್ಕಾಟಕ್ಕೆ ಬಿಡಬೇಕು, ನಮ್ಮೊಳಗೇ ಊರಿಕೊಂಡ ಲಿಂಗ, ಲಿಂಗತ್ವ ವರ್ಗ, ಧರ್ಮ, ಜಾತಿ... ಅಂಧತ್ವಗಳ ತಿಣುಕಾಡಿ ಬುಡಮೇಲು ಮಾಡಿ, ತಾನು ಅನ್ಯ ಗೋಡೆ ಒಡೆಯಲು ತನ್ನೊಳಗೆ ಗುದ್ದಾಡಿ, ವಿವೇಕದ ಚೂರಿ ಮಸೆದು ಕೊಬ್ಬು ಕತ್ತರಿಸಿ ಹಗುರಾಗಬೇಕು. ತೊಟ್ಟಿಲು ತೂಗಲು ಲಾಲಿ ಹಾಡಿ, ಚಟ್ಟಕ್ಕೆ ಹೆಗಲು ನೀಡಿ, ನಡೆಯಲು ಕೈ ಹಿಡಿಯಬೇಕು. ಭಿನ್ನಮತಗಳ ಬೆಸೆವ ಬಂಧುತ್ವವೇ ಪ್ರಜಾಪ್ರಭುತ್ವಕ್ಕೆ ತಳಪಾಯವೆಂದು ಮನಗಾಣಬೇಕು.

ಚುರುಮುರಿ



ಎಲ್ಲಿ ಹೋದವು ಹುಲಿಗಳು?

• ಆನಂದ

'ಅದೇನು ಧೈರ್ಯ ಈ ಹುಲಿಗಳಿಗೆ?' ಎಂದಳು ಮಡದಿ. ನನಗೆ ಆಶ್ಚರ್ಯವಾಯಿತು. 'ಹುಲಿಗಳಿಗೆ ಧೈರ್ಯ ಎಂದರೆ ಏನು? ಮೀನಿಗೆ ಒದ್ದೆ ಎಂದಂತಾಗಲಿಲ್ಲವೇ?'

'ಅಯ್ಯೋ ಹಾಗಲ್ಲಾರೀ, ಮೊನ್ನೆ ಮೋದೀಜಿ ಬಂಡೀಪುರದಲ್ಲಿ ಹುಲಿ ಸಫಾರಿ ಮಾಡಿದರಲ್ಲಾ... 22 ಕಿ.ಮೀ. ಕಾಡಿನಲ್ಲಿ ಸುತ್ತಿದರೂ ಒಂದೂ ಹುಲಿ ಕಣ್ಣಿಗೆ ಬೀಳಲಿಲ್ಲ ಎಂದರೆ ಹೇಗೆ?'

'ಹುಲಿಗಳಿಗೇನು ಗೊತ್ತಿತ್ತೇ ಪ್ರಧಾನಿ ಬರ್ತಿದಾರೆ ಅಂತ. ಗೊತ್ತಿದ್ದರೆ ಅವೂ ಬರ್ತಿದ್ದವೇನೋ ಹೊರಕ್ಕೆ ಅವರನ್ನು ನೋಡೋದಿಕ್ಕೆ ಹಾರಗಳ ಸಮೇತ'.

'ಹಿಂದಿನ ಕಾಲದ ರಾಜರು ಶಿಕಾರಿಗೆ ಹೊರಟಂತಿತ್ತು ಮೋದೀಜಿ ಟೈಗರ್ ಸಫಾರಿ. ಆದರೆ ಯಾವ ಹುಲಿನೂ ಕ್ಯಾರೆ ಅನ್ನಲಿಲ್ಲ ನೋಡಿ. ಸೊ ಸ್ಯಾಡ್' ಎಂದು ಲೊಚಗುಟ್ಟಿದಳು.

ಇದರಲ್ಲೇನಾದರೂ ಷಡ್ಯಂತ್ರ ಇರಬಹುದೇ ಎಂದು ಅನುಮಾನಿಸಿದೆ. ರಾಜಕಾರಣಿಗಳ ಪ್ಲಾನ್ ಉಲ್ಟಾ ಆದರೆ ಅದರ ಹಿಂದೆ ಷಡ್ಯಂತ್ರ ಇದ್ದೇ ಇರುತ್ತದೆ ಎಂದು ನಮಗೆ ಚೆನ್ನಾಗಿ ಗೊತ್ತು. ಮಾಡಾಳ್ ವಿರೂಪಾಕ್ಷಪ್ಪನವರ ಬೆಡ್‌ರೂಂನಲ್ಲಿ ಕೋಟಿ ಕೋಟಿ ನಗದು ಸಿಕ್ಕಿದ್ದರ ಹಿಂದೆಯೂ ಷಡ್ಯಂತ್ರ ಇದೆ ಎಂದು ಅವರೇ ಹೇಳಿಲ್ಲವೆ?

'ಹುಲಿ ಕಾಣಿಸದೇ ಇರುವುದರ ಹಿಂದೆ ಷಡ್ಯಂತ್ರ ಸಾಧ್ಯವೇನ್ರೀ?'

'ವೈ ನಾಟ್? ಮೋದೀಜಿ ಬರ್ತಾರೆ ಅಂತ ಅವೆಲ್ಲ ಪಕ್ಕದ ತಮಿಳುನಾಡಿಗೆ ವಲಸೆ ಹೋಗಿರಲಿಕ್ಕೆ ಸಾಕು' ಎಂದೆ.

'ಸ್ಟಾಲಿನ್ ಅವರ ಷಡ್ಯಂತ್ರವೇ? ನೊ ವೇ..'

'ಹೇಗೆ ಹೇಳ್ತೀಯಾ?'

'ಮೊನ್ನೆ ಅವರಿಬ್ಬರೂ ಕೈಕೈ ಹಿಡಿದು ನಗ್ತಾ ನಗ್ತಾ ಊರು ಸುತ್ತಿದರಂತೆ. ಹಾಗಿರುವಾಗ ಹುಲಿಗಳನ್ನೆಲ್ಲಾ ಅವರು ತಮ್ಮ ಏರಿಯಾಕ್ಕೆ ಕರೆಸಿಕೊಂಡಿರಲಿಕ್ಕೆ ಸಾಧ್ಯವಿಲ್ಲ'.

'ಮತ್ತೆ ಕೆಸಿಆರ್ ಮಾಡಿರಲು ಸಾಧ್ಯವೆ? ಮೋದೀಜೀನ ಕಂಡರೆ ಅವರಿಗಾಗದು...'

'ಅಯ್ಯೋ! ನೀವೋ ನಿಮ್ಮ ಭೂಗೋಳವೋ, ತೆಲಂಗಾಣ ಬಾರ್ಡರ್‌ನಲ್ಲಿ ಬಂಡೀಪುರ ಬರೋಲ್ಲರೀ'.

'ಕರೆಕ್ಟ್. ಕೇರಳ ಸಹ ಔಟ್ ಆಫ್ ಕ್ವೆಶ್ಚನ್. ಮತ್ತೆ ಈ ಹುಲಿಗಳನ್ನು ಯಾರು ಎತ್ತಿ ಕಟ್ಟಿರಬಹುದು? ಜೆಪಿಸಿ ತನಿಖೆ ಮಾಡಿಸಿದರೆ ಹೇಗೆ?'

ದಿನದ ಟ್ವೀಟ್

ಹುಟ್ಟಿನಿಂದಲ್ಲ, ಆಯ್ಕೆಯಿಂದ



ನಾವು ಹುಟ್ಟಿನಿಂದಾಗಲೀ ಅಥವಾ ಆಕಸ್ಮಿಕವಾಗಿಯಾಗಲೀ ಫುಲೆವಾದಿ, ಅಂಬೇಡ್ಕರ್‌ವಾದಿ ಆಗಬಾರದು. ನಾವು ಫುಲೆವಾದಿ, ಅಂಬೇಡ್ಕರ್‌ವಾದಿ ಆಗುವುದನ್ನು ಆಯ್ಕೆ ಮಾಡಿಕೊಳ್ಳಬೇಕು. ಸೈದ್ಧಾಂತಿಕವಾಗಿ ನಾವು ಅದನ್ನು ಆಯ್ಕೆ ಮಾಡಿಕೊಳ್ಳಬೇಕು. ಜ್ಯೋತಿಬಾ ಫುಲೆ ಮತ್ತು ಅಂಬೇಡ್ಕರ್ ಅವರ ಸೈದ್ಧಾಂತಿಕ ದೃಷ್ಟಿಕೋನಗಳನ್ನು ನಾವು ಅಂತರ್ಗತಗೊಳಿಸಿಕೊಳ್ಳಬೇಕು.

ಚೇತನ್ ಕುಮಾರ್, ಚಲನಚಿತ್ರ ನಟ

ಕಿಡಿನುಡಿ



ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೀತಾ ಬೆಳೀತಾ ದಾಯಾದಿಗಳು ಅನ್ನೋದಕ್ಕೆ ಸಿಂ'ಹಾಸನ' ಜಗಳವೇ ಉದಾಹರಣೆ. ಕುಟುಂಬವೋ ಕಾರ್ಯಕರ್ತರೋ ಅನ್ನೋ ಜಗಳದಲ್ಲಿ ಯಾವತ್ತೂ ಕುಟುಂಬವೇ ಮೇಲುಗೈ ಸಾಧಿಸಿದ್ದು ಗೊತ್ತೇ ಇದೆ. ಆದರೆ ಕುಮಾರಸ್ವಾಮಿ, ಮಗನ ಸೋಲಿನ ಕೋಪವನ್ನು ಹೇಗೆ ತೀರಿಸಿಕೊಳ್ಳಲಿದ್ದಾರೆ ಅನ್ನೋದೇ ಪ್ರಶ್ನೆ!

ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 12-4-1998

• **ಅಯೋಧ್ಯೆ, ಏಕರೂಪ ನಾಗರಿಕ ಸಂಹಿತೆ: ರಚನಾತ್ಮಕ ಚರ್ಚೆಗೆ ಅಡ್ವಾಣಿ ಒಲವು**

ನವದೆಹಲಿ, ಏ. 11- ವಿವಾದಾತ್ಮಕ ವಿಷಯಗಳಾದ, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ, ಏಕರೂಪ ನಾಗರಿಕ ಸಂಹಿತೆ ಹಾಗೂ ಸಂವಿಧಾನದ 370ನೇ ವಿಧಿ ರದ್ದು ಕುರಿತಂತೆ 'ರಚನಾತ್ಮಕ ಚರ್ಚೆ' ನಡೆಸುವ ಬಗ್ಗೆ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಎಲ್.ಕೆ.ಅಡ್ವಾಣಿ ಅವರು ಒಲವು ತೋರಿದ್ದಾರೆ.

ಇಂದು ಇಲ್ಲಿ ಆರಂಭವಾದ ಎರಡು ದಿನಗಳ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಆರಂಭ ಭಾಷಣದಲ್ಲಿ 'ರಚನಾತ್ಮಕ ಚರ್ಚೆ'ಯನ್ನು ಪ್ರಸ್ತಾಪಿಸಿರುವ ಅಡ್ವಾಣಿ, ಈ ವಿಷಯಗಳ ಕುರಿತಂತೆ 'ಶಾಂತಿಯುತ', 'ಸಂಘರ್ಷ ರಹಿತ', 'ರಚನಾತ್ಮಕ ಚರ್ಚೆ ಹಾಗೂ ಮಾತುಕತೆ' ನಡೆಸುವುದು ಸೂಕ್ತ ಎಂದು ಹೇಳಿದ್ದಾರೆ.

• **ಶರಣಾಗತಿಗೆ ಕಾಡುಗಳ್ಳ ವೀರಪ್ಪನ್ ಷರತ್ತು**

ಚೆನ್ನೈ, ಏ. 11- ತನ್ನ ಹಾಗೂ ತನ್ನ ಸಹಚರರ ವಿರುದ್ಧ ಇರುವ ಎಲ್ಲಾ ಪ್ರಕರಣಗಳ ವಿಚಾರಣೆಯನ್ನು ತಮಿಳುನಾಡು ನ್ಯಾಯಾಲಯಗಳಲ್ಲೇ ನಡೆಸಬೇಕು ಎಂಬ ಏಕೈಕ ಷರತ್ತಿನೊಂದಿಗೆ ಶರಣಾಗಲು ದಂತಚೋರ ವೀರಪ್ಪನ್ ಮುಂದೆ ಬಂದಿದ್ದಾನೆ.

ಶರಣಾಗಲು ಹಣಕಾಸು ನೆರವು ಹಾಗೂ ಕ್ಷಮಾದಾನ ನೀಡಬೇಕು ಎಂದು ತಾನು ಈ ಹಿಂದೆ ಹಾಕಿದ್ದ ಷರತ್ತುಗಳನ್ನು ವೀರಪ್ಪನ್ ಕೈಬಿಟ್ಟಿದ್ದಾನೆ ಎಂದು ಬಲ್ಲ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಗುರುವಾರ, 12-4-1973

• **ಪಾಕ್ ಸಮರ ಬಂದಿಗಳ ಬಿಡುಗಡೆ ಬಗೆಗೆ ಬರುವ ವಾರ ಪ್ರಕಟಣೆ ಸಂಭವ**

ನವದೆಹಲಿ, ಏ. 11- ಪಾಕಿಸ್ತಾನಿ ಯುದ್ಧ ಬಂದಿಗಳ ವಾಪಸಾತಿ ಹಾಗೂ ತತ್ಸಂಬಂಧ ವಿಷಯಗಳ ಇತ್ಯರ್ಥಕ್ಕಾಗಿ ರಚಿಸಲಾಗಿರುವ ಸೂತ್ರದ ಸ್ಥೂಲ ರೂಪಗಳು ಈಗ ಸ್ಪಷ್ಟವಾಗಿವೆ.

ಶುಕ್ರವಾರ ದೆಹಲಿಗೆ ಬಾಂಗ್ಲಾದೇಶದ ವಿದೇಶಾಂಗ ಸಚಿವ ಡಾ. ಕಮಾಲ್ ಹುಸೇನ್ ಅವರು ಆಗಮಿಸಿದಾಗ, ವಿವರಗಳನ್ನು ನಿರ್ಧರಿಸುವ ಒಪ್ಪಂದದ ಅಂತಿಮ ರೂಪರೇಷೆಗಳನ್ನು ಭಾರತ ಮತ್ತು ಬಾಂಗ್ಲಾದೇಶಗಳು ರಚಿಸುವ ನಿರೀಕ್ಷೆಯಿದೆ.

• **ಈ ವರ್ಷ 100 ಗ್ರಾಮಾಂತರ ಆಸ್ಪತ್ರೆ ನಿರ್ಮಾಣ**

ಬೆಂಗಳೂರು, ಏ. 11- 1973-74ರ ಸಾಲಿನಲ್ಲಿ ರಾಜ್ಯದಾದ್ಯಂತ 100 ಗ್ರಾಮಾಂತರ ಆಸ್ಪತ್ರೆಗಳ ನಿರ್ಮಾಣವಾಗಲಿದೆ ಎಂದು ಆರೋಗ್ಯಮಂತ್ರಿ ಶ್ರೀ ಸಿದ್ಧವೀರಪ್ಪನವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಸಂಗತ

ವ್ಯಕ್ತಿಪೂಜೆ ಮತ್ತು ಅಧಿಕಾರ ಕೇಂದ್ರೀಕರಣ

ನಾವು ಈಗ ಭಾರತದಲ್ಲಿ ನೋಡುತ್ತಿರುವ ವ್ಯಕ್ತಿಪೂಜೆಯು ಪ್ರಶ್ನಾತೀತ ಅಧಿಕಾರ ಕೇಂದ್ರೀಕರಣದ ಒಂದು ಭಾಗವೇ ಆಗಿದೆ

• ಪ್ರೊ. ಬಿ.ಕೆ.ಚಂದ್ರಶೇಖರ್

ಈ ಹಿಂದೆ ಯುಪಿಎ ಸರ್ಕಾರದ ಅಧಿಕಾರಾವಧಿಯಲ್ಲಿ, ಕಾಯಕನಿಷ್ಠೆಗೆ ಒತ್ತು ನೀಡಿ, ದೇಶವನ್ನು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಉನ್ನತ ಸ್ಥಾನಕ್ಕೆ ಕೊಂಡೊಯ್ದಿದ್ದರು ಅಂದಿನ ಪ್ರಧಾನಿ ಡಾ. ಮನಮೋಹನ ಸಿಂಗ್. ಆದರೆ ಅವರನ್ನು 'ಮೌನಿ ಸಿಂಗ್' ಎಂದು ಬಿಜೆಪಿ ಜರಿಯುತ್ತಿತ್ತು. ಈಗ ದೇಶದಲ್ಲಿ ಸೃಷ್ಟಿಯಾಗಿರುವ ಎರಡು ಪ್ರಮುಖ ವಿವಾದಗಳ ಬಗ್ಗೆ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸುವ ಮೂಲಕ ತಮ್ಮ ಉತ್ತರದಾಯಿತ್ವವನ್ನು ಪ್ರದರ್ಶಿಸದೆ ಮೌನಕ್ಕೆ ಮೊರೆ ಹೋಗಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಮೌನಿ ಮೋದಿ' ಎನ್ನಬಾರದೇಕೆ?

ಹಿಂದಿನ ತಿಂಗಳು ಮುಕ್ತಾಯಗೊಂಡ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಹಾಗೂ ಹಾಲಿ ಸಂಸತ್ ಅಧಿವೇಶನದಲ್ಲಿ ಮೋದಿ ಅವರು ಪ್ರತಿಪಕ್ಷಗಳ ತೀಕ್ಷ್ಣ ಹಾಗೂ ನೇರವಾದ ಪ್ರತಿಯೊಂದು ಪ್ರಶ್ನೆಗೂ ತಕ್ಕ ತಿರುಗೇಟು ನೀಡುತ್ತಾರೆ ಎಂಬ ವದಂತಿಗಳು ಸಂಸತ್‌ನ ಕಾರಿಡಾರ್‌ನಲ್ಲಿ ಹಬ್ಬಿದ್ದವು. ಗೌತಮ್ ಅದಾನಿ ಅವರ ಉದ್ಯಮಗಳ ವಿರುದ್ಧ ಬಂದಿರುವ ಆರೋಪಗಳಿಗೆ ಸಂಬಂಧಿಸಿದಂತೆ ಮೋದಿ ಅವರ ಪಾತ್ರ ಮತ್ತು 2002ರ ಗುಜರಾತ್ ಗಲಭೆ ಕುರಿತ ಬಿಬಿಸಿ ಸಾಕ್ಷ್ಯಚಿತ್ರದ ಬಗ್ಗೆ ವಿರೋಧ ಪಕ್ಷಗಳು ಸ್ಪಷ್ಟನೆ ಬಯಸಿದ್ದವು. ಸಂಸತ್ತಿನಲ್ಲಿ ಸತ್ಯ ಹೊರಬರುವುದನ್ನು ತಪ್ಪಿಸುವುದೇ ಗುರಿಯಾಗಿಸಿಕೊಂಡಿರುವ ಸರ್ಕಾರವು ಇದರ ಬಗ್ಗೆ ಚಕಾರವೆತ್ತಲಿಲ್ಲ. ಇಂತಹ ವಿವಾದಾತ್ಮಕ ವಿಷಯಗಳ ಪರಿಶೀಲನೆಗೆ ಜಂಟಿ ಸದನ ಸಮಿತಿ ರಚಿಸುವುದು ಪಾಲಿಸಿಕೊಂಡು ಬಂದಿರುವ ರೂಢಿ. ಆ ಬೇಡಿಕೆಗೂ ಸರ್ಕಾರ ಓಗೊಡಲಿಲ್ಲ.

ಮೋದಿ ಅವರು ಹೋದಲ್ಲಿ ಬಂದಲ್ಲಿ 'ಭಾರತವು ಪ್ರಜಾಪ್ರಭುತ್ವದ ತಾಯಿ' ಎಂದು ಪುನರುಚ್ಚಾರ ಮಾಡುತ್ತಿರುತ್ತಾರೆ. ಆದರೆ, 2002ರ ಗುಜರಾತ್ ಕೋಮುಗಲಭೆ ಬಗ್ಗೆ ಸಾಕ್ಷ್ಯಚಿತ್ರ ತಯಾರಿಸಿದ ಒಂದೇ ಕಾರಣಕ್ಕಾಗಿ, 'ಬಿಬಿಸಿ'ಯಂತಹ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಯ ಕಚೇರಿ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದೆ. ಮೋದಿ ಅವರು ಅದಾನಿ ಸಮೂಹದ ಉದ್ಯಮಗಳ ಅವ್ಯವಹಾರದ ಬಗ್ಗೆ ತನಿಖೆಗೆ ಮುಂದಾಗದೆ, ಮೊಂಡುತನ ಪ್ರದರ್ಶಿಸುತ್ತಿದ್ದಾರೆ. ಸಂಸತ್‌ನಲ್ಲಿ ಈ ಎರಡು ಪ್ರಮುಖ ವಿಷಯಗಳ ಕುರಿತು ದಿವ್ಯ ಜಾಣತನದ ಮೌನದೊಂದಿಗೆ, ಅಪ್ರಸ್ತುತ ವಿಷಯಗಳನ್ನು ಎತ್ತುವುದರ ಮೂಲಕ ಪಲಾಯನವಾದ ಅನುಸರಿಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನವಲ್ಲದೇ ಮತ್ತೇನು?

ಭಾರತದ ಅಭಿವೃದ್ಧಿಗೆ ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಕೊಡುಗೆಯನ್ನು ರಾಹುಲ್ ಗಾಂಧಿ ಅವರು ಬರೀ ಪ್ರಾಸಂಗಿಕವಾಗಿ ಉಲ್ಲೇಖಿಸಿದಾಗ, ಮೋದಿ ಅವರು ಈ ಅವಕಾಶದ ದುರ್ಬಳಕೆ ಮಾಡಿಕೊಂಡು, ಚರ್ಚೆಗೆ ಸಂಬಂಧವೇ ಇಲ್ಲದ ಪ್ರಶ್ನೆಯನ್ನು ಹಾಕುವ ಮೂಲಕ ರಾಹುಲ್ ಅವರನ್ನು ಅಪಹಾಸ್ಯ ಮಾಡಲು ಹೋಗಿ ತಮ್ಮ ಮೌಲ್ಯವನ್ನೇ ಕಳೆದುಕೊಂಡರು ಅಲ್ಲವೇ?

ನೆಹರೂ ಅವರ ಬಗ್ಗೆ ಮೋದಿ ಅವರ ತಿಳಿವಳಿಕೆಗೂ, ಅವರದೇ ಪಕ್ಷದ ರಾಜಕೀಯ ಮುತ್ಸದ್ದಿ ಅಟಲ್ ಬಿಹಾರಿ ವಾಜಪೇಯಿ ಅವರ ನಿಲುವಿಗೂ ಅಜಗಜಾಂತರ ಇದೆ. ವಾಜಪೇಯಿ ಅವರು ಸಂಸತ್ತಿನಲ್ಲಿ ಒಮ್ಮೆ ನೆಹರೂ ಅವರ ಬಗ್ಗೆ ಮಾತನಾಡುತ್ತಾ, 'ಆ ರೋಮಾಂಚಕ ವ್ಯಕ್ತಿತ್ವ, ವಿರೋಧ ಪಕ್ಷಗಳನ್ನು ಜೊತೆಯಲ್ಲಿ ಕರೆದೊಯ್ಯುವ ಅವರ ಮನೋಭಾವ ಮತ್ತು ಸಜ್ಜನಿಕೆ, ಭಿನ್ನಾಭಿಪ್ರಾಯಗಳ ನಡುವೆಯೂ ಅವರ ಸಮಗ್ರತೆ, ದೇಶಪ್ರೇಮವನ್ನು ಗೌರವಿಸದೇ ಇರಲು ಕಾರಣಗಳೇ ಇಲ್ಲ' ಎಂದು ಹೇಳಿದ್ದರು.

ಸಂಸತ್ತಿನ ಹೊರಗೆ ಅವರ ಸಂಪುಟ ಸಹೋದ್ಯೋಗಿಗಳು ಹಾಗೂ ಬಿಜೆಪಿ ವಕ್ತಾರರು ಮೋದಿ ಪರವಾಗಿ ಭಾಜಾಭಜಂತ್ರಿ ಬಾರಿಸುತ್ತಿದ್ದಾರೆ. 'ಮೋದಿ ಎಂದರೆ ಭಾರತ, ಭಾರತ ಎಂದರೆ ಮೋದಿ' ಎನ್ನುವ ಅವರ ವಿಚಾರರಹಿತ ನಂಬಿಕೆಯನ್ನು ಮೋದಿ ಅವರನ್ನು ಭಾರತದೊಂದಿಗೆ ಸಮೀಕರಿಸುವ ಮೂಲಕ ಭಾವನಾತ್ಮಕಗೊಳಿಸುತ್ತಲೇ ಬಂದಿದ್ದಾರೆ. ತಮ್ಮ ವಿರುದ್ಧದ ಯಾವುದೇ ಆರೋಪಗಳನ್ನು ತಳ್ಳಿಹಾಕುವುದು ಅಥವಾ ನಿರ್ಲಕ್ಷಿಸುವುದು ಮೋದಿ ಅವರಿಗೆ ಹೊಸದೇನಲ್ಲ.



ಸಂಸತ್ ಎಂದರೆ, ಮೋದಿ ಅವರ ಮಾತಿಗೆ ಚಪ್ಪಾಳೆ ಹೊಡೆದು, ಕೇಕೆ ಹಾಕುವ 300ಕ್ಕೂ ಹೆಚ್ಚು ಸದಸ್ಯರಿರುವ ಬರೀ ಆಡಳಿತಾರೂಢ ಬಿಜೆಪಿ ಎಂದರ್ಥವಲ್ಲ. ಬದಲಿಗೆ, ಸಂಸತ್ ಎಂದರೆ ಅದನ್ನು ಒಂದು ಸಂಸ್ಥೆಯಾಗಿ ಗ್ರಹಿಸುವುದರ ಜೊತೆಗೆ, ಸಂಸತ್ತಿನೊಳಗೆ 'ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದಬ್ಬಾಳಿಕೆ ಅಲ್ಲ' ಎಂಬ ಸಾಂವಿಧಾನಿಕ ತತ್ವವನ್ನು ತಮ್ಮ ನಡವಳಿಕೆಯ ಮೂಲಕ ಆಡಳಿತಾರೂಢ ಪಕ್ಷದ ಸದಸ್ಯರು ತೋರಿಸಬೇಕಿದೆ.

ಚರ್ಚೆ, ಸಂವಾದಗಳು ಯಾವುದೇ ಒಂದು ಮುಕ್ತ ಸರ್ಕಾರದ ಹೆಗ್ಗುರುತಾಗಿವೆ. ಆದರೆ, ವಾಸ್ತವವಾಗಿ ಇಂದಿನ ಸಂಸತ್‌ಗೆ ಸರ್ಕಾರವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಹೇಳಿಕೇಳಿ, ಒಬ್ಬ ವರ್ಚಸ್ವಿ ನಾಯಕನ ಕೈಯಲ್ಲಿ ಅಧಿಕಾರ ಕೇಂದ್ರೀಕರಿಸುವುದು, ಆ ಅಧಿಕಾರವನ್ನು ಆತ ತನ್ನ ಇಚ್ಛೆಯಂತೆ ಬಳಸಿಕೊಳ್ಳುವುದನ್ನು ತಡೆಯಲಾಗದು. ಇದನ್ನೇ ತಪ್ಪಾಗಿ ಅರ್ಥೈಸಿ, 'ನಿರ್ಣಾಯಕ ಮತ್ತು ಅನಿವಾರ್ಯ ನಾಯಕತ್ವ'ಎಂದು ನೋಡಲಾಗುತ್ತಿದೆ.

ಒಬ್ಬ ವ್ಯಕ್ತಿಯ ಕೈಯಲ್ಲಿ ಹೆಚ್ಚು ಅಧಿಕಾರ ಸಂಗ್ರಹವಾದಷ್ಟೂ ಆತ ತನ್ನದೇ ಆದ ಅನಿವಾರ್ಯಗಳ ಮೇಲೆ ಆಡಳಿತ ನಡೆಸುತ್ತಾನೆ. ನಾವು ಈಗ ಭಾರತದಲ್ಲಿ ನೋಡುತ್ತಿರುವ ವ್ಯಕ್ತಿಪೂಜೆಯು ಅಂತಹ ಪ್ರಶ್ನಾತೀತ ಅಧಿಕಾರ ಕೇಂದ್ರೀಕರಣದ ಒಂದು ಭಾಗವೇ ಆಗಿದೆ.

'ಮೌನವನ್ನು ಪದೇ ಪದೇ ಎಲ್ಲ ವಿಷಯಗಳಲ್ಲೂ ಪುನರಾವರ್ತಿಸಲು ಸಾಧ್ಯವಿಲ್ಲ' ಎನ್ನುವ ಅಭಿಮತವಿದೆ. ಮೋದಿ ಅವರು ಮಾತ್ರ ಈ ಮಾತಿಗೆ ಹೊರತು!

ವಾಚಕರ ವಾಣಿ

ಹೆಲ್ಮೆಟ್‌ನಿಂದ ಸಿಗಲಿ ಅಲ್ಪಕಾಲದ ವಿನಾಯಿತಿ

ಮಾರ್ಚ್, ಏಪ್ರಿಲ್, ಮೇ ತಿಂಗಳು ಬಂದರೆ ಸಾಕು ಬಿಸಿಲ ಝಳ ಅಸಹನೀಯ ಅನಿಸುವಂತೆ ಇರುತ್ತದೆ. ದಕ್ಷಿಣಕ್ಕಿಂತ ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಂತೂ ಕೆಂಡದ ಮಳೆಯೇ ಸುರಿಯುತ್ತದೆ. ಬಿಸಿಲಿಗೆ ಹೊರಹೋಗುವುದೇ ಬೇಡ ಎನ್ನುವಂತಾಗುತ್ತದೆ. ಆದರೆ ಹೊಟ್ಟೆಪಾಡಿಗಾಗಿ ಹೊರಗೆ ಹೋಗಲೇಬೇಕಾದ ಅನಿವಾರ್ಯ ಸ್ಥಿತಿ.

ಇಂತಹ ವಿಪರೀತದ ಕಾಲದಲ್ಲಿ ದ್ವಿಚಕ್ರ ವಾಹನ ಸವಾರರದ್ದು ಮತ್ತೊಂದು ಬಗೆಯ ಸಂಕಟ. ಅದೆಂದರೆ ಹೆಲ್ಮೆಟ್ ಧಾರಣೆ. ಧರಿಸದಿರೆ ದಂಡದ ಏಟು. ಧರಿಸಿದರೆ ಮುಂಡವೇ ಬೆವತು ಅಸಹನೀಯ ಗಬ್ಬು ವಾಸನೆ. ಆದ್ದರಿಂದ ಸರ್ಕಾರ ದಯಮಾಡಿ ತನ್ನ ವಿಶೇಷ ಅಧಿಕಾರ ಬಳಸಿ, ಜೂನ್ ತಿಂಗಳ ಕೊನೆಯವರೆಗೂ ಹೆಲ್ಮೆಟ್ ಧರಿಸುವುದರಿಂದ ವಿನಾಯಿತಿ ನೀಡಲಿ, ವಾಹನ ಸವಾರರ ಮುಖದಲ್ಲಿ ನಗೆ ಚಿಮ್ಮಿಸಲಿ. ಇದೀಗ ಕೆಲ ದಿನಗಳ ಹಿಂದೆ ದಂಡದ ಹಣ ಪೂರ್ಣ ಪಾವತಿ ಮಾಡಿದರೆ ಅರ್ಧದಷ್ಟು ವಿನಾಯಿತಿ ನೀಡಿದ್ದನ್ನು ಜನ ತುಂಬು ಹೃದಯದಿಂದ ಸ್ವಾಗತಿಸಿದ್ದು ಮರೆಯುವಂತಿಲ್ಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉತ್ತರ ಪತ್ರಿಕೆ: ಹೆಚ್ಚುವರಿ ಪುಟಗಳೇಕೆ?

ಇತ್ತೀಚೆಗೆ ಮುಗಿದ ಪಿಯು ಪರೀಕ್ಷೆಯಲ್ಲಿ ನೀಡಿದ ಪ್ರತಿಯೊಂದು ಉತ್ತರಪತ್ರಿಕೆಯಲ್ಲಿ 40 ಪುಟಗಳು ಇದ್ದವು. 2018ಕ್ಕಿಂತ ಪೂರ್ವದಲ್ಲಿ ಉತ್ತರಪತ್ರಿಕೆಯ ಪುಟಗಳ ಸಂಖ್ಯೆ 20 ಇರುತ್ತಿತ್ತು. ಈಗ ಕೆಲವು ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಶೇ 10ರಿಂದ 20ರಷ್ಟನ್ನು ಮಾತ್ರ ಬಳಸುತ್ತಾರೆ. ಅಂದರೆ ಸರಾಸರಿಯಾಗಿ 4ರಿಂದ 8 ಪುಟಗಳನ್ನು ಬಳಸುತ್ತಾರೆ. ಕೊರೊನಾ ನಂತರದ ದಿನಗಳಲ್ಲಿ ಮಕ್ಕಳ ಬರೆಯುವಿಕೆ ಪ್ರಮಾಣ ಕಡಿಮೆಯಾಗಿದೆ. ಗಣಿತ ವಿಷಯಕ್ಕೆ ಅತೀ ಹೆಚ್ಚು ಪುಟಗಳನ್ನು ಬಳಸಿದರೆ, ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಅತೀ ಕಡಿಮೆ ಪೇಪರ್ ಬಳಸುತ್ತಾರೆ. ಉಳಿದ ಎಲ್ಲ ಪುಟಗಳೂ ವ್ಯರ್ಥವಾಗುತ್ತವೆ. ಮೌಲ್ಯಮಾಪನದ ಸಂದರ್ಭದಲ್ಲಿ ಇವುಗಳ ಮೇಲೆ ಕೆಂಪು ಗೆರೆ ಎಳೆಯುವುದರಿಂದ ಹಾಳೆಗಳು ಮತ್ತಷ್ಟು ನಿರುಪಯುಕ್ತವಾಗುತ್ತವೆ. ನಮಗೆ ಗೊತ್ತಿರುವಂತೆ, ಪೇಪರ್ ತಯಾರಿಸಲು ಅಧಿಕ ಪ್ರಮಾಣದಲ್ಲಿ ಮರಗಳನ್ನು ಬಳಸಲಾಗುತ್ತದೆ. ಇದು ಅರಣ್ಯ ನಾಶಕ್ಕೆ ಕಾರಣವಾಗುತ್ತದೆ. ಈ ಒಂದೇ ಪರೀಕ್ಷೆಗೆ ಸಾವಿರಾರು ಟನ್ ಪತ್ರಿಕೆಗಳು ಬೇಕು. ಇದರ ಜೊತೆಗೆ ಹಲವಾರು ಪೂರಕ ವಸ್ತುಗಳು ಅಂದರೆ ನೀರು, ವಿದ್ಯುತ್, ಇಂಧನ, ಮಾನವ ಸಂಪನ್ಮೂಲದಂತಹವೂ ಬೇಕು.

ಸರ್ಕಾರ ಈ ಬಗ್ಗೆ ಯೋಚಿಸಬೇಕು. ಶ್ರೀಲಂಕಾದಲ್ಲಿ ಉತ್ತರಪತ್ರಿಕೆಗಳ ಕೊರತೆಯಿಂದ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗದ ಉದಾಹರಣೆ ನಮ್ಮ ಕಣ್ಣ ಮುಂದೆಯೇ ಇದೆ. ಉಕ್ರೇನ್ ಯುದ್ಧದ ನಂತರ ಪೇಪರ್ ಪೂರೈಕೆ ಮೇಲೆ ಪ್ರತಿಕೂಲ ಪರಿಣಾಮವಾಗಿದೆ. ಹೀಗಾಗಿ ಈ ಮುಂಚೆ ಇದ್ದಂತೆ 20 ಪುಟಗಳ ಉತ್ತರ ಪತ್ರಿಕೆಗಳೇ ಸೂಕ್ತ. ಶಿಕ್ಷಣ ಇಲಾಖೆ ಈ ಬಗ್ಗೆ ಗಮನಹರಿಸಬೇಕು.

ಎಸ್.ಆರ್.ಬಿರಾದಾರ, ವಿಜಯಪುರ

ಹುಲಿಗಳ ಕಿವಿಗೆ ಬಿದ್ದಿರಬೇಕು ಆ ಮಾತು...!

ಪ್ರಧಾನಿ ನರೇಂದ್ರ ಮೋದಿ ಅವರು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 22 ಕಿ.ಮೀ. ಸಫಾರಿ ನಡೆಸಿದಾಗ ಇತರ ಪ್ರಾಣಿಗಳು ಕಂಡವಾದರೂ ಹುಲಿ ಮಾತ್ರ ಗೋಚರಿಸಲಿಲ್ಲವಂತೆ! ಕಾರಣ ಇದಿರಲೂಬಹುದು, ಇವರದೇ ಪಕ್ಷದ ದೆಹಲಿ ನಾಯಕರನ್ನು ರಾಜ್ಯ ನಾಯಕರು ಹುಲಿ, ಸಿಂಹ ಎಂದೆಲ್ಲ ಹಿಂದಿನ ಚುನಾವಣೆ ಸಮಯದಲ್ಲಿ ಹೇಳಿದ್ದರು. ಬಹುಶಃ ಈ ಮಾತು ಹುಲಿಗಳ ಕಿವಿಗೂ ಬಿದ್ದಿರಬೇಕು! ಅವರ ಮುಂದೆ ನಾವು ತೀರಾ ಕುಬ್ಜರು, ಅವರ ನಡೆಗೆ ಒಗ್ಗಿಕೊಳ್ಳುವುದು ಕಷ್ಟ ಎಂದೂ ಅಂದುಕೊಂಡಿರಬೇಕು. ನಮಗೆ ನಮ್ಮದೇ ಆದ ಗತ್ತು, ಗೈರತ್ತು ಇರುವಂತೆ ಅವರಿಗೂ ಅವರದೇ ಆದ ಗತ್ತು, ಗೈರತ್ತು ಇರುವುದು ಸಹಜ ಎಂದುಕೊಂಡಿರಬೇಕು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಕ್ಷಮಾರ್ಹವಲ್ಲದ ಸಂಗತಿಯೇ ಸರಿ

ಐಎಎಸ್ ಅಧಿಕಾರಿಯೊಬ್ಬರ ವಿರುದ್ಧ ಅವರ ಪತ್ನಿಯಿಂದ ವರದಕ್ಷಿಣೆ ಕಿರುಕುಳದ ಆರೋಪ ಕೇಳಿಬಂದಿರುವ ಸುದ್ದಿಯನ್ನು (ಪ್ರ. ವಾ., ಏ. 11) ಓದಿ ಆಶ್ಚರ್ಯವಾಯಿತು. ಜವಾಬ್ದಾರಿ ಸ್ಥಾನ ಹೊಂದಿರುವ ಹಾಗೂ ಯುವಕರಿಗೆ ಮಾದರಿಯಾಗಬೇಕಾದಂತಹ ಒಬ್ಬ ಐಎಎಸ್ ಅಧಿಕಾರಿ ಇಂತಹ ಕೃತ್ಯದಲ್ಲಿ ತೊಡಗಿದ್ದರೆ ಅದು ಕ್ಷಮಾರ್ಹವಲ್ಲದ ಸಂಗತಿಯೇ ಸರಿ. ಅದೇ ಅಧಿಕಾರಿ ಮುಂದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣದಂತಹ ಇಲಾಖೆಗೆ ವರ್ಗಾವಣೆಗೊಂಡರೆ, ವರದಕ್ಷಿಣೆ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಅದರ ವಿರುದ್ಧ ಹೋರಾಡುವಂತಹ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಹೀಗಿರುವಾಗ, ಇಂತಹ ಅಧಿಕಾರಿಗಳೇ ವರದಕ್ಷಿಣೆ ಕಿರುಕುಳ ನೀಡಿದರೆ ಇನ್ನು ಸಾಮಾನ್ಯ ವ್ಯಕ್ತಿಗಳ ಕಥೆಯೇನು?

ಮೋನಿಕಾ ಆರ್., ಚಿಕ್ಕಗೊಂಡನಹಳ್ಳಿ


ಮಾನವೀಯ ನೆಲೆಯ ಚಿಂತನೆ

ಒಂದು ತಿಂಗಳ ಅವಧಿಯಲ್ಲಿ ತಂದೆ- ತಾಯಿ ಇಬ್ಬರನ್ನೂ ಕಳೆದುಕೊಂಡಿರುವ ನಂಜನಗೂಡಿನ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ಅವರ ವಿರುದ್ಧ ಪಕ್ಷದ ಅಭ್ಯರ್ಥಿಯನ್ನು ನಿಲ್ಲಿಸದೆ, ಅವರಿಗೆ ಬೆಂಬಲ ನೀಡಲು ಚಿಂತನೆ ನಡೆಸಿರುವ ಜೆಡಿಎಸ್ ನಡೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

'ದರ್ಶನ್ ಅವರ ವಿರುದ್ಧ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೋ ಬೇಡವೋ ಎಂಬುದರ ಬಗ್ಗೆ ನಮ್ಮ ಪಕ್ಷದ ಅಧ್ಯಕ್ಷರನ್ನು ಕೇಳುತ್ತೇವೆ' ಎಂದು ಮೈಸೂರು ಭಾಗದ ಜೆಡಿಎಸ್ ನಾಯಕರಾದ ಜಿ.ಟಿ.ದೇವೇಗೌಡ ಮತ್ತು ಸಾ.ರಾ.ಮಹೇಶ್ ಅವರು ಹೇಳಿರುವುದು ಅವರ ಮಾನವೀಯ ಮೌಲ್ಯಗಳನ್ನು ಎತ್ತಿ ತೋರಿಸುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮೈಸೂರಿನಲ್ಲಿ ಪುರಾಣ ಸೃಷ್ಟಿಯ ಯತ್ನ

ಟಿಪ್ಪುವನ್ನು ಗುರಿಯಾಗಿಸಿ ನಡೆದ ಹೆಸರು ಕೆಡಿಸುವ ಕೆಲಸ

• ಬಸವ ಬಿರಾದರ್



90 ವರ್ಷಗಳಷ್ಟು ಹಳೆಯದಾದ, ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಹೆಸರನ್ನು ಹೊತ್ತಿರುವ 'ಫ್ಯಾಕ್ಟರಿ ಸರ್ಕಲ್' ಎಂಬ ಟ್ರಾಫಿಕ್ ವೃತ್ತವೊಂದು ಮಂಡ್ಯದಲ್ಲಿ ಇದೆ. ಈ ವೃತ್ತಕ್ಕೆ ಹೇಳಿಕೊಳ್ಳುವಂತಹ ವೈಶಿಷ್ಟ್ಯವೇನೂ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 12ರಂದು ಮಂಡ್ಯಕ್ಕೆ ಬರುವ ಮೊದಲು ಇಲ್ಲಿ ನಿರ್ಮಿಸಲಾದ ಮಹಾದ್ವಾರವೊಂದರ ಕಾರಣದಿಂದಾಗಿ ಈ ವೃತ್ತವು ರಾಜ್ಯದಾದ್ಯಂತ ಹಾಗೂ ರಾಜ್ಯದ ಆಚೆಗೂ ಜನಜನಿತವಾಯಿತು. ಪ್ರಧಾನಿಯವರನ್ನು ಸ್ವಾಗತಿಸುವ ನಾಲ್ಕು ಮಹಾದ್ವಾರಗಳ ಪೈಕಿ ಒಂದನ್ನು ಈ ವೃತ್ತದಲ್ಲಿ ನಿರ್ಮಿಸಲು ಬಿಜೆಪಿಯ ಸ್ಥಳೀಯ ನಾಯಕರು ತೀರ್ಮಾನಿಸಿದರು. ಇದಕ್ಕೆ ಅವರು 'ಉರಿಗೌಡ–ದೊಡ್ಡ ನಂಜೇಗೌಡ ಮಹಾದ್ವಾರ' ಎಂಬ ಹೆಸರಿತ್ತರು. 18ನೆಯ ಶತಮಾನದಲ್ಲಿ ಮೈಸೂರನ್ನು ಆಳಿದ ಟಿಪ್ಪು ಸುಲ್ತಾನನನ್ನು ಕೊಂದವರು ಎಂದು ಆಡಳಿತಾರೂಢ ಬಿಜೆಪಿ ಈಗ ಹೇಳುತ್ತಿರುವ ಒಕ್ಕಲಿಗ ಸಮುದಾಯದ ಇಬ್ಬರನ್ನು ಗೌರವಿಸಲು ಮಹಾದ್ವಾರಕ್ಕೆ ಈ ಹೆಸರಿಡಲಾಗಿದೆ ಎಂದು ಭಾವಿಸಲಾಗಿತ್ತು.

ಆದರೆ, 18ನೆಯ ಶತಮಾನದಿಂದ ವಸಾಹತು ಶಕ್ತಿಗಳು ಸಿದ್ಧಪಡಿಸಿದ ದಾಖಲೆಗಳು, ಭಾರತೀಯ ದಾಖಲೆಗಳು ಹಾಗೂ ಮೈಸೂರಿನ ಇತಿಹಾಸದ ಬಗ್ಗೆ ಹಲವು ಇತಿಹಾಸಕಾರರು ನಡೆಸಿದ ಅಧ್ಯಯನಗಳ ಪ್ರಕಾರ, ಟಿಪ್ಪು ಸುಲ್ತಾನನನ್ನು ನಾಲ್ಕನೆಯ ಆಂಗ್ಲೊ–ಮೈಸೂರು ಯುದ್ಧದಲ್ಲಿ 1799ರ ಮೇ 4ರಂದು ಕೊಂದಿದ್ದು ಬ್ರಿಟಿಷ್ ಸೇನೆ.

> ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿಡಿಯೊ ಒಂದನ್ನು ಬಿಡುಗಡೆ ಮಾಡಿ 'ಸರಿಯಾದ ಆಧಾರಗಳಿಲ್ಲದೆ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು' ಎಂದು ಎಲ್ಲ ರಾಜಕಾರಣಿಗಳಿಗೆ ಮನವಿ ಮಾಡಿದರು

ಉರಿಗೌಡ–ನಂಜೇಗೌಡರು ಟಿಪ್ಪುವನ್ನು ಕೊಂದರು ಎಂಬ ವಾದಕ್ಕೆ ಐತಿಹಾಸಿಕ ಸಾಕ್ಷ್ಯಗಳು ಇಲ್ಲ ಎಂಬ ಕಾರಣ ನೀಡಿ ಇತಿಹಾಸಕಾರರು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಅಭಿಪ್ರಾಯವನ್ನು ಸಕ್ರಿಯವಾಗಿ ದಾಖಲಿಸುವವರು ಈ ಮಹಾದ್ವಾರಕ್ಕೆ ಇರಿಸಿದ ಹೆಸರನ್ನು ಟೀಕಿಸಿದಾಗ, ಬಿಜೆಪಿ ನಾಯಕರು ಮಹಾದ್ವಾರಕ್ಕೆ ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮಠಾಧೀಶರಾಗಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಹೆಸರು ಇರಿಸಿದರು. ಆದರೆ ಬಿಜೆಪಿಯ ಕೆಲವು ನಾಯಕರು ಸೋಲೊಪ್ಪಿಕೊಳ್ಳಲಿಲ್ಲ. ಸಿನಿಮಾ ನಿರ್ಮಾಪಕ ಕೂಡ ಆಗಿರುವ ತೋಟಗಾರಿಕಾ ಸಚಿವ ಮುನಿರತ್ನ ಅವರು ಉರಿಗೌಡ ಮತ್ತು ನಂಜೇಗೌಡರ ಜೀವನ ಆಧರಿಸಿದ ಸಿನಿಮಾ ಮಾಡುವುದಾಗಿ ಪ್ರಕಟಿಸಿದರು. ಸಿನಿಮಾಕ್ಕೆ ಚಿತ್ರಕಥೆಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬರೆಯಲಿದ್ದಾರೆ ಎಂದು ಆ ಸಿನಿಮಾದ ಪೋಸ್ಟರ್‌ನಲ್ಲಿ ಹೇಳಲಾಗಿತ್ತು.

ಒಕ್ಕಲಿಗ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ, ಕಾಲ್ಪನಿಕ ಪಾತ್ರಗಳನ್ನು ಬಳಸಿ ಇತಿಹಾಸವನ್ನು ಪರಿಷ್ಕರಿಸುವ ಪ್ರಯತ್ನ ಇದು ಎಂದು ಹೇಳಿದ ಇತಿಹಾಸಕಾರರು ಮತ್ತು ವಿರೋಧ ಪಕ್ಷಗಳ ನಾಯಕರು, ಈ ಪ್ರಯತ್ನವನ್ನು ವಿರೋಧಿಸಲು ಮುಂದಾದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿಡಿಯೊ ಒಂದನ್ನು ಬಿಡುಗಡೆ ಮಾಡಿ 'ಸರಿಯಾದ ಆಧಾರಗಳಿಲ್ಲದೆ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು' ಎಂದು ಎಲ್ಲ ರಾಜಕಾರಣಿಗಳಿಗೆ ಮನವಿ ಮಾಡಿದರು. ಆಗ ವಿವಾದ ತಾನಾಗೆ ಬಗೆಹರಿಯಿತು.

ಆದರೆ, ಈ ಕಿಡಿ ಹೊತ್ತಿದ್ದು ಮಹಾದ್ವಾರದ ಕಾರಣದಿಂದಾಗಿ ಅಲ್ಲ. 'ಟಿಪ್ಪು ಸುಲ್ತಾನ್ ಬಗ್ಗೆ ಸತ್ಯವನ್ನು ಹೇಳಲು ಬಯಸಿದ್ದ' ಒಬ್ಬ ನಾಟಕಕಾರ 2022ರ ನವೆಂಬರ್‌ನಲ್ಲಿ ಕನ್ನಡ ನಾಟಕವೊಂದರ ಮೂಲಕ ಮೊದಲು ಈ ಕಿಡಿ ಹೊತ್ತಿಸಿದ್ದರು. ರಾಜ್ಯ ಸರ್ಕಾರದ ಆರು ನಾಟಕಶಾಲೆಗಳಲ್ಲಿ ಪ್ರಮುಖವಾದ ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು ತಮ್ಮ ಹೊಸ ನಾಟಕ 'ಟಿಪ್ಪು ನಿಜಕನಸುಗಳು' ಬಿಡುಗಡೆ ಮಾಡಿದ ನಂತರ ಇವೆಲ್ಲ ಶುರುವಾಗಿದ್ದವು. ಈ ಶೀರ್ಷಿಕೆಯು ಗಿರೀಶ ಕಾರ್ನಾಡ ಅವರು 1997ರಲ್ಲಿ ಬರೆದ 'ಟಿಪ್ಪುವಿನ ಕನಸುಗಳು' ನಾಟಕಕ್ಕೆ ಪ್ರತ್ಯುತ್ತರದಂತೆ ಇದೆ.


ಕಾರ್ಯಪ್ಪ, 2019ರಲ್ಲಿ ಮೈಸೂರು ರಂಗಾಯಣದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ರಾಜ್ಯ ಸರ್ಕಾರದ ನಾಟಕಶಾಲೆಗಳ ಆಡಳಿತ ಮಂಡಳಿಯಾಗಿರುವ ರಂಗಸಮಾಜ ಶಿಫಾರಸು ಮಾಡಿದ ಮೂರು ಹೆಸರುಗಳಲ್ಲಿ ಕಾರ್ಯಪ್ಪ ಅವರ ಹೆಸರು ಇರಲಿಲ್ಲ, ಅವರು ನೇಮಕ ಆಗಿರುವುದು ರಾಜಕಾರಣಿಗಳ ಮೂಲಕ ಎಂದು ಆಗ ಹಿರಿಯ ರಂಗಕರ್ಮಿಗಳು ಆರೋಪಿಸಿದ್ದರು.

ಅಯೋಧ್ಯಾ ಪ್ರಕಾಶನ ಪ್ರಕಟಿಸಿರುವ, ಕಾರ್ಯಪ್ಪ ಅವರ ಕನ್ನಡ ನಾಟಕ 'ಟಿಪ್ಪು ನಿಜಕನಸುಗಳು' ಅನ್ನು ನಾನು ಓದಿದೆ. ಆ ನಾಟಕದ ಮುಖಪುಟದಲ್ಲಿ ಟಿಪ್ಪು ಓದುಗನನ್ನು ದುರುಗುಟ್ಟಿಕೊಂಡು ನೋಡುತ್ತಿರುವ ಚಿತ್ರವಿದೆ. ಟಿಪ್ಪುವಿನ ಹಲ್ಲುಗಳು ಕಾಣುತ್ತಿವೆ, ಕಣ್ಣುಗಳು ಕೆಂಪಾಗಿವೆ. ಅಸಾಮಾನ್ಯ ಅನ್ನಿಸುವ, 'ಸತ್ಯ ಚರಿತ್ರೆಯ ರಂಗಕಥಾನಕ' ಎಂಬ ಶೀರ್ಷಿಕೆಯಲ್ಲಿರುವ ನಾಟಕಕಾರನ ಟಿಪ್ಪಣಿಯಲ್ಲಿ ಕಾರ್ಯಪ್ಪ ಅವರು, 'ಭಾರತದ ಮೇಲೆ ದಾಳಿ ಮಾಡಿದ ಇತರ ದಾಳಿಕೋರರ ಬಗ್ಗೆ'– ಮುಸ್ಲಿಂ ಸಾಮ್ರಾಜ್ಯಗಳನ್ನು ಉದ್ದೇಶಿಸಿ ಬಳಸಿರುವ ಪದಗಳು– 'ಮಾನವೀಯತೆ ಹಾಗೂ ಜಾತ್ಯತೀತತೆಯ ಹೆಸರಿನಲ್ಲಿ ಸುಳ್ಳು ಸುಳ್ಳೇ ಚರಿತ್ರೆ ರಚಿಸಲಾಗಿದೆ' ಎಂದು ಆರೋಪಿಸುತ್ತಾರೆ. ಭಾರತವು ವಸಾಹತು ಆಡಳಿತದಿಂದ ಸ್ವಾತಂತ್ರ್ಯ ಪಡೆದ ನಂತರದಲ್ಲಿ, ದೇಶವು ವಂಶಾಡಳಿತ ಹಾಗೂ ಡೋಂಗಿ ಜಾತ್ಯತೀತವಾದದ ಹೊಸ 'ನಕಲಿ' ಸಾಮ್ರಾಜ್ಯಕ್ಕೆ ಬಲಿಯಾಯಿತು, ಈ ಆಡಳಿತವು ಟಿಪ್ಪು ಸುಲ್ತಾನನನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ವೈಭವೀಕರಿಸಿತು ಎಂದು ಅವರು ಬರೆಯುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ಸಂದರ್ಭದಲ್ಲಿ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಆಗ್ರಹದ ಮೇಲೆ ಟಿಪ್ಪು ಬಗ್ಗೆ ನಾಟಕ ರಚಿಸಿದ್ದಕ್ಕಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ ಕಾರ್ನಾಡ ಅವರನ್ನು ಕಾರ್ಯಪ್ಪ ಅವರು ಟೀಕಿಸುತ್ತಾರೆ.

ಆದರೆ ತಾವು ಬರೆದಿರುವ ನಾಟಕವು ವಿಸ್ತೃತವಾದ ಅಧ್ಯಯನ, ಅದರಲ್ಲೂ ಮುಖ್ಯವಾಗಿ ಕೆ.ಎಂ. ಪಣಿಕ್ಕರ್ ಅವರ ಬರಹಗಳನ್ನು ಆಧರಿಸಿದೆ ಎಂದು ಕಾರ್ಯಪ್ಪ ಹೇಳಿಕೊಂಡಿದ್ದಾರೆ. ಪಣಿಕ್ಕರ್ ಅವರು ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಸಿಕ್ಕ ಟಿಪ್ಪು ಬರೆದ ಪತ್ರಗಳನ್ನು ಪರ್ಷಿಯನ್ ಭಾಷೆಯಿಂದ ಮಲಯಾಳಕ್ಕೆ ಅನುವಾದಿಸಿದವರು ಎಂದು ಹೇಳಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ 75ನೆಯ ವರ್ಷದ ಹೊತ್ತಿನಲ್ಲಿ ಟಿಪ್ಪು ಕುರಿತು ಸತ್ಯವನ್ನು ತೋರಿಸುವ ಉದ್ದೇಶದಿಂದ ಈ ನಾಟಕ ಬರೆದಿರುವುದಾಗಿ ಕಾರ್ಯಪ್ಪ ಹೇಳಿದ್ದಾರೆ. ಈ ನಾಟಕದಲ್ಲಿ 15 ದೃಶ್ಯಗಳಿವೆ. ಇವೆಲ್ಲವೂ ಹೇಳುವುದು ಇಷ್ಟನ್ನು: ನಾಲ್ಕನೆಯ ಆಂಗ್ಲೊ–ಮೈಸೂರು ಯುದ್ಧದ ಸಂದರ್ಭದಲ್ಲಿ ಓಡಿಹೋಗಲು ಯತ್ನಿಸುತ್ತಿದ್ದ ಹೇಡಿ ಟಿಪ್ಪು; ಮುಸ್ಲಿಮರಿಗೂ ಹಿಂದೂಗಳಿಗೂ ಟಿಪ್ಪು ಆಡಳಿತವು ಅತೃಪ್ತಿ ಮೂಡಿಸಿತ್ತು; ಟಿಪ್ಪು ಒಬ್ಬ ಮತಾಂಧನಾಗಿದ್ದ, ಆತನ ಮೂಲ ಉದ್ದೇಶವು ಇಡೀ ಪ್ರದೇಶವನ್ನು ಇಸ್ಲಾಮೀಕರಣಗೊಳಿಸುವುದಾಗಿತ್ತು; ಕೊನೆಯಲ್ಲಿ, ಕಿರು ದೃಶ್ಯವೊಂದರಲ್ಲಿ ಟಿಪ್ಪುವನ್ನು ಒಕ್ಕಲಿಗರಾದ ಉರಿಗೌಡ–ನಂಜೇಗೌಡ ಹತ್ಯೆ ಮಾಡುತ್ತಾರೆ, ಟಿಪ್ಪುವನ್ನು ಕೊಂದಿದ್ದು ಬ್ರಿಟಿಷರಲ್ಲ.

ಕಾರ್ಯಪ್ಪ ಅವರು ತಮ್ಮ ವಾದ ಮುಂದಿರಿಸುವವರೆಗೆ, ಬ್ರಿಟಿಷ್ ಸೇನೆಯ ಸೈನಿಕ ಹಾರಿಸಿದ ಗುಂಡಿಗೆ ಟಿಪ್ಪು ಬಲಿಯಾದ ಎಂದು ಇತಿಹಾಸದ ದಾಖಲೆಗಳು ಹೇಳುತ್ತಿದ್ದವು. ಗುಂಡು ಹಾರಿಸಿದ ಸೈನಿಕ ಯಾರು ಎಂಬುದು ತಿಳಿದಿಲ್ಲ. ಲೆಫ್ಟಿನೆಂಟ್ ಕರ್ನಲ್ ಅಲೆಕ್ಸಾಂಡರ್ ಬೀಟ್ಸನ್ ಬರೆದ 'ಎ ವೀವ್ ಆಫ್ ಆರಿಜಿನ್ ಆ್ಯಂಡ್ ಕಾಂಡಕ್ಟ್ ಆಫ್ ವಾರ್ ವಿತ್ ಟಿಪ್ಪೂ ಸುಲ್ತಾನ್' ಹೆಸರಿನ ಕೃತಿಯಲ್ಲಿ ಟಿಪ್ಪುವಿನ ಸಾವಿನ ಕುರಿತ ಮೊದಲ ಲಿಖಿತ ವಿವರಗಳಿವೆ. ನಾಲ್ಕನೆಯ ಆಂಗ್ಲೊ–ಮೈಸೂರು ಯುದ್ಧದಲ್ಲಿ ಪಾಲ್ಗೊಂಡ ಬ್ರಿಟಿಷ್ ಅಧಿಕಾರಿಗಳಲ್ಲಿ, ಘಟನೆಯನ್ನು ಪ್ರತ್ಯಕ್ಷವಾಗಿ ಕಂಡವರು ಹೇಳಿದ್ದನ್ನು ಆಧರಿಸಿ ಬರೆದ ಈ ಕೃತಿಯನ್ನು 1800ರ ಆರಂಭದಲ್ಲಿ ಪ್ರಕಟಿಸಲಾಗಿದೆ. ಬೀಟ್ಸನ್ ಅವರೂ ಈ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಬ್ರಿಟಿಷರು ಸೆರಿಂಗಪಟಂ (ಶ್ರೀರಂಗಪಟ್ಟಣವನ್ನು ಆಂಗ್ಲರು ಕರೆದ ರೀತಿ) ಕೋಟೆಯೊಳಗೆ ನುಗ್ಗಿದ ನಂತರದಲ್ಲಿ, ಜನರಲ್ ಡೇವಿಡ್ ಬೇಯರ್ಡ್ ಅವರು ಟಿಪ್ಪು ಎಲ್ಲಿದ್ದಾನೆ ಎಂಬುದನ್ನು ಪತ್ತೆ ಮಾಡಲು ಒಂದಿಷ್ಟು ಜನ ಸೈನಿಕರನ್ನು ಕಳುಹಿಸಿದರು. ಟಿಪ್ಪು 'ವಾಟರ್ ಗೇಟ್' ಬಳಿ ಗಾಯಗೊಂಡು ಬಿದ್ದಿದ್ದಾನೆ ಎಂಬುದನ್ನು ಕೋಟೆಯ ಉಸ್ತುವಾರಿಯಿಂದ ತಿಳಿದ ನಂತರದಲ್ಲಿ, ಅರಸಲು ಬಂದಿದ್ದ ಸೈನಿಕರು ಅಲ್ಲಿಗೆ ತಲುಪಿದರು. ಅಲ್ಲಿ ಟಿಪ್ಪು ದೇಹವು ಮೈಸೂರು ರಾಜ್ಯದ ಇತರ ಸೈನಿಕರ ಜೊತೆ ಬಿದ್ದಿತ್ತು. ಕೋಟೆಯನ್ನು ಪ್ರವೇಶಿಸಲು ಯತ್ನಿಸುತ್ತಿದ್ದ ಹೊತ್ತಿನಲ್ಲಿ ಯುರೋಪಿನ ಸೈನಿಕರ ಗುಂಪೊಂದು ಟಿಪ್ಪುವನ್ನು ಗಾಯಗೊಳಿಸಿತು ಎಂದು ಟಿಪ್ಪುವಿನ ಮುಖ್ಯ ಸೇವಕರಲ್ಲಿ ಒಬ್ಬನಾಗಿದ್ದ ರಾಜಾ ಖಾನ್ ಬ್ರಿಟಿಷ್ ಅಧಿಕಾರಿಗಳಿಗೆ ವಿವರಿಸಿದ್ದಾನೆ. ಟಿಪ್ಪುವಿನ ಎದೆಯ ಎಡಭಾಗಕ್ಕೆ ಗುಂಡು ಹಾರಿಸಲಾಗಿತ್ತು, ಟಿಪ್ಪುವಿನ ಕಾಲಿಗೆ ಗಾಯಗಳಾಗಿದ್ದವು. ಈ ಹೊತ್ತಿನಲ್ಲಿ ಯುರೋಪಿನ ಸೈನಿಕರ ಇನ್ನೊಂದು ಗುಂಪು ಒಳನುಗ್ಗಿತು, ಬ್ರಿಟಿಷ್ ಸೈನಿಕನೊಬ್ಬ ಟಿಪ್ಪುವಿನ ಖಡ್ಗ ಸಿಕ್ಕಿಸುವ ಬೆಲ್ಟ್‌ನಿಂದ ಚಿನ್ನದ ಬಕಲ್ ಕಿತ್ತುಕೊಳ್ಳಲು ಮುಂದಾದ. ಟಿಪ್ಪು ಆತನಿಗೆ ಖಡ್ಗದಿಂದ ಹೊಡೆದ. ಇದರಿಂದ ಕುಪಿತನಾದ ಆ ಸೈನಿಕ ಟಿಪ್ಪುವಿನ ಕಿವಿಯ ಹಿಂಭಾಗಕ್ಕೆ ಗುಂಡು ಹಾರಿಸಿ, ತಕ್ಷಣವೇ ಟಿಪ್ಪುವನ್ನು ಕೊಂದ. ಈ ವಿವರವು ಬ್ರಿಟಿಷ್ ಹಾಗೂ ಫ್ರೆಂಚರ ಬಹುತೇಕ ದಾಖಲೆಗಳಲ್ಲಿ ಮತ್ತೆ ಮತ್ತೆ ಉಲ್ಲೇಖವಾಗಿದೆ. ಟಿಪ್ಪುವಿನ ಲೆಕ್ಕಾಧಿಕಾರಿ ಆಗಿದ್ದ, ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಪುಂಗನೂರಿ ರಾಮಚಂದ್ರ ರಾವ್ ಬರೆದ 'ಮೆಮೊಯಿರ್ಸ್ ಆಫ್ ಹೈದರ್ ಆ್ಯಂಡ್ ಟಿಪ್ಪೂ, ರೂಲರ್ಸ್ ಆಫ್ ಸೆರಿಂಗಪಟಂ' (1848) ಮತ್ತು ಟಿಪ್ಪುವಿನ ಆಸ್ಥಾನ ಇತಿಹಾಸಕಾರ ಮೀರ್ ಹುಸೇನ್ ಅಲಿ ಖಾನ್ ಕಿರ್ಮಾನಿ ಬರೆದ 'ತಾರೀಖ್ ಇ ಟಿಪ್ಪು ಸುಲ್ತಾನ್' ಕೃತಿಯಲ್ಲಿ ಬೀಟ್ಸನ್ ಬರೆದಿರುವಷ್ಟು ವಿವರಗಳು ಇಲ್ಲ. ಆದರೆ, ಈ ಕೃತಿಗಳು ಕೂಡ ಟಿಪ್ಪುವನ್ನು ಯುದ್ಧದಲ್ಲಿ ಕೊಂದಿದ್ದು ಬ್ರಿಟಿಷ್ ಸೈನಿಕರು ಎಂದು ಹೇಳುತ್ತವೆ.

* * *


A

VIEW

OF THE

ORIGIN AND CONDUCT

OF THE

WAR WITH TIPPOO SULTAUN;

COMPRISING A

NARRATIVE OF THE OPERATIONS OF THE ARMY

UNDER THE COMMAND OF

LIEUTENANT-GENERAL GEORGE HARRIS,

AND OF

THE SIEGE OF SERINGAPATAM.

BY

LIEUTENANT-COLONEL ALEXANDER BEATSON,

LATE AID-DE-CAMP TO THE MARQUIS WELLESLEY, GOVERNOR-GENERAL OF INDIA; AND SURVEYOR-GENERAL TO THE ARMY IN THE FIELD.

LONDON:

PRINTED BY W. BULMER AND CO. CLEVELAND-ROW, ST. JAMES'S; AND SOLD BY G. AND W. NICOL, BOOKSELLERS TO HIS MAJESTY, PALL-MALL.

1800.

ಮೈಸೂರಿನಲ್ಲಿ ನಡೆದ 'ಟಿಪ್ಪು ನಿಜ ಕನಸುಗಳು' ನಾಟಕದ ಐವತ್ತನೆಯ ಪ್ರದರ್ಶನದ ಸಂದರ್ಭದಲ್ಲಿ ನಾನು ಕಾರ್ಯಪ್ಪ ಅವರನ್ನು, ಅವರ ಕಚೇರಿಯಲ್ಲಿ ಭೇಟಿ ಮಾಡಿದೆ.

ಬ್ರಿಟಿಷ್ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್‌ನ ಭಾವಚಿತ್ರದ ಕೆಳಗೆ ಕುಳಿತಿದ್ದ ಕಾರ್ಯಪ್ಪ ಅವರ ಪಕ್ಕದಲ್ಲಿ ಅವರ 'ವಿಶ್ವ ಹಿಂದೂ ಪರಿಷದ್' ಬ್ಯಾಗ್ ಇತ್ತು. ರಂಗಾಯಣದ ನಿರ್ದೇಶಕರಾಗಿ ತಮ್ಮ ಗುರಿಯು 'ನನ್ನ ಸೈದ್ಧಾಂತಿಕ ನಂಬಿಕೆಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಇದನ್ನು, ರಂಗಭೂಮಿಯ ಮುಖಾಂತರ ರಾಷ್ಟ್ರದ ಬಗ್ಗೆ ಆಲೋಚಿಸುವುದಕ್ಕೆ ಸಂಬಂಧಿಸಿದ ಸಂಸ್ಥೆಯನ್ನಾಗಿ ಪರಿವರ್ತಿಸುವುದು' ಎಂದು ಕಾರ್ಯಪ್ಪ ಹೇಳುತ್ತಾರೆ.

ಮೈಸೂರು ರಂಗಾಯಣದ ಮುಖ್ಯಸ್ಥರಾಗಿ ತಾವು 'ನಕ್ಸಲಿಸಂ ಬಗ್ಗೆ ಅನುಕಂಪ ಹೊಂದಿರುವ ನಾಟಕಗಳು, ಜಾತ್ಯತೀತ ಹಾಗೂ ಪ್ರಗತಿಪರ ಮಾತುಗಳ ಹೆಸರಿನಲ್ಲಿ ದೇಶವನ್ನು ತುಂಡು ತುಂಡು ಮಾಡಲು ಕರೆ ನೀಡುವ ನಾಟಕಗಳಿಗೆ' ಅವಕಾಶ ನೀಡುವುದಿಲ್ಲ ಎಂದು ಕಾರ್ಯಪ್ಪ ಹೇಳುತ್ತಾರೆ. ಮುಂದುವರಿದು ಅವರು, 'ಇದನ್ನು ನಾನು ದಿಟ್ಟ ಮಾತುಗಳಲ್ಲಿ ಹೇಳಬೇಕು ಎಂದಾದರೆ, ದೇಶದ್ರೋಹಿಗಳು ಹಾಗೂ ಭಯೋತ್ಪಾದಕರ ಜೊತೆ ಬಹುತೇಕ ಸಂದರ್ಭಗಳಲ್ಲಿ ನಿಂತುಕೊಳ್ಳುವ ಎಡಪಂಥೀಯ ಚಿಂತನೆಗೆ ಇಲ್ಲಿ ಜಾಗ ಇರಕೂಡದು' ಎನ್ನುತ್ತಾರೆ. ರಂಗಾಯಣದ ಸಂಸ್ಕೃತಿಯನ್ನು 'ಇನ್ನಷ್ಟು ರಾಷ್ಟ್ರೀಯವಾದಿಯಾಗಿ ಹಾಗೂ ದೇಶಪ್ರೇಮಿಯಾಗಿ' ಪರಿವರ್ತಿಸಲು ತಾವು ಬಯಸಿರುವುದಾಗಿ ಅವರು ನಮ್ಮ ದೀರ್ಘ ಮಾತುಕತೆಯ ಸಂದರ್ಭದಲ್ಲಿ ಅನುಮಾನಕ್ಕೆ ಎಡೆಯಿಲ್ಲದಂತೆ ಹೇಳಿದ್ದಾರೆ. ರಂಗಾಯಣದ ವಿಚಾರವಾಗಿ ತಾವು ಹೊಂದಿರುವ ಯೋಜನೆಯನ್ನು ವಿವರಿಸುವ ಕಾರ್ಯಪ್ಪ ಅವರು, 'ಇತರರು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದ ಸತ್ಯವನ್ನು ನಾನು ಅನಾವರಣ ಮಾಡುತ್ತೇನೆ. ಆ ಯೋಜನೆಯ ಭಾಗ ಟಿಪ್ಪು ನಿಜಕನಸುಗಳು ನಾಟಕ. ನನ್ನ ಕಾರ್ಯಕ್ರಮಗಳ ವಿಷಯವನ್ನು ಗಮನಿಸಿ. ಅವು ಗಾಂಧಿ ಪಥ, ತಾಯಿ ಮತ್ತು ಭಾರತೀಯತೆ'. ಹಿಂದಿನ ನಾಟಕಕಾರರು ಟಿಪ್ಪು ಸುಲ್ತಾನನ ಹಿಂದೂ ವಿರೋಧಿ ಕೃತ್ಯಗಳಾದ 'ಕೊಡವರ ಮೇಲೆ ನಡೆಸಿದ ದೌರ್ಜನ್ಯ, ಮಂಡ್ಯದ ಅಯ್ಯಂಗಾರರ ಹತ್ಯೆಗಳು, ಹಿಂದೂಗಳನ್ನು ಇಸ್ಲಾಂಗೆ ಮತಾಂತರ ಮಾಡಿದ್ದು ಮತ್ತು ಹಿಂದೂ ದೇವಸ್ಥಾನಗಳನ್ನು ಧ್ವಂಸಗೊಳಿಸಿದ್ದನ್ನು' ಮರೆಮಾಚಿದ್ದಾರೆ ಎಂದು ಕಾರ್ಯಪ್ಪ ಅವರು ಆರೋಪಿಸುತ್ತಾರೆ. ಟಿಪ್ಪುವಿನ ಸಾವಿನ ಕುರಿತು ಬ್ರಿಟಿಷರು ದಾಖಲಿಸಿರುವ ವಿವರಗಳನ್ನು ಕಾರ್ಯಪ್ಪ ಪ್ರಶ್ನಿಸುತ್ತಾರೆ. 'ನಾವು ನಮ್ಮ ಸ್ಥಳೀಯ ಮೌಖಿಕ ದಾಖಲೆಗಳನ್ನು ಏಕೆ ಉಪೇಕ್ಷೆ ಮಾಡುತ್ತೇವೆ' ಎಂದು ಕೇಳುತ್ತಾರೆ.



'ಉರಿಗೌಡ ಮತ್ತು ದೊಡ್ಡ ನಂಜೇಗೌಡರನ್ನು ಸೃಷ್ಟಿ ಮಾಡಿದ್ದು ನಾನಲ್ಲ' ಎಂದು ಹೇಳುವ ಅವರು, ಈ ಇಬ್ಬರು ಹಿಂದಿನ ಐತಿಹಾಸಿಕ ದಾಖಲೆಗಳಲ್ಲಿ ಅದಾಗಲೇ ಇದ್ದಾರೆ ಎಂದು ವಿವರಿಸಿದರು. ಕಾರ್ಯಪ್ಪ ಅವರು ಉಲ್ಲೇಖಿಸಿದ ಮೊದಲ ದಾಖಲೆ 'ಸುವರ್ಣ ಮಂಡ್ಯ'. ಪ್ರಬಂಧಗಳ ಸಂಕಲನವಾಗಿರುವ ಇದು ಮೊದಲು ಪ್ರಕಟವಾಗಿದ್ದು 1990ರ ದಶಕದಲ್ಲಿ. ನಂತರ ಇದನ್ನು 2006ರಲ್ಲಿ ರಾಜ್ಯದ ಅಂದಿನ ಸರ್ಕಾರವು ಮರುಪ್ರಕಟಿಸಿದೆ. ಕಾರ್ಯಪ್ಪ ಅವರು ಉಲ್ಲೇಖಿಸುವ ಪ್ರಬಂಧಗಳ ಪೈಕಿ ಒಂದು ಪ್ರಬಂಧವನ್ನು ಬರೆದಿರುವ ದಿವಂಗತ ಎಚ್. ಕೆ. ರಾಜೇಗೌಡ ಅವರು ಕನ್ನಡ ಸಾಹಿತ್ಯದಲ್ಲಿ ವಿದ್ವತ್ತು ಹೊಂದಿದ್ದರು, ಅವರು ಒಕ್ಕಲಿಗ ಸಮುದಾಯದ ಜಾನಪದ ದಾಖಲೆಗಳನ್ನು ಒಗ್ಗೂಡಿಸಿ, ಅರ್ಥೈಸುವ ಕೆಲಸದಲ್ಲಿ ಆಸಕ್ತಿಯನ್ನು ಹೊಂದಿದ್ದರು ಎಂದು 2006ರ ಆವೃತ್ತಿಯ ಸಂಪಾದಕರಾಗಿರುವ ಪ್ರೊ. ಜಯಪ್ರಕಾಶ ಗೌಡ ಹೇಳುತ್ತಾರೆ. ಬ್ರಿಟಿಷರಿಂದ ತಪ್ಪಿಸಿಕೊಳ್ಳುತ್ತಿದ್ದ ಉರಿಗೌಡ ಮತ್ತು ನಂಜೇಗೌಡ ಎನ್ನುವ ಸ್ಥಳೀಯ ಜಾಣ ಯುವಕರ ಬಗ್ಗೆ ಅವರು ಕೇಳಿದ್ದರು. ರಾಜೇಗೌಡ ಅವರು ತಮ್ಮ ಪ್ರಬಂಧದಲ್ಲಿ 'ಟಿಪ್ಪು ವಿರುದ್ಧ ಉರಿಗೌಡ ಮತ್ತು ನಂಜೇಗೌಡ ಅವರು ಸೆಟೆದು ನಿಂತವರು. ಇದಕ್ಕೆ ಟಿಪ್ಪುವಿನ ಧಾರ್ಮಿಕ ಮತ್ತು ಭಾಷಾ ನೀತಿಯು ಕಾರಣವಿರಬೇಕು' ಎಂದು ಬರೆದಿದ್ದಾರೆ. 'ಆದರೆ ಇವರು ಟಿಪ್ಪುವನ್ನು ಕೊಂದರು ಎಂದು ಬರೆದಿಲ್ಲ' ಎಂದು ಪ್ರೊ. ಜಯಪ್ರಕಾಶ ಗೌಡ ಹೇಳುತ್ತಾರೆ. ರಾಜೇಗೌಡ ಅವರು ಇತಿಹಾಸಕಾರ ಆಗಿರಲಿಲ್ಲ, ಅವರ ಊಹೆಯನ್ನು ಐತಿಹಾಸಿಕ ಸತ್ಯವೆಂದು ಭಾವಿಸಬಾರದು ಎಂದು ಜಯಪ್ರಕಾಶ ಗೌಡ ಹೇಳುತ್ತಾರೆ.

ಟಿಪ್ಪು ಆಡಳಿತದ ಬಗ್ಗೆ ತಮ್ಮ ವೈಯಕ್ತಿಕ ಅಭಿಪ್ರಾಯ ಏನು ಎಂದು ಪ್ರಶ್ನಿಸಿದಾಗ, ಕಾರ್ಯಪ್ಪ ಅವರು ಮೊದಲಿಗೆ ಒಂದು ಸ್ಪಷ್ಟನೆಯನ್ನು ನೀಡಿದರು. ಅಂದರೆ, ತಾವು ಮುಸ್ಲಿಂ ವಿರೋಧಿಯಲ್ಲ ಎಂದರು. 'ನನಗೆ ಮುಸ್ಲಿಮರ ಪೈಕಿ ಸ್ನೇಹಿತರಿದ್ದಾರೆ. ನನ್ನ ನಾಟಕದಲ್ಲಿ ಮುಸ್ಲಿಂ ಕಲಾವಿದರೊಬ್ಬರು ಅಭಿನಯಿಸುತ್ತಿದ್ದಾರೆ' ಎಂದರು. ನಂತರ ಅವರು 'ಟಿಪ್ಪು ಮತಾಂಧನಾಗಿದ್ದ. ಮತಾಂಧ ವ್ಯಕ್ತಿಯೊಬ್ಬ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಿರಬಹುದು. ಆದರೆ ಆತ ಒಂದು ಪ್ರದೇಶವನ್ನು ಅಭಿವೃದ್ಧಿಪಡಿಸಿದ ಎಂದ ಮಾತ್ರಕ್ಕೆ ನಾನು ಮತಾಂಧನನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಈ ಜನ ಹೇಳುತ್ತಿರುವಂತೆ ಟಿಪ್ಪು ಧರ್ಮನಿರಪೇಕ್ಷ ರಾಜನೂ ಆಗಿರಲಿಲ್ಲ, ಸ್ವಾತಂತ್ರ್ಯ ಹೋರಾಟಗಾರನೂ ಆಗಿರಲಿಲ್ಲ' ಎಂದು ಒಂದಿಷ್ಟು ವಿವರ ಸೇರಿಸಿದರು. ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಹಿಂದೆ 'ಮುಸ್ಲಿಂ ಮತ ಬ್ಯಾಂಕ್ ತುಷ್ಟೀಕರಣಕ್ಕೆ' ಟಿಪ್ಪುವನ್ನು ಬಳಸಿಕೊಂಡಿದ್ದು ಕಾರ್ಯಪ್ಪ ಅವರಿಗೆ ಬೇಸರ ಮೂಡಿಸಿದೆ. ಅವರ ಪ್ರಕಾರ, ಟಿಪ್ಪುವಿನ ಜನ್ಮದಿನಕ್ಕೆ ಆಚರಣೆಯ ರೂಪ ನೀಡಲು ಸಿದ್ದರಾಮಯ್ಯ ಅವರು 2015ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಕೈಗೊಂಡ ತೀರ್ಮಾನವು ಇಂತಹ ನಡೆಗಳ ಪೈಕಿ ಒಂದು.



ಕಾರ್ಯಪ್ಪ ಅವರಿಗೆ ಟಿಪ್ಪು ಸುಲ್ತಾನ್ ಬಗ್ಗೆ ಆಸಕ್ತಿ ಮೂಡಿದ್ದರ ಮೂಲ ಇರುವುದು ರಾಜಕೀಯ ಕಾರ್ಯಸೂಚಿಯೊಂದರಲ್ಲಿ ಎಂಬುದರಲ್ಲಿ ಅನುಮಾನ ಇಲ್ಲ. ಐತಿಹಾಸಿಕ ವ್ಯಕ್ತಿತ್ವವೊಂದನ್ನು ವಿಮರ್ಶಾತ್ಮಕವಾಗಿ ನಿಕಷಕ್ಕೆ ಒಡ್ಡುವ, ಕಲಾವಿದನೊಬ್ಬನ ಕೌತುಕವು ಅವರಿಗೆ ಟಿಪ್ಪು ಸುಲ್ತಾನ್ ಬಗ್ಗೆ ಆಸಕ್ತಿ ಮೂಡಿದ್ದಕ್ಕೆ ಕಾರಣವಲ್ಲ.

ನಾಟಕ ರಚಿಸಿದವರ ನಿಜ ಧೋರಣೆಯನ್ನು ನಾಟಕವೇ ಹೇಳುತ್ತದೆ. ಗೌಡ ಸಹೋದರರ ವ್ಯಕ್ತಿತ್ವದ ಚಿತ್ರಣವು ಈ ನಾಟಕದ ಆದಿಯಿಂದ ಬೆಳೆಯುತ್ತ ಬರುವುದಿಲ್ಲ. 14ನೆಯ ದೃಶ್ಯದಲ್ಲಿ ಈ ಪಾತ್ರಗಳು ಇದ್ದಕ್ಕಿದ್ದಂತೆ ತೆರೆಯ ಎದುರು ಬರುತ್ತವೆ. ಹರಹರ ಮಹಾದೇವ ಎಂಬ ಘೋಷಣೆಗಳ ನಡುವೆ, ಕೋಟೆಯಿಂದ ಓಡಿಹೋಗುತ್ತಿರುವ ಟಿಪ್ಪುವಿಗೆ ಇವರು ಎದುರಾಗುತ್ತಾರೆ. ಉರಿಗೌಡನು ಟಿಪ್ಪುವನ್ನು ಉದ್ದೇಶಿಸಿ, 'ಸುಲ್ತಾನರೇ ನಿಲ್ಲಿ, ನೀವು ಎಲ್ಲಿಗೆ ಓಡುತ್ತಿದ್ದೀರಿ? ನೀವು ಹುಲಿ, ಹುಲಿ! ಇಲಿಯಂತೆ ಓಡಿಹೋಗುತ್ತಿರುವುದು ಏಕೆ?' ಎಂದು ಹೇಳುತ್ತಾನೆ. ಇದಾದ ತಕ್ಷಣ ಸಹೋದರರು ತಾವು ಒಡೆಯರ್ ರಾಣಿ ಲಕ್ಷ್ಮಿ ಅಮ್ಮಣ್ಣಿ ದೇವಿಯ ನಿಷ್ಠಾವಂತ ಸೇವಕರು, ಟಿಪ್ಪು ತಮ್ಮ ಶತ್ರುವೇ ವಿನಾ ಬ್ರಿಟಿಷರಲ್ಲ ಎಂದು ಘೋಷಿಸುತ್ತಾರೆ. ನಂತರ ಅವರು ಟಿಪ್ಪುವನ್ನು ಗುಂಡಿಟ್ಟು ಸಾಯಿಸುತ್ತಾರೆ.

> 'ಕಿತ್ತೂರು ಚೆನ್ನಮ್ಮ ಅಥವಾ ಅವರಂತಹ ಇತರ ಯಾವುದೇ ಹಿಂದೂ ಆಡಳಿತಗಾರರು ಯಾವುದಾದರೂ ಮಸೀದಿಯನ್ನು ನಾಶ ಮಾಡಿದ್ದಾರೆಯೇ' ಎಂದು ಕೂಡ ಕಾರ್ಯಪ್ಪ ಪ್ರಶ್ನಿಸುತ್ತಾರೆ. ಬಾಬರಿ ಮಸೀದಿ ಧ್ವಂಸದ ಕುರಿತು ನಾನು ಅವರಲ್ಲಿ ಪ್ರಶ್ನಿಸಿದಾಗ, 'ನಾನು ಆರ್‌ಎಸ್‌ಎಸ್‌ನ ಆಜೀವ ಸದಸ್ಯ' ಎಂದು ಉತ್ತರಿಸಿದರು.

ನಾಟಕಕಾರನು, ನಾಟಕದ ಅತ್ಯಂತ ಪ್ರಮುಖ ಭಾಗವೊಂದರಲ್ಲಿ ಕಾಣಿಸಿಕೊಳ್ಳುವ ಪಾತ್ರಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲು ಅಥವಾ ಆ ಪಾತ್ರಗಳ ಬಗ್ಗೆ ಪೂರ್ಣವಾದ ವಿವರಗಳನ್ನು ನೀಡಲು ಯತ್ನವನ್ನೇ ನಡೆಸುವುದಿಲ್ಲ. ಬದಲಿಗೆ, ಆ ಪಾತ್ರಗಳನ್ನು ನಾಟಕಕಾರನು ರಾಜಕೀಯ ಪರಿಕಲ್ಪನೆಯೊಂದರ ಪ್ರತಿನಿಧಿಗಳ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ. ಹೀಗಾಗಿ, ಆಡಳಿತಾರೂಢ ಬಿಜೆಪಿಗೆ ಮುಂಬರುವ ಚುನಾವಣೆಯಲ್ಲಿ ಒಕ್ಕಲಿಗರ ಮತಗಳನ್ನು ಒಗ್ಗೂಡಿಸುವುದಕ್ಕೆ ನೆರವಾಗಲು ಒಂದು ವಿಷಯವನ್ನು ಹೆಕ್ಕಿಕೊಡುವ ಯತ್ನ ಇದು ಎಂದು ಟೀಕಾಕಾರರು ಹೇಳಿರುವುದರಲ್ಲಿ ಆಶ್ಚರ್ಯ ಮೂಡಿಸುವಂಥದ್ದು ಏನೂ ಇಲ್ಲ.

ಪಿತೂರಿ ಹಾಗೂ ನಂಬಿಕೆದ್ರೋಹದ ವಿವರಗಳಿರುವ ಒಂದು ಕುತೂಹಲಕಾರಿ ದೃಶ್ಯದಲ್ಲಿ ಕಾರ್ಯಪ್ಪ ಅವರು ಧಾರ್ಮಿಕವಾಗಿ ವಿಭಜನಕಾರಿಯಾಗಿರುವ ಕಥೆಯೊಂದನ್ನು ತಂದಿದ್ದಾರೆ. ಈ ಕಥೆಯು ಕೊಡವರ ಒಂದು ವರ್ಗದಲ್ಲಿ ಜನಪ್ರಿಯವಾಗಿದೆ. ದೇವಟ್ಟಿಪರಂಬುನಲ್ಲಿ ಸೇರಿದ್ದ ಸಹಸ್ರಾರು ಮಂದಿ ಕೊಡವರನ್ನು ಟಿಪ್ಪು ಮತ್ತು ಅವನ ಕಡೆಯವರು ಮೋಸದಿಂದ ಕೊಲೆ ಮಾಡಿದ್ದನ್ನು ಈ ದೃಶ್ಯವು ತೋರಿಸುತ್ತದೆ. ಕೊಡವ ಜಾನಪದ ಹಾಡುಗಳ ಸಂಕಲನವಾಗಿರುವ, 1924ರಲ್ಲಿ ನಡಿಕೇರಿಯಂಡ ಚಿನ್ನಪ್ಪ ಅವರು ಪ್ರಕಟಿಸಿದ ಪಟ್ಟೋಲೆ ಪಳಮೆ ಕೃತಿಯಲ್ಲಿ ಈ ಕುರಿತು ವಿವರಗಳಿವೆ. ಹಾಗೆಯೇ, 2015ರಲ್ಲಿ ಕಾರ್ಯಪ್ಪ ಅವರು ಬರೆದ 'ಟಿಪ್ಪು ಮತ್ತು ಕೊಡವರು' ಕೃತಿಯಲ್ಲಿಯೂ ಇದರ ಬಗ್ಗೆ ಉಲ್ಲೇಖವಿದೆ. ಕೊಡವರನ್ನು ಜೈಲಿಗೆ ತಳ್ಳಿದ್ದರ ದಾಖಲೆಗಳು ಇವೆಯಾದರೂ, ನಿರಾಯುಧ ಕೊಡವರ ಹತ್ಯಾಕಾಂಡ ನಡೆದ ಬಗ್ಗೆ ಸಮಕಾಲೀನ ಐತಿಹಾಸಿಕ ಮೂಲಗಳಲ್ಲಿ ಉಲ್ಲೇಖವಿಲ್ಲ. ಈ ಎರಡು ಪುಸ್ತಕಗಳಲ್ಲಿ ನಮೂದಾಗಿರುವ ಸಂಖ್ಯೆಗಳು, ಅಂದರೆ 80 ಸಾವಿರಕ್ಕೂ ಹೆಚ್ಚಿನ ಕೊಡವರನ್ನು ಜೈಲಿಗೆ ಹಾಕಿದ್ದು ಹಾಗೂ 60 ಸಾವಿರಕ್ಕೂ ಹೆಚ್ಚಿನ ಕೊಡವರನ್ನು ಕೊಂದಿದ್ದು, ತೀರಾ ಉತ್ಪ್ರೇಕ್ಷಿತ. 18ನೆಯ ಶತಮಾನದಲ್ಲಿ ಕೊಡವರ ಜನಸಂಖ್ಯೆಯು ಅಷ್ಟೊಂದು ಇರಲೇ ಇಲ್ಲ. ಆದರೆ ಕಾಲ ಸಾಗಿದಂತೆಲ್ಲ ಈ ಕಥೆಗಳಿಗೆ ಹೆಚ್ಚು ಮಹತ್ವ ಬಂದಿದೆ. ಈ ಕಥೆಗಳು ಟಿಪ್ಪುವಿನ ಹೆಸರು ಕೆಡಿಸುವ ಕಾರ್ಯಕ್ಕೆ ಕೊಡುಗೆ ನೀಡಿವೆ.

ಈ ನಾಟಕ, ಪ್ರಧಾನಿ ಮೋದಿ ಅವರ ಭೇಟಿ ಸಂದರ್ಭದಲ್ಲಿ ಬಿಜೆಪಿ ನಿಲ್ಲಿಸಿದ್ದ ವಿಶೇಷ ಮಹಾದ್ವಾರದ ಉದ್ದೇಶವು ಜೆಡಿಎಸ್‌ನ ಭದ್ರಕೋಟೆಯಂತೆ ಇರುವ, ಒಕ್ಕಲಿಗರ ಪ್ರಾಬಲ್ಯವಿರುವ ಮಂಡ್ಯ ಭಾಗದಲ್ಲಿ ಬಿಜೆಪಿಗೆ ಹೆಚ್ಚಿನ ಬೆಂಬಲ ತಂದುಕೊಡುವುದಾಗಿದ್ದಿದ್ದರೆ, ಅದು ಈಡೇರಿಲ್ಲ ಎನ್ನಬೇಕಾಗುತ್ತದೆ. ಕಾರ್ಯಪ್ಪ ಅವರ ನಾಟಕವು ರಾಜ್ಯದಲ್ಲಿ ಪ್ರದರ್ಶನ ಆರಂಭಿಸಿದ ನಂತರದಲ್ಲಿ ಮಂಡ್ಯದಲ್ಲಿ ಎರಡು ಪ್ರದರ್ಶನಗಳು ಆಗಿವೆ. ಆದರೆ ಅಲ್ಲಿ ಜನರಿಂದ ಬಂದಿರುವ ಪ್ರತಿಕ್ರಿಯೆಯು ಅಷ್ಟೇನೂ ಹೆಚ್ಚಿಲ್ಲ. ಮಂಡ್ಯ ಜನರು ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ ಎಂದಿನಿಂದಲೂ ಪ್ರೀತಿ ಬೆಳೆಸಿಕೊಂಡಿದ್ದಾರೆ, ಟಿಪ್ಪುವಿನ ಆಡಳಿತದ ಅವಧಿಯಲ್ಲಿ ಮಂಡ್ಯದ ಜನ ಆತನನ್ನು ವಿರೋಧಿಸಿರಬಹುದು. ಹೀಗಿದ್ದರೂ, ಉರಿಗೌಡ ಮತ್ತು ನಂಜೇಗೌಡ ಎಂಬ ಹೆಸರುಗಳು 'ಸಾರ್ವಜನಿಕರ ನೆನಪುಗಳಲ್ಲಿ ಇರಲಿಲ್ಲ. ಮಂಡ್ಯದ ಬಹುತೇಕ ಜನ ಈ ಇಬ್ಬರ ಬಗ್ಗೆ ಇದುವರೆಗೆ ಕೇಳಿಯೂ ಇರಲಿಲ್ಲ' ಎಂದು ಸ್ಥಳೀಯ ಪತ್ರಕರ್ತ ವಾಗೀಶ್ ವಿವರಿಸುತ್ತಾರೆ. ಮಾರ್ಚ್ ತಿಂಗಳಲ್ಲಿ ಸ್ಥಳೀಯ ಮತದಾರರು, ಸಕ್ಕರೆ ಕಾರ್ಖಾನೆಯೊಂದು ಬಾಗಿಲು ಮುಚ್ಚಿದ್ದು ಹಾಗೂ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ನಗರದ ಆಚೆಯಿಂದ ಸಾಗಿರುವ ಕಾರಣದಿಂದಾಗಿ ಜೀವನೋಪಾಯಕ್ಕೆ ಧಕ್ಕೆ ಉಂಟಾಗಿರುವ ವಿಷಯಗಳ ಬಗ್ಗೆ ಹೆಚ್ಚು ಚಿಂತಿತರಾಗಿರುವಂತೆ ಕಂಡುಬಂತು.

ಕಾರ್ಯಪ್ಪ ಅವರ ನಾಟಕ ಬಿಡುಗಡೆ ಆದಾಗ, ಚಿಕ್ಕಬಳ್ಳಾಪುರ ಜಿಲ್ಲಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಬಿ.ಎಸ್. ರಫಿಯುಲ್ಲಾ ಅವರು, ನಗರ ಸಿವಿಲ್ ನ್ಯಾಯಾಲಯದಿಂದ ಈ ನಾಟಕದ ಪ್ರಕಾಶನಕ್ಕೆ ತಾತ್ಕಾಲಿಕ ತಡೆ ತಂದಿದ್ದರು. ಆದರೆ ನಂತರದಲ್ಲಿ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವು ಮಾಡಿತು. ನಾಟಕದಲ್ಲಿನ ಚಿತ್ರಣ ಹಾಗೂ ಸಂಭಾಷಣೆಗಳು 'ಲೇಖಕರ ಕಲ್ಪನೆಯಾಗಿವೆ, ಮುನ್ನುಡಿಯಲ್ಲಿ ಹೇಳಿರುವಂತೆ ವಾಸ್ತವ ಇತಿಹಾಸವನ್ನು ಅವು ಆಧರಿಸಿಲ್ಲ' ಎಂದು ಆಗ ಕೋರ್ಟ್ ಹೇಳಿತ್ತು.

ನಾಟಕದ ಮುಂದಿನ ಆವೃತ್ತಿಯಲ್ಲಿ, ಐತಿಹಾಸಿಕ ಸತ್ಯದ ಬಗೆಗಿನ ಪ್ರತಿಪಾದನೆಯನ್ನು ತೆಗೆದುಹಾಕಲಾಗುತ್ತದೆಯೆ ಎಂಬ ಪ್ರಶ್ನೆಗೆ ಅಯೋಧ್ಯಾ ಪ್ರಕಾಶನದ ರೋಹಿತ್ ಚಕ್ರತೀರ್ಥ ಅವರು 'ಮುಂದಿನ ಆವೃತ್ತಿಯನ್ನು ಪ್ರಕಟಿಸುವ ವಿಚಾರವಾಗಿ ನಾವು ತೀರ್ಮಾನಿಸಿಲ್ಲ. ಮುನ್ನುಡಿ ಹಾಗೂ ನಾಟಕಕಾರನ ಟಿಪ್ಪಣಿಯಲ್ಲಿ ಯಾವುದೇ ಬದಲಾವಣೆ ತರುವ ಬಗ್ಗೆ ನಾವು ನಮ್ಮ ವಕೀಲರೊಂದಿಗೆ ಸಮಾಲೋಚಿಸುತ್ತೇವೆ' ಎಂದು ತಿಳಿಸಿದರು. ನಾಟಕದಲ್ಲಿ ತಮಗಾಗಲಿ, ಸಂಪಾದಕೀಯ ಮಂಡಳಿಯ ಇತರ ಯಾವುದೇ ಸದಸ್ಯರಿಗಾಗಲಿ ದೋಷ ಕಾಣಿಸಲಿಲ್ಲ ಎಂದು ತಿಳಿಸಿದ ರೋಹಿತ್, ಪೂರ್ವಗ್ರಹ ಇಲ್ಲದೆ ಇದನ್ನು ವೀಕ್ಷಿಸಿದರೆ 'ನಾಟಕವು ಟಿಪ್ಪುವನ್ನು ಉದ್ದೇಶಪೂರ್ವಕವಾಗಿ ಕೆಟ್ಟದ್ದಾಗಿ ಚಿತ್ರಿಸಿರುವಂತೆ ಕಾಣುವುದಿಲ್ಲ' ಎಂದರು.

ಕಾಲ್ಪನಿಕ ಗೌಡ ಸಹೋದರರನ್ನು, 'ಟಿಪ್ಪು ಸುಲ್ತಾನನ್ನು ಕೊಂದ ಒಕ್ಕಲಿಗ, ಹಿಂದೂ ಹೀರೊಗಳು' ಎಂದು ಎತ್ತರಕ್ಕೇರಿಸುವ ಪ್ರಯತ್ನಗಳಿಂದ ಚುನಾವಣೆಯಲ್ಲಿ ಪ್ರಯೋಜನ ಆಗುತ್ತದೆಯೋ ಇಲ್ಲವೋ ಎಂಬುದು ಒಂದು ವಿಚಾರ. ಆದರೆ ಇದು ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಜನಪ್ರಿಯ ಅಭಿಪ್ರಾಯವು ರೂಪುಗೊಳ್ಳುವ ಬಗೆಯನ್ನು ಬದಲಾಯಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರು ಒಟ್ಟಾಗಿ ನಡೆಸುವ ಯತ್ನದ ಚಿತ್ರಣವನ್ನು ನೀಡುತ್ತದೆ. ಈ ಸಹೋದರರ ಬಗ್ಗೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಪ್ರಮಾಣದ ವಸ್ತು–ವಿಷಯ ಪ್ರಕಟವಾಗಿದೆ. ಕಾರ್ಯಪ್ಪ ಅವರ ನಾಟಕಕ್ಕೆ ಸರ್ಕಾರದ ಬೆಂಬಲ ಇದೆ. ಸಹೋದರರ ಬಗ್ಗೆ ಪುಸ್ತಕವೊಂದಿದೆ. ಹೀಗಾಗಿ, ಈಗ ಸಾರ್ವಜನಿಕವಾಗಿ ಟಿಪ್ಪು ಸುಲ್ತಾನ್ ಬಗ್ಗೆ ಚರ್ಚೆ ನಡೆದಲ್ಲೆಲ್ಲ ಉರಿಗೌಡ ಮತ್ತು ನಂಜೇಗೌಡ ಅವರ ಹೆಸರೂ ಉಲ್ಲೇಖವಾಗಬಹುದು. ಸತ್ಯವನ್ನು ಇಷ್ಟಪಡುವ ಒಕ್ಕಲಿಗ ಸಮುದಾಯದ ಧಾರ್ಮಿಕ ಮುಖಂಡ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದಂತೆ, ನಮ್ಮನ್ನು ವಿಭಜಿಸುವ ಹೀರೊಗಳನ್ನು ಸೃಷ್ಟಿಸುವುದು ಬೇಡ ಎನ್ನುವುದು ನೆನಪಿನಲ್ಲಿ ಇದ್ದರೆ ಒಳ್ಳೆಯದು.

(ಈ ಬರಹದ ಪೂರ್ಣಪಠ್ಯವು ಮೊದಲು ಔಟ್‌ಲುಕ್ ಪತ್ರಿಕೆಯಲ್ಲಿ ಪ್ರಕಟವಾಗಿದೆ)

ಲೇಖಕ: ಸಂಶೋಧಕ ಮತ್ತು ಸಾಕ್ಷ್ಯಚಿತ್ರ ನಿರ್ದೇಶಕ

ಪೂರ್ಣಪಠ್ಯವು **prajavani.net** ನಲ್ಲಿ ಲಭ್ಯ

ಪದಬಂಧ 5286


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2. ಬೆಳ್ಳಿ ಹಬ್ಬವಿದು (5)
4. ಪಾಕದೊಳಗಿರುವ ಪಾಪ ಕಾಣುತ್ತಿದೆಯೇ? (3)
5. ಸೊಂಟದಿಂದ ಪ್ರಾರಂಭವಾದ ಕಂಪನ (3)
7. ಮುನಿದವನಲ್ಲಿಯೇ ಸಂತೋಷ ಕಾಣುತ್ತಿದೆಯಲ್ಲಾ! (2)
10. ಮರಗಳ ಗುಂಪು (2)
11. ಹುತ್ತ ಇಲ್ಲಿದೆ (3)
12. ನಕ್ಷತ್ರವಿಲ್ಲಿ ತಲೆಕೆಳಗಾಗಿದೆ (2)
13. ಕಾದಾಟದಲ್ಲಿರುವ ತೊಂದರೆ ಉಲ್ಟಾ ಆಗಿದೆ (2)
15. ಸ್ವಂತ ಬೇಸಾಯದ ಭೂಮಿ (3)
18. ಮನದೊಳಗಿರುವ ಕಾಮ (3)
19. ಮನಸ್ಸನ್ನು ಸಂತೋಷಗೊಳಿಸುವುದು (5)

ಮೇಲಿಂದ ಕೆಳಕ್ಕೆ

1. ಆನಂದ ಈ ರೀತಿ ಬಂದಿದೆ (3)
2. ಕೈತಿರುಗಿಸಿ ಹೇಳಿದ ಬೆಲೆ (3)
3. ವದನದಲ್ಲಿಯೇ ಕಾಡು ಕಾಣುತ್ತಿದೆ (2)
4. ಪಾಕಕ್ಕೆ ದೊರೆತ ಬಹುಮಾನವೇ ಇದು? (5)
6. ಕೈ ಬಡಿದು ತಟ್ಟಿರುವ ಚಪ್ಪಾಳೆ (5)
8. ಆ ದಿವಸ ತಂದ ಕಾಲುಕಡಿ (3)
9. ದುಃಖ ಹೀಗೆ ಬಂದಿದೆ (3)
14. ರತಿ ಪತಿಯಿಂದ ಮೂಡಿದ ಆಸೆ (3)
16. ಮತ ಹಾಕುವಾಗ ಆವರಿಸಿದ ಕತ್ತಲು (2)
17. ಇತ್ತೀಚೆಗೆ ಆರಂಭಗೊಂಡಿರುವ ಬೇಸಾಯ (3)



5285ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಾವ
3.ಪ್ರಯಾಸ 6.ರಸಿಕ
8.ಪರಿಕರ 10.ಪ್ರಖರ
11.ಕಲ್ಯಾಣ 12.ರಸವಾದ
15.ಮಕರ 17.ಕಮ್ಮಾರ
18.ನಿಜ

ಮೇಲಿಂದ ಕೆಳಕ್ಕೆ:
2.ವಠಾರ 3.ಪ್ರತೀಕ
4.ಸಮೀಪ 5.ಸುಂಕ
7.ಸಿತಾರ 9.ರಮಣ
10.ಪ್ರಚಾರ 11.ಕಣಕ
13.ಸಸಿ 14.ದಶಕ
15.ಮಧುರ 16.ರಜನಿ

ಸುಡೊಕು 5672

2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6


5671 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಏಪ್ರಿಲ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ಸಪ್ತಮಿ ಗಂ.27-45, ನಕ್ಷತ್ರ: ಮೂಲಾ ಗಂ.11-59 ಯೋಗ: ಪರಿಘ ಗಂ.15-19, ಕರಣ: ವಿಷ್ಟಿ ಗಂ.16-44, ಮೀನ ಮಾಸದ 28 ನೇ ದಿನ, ಮಳೆನಕ್ಷತ್ರ: ರೇವತಿ 4
ರಾಹುಕಾಲ : ಮಧ್ಯಾಹ್ನ 12-00–01-30, ಸೂರ್ಯೋದಯ : 06-22 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 20 ರಂಜಾನ್
ದಿನ ವಿಶೇಷ : ಷಹದತ್-ಎ-ಹಜರತ್ ಅಲಿ (ಮುಸ್ಲಿಂ)
ಅದೃಷ್ಟ ಸಂಖ್ಯೆ : 1, 12

ಮೇಷ: ಗೆಳೆಯರು ಮಾಡುವ ಸಹಾಯಗಳಿಗೆ ಕೃತಜ್ಞತಾ ಪೂರ್ವಕವಾಗಿ ಇರುವುದನ್ನು ಮೈಗೂಡಿಸಿಕೊಳ್ಳಿ. ಸಾಮಾಜಿಕ ಸ್ಥಾನಮಾನ ಕಾಯ್ದುಕೊಳ್ಳುವ ಹೆಸರಿನಲ್ಲಿ ನಿಮಗಿರುವ ಕಟ್ಟುಪಾಡುಗಳು ಹೆಚ್ಚೆಂದು ಎನ್ನಿಸುವುದು.

ವೃಷಭ: ಕೆಲಸಗಳನ್ನು ಒಬ್ಬರೆ ಮಾಡಬಹುದೆಂದು ತಿಳಿದರೂ ಇತರರ ಸಹಾಯ ಪಡೆಯುವುದರಿಂದ ಕಡಿಮೆ ಸಮಯದಲ್ಲಿ ಮುಗಿಸಬಹುದೆಂಬುದನ್ನು ಕಂಡುಕೊಳ್ಳಿ. ಕುಲದೇವರ ದರ್ಶನ ಮಾಡುವ ಮನಸ್ಸಾಗಬಹುದು.

ಮಿಥುನ: ಹಲವು ಪ್ರಶ್ನೆಗಳಿಗೆ ನಿಮ್ಮದೇ ಧಾಟಿಯಲ್ಲಿ ತೇಲಿಕೆಯ ಉತ್ತರ ನೀಡಿ ಚಾಣಾಕ್ಷತೆ ಮೆರೆಯುವಿರಿ. ಸಸ್ಯ ಶಾಸ್ತ್ರಜ್ಞರು ಶಿಲೀಂದ್ರಗಳ ಅಧ್ಯಯನ ನಡೆಸುವುದಿದ್ದಲ್ಲಿ ಹೆಚ್ಚಿನ ಮುಂಜಾಗ್ರತೆ ವಹಿಸುವುದು ಸೂಕ್ತ.

ಕರ್ಕಾಟಕ: ಕಚ್ಚಾ ತೈಲದ ವಹಿವಾಟು ನಡೆಸುವವರಿಗೆ ಅನಿರೀಕ್ಷಿತ ಸವಾಲುಗಳು ಎದುರಾಗುತ್ತದೆ. ಬಂಗಾರದ ಬೆಲೆಯ ಹಾವು ಏಣಿ ಆಟವು ನಿಮ್ಮ ಮೇಲೆ ಒಂದು ರೀತಿಯ ಪರಿಣಾಮ ಉಂಟುಮಾಡುವ ಸಾಧ್ಯತೆಗಳಿವೆ.

ಸಿಂಹ: ಹರಿತವಾದ ಮಾತುಗಳು ಕೆಲವರ ತೇಜೋವಧೆಯನ್ನು ಮಾಡಬಹುದು ಆದರೆ ಅದಕ್ಕೆ ಅವಕಾಶ ಕೊಡದಿರಿ. ಮನೆಯ ವ್ಯಕ್ತಿಗಳ ದೂರಪ್ರಯಾಣವು ಆತಂಕಕ್ಕೆ ಎಡೆ ಮಾಡಿಕೊಡಬಹುದು.

ಕನ್ಯಾ: ಪ್ರಾರ್ಥನೆಯನ್ನು ಮಾಡದೆ ಪ್ರಾರಂಭ ಮಾಡಿದ ಕೆಲಸಗಳಿಗೆ ಹಲವಾರು ವಿಘ್ನಗಳು ಬಂದೊದಗಬಹುದು. ನಿರಪರಾಧಿಗಳ ಮೇಲೆ ಅಪರಾಧಗಳನ್ನು ಹೊರಸಿ ಅವರನ್ನು ದುಃಖಗೊಳಿಸುವುದು ಶ್ರೇಯಸ್ಸಲ್ಲ.

ತುಲಾ: ಜನಮಾನಸದಲ್ಲಿ ಅಚ್ಚಾಗಿರುವ ಕಾರ್ಯಗಳನ್ನು ನಿಲ್ಲಿಸಲು ಹೋಗಬೇಡಿ. ಮನೆಯಲ್ಲಿನ ಸಂತೋಷವು ಇಂದು ನಿಮ್ಮ ಅನಿರೀಕ್ಷಿತ ಭೇಟಿ ಯಿಂದ ಇಮ್ಮಡಿಯಾಗುತ್ತದೆ. ಚರ್ಮ ಸಂಬಂಧಿ ತೊಂದರೆಗಳು ಪೀಡಿಸಬಹುದು.

ವೃಶ್ಚಿಕ: ಪುಷ್ಪವಿನ್ಯಾಸಕರ ಅಪರೂಪದ ಪುಷ್ಪ ಸಂಯೋಜನೆಯು ಪ್ರಸಿದ್ಧಿ ಗಳಿಸುವುದು. ಪಕ್ಕವಾದ್ಯ ಪ್ರವೀಣರಿಗೆ ಸಮಾರಂಭಗಳಲ್ಲಿ ಉತ್ತಮ ಮನ್ನಣೆ ದೊರೆಯುವುದು. ದಲ್ಲಾಳಿಗಳ ಆಮಿಷಗಳಿಗೆ ಮರುಳಾಗದಿರಿ.


ಧನು: ಹಲವು ದಿನಗಳ ಬಳಿಕ ಹಳೆಯ ಏಕಾಂಗಿತನವು ಕಾಡುವ ಸಾಧ್ಯತೆ ಇದೆ. ಮೊಮ್ಮಗನ ವಯಸ್ಸಿಗೆ ಮೀರಿದ ಕೆಲವು ಆಟೋಟಗಳನ್ನು ನೋಡಿ ಮನಸ್ಸು ಪ್ರಫುಲ್ಲವಾಗುವುದು. ತಪ್ಪುಗಳಿಗೆ ಬೇರೆಯವರು ಪಡುವ ಕಷ್ಟ ಸಹಿಸಲಾರಿರಿ.

ಮಕರ: ಹಳೆಯ ತಪ್ಪುಗಳು ಮತ್ತೆ ಮರುಕಳಿಸಿದಾಗ ಪೋಷಕರಿಗಾಗುವ ಅಸಮಧಾನವು ಮರ್ಯಾದೆಯ ಪ್ರಶ್ನೆಯಾಗುತ್ತದೆ. ಕಾರ್ಯಕ್ಷೇತ್ರದಲ್ಲಿನ ಕೋಪವು ಮನೆಯ ಮಡದಿ , ಮಗನ ಮೇಲೆ ಪ್ರಯೋಗವಾಗುವುದು ಬೇಡ.

ಕುಂಭ: ಸಂತೋಷಕ್ಕಾಗಿ ಕೆಲವರು ಮಾಡುವ ಖರ್ಚು ದುಂದುವೆಚ್ಚವಾಗಿ ಕಾಣಬಹುದು. ಒಂದೇ ಬಾರಿ ಹೆಚ್ಚು ಹಣವನ್ನು ಒಂದು ಕೆಲಸಕ್ಕೆ ವಿನಿಯೋಗಿಸುವುದರ ಬದಲು ಕಂತಿನಲ್ಲಿ ತೀರಿಸುವ ಬಗ್ಗೆ ಯೋಚಿಸಿ.

ಮೀನ: ಮಗಳು ಮತ್ತು ಸೊಸೆ ಎನ್ನುವ ಭಾವನೆಯಿಲ್ಲದೆ ಸಮಾನವಾಗಿ ಕಾಣುವ ಗುಣದ ಉತ್ತಮ ಫಲಗಳು ಕಾಣಸಿಗುತ್ತವೆ. ವಿದ್ಯುತ್ ಉಪಕರಣ ಸರಿಯಾದ ರೀತಿಯಲ್ಲಿ ಬಳಸದಿದ್ದಲ್ಲಿ ಹಾಳಾಗುವ ಸಾಧ್ಯತೆ ಇದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,624
ಇಂದಿನ ಅಂತ್ಯ	17,722
▲	98
ದಿನದ ಕನಿಷ್ಠ	17,748

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹285-547
ದ್ವಿತಳಿ (ಬಿ.ವಿ)	₹256-628

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1720(1720)
ಸೋಯಾ (ರಿಫೈಂಡ್)	₹1045(1045)
ಸೂರ್ಯಕಾಂತಿ (ರಿಫೈಂಡ್)	₹1070(1070)
ಪಾಮೋಲಿನ್	₹970(964)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,000-1,500
ಮಧ್ಯಮ	₹700-1,000
ಸಣ್ಣ	₹300-700

ಕೊಬ್ಬರಿ ಧಾರಣೆ

ಅರಸೀಕೆರೆ	₹9000-9620
ಕೆ.ಆರ್. ಪೇಟೆ (ಇತರ)	₹8084-8084

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹132

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-53000
ಚನ್ನಗಿರಿ	
ರಾಶಿ	44399-46099
ಕಾರ್ಕಳ	
ಹೊಸತು	30000-38000
ಹಳತು	40000-53000
ಪುತ್ತೂರು	
ಹೊಸತು	32000-38300
ಸಾಗರ	
ಬಿಳಿಗೋಟು	-28099-29099
ಚಾಲಿ	34227-35299
ಕೋಕ	24290-31299
ಕೆಂಪುಗೋಟು	14989-32599
ರಾಶಿ	44599-44939
ಸಿಪ್ಪೆಗೋಟು	13159-19309
ಶಿವಮೊಗ್ಗ	
ಬೆಟ್ಟೆ	41029-51800
ಗೊರಬಲು	20009-33099
ರಾಶಿ	32699-45699
ಸರಕು	53699-80100
ಶಿರಸಿ	
ಬೆಟ್ಟೆ	31069-42869
ಬಿಳಿಗೋಟು	25709-31900
ಚಾಲಿ	30699-36899
ಕೆಂಪುಗೋಟು	26699-33628
ರಾಶಿ	41399-44899
ಯಲ್ಲಾಪುರ	
ಆಪಿ	53998-54299
ಬಿಳಿಗೋಟು	24899-33212
ಚಾಲಿ	32212-37970
ಕೋಕ	16899-30099
ಕೆಂಪುಗೋಟು	24779-34299
ರಾಶಿ	40399-48199
ತಟ್ಟಿಬೆಟ್ಟೆ	36742-44509
ತುಮಕೂರು	
ರಾಶಿ	44600-45050

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ ಹಾಸನ	
ಮುದ್ರಮನೆ	
ಎಪಿ	14750
ಎಸಿ	7700
ಆರ್‌ಪಿ	10400
ಆರ್‌ಸಿ	5340

ಮತ್ತೆ 60 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಸತತ ಏಳನೆಯ ದಿನವೂ ಏರಿಕೆಯ ವಹಿವಾಟು ಕಂಡ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್, ಮಂಗಳವಾರದ ವಹಿವಾಟಿನಲ್ಲಿ 310 ಅಂಶ ಜಿಗಿದು, ಮತ್ತೆ 60 ಸಾವಿರದ ಗಡಿ ದಾಟಿತು. ಲೋಹ, ಬ್ಯಾಂಕ್ ಮತ್ತು ಹಣಕಾಸು ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದರು.

ವಿದೇಶಿ ಹೂಡಿಕೆಯ ಒಳಹರಿವು ಸೂಚ್ಯಂದ ಏರಿಕೆಗೆ ನೆರವಾಯಿತು. ಏಳು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ ಒಟ್ಟು 2,544 ಅಂಶ ಏರಿಕೆ ದಾಖಲಿಸಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಮಂಗಳವಾರ 98 ಅಂಶ ಏರಿಕೆ ಕಂಡಿದೆ.

‘ಬ್ಯಾಂಕಿಂಗ್ ಹಾಗೂ ಆಟೊ ಮೊಬೈಲ್ ವಲಯದ ಕಂಪನಿಗಳ ತ್ರೈಮಾಸಿಕ ಫಲಿತಾಂಶವು ಚೆನ್ನಾಗಿ ರಲಿದೆ ಎಂಬ ನಿರೀಕ್ಷೆ ಹೂಡಿಕೆದಾರರಲ್ಲಿ ಇರುವ ಕಾರಣ ಈ ವಲಯಗಳಲ್ಲಿ ತೇಜಿ ವಹಿವಾಟು ನಡೆದಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಬ್ಯಾರೆಲ್‌ಗೆ ಶೇಕಡ 0.35ರಷ್ಟು ಹೆಚ್ಚಾಗಿ, 84.53 ಡಾಲರ್‌ಗೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

11-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730(1730)
ಒಂದು ವಾರದ ಡೆಲಿವರಿ	1725(1725)
ಸೋಯಾ ಕಚ್ಚಾ	945(935)
ಪಾಮ್ ವಾರದ ಡೆಲಿವರಿ	968(962)
ಸೂರ್ಯಕಾಂತಿ ಎಣ್ಣೆ ಕಚ್ಚಾ	930(930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60100(59900)
ಬೆಳ್ಳಿ ಕೆ.ಜಿ 74350(74500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಾಷಿಂಗ್ಟನ್: ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದನೆ

‘ಭಾರತದಲ್ಲಿ ಮುಸ್ಲಿಮರ ಸ್ಥಿತಿ ಪಾಕ್‌ಗಿಂತಲೂ ಉತ್ತಮ’



ನಿರ್ಮಲಾ ಸೀತಾರಾಮನ್

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಮುಸ್ಲಿಂ ಸಮುದಾಯದವರು ಪಾಕಿಸ್ತಾನಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದಾರೆ. ಅತಿಹೆಚ್ಚು ಮುಸ್ಲಿಮರನ್ನು ಹೊಂದಿರುವ ವಿಶ್ವದ ಎರಡನೇ ರಾಷ್ಟ್ರ ಭಾರತ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಅಮೆರಿಕದ ಪ್ರವಾಸದಲ್ಲಿರುವ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪೀಟರ್ಸನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್‌ನ್ಯಾಷನಲ್ ಎಕನಾಮಿಕ್ಸ್‌ನಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದರು.

ಮುಸ್ಲಿಮರಿಗೆ ಸಂಬಂಧಿಸಿದ ವಿಷಯಗಳನ್ನು ಮುಂದಿಟ್ಟುಕೊಂಡು ಭಾರತದ ವಿರುದ್ಧ ದಾಳಿ ನಡೆಸುವವರಿಗೆ ವಾಸ್ತವ ಸಂಗತಿಗಳ ಅರಿವು ಇಲ್ಲ ಎಂದು ಅಭಿಪ್ರಾಯಪಟ್ಟರು.

‘ಭಾರತದಲ್ಲಿ ಮುಸ್ಲಿಮರು ಸಂಕಷ್ಟದಲ್ಲಿದ್ದಾರೆ ಅಥವಾ ಸರ್ಕಾರವೇ ಅವರನ್ನು ಅಂತಹ ದುಸ್ಥಿತಿಗೆ ದೂಡಿದೆ ಎಂಬ ಕಲ್ಪನೆಗಳಿವೆ. ಇದೇ ಅರ್ಥ ಬರುವ ಲೇಖನಗಳು ಕೂಡ ಪ್ರಕಟವಾಗಿವೆ. ಇಂಥ ವಾದಗಳು ನಿಜವೇ ಆಗಿದ್ದಲ್ಲಿ, ಈಗ ಭಾರತದಲ್ಲಿ ಇರುವ ಮುಸ್ಲಿಂ ಜನಸಂಖ್ಯೆ 1947ರ ನಂತರ ಇಷ್ಟೊಂದು ಪ್ರಮಾಣದಲ್ಲಿ ಬೆಳೆಯಲು ಸಾಧ್ಯವಿತ್ತೇ? 1947ರಲ್ಲಿಯೇ ಅಸ್ತಿತ್ವಕ್ಕೆ ಬಂದಿರುವ ಪಾಕಿಸ್ತಾನದಲ್ಲಿ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಕಾಣಬಹುದು’ ಎಂದರು.

‘ಇಂಥ ವರದಿ ಪ್ರಕಟಿಸುವವರನ್ನು ಭಾರತಕ್ಕೆ ಬರುವಂತೆ ಆಹ್ವಾನಿಸುವೆ. ಅವರು ದೇಶದಾದ್ಯಂತ ಒಬ್ಬರೇ ಸಂಚರಿಸಿ, ವಸ್ತುಸ್ಥಿತಿಯನ್ನು ಕಣ್ಣಾರೆ ಕಂಡು ವರದಿ ಬರೆಯಲಿ. ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲಿ’ ಎಂದು ಹೇಳಿದರು.

‘ಪಾಕಿಸ್ತಾನದಲ್ಲಿ ಮುಹಾಜಿರ್, ಶಿಯಾ ಸೇರಿದಂತೆ ಇತರ ಅಲ್ಪಸಂಖ್ಯಾತರ ವಿರುದ್ಧ ನಿರಂತರ ಹಿಂಸಾಚಾರ ನಡೆಯುತ್ತಿದೆ. ಅದೇ ಭಾರತದಲ್ಲಿ ಮುಸ್ಲಿಮರಲ್ಲಿನ ಎಲ್ಲ ಸ್ತರದ ಜನರೂ ಉತ್ತಮ ಜೀವನ ನಡೆಸುತ್ತಿದ್ದಾರೆ’ ಎಂದು ವಿವರಿಸಿದರು.

‘ಭಾರತವು ವಿಭಜನೆಗೊಂಡು, ಎರಡು ಪಾಕಿಸ್ತಾನಗಳು ಅಸ್ತಿತ್ವಕ್ಕೆ ಬಂದವು. ಈ ಪೈಕಿ ಈಗಿನ ಪಾಕಿಸ್ತಾನವು ತನ್ನನ್ನು ಇಸ್ಲಾಮಿಕ್ ರಾಷ್ಟ್ರ ಎಂಬುದಾಗಿ ಘೋಷಿಸಿಕೊಂಡಿತಲ್ಲದೇ, ದೇಶದಲ್ಲಿನ ಅಲ್ಪಸಂಖ್ಯಾತರನ್ನು ರಕ್ಷಿಸುವುದಾಗಿ ಹೇಳಿತು. ಆದರೆ, ಪಾಕಿಸ್ತಾನದಲ್ಲಿರುವ ಪ್ರತಿಯೊಂದು ಅಲ್ಪಸಂಖ್ಯಾತ ಸಮುದಾಯದವರ ಜನಸಂಖ್ಯೆ ಕಡಿಮೆಯಾಗುತ್ತಿದೆ ಇಲ್ಲವೇ ಅವರನ್ನು ನಾಶ ಮಾಡಲಾಗುತ್ತಿದೆ. ಮುಸ್ಲಿಮರಲ್ಲಿನ ಕೆಲ ವರ್ಗಗಳು ಕೂಡ ನಾಶವಾಗಿವೆ’ ಎಂದರು.

‘ಭಾರತದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ರಾಜ್ಯಗಳಿಗೆ ಸಂಬಂಧಿಸಿದ್ದು. ಪ್ರತಿಯೊಂದು ರಾಜ್ಯವು ಚುನಾಯಿತ ಸರ್ಕಾರ ಹೊಂದಿದ್ದು, ಕಾನೂನು–ಸುವ್ಯವಸ್ಥೆಯನ್ನು ಕಾಪಾಡುತ್ತದೆ’ ಎಂದೂ ಅವರು ಹೇಳಿದರು.

ಅಮೆರಿಕದ ಉದ್ದಿಮೆಗಳಿಗೆ ಆಹ್ವಾನ

ವಾಷಿಂಗ್ಟನ್ (ಪಿಟಿಐ): ನ್ಯಾಯಸಮ್ಮತ ಮತ್ತು ಪಾರದರ್ಶಕ ಅರ್ಥ ವ್ಯವಸ್ಥೆ ಎಂದು ಕರೆಸಿಕೊಳ್ಳಲು ಅಗತ್ಯವಿರುವ ಎಲ್ಲವೂ ಭಾರತದಲ್ಲಿ ಇವೆ ಎಂದು ಹೇಳಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಅಮೆರಿಕದ ಉದ್ದಿಮೆಗಳಿಗೆ ಭಾರತದಲ್ಲಿ ಹೂಡಿಕೆ ಮಾಡುವಂತೆ ಆಹ್ವಾನಿಸಿದ್ದಾರೆ.

ಅಮೆರಿಕ – ಭಾರತ ವಾಣಿಜ್ಯ ಪರಿಷತ್ತಿನ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಈಗಿನ ಸರ್ಕಾರವು ಜಾಗತಿಕ ಉದ್ದಿಮೆಗಳಿಗೆ ಭಾರತದ ಪ್ರಗತಿಯ ಭಾಗವಾಗಲು ಅವಕಾಶಗಳನ್ನು ಸೃಷ್ಟಿಸುವ ಕೆಲಸ ಮಾಡುತ್ತಿದೆ’ ಎಂದು ಹೇಳಿದ್ದಾರೆ. ಈ ಸಭೆಯಲ್ಲಿ ಅಮೆರಿಕದ ಪ್ರಮುಖ ಕಂಪನಿಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸುಧಾ ಓದಿರಿ

ರಂಜಾನ್ ಆಹಾರ ನಿರಾಕರಣೆ: ಭಾರತೀಯ ದಂಪತಿ ಕ್ಷಮೆಯಾಚಿಸಿದ ಸೂಪರ್ ಮಾರ್ಕೆಟ್

ಸಿಂಗಪುರ (ಪಿಟಿಐ): ರಂಜಾನ್ ವೇಳೆ ನೀಡಲಾಗುವ ಲಘು ಆಹಾರದ (ಸ್ನ್ಯಾಕ್ಸ್) ರುಚಿ ನೋಡಲು ಮುಂದಾಗಿದ್ದ ಭಾರತೀಯ ಮುಸ್ಲಿಂ ದಂಪತಿಯನ್ನು ಇಲ್ಲಿನ ಸೂಪರ್ ಮಾರ್ಕೆಟ್ ಸಿಬ್ಬಂದಿ ತಡೆದಿದೆ. ಬಳಿಕ ಆಗಿರುವ ಪ್ರಮಾದ ಅರಿತು ಸೂಪರ್ ಮಾರ್ಕೆಟ್‌ನ ಪರವಾಗಿ ದಂಪತಿಯ ಕ್ಷಮೆಯಾಚಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

‘ಇಲ್ಲಿನ ನ್ಯಾಷನಲ್ ಟ್ರೇಡ್ಸ್ ಯೂನಿಯನ್ ಕಾಂಗ್ರೆಸ್ ನಡೆಸುತ್ತಿರುವ ಸೂಪರ್ ಮಾರ್ಕೆಟ್‌ಗೆ ತೆರಳಿದ್ದಾಗ ಅಲ್ಲಿನ ಪುರುಷ ಸಿಬ್ಬಂದಿಯೊಬ್ಬರು ರಂಜಾನ್‌ನ ಲಘು ಆಹಾರದ ರುಚಿ ನೋಡಲು ಮುಂದಾಗಿದ್ದ ತಮ್ಮನ್ನು ತಡೆದು, ಇದು ಮಲೇಷ್ಯಾ ಮತ್ತು ಇಂಡೊನೇಷ್ಯಾದವರಿಗೆ ಮಾತ್ರ ಎಂದು ಹೇಳಿದರು’ ಎಂದು ಜಹಬರ್ ಶಾಲಿಹ್ ಮತ್ತು ಅವರ ಪತ್ನಿ ಫರ್ಹಾ ನಾಡಿಯಾ ದಂಪತಿ ಸೋಮವಾರ ‘ಚಾನೆಲ್ ನ್ಯೂಸ್ ಏಷ್ಯಾ’ಕ್ಕೆ ತಿಳಿಸಿದ್ದರು.

ಜಹಬರ್ ಭಾರತದವರಾಗಿದ್ದರೆ, ಅವರ ಪತ್ನಿ ಫರ್ಹಾ ಮಲೇಷ್ಯಾಕ್ಕೆ ಸೇರಿದವರಾಗಿದ್ದಾರೆ. ದಂಪತಿ ಇಬ್ಬರು ಮಕ್ಕಳೊಂದಿಗೆ ಸೂಪರ್ ಮಾರ್ಕೆಟ್‌ಗೆ ಶಾಪಿಂಗ್‌ಗಾಗಿ ತೆರಳಿದ್ದಾಗ ಈ ಘಟನೆ ನಡೆದಿದೆ. ಘಟನೆ ಕುರಿತು ಫರ್ಹಾ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ‘ಅಸಹ್ಯಕರ’ ಎಂದು ಬರೆದುಕೊಂಡಿದ್ದಾರೆ. ಇದಕ್ಕೆ 500ಕ್ಕೂ ಹೆಚ್ಚು ಮಂದಿ ಪ್ರತಿಕ್ರಿಯೆ ನೀಡಿದ್ದಾರೆ.

ಮಾರ್ಚ್ 23ರಂದು ಇಲ್ಲಿನ ಫೇರ್‌ಪ್ರೈಸ್ ಗ್ರೂಪ್ ಇಫ್ತಾರ್ ಬೈಟ್ಸ್ ಸ್ಟೇಷನ್ ತೆರೆದಿದ್ದು, ರಂಜಾನ್ ಸಮಯದಲ್ಲಿ ಮುಸ್ಲಿಂ ಗ್ರಾಹಕರಿಗೆ ತನ್ನ 60 ಮಳಿಗೆಗಳಲ್ಲಿ ಉಚಿತವಾಗಿ ಲಘು ಆಹಾರ, ಖರ್ಜೂರ ಮತ್ತು ಪಾನೀಯಗಳನ್ನು ನೀಡುವ ವ್ಯವಸ್ಥೆ ಮಾಡಿದೆ. ಅಂತೆಯೇ ಸೂಪರ್ ಮಾರ್ಕೆಟ್‌ನಲ್ಲಿ ಇಫ್ತಾರ್ ಬೈಟ್ಸ್ ಸ್ಟೇಷನ್ ತೆರೆಯಲಾಗಿದೆ. ಅಲ್ಲಿಗೆ ತೆರಳಿದ್ದ ಜಹಬರ್ ಅಲ್ಲಿದ್ದ ಬೋರ್ಡ್ ಅನ್ನು ಓದಲು ಮುಂದಾಗುತ್ತಿದ್ದಂತೆಯೇ, ಅಲ್ಲಿನ ಸಿಬ್ಬಂದಿಯೊಬ್ಬರು ತಡೆದು, ‘ಇದು ಭಾರತದವರಿಗೆ ಅಲ್ಲ’, ‘ಮಲೇಷ್ಯಾ ಮತ್ತು ಇಂಡೊನೇಷ್ಯಾದವರಿಗೆ ಮಾತ್ರ’ ಎಂದು ಹೇಳಿದ್ದರು.

ಜಹಬರ್ ಭಾರತೀಯ ಮೂಲದ ಮುಸ್ಲಿಂ ದಂಪತಿ ಎಂಬುದನ್ನು ಅರಿತ ಬಳಿಕ ಸೂಪರ್ ಮಾರ್ಕೆಟ್ ಆಡಳಿತ ವರ್ಗ ಘಟನೆಯ ಬಗ್ಗೆ ಕ್ಷಮೆಯಾಚಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಾಂತಾರಾಮ್ ಕೆ.ಆರ್., ಪದ್ಮನಾಭ ನಗರ, ಬೆಂಗಳೂರು

- **ಪ್ರಶ್ನೆ:** ಇದೇ ಏಪ್ರಿಲ್ 1ರಿಂದ, ಹಿರಿಯ ನಾಗರಿಕರ ಉಳಿತಾಯ ಯೋಜನೆಯಲ್ಲಿ (ಎಸ್‌ಸಿಎಸ್‌ಎಸ್) ಬಡ್ಡಿ ದರ ಶೇಕಡ 8 ಇದ್ದಿದ್ದನ್ನು ಶೇ 8.2ಕ್ಕೆ ಏರಿಸಿದ್ದಾರೆ. ಇದು ಹೂಡಿಕೆಗೆ ಆಕರ್ಷಕವಾಗಿದೆ. ಎಸ್‌ಬಿಐ, ಇತರ ಬ್ಯಾಂಕ್‌ಗಳು ಹಾಗೂ ಅಂಚೆ ಕಚೇರಿಯಲ್ಲಿ ಹೂಡಿಕೆಗೆ ಅವಕಾಶವಿದೆ. ಈ ಬಾರಿಯ ಬಜೆಟ್ ಮೂಲಕ ಎಸ್‌ಸಿಎಸ್‌ಎಸ್ ಹೂಡಿಕೆ ಮಿತಿಯನ್ನು ₹ 15 ಲಕ್ಷದಿಂದ ₹ 30 ಲಕ್ಷಕ್ಕೆ ಏರಿಸಿದ್ದಾರೆ. ಈ ಮೇಲಿನ ಮಾಹಿತಿ ಪ್ರಕಾರ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸಲು ನಿವೃತ್ತಿ ಯೋಜನೆಯಿಂದ ಬಂದ ಹಣವನ್ನು ಮಾತ್ರ ಹೂಡಿಕೆ ಮಾಡಬಹುದೋ ಅಥವಾ 60 ವರ್ಷ ಮೇಲ್ಪಟ್ಟ ಯಾವುದೇ ವ್ಯಕ್ತಿ ಸ್ವಂತ ಹಣದಿಂದಲೂ ಹೂಡಿಕೆ ಮಾಡಬಹುದೋ?

ಉತ್ತರ: ಹಿರಿಯ ನಾಗರಿಕರ ಉಳಿತಾಯ ಯೋಜನೆಯು ಕೇಂದ್ರ ಸರ್ಕಾರದ ಬೆಂಬಲವಿರುವ ನಿವೃತ್ತಿ ಯೋಜನೆಗಳ ಪೈಕಿ ಒಂದು ಪ್ರಮುಖ ಯೋಜನೆ. ಈ ಯೋಜನೆಯಲ್ಲಿ ಹೂಡಿಕೆಗೆ, 2019ರಲ್ಲಿ ನವೀಕರಿಸಿ ಹೊರಡಿಸಲಾದ ಅಧಿಸೂಚನೆಯಲ್ಲಿರುವ ‘ಹಿರಿಯ ನಾಗರಿಕರ ಉಳಿತಾಯ ಯೋಜನೆ’ಯ ನಿಯಮಗಳು ಅನ್ವಯಿಸುತ್ತವೆ. ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿರುವಂತೆ, ಸಾಮಾನ್ಯವಾಗಿ ಇದು 60 ವರ್ಷ ವಯಸ್ಸು ಮೇಲ್ಪಟ್ಟ ಹಿರಿಯ ನಾಗರಿಕರಿಗೆ ನೀಡಲಾಗುವ ಹೂಡಿಕೆ ಸೌಲಭ್ಯವಾದರೂ, ಕೆಲವು ಸನ್ನಿವೇಶಗಳಲ್ಲಿ 55ರಿಂದ 60 ವರ್ಷ ವಯಸ್ಸಿನ ನಡುವೆ ನಿವೃತ್ತಿ ಹೊಂದಿದವರಿಗೂ ಇಲ್ಲಿ ಹೂಡಿಕೆ ಮಾಡಲು ಅವಕಾಶವಿದೆ. ಈ ಯೋಜನೆಯ ಒಟ್ಟು ಉದ್ದೇಶ, ನಿವೃತ್ತಿಯ ಸಂದರ್ಭದಲ್ಲಿ ಸಿಗುವ ಅನೇಕ ರೀತಿಯ ಉಳಿತಾಯಗಳ ಮೊತ್ತವನ್ನು ಮುಂದಿನ ಬದುಕಿಗಾಗಿ ವಿಶೇಷ ಖಾತೆಗಳಲ್ಲಿ ಹೂಡಿಕೆ ಮಾಡಿ, ನಿಶ್ಚಿತ ಆದಾಯ ಖಾತರಿಪಡಿಸಿಕೊಳ್ಳುವುದು.

ಇಲ್ಲಿ ವೈಯಕ್ತಿಕ ಖಾತೆಯಲ್ಲಾದರೆ ನಿವೃತ್ತಿ ಸಂದರ್ಭದಲ್ಲಿ ಸಿಕ್ಕ ಹಣ ಅಥವಾ ₹ 15 ಲಕ್ಷ, ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತ, ಹೂಡಿಕೆಯ ಯೋಜನೆಯ ಅಡಿ ಪರಿಗಣಿತವಾಗುವ ಮೊತ್ತ. ಜಂಟಿ ಖಾತೆ ತೆರೆದು ಹೂಡಿಕೆ ಮಾಡಬಹುದು. ಪತಿ-ಪತ್ನಿ ಜಂಟಿ ಖಾತೆಯ ಒಟ್ಟು ಹೂಡಿಕೆಯ ಮಿತಿ ₹ 30 ಲಕ್ಷ. ಆದರೆ, ಮೊದಲ ವ್ಯಕ್ತಿಯ ಹೆಸರನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ ಹಾಗೂ ಜಂಟಿ ಖಾತೆಯ ಎರಡನೇ ವ್ಯಕ್ತಿ ನಾಮಮಾತ್ರಕ್ಕೆ ದಾಖಲೆಯಲ್ಲಿ ಇರುತ್ತಾರೆಯೇ ವಿನಾ ಅವರಿಗೆ 60 ವರ್ಷ ವಯಸ್ಸು ಆಗಿರಬೇಕೆಂದಿಲ್ಲ.

ನಿಮ್ಮ ಮುಖ್ಯ ವಿಚಾರಕ್ಕೆ ಸಂಬಂಧಿಸಿ ಉತ್ತರಿಸುವುದಾದರೆ, ಈ ಯೋಜನೆ ನಿವೃತ್ತಿಯ ಸಮಯದಲ್ಲಿ ಗಳಿಸುವ ಮೊತ್ತವನ್ನು ಸಮರ್ಪಕವಾಗಿ ಹೂಡಿಕೆ ಮಾಡುವುದಕ್ಕೆ ರೂಪುಗೊಂಡಿದೆ. ಯೋಜನೆಯ ನಿಯಮಾವಳಿ ಪ್ರಕಾರ, ನಿವೃತ್ತಿಯ ಸಮಯಕ್ಕೆ ಸಿಗುವ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ, ಮುಂಗಡ ಪಿಂಚಣಿ, ರಜಾ ನಗದೀಕರಣದ ಮೊತ್ತ, ಗ್ರೂಪ್ ಸೇವಿಂಗ್ಸ್ ಇನ್ಶೂರನ್ಸ್ ಮೊತ್ತ ಇತ್ಯಾದಿಗಳ ಒಟ್ಟು ಮೊತ್ತವನ್ನು ಇಲ್ಲಿ ತೊಡಗಿಸಬಹುದು. ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿದವರಷ್ಟೇ ಈ ಮೊತ್ತವನ್ನು ಪಡೆಯಲು ಸಾಧ್ಯ, ಸ್ವಂತ ಉಳಿತಾಯದಿಂದ ಈ ಯೋಜನೆಯ ಅಡಿ ಹೂಡಿಕೆಗೆ ಅವಕಾಶವಿಲ್ಲ. ಪ್ರಸ್ತುತ ಇಲ್ಲಿ ವಾರ್ಷಿಕ ಶೇಕಡ 8.2ರಷ್ಟು ಬಡ್ಡಿ ಸಿಗುತ್ತದೆ. ಪ್ರತಿ ತ್ರೈಮಾಸಿಕ ಅವಧಿಗೊಮ್ಮೆ ಬಡ್ಡಿ ಜಮಾ ಮಾಡಲಾಗುತ್ತದೆ. ನಿವೃತ್ತರು ತಮ್ಮ ನಿವೃತ್ತಿ ಸೌಲಭ್ಯದ ಮೊತ್ತ ಪಡೆದ ಒಂದು ತಿಂಗಳೊಳಗೆ ಹೂಡಿಕೆ ಮಾಡುವ ಮೂಲಕ ಇದರ ಪ್ರಯೋಜನ ಪಡೆಯಬಹುದು. ನಿವೃತ್ತಿ ಸೌಲಭ್ಯಕ್ಕೆ ಸಂಬಂಧಿಸಿ, ಉದ್ಯೋಗ ಮಾಡಿದ ಸಂಸ್ಥೆಯಿಂದ ಅಗತ್ಯ ದಾಖಲೆಗಳನ್ನು ಹೂಡಿಕೆಗೂ ಮುನ್ನ ಅಂಚೆ ಕಚೇರಿ ಅಥವಾ ಬ್ಯಾಂಕ್‌ಗೆ ಕೊಡಬೇಕು. ಹಿರಿಯ ನಾಗರಿಕರು, ತಮ್ಮ ಸ್ವಂತ ಉಳಿತಾಯದ ಹಣದ ಹೂಡಿಕೆಗೆ ಯೋಚನೆ ಮಾಡುತ್ತಿದ್ದರೆ, ಅಂಚೆ ಇಲಾಖೆಯ ಇತರ ಹೂಡಿಕೆ ಉತ್ಪನ್ನಗಳನ್ನು ಆಯ್ಕೆ ಮಾಡಬಹುದು.

ಭಾರತಿ, ಬೆಂಗಳೂರು.

- **ಪ್ರಶ್ನೆ:** ಪ್ರಸಕ್ತ ಆರ್ಥಿಕ ವರ್ಷ 2023-24ರಲ್ಲಿ ಇತರ ಯಾವುದೇ ಮೂಲಗಳಿಂದ ಆದಾಯಗಳಿಲ್ಲದೆ, ನಿಶ್ಚಿತ ಠೇವಣಿ ಖಾತೆಯಿಂದ ಮಾತ್ರ ಬರುವ ಬಡ್ಡಿ ₹ 6,50,000 ಆಗಿದ್ದರೆ ಆದಾಯ ತೆರಿಗೆ ಪಾವತಿಸಬೇಕೆ?

ಉತ್ತರ: ಫೆಬ್ರುವರಿ 1ರಂದು ಮಂಡಿಸಲಾಗಿರುವ ಕೇಂದ್ರ ಬಜೆಟ್‌ನಲ್ಲಿ ವೈಯಕ್ತಿಕ ತೆರಿಗೆಗೆ ಸಂಬಂಧಿಸಿ ಅನೇಕ ಬದಲಾವಣೆಗಳನ್ನು ಘೋಷಿಸಲಾಗಿದೆ. ಹೊಸ ತೆರಿಗೆ ಪದ್ಧತಿ ಅನುಸರಿಸುವವರಿಗೆ ಮೂಲ ವಿನಾಯಿತಿಯ ಗರಿಷ್ಠ ಆದಾಯ ಮೊತ್ತವನ್ನು ₹ 3 ಲಕ್ಷಕ್ಕೆ ಏರಿಸಿದ್ದು ಹಾಗೂ ತೆರಿಗೆ ವಿನಾಯಿತಿ ಸಹಿತ ₹ 7 ಲಕ್ಷದವರೆಗಿನ ಆದಾಯಕ್ಕೆ ಒಟ್ಟಾರೆ ತೆರಿಗೆ ಹೊಣೆಗಾರಿಗೆಯನ್ನು ಶೂನ್ಯಮಟ್ಟಕ್ಕೆ ನಿಗದಿಪಡಿಸಲಾಗಿದೆ.

ಪ್ರಶ್ನೆಯಲ್ಲಿ ನಿಮ್ಮ ವಯಸ್ಸು ತಿಳಿಸಿಲ್ಲ. ವಯಸ್ಸು 60 ವರ್ಷಕ್ಕಿಂತ ಮೇಲ್ಪಟ್ಟು ಇದ್ದಲ್ಲಿ, ₹ 50,000ದವರೆಗಿನ ಮೊತ್ತಕ್ಕೆ ತೆರಿಗೆ ಕಡಿತ ಇರುವುದಿಲ್ಲ. ನಿಮ್ಮ ವಿಚಾರಕ್ಕೆ ಸಂಬಂಧಿಸಿ, ಒಂದೇ ಬ್ಯಾಂಕ್‌ನಿಂದ ಈ ಬಡ್ಡಿ ಆದಾಯ ಗಳಿಸುತ್ತಿದ್ದರೆ, ತೆರಿಗೆ ಕಡಿತ ಮಾಡುವ ಸಾಧ್ಯತೆ ಇದೆ. ಹೀಗಾಗಿ ಒಂದು ವೇಳೆ ತೆರಿಗೆ ಕಡಿತವಾದರೂ, ನೀವು ಆದಾಯ ತೆರಿಗೆ ವಿವರ ಸಲ್ಲಿಸುವ ಸಂದರ್ಭದಲ್ಲಿ ಸೂಕ್ತ ಮಾಹಿತಿ ಭರ್ತಿ ಮಾಡುವ ಮೂಲಕ ಹೆಚ್ಚುವರಿ ಪಾವತಿಯಾದ ತೆರಿಗೆಯನ್ನು ಮರಳಿ ಪಡೆಯಬಹುದು. ಒಂದು ವೇಳೆ ವಿವಿಧ ಬ್ಯಾಂಕ್-ಸಂಸ್ಥೆಗಳಲ್ಲಿ ಹೂಡಿಕೆ ಮಾಡಿ ನಿಮಗೆ ಒಟ್ಟಾರೆ ಬಡ್ಡಿ ಆದಾಯ ₹ 6.50 ಲಕ್ಷ ಬಂದು, ತೆರಿಗೆ ಕಡಿತ ಮಾಡದೆ ನಿವ್ವಳ ತೆರಿಗೆ ಮೊತ್ತ ಶೂನ್ಯವಾದರೂ, ತೆರಿಗೆ ವಿವರವನ್ನು ಕಡ್ಡಾಯವಾಗಿ ಸಲ್ಲಿಸ ಬೇಕು. ಕಾರಣ, ನೀವು ಮೂಲ ವಿನಾಯಿತಿಯ ಗರಿಷ್ಠ ಆದಾಯ ಮೊತ್ತಕ್ಕಿಂತ ಅಧಿಕ ಆದಾಯ ಹೊಂದಿದ್ದು, ವಿಶೇಷ ತೆರಿಗೆ ವಿನಾಯಿತಿಯನ್ನು ಸೆಕ್ಷನ್ 87ಎ ಅಡಿ ಪಡೆಯಬೇಕಾಗುವ ಕಾರಣ ವಿವರ ಸಲ್ಲಿಕೆ ಅನಿವಾರ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ


ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ-ಮೇಲ್: businessdesk@prajavani.co.in

ಭಾರತದಲ್ಲಿ ರಿಟೇಲ್ ಮಳಿಗೆ ತೆರೆಯಲಿರುವ ಆ್ಯಪಲ್

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ಭಾರತದಲ್ಲಿ ತನ್ನ ಮೊದಲ ರಿಟೇಲ್ ಮಳಿಗೆಯನ್ನು ಮುಂದಿನ ವಾರ ಆರಂಭಿಸಲಿದೆ. ವಿಶ್ವದ ಅತಿ ದೊಡ್ಡ ಸ್ಮಾರ್ಟ್‌ಫೋನ್ ಮಾರುಕಟ್ಟೆಯಾಗಿರುವ ಭಾರತಕ್ಕೆ ಕಂಪನಿಯು ನೀಡುತ್ತಿರುವ ಪ್ರಾಮುಖ್ಯತೆಯನ್ನು ಇದು ಸೂಚಿಸುತ್ತಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಕಂಪನಿಯು ತನ್ನ ಮೊದಲ ಅಧಿಕೃತ ಮಳಿಗೆಯನ್ನು ಮುಂಬೈನಲ್ಲಿ ಏಪ್ರಿಲ್ 18ರಂದು ಹಾಗೂ ಎರಡನೆಯ ಮಳಿಗೆಯನ್ನು ದೆಹಲಿಯಲ್ಲಿ ಏಪ್ರಿಲ್ 20ರಂದುಆರಂಭಿಸಲಿದೆ.

ಈಗ ಕಂಪನಿಯು ತನ್ನ ಉತ್ಪನ್ನಗಳನ್ನು ಭಾರತದಲ್ಲಿ ಆ್ಯಪಲ್ ಪ್ರೀಮಿಯಂ ರೀಸೆಲ್ಲರ್ (ಎಪಿಆರ್) ಮಳಿಗೆಗಳ ಮೂಲಕ, ರಿಲಯನ್ಸ್ ಡಿಜಿಟಲ್, ಕ್ರೋಮಾದಂತಹ ಮಳಿಗೆಗಳ ಮೂಲಕ ಮಾರಾಟ ಮಾಡುತ್ತಿದೆ. ಇ-ವಾಣಿಜ್ಯ ವೇದಿಕೆಗಳ ಮೂಲಕವೂ ಮಾರಾಟ ಮಾಡುತ್ತಿದೆ.



ರಥೋತ್ಸವ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮದಲ್ಲಿ ಮಂಗಳವಾರ ಸಂಗಮೇಶ್ವರ ರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

ನಟ ಸುದೀಪ್‌ಗೆ ಬೆದರಿಕೆ ಪತ್ರ ಮಾಧ್ಯಮಗಳಿಗೆ ಪ್ರತಿಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಶ್ಲೀಲ ವಿಡಿಯೊ ಒಳಗೊಂಡ ಸಿ.ಡಿ ಬಿಡುಗಡೆ ಮಾಡುವುದಾಗಿ ಅನಾಮಧೇಯರ ಹೆಸರಿನಲ್ಲಿ ಬೆದರಿಕೆ ಪತ್ರ ಬರೆದ ವಿಚಾರಕ್ಕೆ ಸಂಬಂಧಿಸಿದಂತೆ ನಟ ಸುದೀಪ್ ವಿರುದ್ಧ ಯಾವುದೇ ರೀತಿಯಲ್ಲಿ ಮಾನಹಾನಿಯಾಗುವಂತಹ ಸುದ್ದಿ ಪ್ರಸಾರ ಮಾಡಬಾರದು’ ಎಂದು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಮಾಧ್ಯಮ ಸಂಸ್ಥೆಗಳ ವಿರುದ್ಧ ತಾತ್ಕಾಲಿಕ ಪ್ರತಿಬಂಧಕ ಆದೇಶ ಹೊರಡಿಸಿದೆ.

ಈ ಕುರಿತಂತೆ ಸುದೀಪ್ ಸಲ್ಲಿಸಿದ್ದ ಅಸಲು ದಾವೆ ವಿಚಾರಣೆ ನಡೆಸಿದ 21ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ದಾವೆಯಲ್ಲಿ ಹೆಸರಿಸಲಾಗಿರುವ 57 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ದಾವೆಯಲ್ಲಿ ಏನಿದೆ?: ‘ನನ್ನ ಮನೆ ವಿಳಾಸಕ್ಕೆ 2023ರ ಮಾರ್ಚ್ ಎರಡನೇ ವಾರದಲ್ಲಿ ಅನಾಮಧೇಯ ಪತ್ರವೊಂದು ಬಂದಿದ್ದು ಅದರಲ್ಲಿ, ಸಿನಿಮಾ ನಿರ್ಮಾಪಕರು ಸೇರಿದಂತೆ ನೀವು ಹಲವರಿಗೆ ವಂಚಿಸಿದ್ದೀರಿ. ಈ ಕುರಿತ ಸಿ.ಡಿ ನಮ್ಮ ಬಳಿಯಿದ್ದು, ಅದನ್ನು ನಿಮ್ಮ ಪತ್ನಿ ಮತ್ತು ಮಾಧ್ಯಮಗಳಿಗೆ ಕಳುಹಿಸಲಾಗುವುದು. ಇದು ಬರಿ ಬ್ಲಾಕ್‌ಮೇಲ್ ಅಲ್ಲ. ಈ ಬಗ್ಗೆ ನಾವು ಮಾಧ್ಯಮ ಗಳ ಮುಂದೆ ಹೋಗುತ್ತೇವೆ ಎಂದು ಬೆದರಿಕೆ ಹಾಕಲಾಗಿದೆ’ ಎಂದು ಸುದೀಪ್ ದಾವೆಯಲ್ಲಿ ವಿವರಿಸಿದ್ದಾರೆ.

‘ಈ ಪತ್ರ ಬಂದ ಕೂಡಲೇ ನನ್ನ ವ್ಯವಸ್ಥಾಪಕ ಮಂಜುನಾಥ್, ಪುಟ್ಟೇನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರನ್ನು ಆಧರಿಸಿ ಪೊಲೀಸರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ, ಈ ಪತ್ರವನ್ನೇ ಆಧರಿಸಿದ ಮಾಧ್ಯಮಗಳು, ಪತ್ರದ ಬಗ್ಗೆ ಸೂಕ್ತ ಪರಿಶೀಲನೆ ನಡೆಸದೆ, ನನ್ನ ವಿರುದ್ಧ ಮಾನಹಾನಿ ಮತ್ತು ನನ್ನ ತೇಜೋವಧೆ ಮಾಡುವಂತಹ ಸುದ್ದಿ ಪ್ರಸಾರ ಮಾಡಲಾರಂಭಿಸಿವೆ. ಆದ್ದರಿಂದ, ನನ್ನ ವಿರುದ್ಧ ಮಾನಹಾನಿ ಸುದ್ದಿ ಪ್ರಕಟಿಸದಂತೆ ಮಾಧ್ಯಮಗಳಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದಾರೆ.

‘ಗಡಿಯಲ್ಲಿ ಡ್ರೋನ್ ಮೂಲಕ ಶಸ್ತ್ರಾಸ್ತ್ರ ಸಾಗಣೆ’

ವಿಶ್ವಸಂಸ್ಥೆ (ಪಿಟಿಐ): ಗಡಿಯಲ್ಲಿ ಡ್ರೋನ್‌ಗಳ ಮೂಲಕ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿರುವ ಗಂಭೀರ ಸವಾಲನ್ನು ಭಾರತ ಎದುರಿಸುತ್ತಿದೆ. ರಾಜ್ಯದ ಅಧಿಕಾರಿಗಳ ಸಕ್ರಿಯ ಸಹಕಾರ ಇಲ್ಲದೆ ಇದು ಸಾಧ್ಯವಿಲ್ಲ ಎಂದು ಭಾರತದ ರಾಯಭಾರ ಅಧಿಕಾರಿ ರುಚಿರಾ ಕಾಂಬೋಜ್ ಅವರು ಪರೋಕ್ಷವಾಗಿ ಪಾಕಿಸ್ತಾನವನ್ನು ಉಲ್ಲೇಖಿಸಿ ಆರೋಪಿಸಿದರು.

ವಿಶ್ವಸಂಸ್ಥೆಯ ಭದ್ರತಾಮಂಡಳಿಯ ಬಹಿರಂಗ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಸ್ತ್ರಾಸ್ತ್ರ ಮತ್ತು ಸೇನಾ ಸಲಕರಣೆಗಳ ರಫ್ತು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ. ಎರಡೂ ರಾಷ್ಟ್ರಗಳ ನಡುವಣ ಉದ್ವಿಗ್ನತೆಯನ್ನು ಹೆಚ್ಚಿಸುತ್ತದೆ. ಇದನ್ನು ಕಡೆಗಣಿಸಲಾಗದು’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಜಮ್ಮು–ಕಾಶ್ಮೀರದಲ್ಲಿ ಜಿ 20 ಸಭೆ: ಪಾಕ್ ತೀವ್ರ ವಿರೋಧ

ಇಸ್ಲಾಮಾಬಾದ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಮುಂದಿನ ತಿಂಗಳು ಜಿ–20 ಪ್ರವಾಸಿ ಕಾರ್ಯಕಾರಿ ಗುಂಪಿನ ಸಭೆ ನಡೆಸಲು ಭಾರತ ತೀರ್ಮಾನಿಸಿರುವುದನ್ನು ಪಾಕಿಸ್ತಾನ ಮಂಗಳವಾರ ಬಲವಾಗಿ ವಿರೋಧಿಸಿದೆ. ಅಲ್ಲದೆ ಇದನ್ನು ‘ಸ್ವ ಹಿತಾಸಕ್ತಿಯ ನಡೆ’ ಎಂದು ಕರೆದಿದೆ.

‘ಭಾರತ ಜಿ 20 ಕಾರ್ಯಕಾರಿ ಗುಂಪಿನ ಸಭೆಯನ್ನು ಶ್ರೀನಗರದಲ್ಲಿ ಮತ್ತು ಸಮಾವೇಶದ ಇತರ ಎರಡು ಸಭೆಗಳನ್ನು ಲೇಹ್ ಮತ್ತು ಶ್ರೀನಗರದಲ್ಲಿ ನಡೆಸಲು ತೀರ್ಮಾನಿಸಿರುವುದು ನೆಮ್ಮದಿಗೆಡಿಸಿದೆ’ ಎಂದು ಪಾಕ್ ವಿದೇಶಾಂಗ ಕಾರ್ಯಾಲಯ ತಿಳಿಸಿದೆ.

‘ಭಾರತದ ಸ್ವಹಿತಾಸಕ್ತಿ ಕೇಂದ್ರೀಕೃತ ಮತ್ತು ಬೇಜವಾಬ್ದಾರಿಯುತ ನಡೆಗೆ ಇದು ತಾಜಾ ಉದಾಹರಣೆ. ಪಾಕಿಸ್ತಾನ ಇದನ್ನು ಖಂಡಿಸುತ್ತದೆ. ಇಂಥ ಕಾರ್ಯಕ್ರಮಗಳ ಆಯೋಜನೆಯಿಂದ ಅಂತರರಾಷ್ಟ್ರೀಯ ಸಮುದಾಯಗಳ ಗಮನವನ್ನು ಬೇರೆಡೆ ಸೆಳೆಯಲು ಸಾಧ್ಯವಿಲ್ಲ ’ ಎಂದು ಹೇಳಿದೆ.

ದಕ್ಷಿಣ ಭಾಗದ ದೇಶಗಳ ಕಳಕಳಿಗೆ ಜಿ20ಯಲ್ಲಿ ವೇದಿಕೆ: ಜೈಶಂಕರ್

ಕಂಪಾಲ (ಪಿಟಿಐ): ‘ಜಾಗತಿಕ ಬೆಳವಣಿಗೆ ಮತ್ತು ಅಭಿವೃದ್ಧಿ’ಗೆ ಹೆಚ್ಚಿನ ಗಮನ ನೀಡುವ ನಿಟ್ಟಿನಲ್ಲಿ ಪರಿಣಾಮಕಾರಿ ವೇದಿಕೆ ಕಲ್ಪಿಸಲು ಜಿ20 ಶೃಂಗದ ಅಧ್ಯಕ್ಷತೆಯನ್ನು ಭಾರತವು ಬಳಸಿಕೊಳ್ಳಲಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಉಗಾಂಡದ ಕಂಪಾಲದಲ್ಲಿ ಮಂಗಳವಾರ ಹೇಳಿದರು.

ಉಗಾಂಡಾದ ಭಾರತೀಯ ವ್ಯವಹಾರಗಳ ಸಂಸದೀಯ ವೇದಿಕೆ ಉದ್ದೇಶಿಸಿ ಅವರು ಮಾತನಾಡಿದರು. ‘ಜಿ20 ಶೃಂಗದಲ್ಲಿ ಭಾರತದ ಅಧ್ಯಕ್ಷತೆಯು ಬೇರೆ ದೇಶಗಳ ಅಧ್ಯಕ್ಷತೆಗಿಂತ ಭಿನ್ನವಾಗಿದೆ. ಜಗತ್ತಿನ ದಕ್ಷಿಣ ಭಾಗದ ಎಲ್ಲಾ ದೇಶಗಳನ್ನು ಸಂಪರ್ಕಿಸುವ ಪ್ರಯತ್ನವನ್ನು ಈ ಹಿಂದೆ ಜಿ20 ಅಧ್ಯಕ್ಷತೆ ವಹಿಸಿಕೊಂಡಿದ್ದ ದೇಶಗಳು ಮಾಡಿರಲಿಲ್ಲ. ಭಾರತವು ಜಾಗತ್ತಿನ ದಕ್ಷಿಣ ಭಾಗದ ಎಲ್ಲಾ ದೇಶಗಳ ಕಳಕಳಿಗಳಿಗೂ ಪರಿಣಾಮಕಾರಿ ವೇದಿಕೆ ಕಲ್ಪಿಸಲು ಪ್ರಯತ್ನಿಸುತ್ತಿದೆ’ ಎಂದರು.

2022ರ ಡಿಸೆಂಬರ್‌ನಲ್ಲಿ ಭಾರತವು ಜಿ20 ಅಧ್ಯಕ್ಷತೆ ವಹಿಸಿಕೊಂಡಿತು.

ನೇಪಾಳ: ಕೋವಿಡ್‌ನಿಂದ ವ್ಯಕ್ತಿ ಸಾವು

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಕೋವಿಡ್‌ನಿಂದ ಮಂಗಳವಾರ ಒಂದು ಸಾವು ಸಂಭವಿಸಿದ್ದು, 24 ಗಂಟೆಗಳಲ್ಲಿ ಹೊಸದಾಗಿ 106 ಮಂದಿಗೆ ಸೋಂಕಿರುವುದು ದೃಢಪಟ್ಟಿದೆ. ದೇಶದಲ್ಲಿ ಕಳೆದ ವಾರ ರೂಪಾಂತರಿ ವೈರಸ್ ಎಕ್ಸ್ ಬಿಬಿ1.16 ಪತ್ತೆಯಾಗಿತ್ತು.

ಮೂರು ತಿಂಗಳ ಬಳಿಕ ಇದೇ ಮೊದಲ ಬಾರಿಗೆ ಕೋವಿಡ್‌ನಿಂದಾಗಿ ಸಾವಿನ ಪ್ರಕರಣ ವರದಿಯಾಗಿದೆ. ಪ್ರಸ್ತುತ ದೇಶದಲ್ಲಿ 469 ಸಕ್ರಿಯ ಪ್ರಕರಣಗಳಿವೆ.



ಸಂಕ್ಷಿಪ್ತ ಸುದ್ದಿ

ಟ್ವಿಟರ್; ಪ್ರಧಾನಿ ಮೋದಿ ಫಾಲೊ ಮಾಡುತ್ತಿರುವ ಮಸ್ಕ್

ನವದೆಹಲಿ: ಟ್ವಿಟರ್ ಸಿಇಒ ಎಲಾನ್ ಮಸ್ಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟ್ವಿಟರ್‌ನಲ್ಲಿ ಫಾಲೊ ಮಾಡುತ್ತಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಮಸ್ಕ್ ಅವರು ಫಾಲೊ ಮಾಡುತ್ತಿರುವ 195 ಜನರ ಹೆಸರಿರುವ ಸ್ಕ್ರೀನ್‌ಶಾಟ್ ಒಂದು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರಲ್ಲಿ ಪ್ರಧಾನಿ ಮೋದಿ ಅವರ ಹೆಸರೂ ಇದೆ.

'ಮಸ್ಕ್ ಮುಖ್ಯಸ್ಥರಾಗಿರುವ ಟೆಸ್ಲಾ ಸಂಸ್ಥೆಯು ಶೀಘ್ರ ಭಾರತಕ್ಕೆ ಬರಲಿದೆ' ಎಂದು ಟ್ವಿಟರ್‌ನ ಕೆಲ ಬಳಕೆದಾರರು ಪ್ರತಿಪಾದಿಸಿದ್ದಾರೆ.

ಮೇಘಾಲಯ ಗುಹೆಯಲ್ಲಿ ಹೊಸ ಪ್ರಭೇದದ ಕಪ್ಪೆ



ಶಿಲ್ಲಾಂಗ್, ಮೇಘಾಲಯ (ಪಿಟಿಐ): ರಾಜ್ಯದ ದಕ್ಷಿಣ ಗಾರೊ ಹಿಲ್ಸ್ ಜಿಲ್ಲೆಯ ಅರಣ್ಯದಲ್ಲಿ ಕಪ್ಪೆಯ ನೂತನ ಪ್ರಭೇದವನ್ನು ಭಾರತೀಯ ಪ್ರಾಣಿ ಸರ್ವೇಕ್ಷಣಾ ಸಂಸ್ಥೆ (ಝಡ್‌ಎಸ್‌ಐ) ಸಂಶೋಧಕರು ಪತ್ತೆ ಹಚ್ಚಿದ್ದಾರೆ.

'ಪುಣೆ ಮೂಲದ ಝಡ್‌ಎಸ್‌ಐ ಸಂಶೋಧಕರು ದಕ್ಷಿಣ ಗಾರೊ ಹಿಲ್ಸ್ ಜಿಲ್ಲೆಯ ಸಿಜು ಗುಹೆಗಳಲ್ಲಿ ಈ ನೂತನ ಪ್ರಭೇದದ ಕಪ್ಪೆಗಳನ್ನು ಪತ್ತೆ ಹಚ್ಚಿದ್ದಾರೆ. ಹೀಗಾಗಿ, ಈ ಪ್ರಭೇದಕ್ಕೆ 'ಅಮೊಲಾಪ್ಸ್ ಸಿಜು' ಎಂದು ಹೆಸರಿಸಲಾಗಿದೆ' ಎಂದು ಸಂಶೋಧನಾ ತಂಡದ ಸದಸ್ಯರಲ್ಲೊಬ್ಬರಾದ ಭಾಸ್ಕರ್ ಸೈಕಿಯಾ ತಿಳಿಸಿದ್ದಾರೆ.

ಲುಜಿನ್ಹೊ ಫಲೈರೊ ರಾಜೀನಾಮೆ

ನವದೆಹಲಿ: ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ರಾಜ್ಯಸಭಾ ಸಂಸದ ಲುಜಿನ್ಹೊ ಫಲೈರೊ ಅವರು ವೈಯಕ್ತಿಕ ಕಾರಣಗಳಿಂದಾಗಿ ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ಸಲ್ಲಿಸಿದ್ದಾರೆ. ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಫಲೈರೊ ಅವರ ಅವಧಿ ಇನ್ನೂ ಮೂರು ವರ್ಷ ಏಳು ತಿಂಗಳು ಇತ್ತು.

ಜೆಪಿಸಿ ತನಿಖೆಯ ಬೇಡಿಕೆಗೆ ವಿರೋಧ ಇಲ್ಲ: ಪವಾರ್

ಮುಂಬೈ (ಪಿಟಿಐ): ಅದಾನಿ ಪ್ರಕರಣದಲ್ಲಿ ಜಂಟಿ ಸಂಸದೀಯ ಸಮಿತಿಯಿಂದ (ಜೆಪಿಸಿ) ತನಿಖೆ ಆಗಬೇಕು ಎಂಬ ಬಿಜೆಪಿ ವಿರೋಧಿ ಪಕ್ಷಗಳ ಬೇಡಿಕೆಗೆ ಎನ್‌ಸಿಪಿಯ ಸಮ್ಮತಿ ಇಲ್ಲದಿದ್ದರೂ ವಿಪಕ್ಷಗಳ ಒಗ್ಗಟ್ಟಿನ ಹಿತದೃಷ್ಟಿಯಿಂದ ಅವರ ನಿಲುವಿನ ವಿರುದ್ಧ ಹೋಗುವುದಿಲ್ಲ ಎಂದು ಪಕ್ಷದ ಪರಮೋಚ್ಚ ನಾಯಕ ಶರದ್ ಪವಾರ್ ತಿಳಿಸಿದ್ದಾರೆ.

'ಜೆಪಿಸಿ ವಿಚಾರದಲ್ಲಿ ನಮ್ಮ ಮತ್ತು ಇತರ ವಿರೋಧಪಕ್ಷಗಳ ಅಭಿಪ್ರಾಯದಲ್ಲಿ ವ್ಯತ್ಯಾಸ ಇದೆ. ಆದರೆ ನಾವು ಒಗ್ಗಟ್ಟು ಕಾಯ್ದುಕೊಳ್ಳಬೇಕಿದೆ. ನಾನು ನನ್ನ ಅಭಿಪ್ರಾಯ ಹೇಳಿದ್ದೇನೆ. ಆದರೆ ಅವರು ಜೆಪಿಸಿ ತನಿಖೆ ಆಗಲೇಬೇಕು ಎಂದು ಬಯಸಿದರೆ ವಿರೋಧಿಸುವುದಿಲ್ಲ' ಎಂದು ಮರಾಠಿ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ನಾಳೆ 71 ಸಾವಿರ ನೇಮಕಾತಿ ಪತ್ರ ವಿತರಣೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 13ರಂದು ಸುಮಾರು 71,000 ಮಂದಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದು ಬಳಿಕ ವಿಡಿಯೊ ಸಂವಾದದ ಮೂಲಕ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

'ದತ್ತಾಂಶ ರಕ್ಷಣೆ ಮಸೂದೆ ಸಿದ್ಧ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ದತ್ತಾಂಶ ರಕ್ಷಣಾ ಮಸೂದೆಯನ್ನು ಸರ್ಕಾರ ಮಂಡಿಸಲಿದೆ' ಎಂದು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದರು.

ವಾಟ್ಸ್‌ಆ್ಯಪ್‌ನ ಖಾಸಗೀತನ ನೀತಿ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಇರುವ ವೈಯಕ್ತಿಕ ದತ್ತಾಂಶ ಸುರಕ್ಷತೆ ಕುರಿತಂತೆ ಇದ್ದ ಆತಂಕಗಳನ್ನು ಉದ್ದೇಶಿತ ಮಸೂದೆ ನಿವಾರಿಸಲಿದೆ ಎಂದು ಪ್ರತಿಪಾದಿಸಿದರು.

ಬಳಕೆದಾರರು 2021ರ ಖಾಸಗೀತನ ನೀತಿ ಒಪ್ಪುವುದು ಅನಿವಾರ್ಯವಲ್ಲ ಎಂದು ವ್ಯಾಪಕ ಪ್ರಚಾರ ನೀಡಬೇಕು. ಮಸೂದೆ ಜಾರಿ ಆಗುವವರೆಗೂ ವಾಟ್ಸ್‌ಆ್ಯಪ್ ಕಾರ್ಯನಿರ್ವಹಣೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಸುಪ್ರೀಂ ಕೋರ್ಟ್ ಫೆ.1ರಂದು ವಾಟ್ಸ್‌ಆ್ಯಪ್ ಜಾಲತಾಣದ ಆಡಳಿತಕ್ಕೆ ನಿರ್ದೇಶನ ನೀಡಿತ್ತು.

'ದಿ ಹಿಂದೂ'ಗೆ ಬರೆದ ಲೇಖನದಲ್ಲಿ ಸೋನಿಯಾ ವಾಗ್ದಾಳಿ • ಸಂವಿಧಾನ ರಕ್ಷಿಸಲು ಸಮಾನಮನಸ್ಕರ ಜೊತೆ ಕೆಲಸದ ಪಣ

'ವಾಸ್ತವ ಮರೆಸಲು ಪ್ರಧಾನಿಯ ಹಳಸಲು ಮಾತು'

ನವದೆಹಲಿ (ಪಿಟಿಐ): 'ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಹಾಗಾಗಿ, ಸಂವಿಧಾನ ರಕ್ಷಿಸಲು ಸಮಾನ ಮನಸ್ಕ ಪಕ್ಷಗಳೊಂದಿಗೆ ಕಾಂಗ್ರೆಸ್ ಕೈಜೋಡಿಸಲಿದೆ' ಎಂದು ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳಿದ್ದಾರೆ.



ಸೋನಿಯಾ ಗಾಂಧಿ

'ದಿ ಹಿಂದೂ' ಪತ್ರಿಕೆಯಲ್ಲಿ ಲೇಖನ ಬರೆದಿರುವ ಅವರು, 'ಹಲವು ರಾಜ್ಯಗಳು ಚುನಾವಣೆಯ ಹೊಸ್ತಿಲಲ್ಲಿವೆ. ಈ ವೇಳೆ, ಮೋದಿ ನೇತೃತ್ವದ ಸರ್ಕಾರ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಸಂದೇಶವನ್ನು ಪಕ್ಷವು ಜನರ ಮುಂದಿಡಲಿದೆ' ಎಂದು ವಿವರಿಸಿದ್ದಾರೆ.

'ಮೋದಿ ಹಾಗೂ ಅವರ ನೇತೃತ್ವದ ಸರ್ಕಾರದಿಂದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗವನ್ನು ನಾಶಪಡಿಸುವ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿವೆ. ಈ ಸರ್ಕಾರದ ಪ್ರತಿಯೊಂದು ನಡೆಯು ಪ್ರಜಾಪ್ರಭುತ್ವದ ಬಗ್ಗೆ ಅವರಲ್ಲಿ ಆಳವಾಗಿ ಬೇರೂರಿರುವ ಅಸಡ್ಡೆಯನ್ನು ತೋರುತ್ತದೆ' ಎಂದು ಟೀಕಿಸಿದ್ದಾರೆ.

'ಬಿಜೆಪಿ, ಆರ್‌ಎಸ್‌ಎಸ್ ಪ್ರಚೋದನೆಯಿಂದಾಗಿ ದೇಶದಲ್ಲಿ ದ್ವೇಷ ಹಾಗೂ ಹಿಂಸಾಚಾರ ಹೆಚ್ಚುತ್ತಿದೆ. ಆದರೆ, ಪ್ರಧಾನಿ ಮೋದಿ ಈ ಸಂಗತಿಯನ್ನು ನಿರ್ಲಕ್ಷಿಸುತ್ತಿದ್ದಾರೆ. ಶಾಂತಿ ಅಥವಾ ಸೌಹಾರ್ದ ಕಾಪಾಡುವಂತೆ ಒಮ್ಮೆಯೂ ಕರೆ ನೀಡಿಲ್ಲ. ಅಪರಾಧಿಗಳ ವಿರುದ್ಧ ಕ್ರಮ ಕೈಗೊಂಡು, ಶಿಕ್ಷೆ ಕೊಡಿಸುವ ಪ್ರಯತ್ನವನ್ನೂ ಮಾಡಿಲ್ಲ' ಎಂದು ಲೇಖನದಲ್ಲಿ ಆರೋಪಿಸಿದ್ದಾರೆ.

'ಹಬ್ಬಗಳು, ಧಾರ್ಮಿಕ ಕಾರ್ಯಕ್ರಮಗಳು ಸಂತೋಷವಾಗಿರಲು, ಸಂಭ್ರಮಿಸಲು ಒದಗುವ ಸಂದರ್ಭಗಳಾಗಿವೆ. ಆದರೆ, ಇಂಥ ಸಂದರ್ಭಗಳು ಈಗ ಬೆದರಿಕೆ ಒಡ್ಡಲು, ಮತ್ತೊಬ್ಬರನ್ನು ಪೀಡಿಸುವ ಅವಕಾಶಗಳಂತಾಗಿವೆ. ಜನರ ಧರ್ಮ, ಆಹಾರ, ಜಾತಿ, ಲಿಂಗ ಅಥವಾ ಭಾಷೆಗಳ ಆಧಾರದ ಮೇಲೆ ತಾರತಮ್ಯ ಮಾಡಲಾಗುತ್ತಿದೆ, ಬೆದರಿಕೆ ಒಡ್ಡಲಾಗುತ್ತಿದೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, 'ಮೋದಿ ನೀಡುವ ಹೇಳಿಕೆಗಳು ಜ್ವಲಂತ ಸಮಸ್ಯೆಗಳನ್ನು ನಿರ್ಲಕ್ಷಿಸುವ ರೀತಿಯಲ್ಲಿ ಇರುತ್ತವೆ. ಇಲ್ಲವೇ, ಹಳಸಲು ಮಾತುಗಳನ್ನು ಆಡುವುದು ಮತ್ತು ಪ್ರಚಲಿತ ವಿಷಯಗಳಿಂದ ಜನರ ಗಮನವನ್ನು ಬೇರೆ ಸೆಳೆಯುವ ಸಲುವಾಗಿ ಮಾತುಗಳ ಕಸರತ್ತು ನಡೆಸುತ್ತಿರುವಂತೆ ಕಾಣುತ್ತದೆ' ಎಂದು ಟೀಕಿಸಿದ್ದಾರೆ.

'ಮೋದಿ ಎಷ್ಟೇ ಪ್ರಯತ್ನ ಮಾಡಿದರೂ, ದೇಶದ ಜನರ ಬಾಯಿ ಮುಚ್ಚಿಸಲಾರರು. ಅದು, ಸಾಧ್ಯವೂ ಇಲ್ಲ' ಎಂದು ಸೋನಿಯಾ ಹೇಳಿದ್ದಾರೆ.

'ದೇಶವು ಈಗ ಕವಲುದಾರಿಯಲ್ಲಿದೆ. ಒಂದೆಡೆ ಕೇಂದ್ರ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇನ್ನೊಂದೆಡೆ ಕೆಲ ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಹೀಗಾಗಿ, ಮುಂದಿನ ಕೆಲ ತಿಂಗಳುಗಳು ಭಾರತದ ಪ್ರಜಾಪ್ರಭುತ್ವದ ಪಾಲಿಗೆ ಅಗ್ನಿಪರೀಕ್ಷೆಯಾಗಲಿದೆ' ಎಂದಿದ್ದಾರೆ.

'ದೇಶ ಎದುರಿಸುತ್ತಿರುವ ಈ ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷವು ನೇರವಾಗಿ ಜನರ ಬಳಿ ತೆಗೆದುಕೊಂಡು ಹೋಗಲಿದೆ. ಭಾರತ್ ಜೋಡೊ ಯಾತ್ರೆ ಸಂದರ್ಭದಲ್ಲಿ ಮಾಡಿದಂತೆ, ಸಮಾನ ಮನಸ್ಕ ಪಕ್ಷಗಳೊಂದಿಗೆ ಕೈಜೋಡಿಸಲಿದೆ. ಆ ಮೂಲಕ ದೇಶದ ಸಂವಿಧಾನ ಮತ್ತು ಅದರ ಆಶಯಗಳನ್ನು ರಕ್ಷಿಸಲಿದೆ' ಎಂದು ಪುನರುಚ್ಚರಿಸಿದ್ದಾರೆ.

'ಪ್ರಮುಖ ವಿರೋಧ ಪಕ್ಷವಾಗಿ ತನ್ನ ಕರ್ತವ್ಯ ಏನು ಎಂಬುದನ್ನು ಕಾಂಗ್ರೆಸ್ ಅರ್ಥ ಮಾಡಿಕೊಂಡಿದೆ. ಜನರ ದನಿಯನ್ನು ದಮನ ಮಾಡುವುದರ ವಿರುದ್ಧ ಹೋರಾಡಲಿದೆ' ಎಂದೂ ವಿವರಿಸಿದ್ದಾರೆ.

ಸಂಸತ್ ಅಧಿವೇಶನ ಸಂದರ್ಭದಲ್ಲಿನ ವಿದ್ಯಮಾನಗಳನ್ನು ಪ್ರಸ್ತಾಪಿಸಿರುವ ಅವರು, 'ದೇಶ ಮತ್ತು ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿರೋಧ ಪಕ್ಷಗಳು ಪ್ರಸ್ತಾಪಿಸದಂತೆ ತಡೆಯಲಾಯಿತು. ಅದರಲ್ಲೂ, ಅದಾನಿ ಸಮೂಹದ ವಿರುದ್ಧದ ಆರೋಪಗಳು, ಹಣದುಬ್ಬರ, ನಿರುದ್ಯೋಗ ಸಮಸ್ಯೆ ಕುರಿತು ಚರ್ಚೆಗೆ ಅವಕಾಶವನ್ನೇ ನೀಡಲಿಲ್ಲ. ಕಲಾಪಗಳಿಗೆ ಅಡ್ಡಿಪಡಿಸಿದ್ದು ಸರ್ಕಾರವೇ ಹೆಣೆದಿದ್ದ ಕಾರ್ಯತಂತ್ರವಾಗಿತ್ತು' ಎಂದಿದ್ದಾರೆ.

'ನಿವೃತ್ತ ನ್ಯಾಯಮೂರ್ತಿಗಳಿಗೆ ದೇಶ ವಿರೋಧಿ ಪಟ್ಟ'

ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ದುರ್ಬಲಗೊಳಿಸುವ ವ್ಯವಸ್ಥಿತ ಪ್ರಯತ್ನವನ್ನು ಪ್ರಧಾನಿ ನೇತೃತ್ವದ ಸರ್ಕಾರ ನಡೆಸುತ್ತಿದೆ. ನ್ಯಾಯಾಂಗ ವ್ಯವಸ್ಥೆ ಈಗ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದೆ ಎಂದು ಸೋನಿಯಾ ಗಾಂಧಿ ಅವರು ಲೇಖನದಲ್ಲಿ ಹೇಳಿದ್ದಾರೆ.

'ಕೆಲ ನಿವೃತ್ತ ನ್ಯಾಯಮೂರ್ತಿಗಳು ದೇಶ ವಿರೋಧಿಗಳಾಗಿದ್ದು, ಅವರು ಬೆಲೆ ತೆರುತ್ತಾರೆ ಎಂಬುದಾಗಿ ಕೇಂದ್ರ ಕಾನೂನು ಸಚಿವರು ಹೇಳಿದ್ದಾರೆ. ಜನರನ್ನು ದಾರಿ ತಪ್ಪಿಸುವ ಸಲುವಾಗಿಯೇ ಉದ್ದೇಶಪೂರ್ವಕವಾಗಿ ಇಂಥ ಭಾಷೆಯನ್ನು ಬಳಸಲಾಗಿದೆ. ಹಾಲಿ ನ್ಯಾಯಮೂರ್ತಿಗಳ ವಿರುದ್ಧ ಜನರು ಕೆರಳುವಂತೆ ಮಾಡುವುದು ಹಾಗೂ ಆ ಮೂಲಕ ಅವರಿಗೆ ಬೆದರಿಕೆ ಒಡ್ಡುವುದೇ ಇಂಥ ಭಾಷೆ ಬಳಕೆಯ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ.

'ಬಿಜೆಪಿಯ ಸ್ನೇಹಿತರು ಹೊಂದಿರುವ ಹಣಬಲ, ಸರ್ಕಾರದ ಹಾಗೂ ರಾಜಕೀಯ ಪ್ರಭಾವ ಬಳಸಿಕೊಂಡು ಮಾಧ್ಯಮ ಸ್ವಾತಂತ್ರ್ಯದ ಹರಣ ಮಾಡಲಾಗಿದೆ. ಕೆಲ ಟಿ.ವಿ ಚಾನೆಲ್‌ಗಳಲ್ಲಿ ನಡೆಯುವ ಚರ್ಚೆಗಳು ಬೈಗುಳಗಳಿಂದ ಜೋರಾಗಿ ಕಿರುಚುವ ಕಾರ್ಯಕ್ರಮಗಳಂತಾಗಿವೆ. ಕೇಂದ್ರ ಸರ್ಕಾರವನ್ನು ಪ್ರಶ್ನಿಸುವವರ ಬಾಯಿ ಮುಚ್ಚಿಸುವ ವೇದಿಕೆಗಳಾಗಿವೆ' ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಸೋನಿಯಾ ಲೇಖನ ಭ್ರಮೆಯಿಂದ ಕೂಡಿದೆ: ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನವು ಅಸಂಬದ್ಧವಾಗಿದೆ. ಅವರ ಹೇಳಿಕೆಯು ಭ್ರಮೆಯಿಂದ ಕೂಡಿದೆ. ಅದು ಮೋದಿ ವಿರುದ್ಧದ ದ್ವೇಷಕ್ಕೆ ಹಿಡಿದ ಕೈಗನ್ನಡಿಯಂತಿದೆ' ಎಂದು ಬಿಜೆಪಿ ಮಂಗಳವಾರ ಟೀಕಿಸಿದೆ.

'ದಿ ಹಿಂದೂ' ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಪ್ರಕಟವಾಗಿರುವ ಲೇಖನದಲ್ಲಿ ಪ್ರಜಾಪ್ರಭುತ್ವ ಮತ್ತು ವಿವಿಧ ಸಂಸ್ಥೆಗಳ ಸ್ವಾತಂತ್ರ್ಯದ ಕುರಿತು ಬರೆದಿರುವ ಸೋನಿಯಾ ಅವರು, ನರೇಂದ್ರ ಮೋದಿ ಸರ್ಕಾರವು ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ದೂರಿದ್ದಾರೆ.

'ಪ್ರಧಾನಿ ಮೋದಿ ಹಾಗೂ ಅವರ ನೇತೃತ್ವದ ಸರ್ಕಾರವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ವ್ಯವಸ್ಥಿತವಾಗಿ ನಾಶಗೊಳಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಅವರಲ್ಲಿ ತಿರಸ್ಕಾರ ಭಾವ ಗಾಢವಾಗಿ ಬೇರೂರಿದೆ. ಅದು ಅವರ ಕೆಲಸಗಳಲ್ಲಿ ಎದ್ದು ಕಾಣುತ್ತಿದೆ' ಎಂದೂ ಆರೋಪಿಸಿದ್ದಾರೆ.

'ಸೋನಿಯಾ ಅವರು ಪ್ರಜಾಪ್ರಭುತ್ವದ ಕುರಿತು ಉಪನ್ಯಾಸ ನೀಡುತ್ತಿದ್ದಾರೆಯೇ? ಕಾಂಗ್ರೆಸ್ ಪಕ್ಷವು ನ್ಯಾಯಾಂಗದ ಸ್ವಾತಂತ್ರ್ಯದ ಕುರಿತು ಮಾತನಾಡುತ್ತಿದೆಯೇ? ಇದು ಭ್ರಮೆಯ ಹೇಳಿಕೆ' ಎಂದು ಕಾನೂನು ಸಚಿವ ಕಿರಣ್ ರಿಜಿಜು ಟ್ವೀಟ್ ಮಾಡಿದ್ದಾರೆ.

'ದಾರಿ ತಪ್ಪಿರುವುದು ಕಾಂಗ್ರೆಸ್ ಪಕ್ಷವೇ ಹೊರತು ಈ ದೇಶವಲ್ಲ. ಈ ದೇಶದ ಅತಿ ಹಳೆಯ ಪಕ್ಷವು ರಾಜಕೀಯ ಬಿಕ್ಕಟ್ಟಿನ ಅಂಚಿನಲ್ಲಿದೆ. ಮುಂಬರುವ ದಿನಗಳು ಆ ಪಕ್ಷದ ಪಾಲಿಗೆ ನಿರ್ಣಾಯಕವೆನಿಸಿವೆ' ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಟೀಕಿಸಿದ್ದಾರೆ.

ಸೋನಿಯಾ ಕಿಡಿನುಡಿ

- ಪತ್ರಿಕೆ ಸೇರಿದಂತೆ ಯಾವುದೇ ವೇದಿಕೆ ಇರಲಿ, ದೇಶದ 'ದೊಡ್ಡ ನಾಯಕ'ನನ್ನು ಟೀಕಿಸಿ ಲೇಖನ ಪ್ರಕಟಿಸಿದಾಗ, ಅವುಗಳಿಗೆ ಕಿರುಕುಳ ಕೊಡುವುದಕ್ಕಾಗಿ ಬಿಜೆಪಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಸೇರಿದ ವಕೀಲರನ್ನು ಒಳಗೊಂಡ ತಂಡವೊಂದು ಸದಾ ಸಿದ್ಧವಾಗಿರುತ್ತದೆ.
- ಬಿಜೆಪಿ ಹಾಗೂ ಆರ್‌ಎಸ್‌ಎಸ್ ಪ್ರಚೋದನೆಯಿಂದಾಗಿ ದೇಶದಲ್ಲಿ ದ್ವೇಷ ಹಾಗೂ ಹಿಂಸಾಚಾರ ಹೆಚ್ಚುತ್ತಿದೆ.
- ಜನರ ಧರ್ಮ, ಆಹಾರ, ಜಾತಿ, ಲಿಂಗ ಅಥವಾ ಭಾಷೆಗಳ ಆಧಾರದ ಮೇಲೆ ತಾರತಮ್ಯ ಮಾಡಲಾಗುತ್ತಿದೆ, ಬೆದರಿಕೆ ಒಡ್ಡಲಾಗುತ್ತಿದೆ. ಆಧಾರದ ಮೇಲೆ ತಾರತಮ್ಯ ಮಾಡಲಾಗುತ್ತಿದೆ, ಬೆದರಿಕೆ ಒಡ್ಡಲಾಗುತ್ತಿದೆ.

ಪಕ್ಷ ವಿರೋಧಿ ಚಟುವಟಿಕೆ ಎಂದ ಕಾಂಗ್ರೆಸ್ • ಮುಖ್ಯಮಂತ್ರಿ ಸ್ಥಾನ: ಹೈಕಮಾಂಡ್‌ಗೆ ಸಂದೇಶ

ಸರ್ಕಾರದ ವಿರುದ್ಧವೇ ಪೈಲಟ್ ಸತ್ಯಾಗ್ರಹ

ಜೈಪುರ (ಪಿಟಿಐ): ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ತನಿಖೆ ನಡೆಸುವಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸರ್ಕಾರವು 'ನಿಷ್ಕ್ರಿಯ'ವಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಒಂದು ದಿನದ ಉಪವಾಸ ಸತ್ಯಾಗ್ರಹವನ್ನು ಮಂಗಳವಾರ ನಡೆಸಿದರು.

'ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಇನ್ನೇನು ಕೆಲವೇ ತಿಂಗಳು ಇರುವಾಗ ಪೈಲಟ್ ಅವರು ತಮ್ಮದೇ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ. ಇಲ್ಲಿನ ಶಹೀದ್ ಸ್ಮಾರಕ್‌ನಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4ರ ವರೆಗೆ ಸಚಿನ್ ಅವರು ಉಪವಾಸ ಸತ್ಯಾಗ್ರಹ ನಡೆಸಿದರು. ಸತ್ಯಾಗ್ರಹಕ್ಕೆ ಕೂರುವ ಮೊದಲು, ಮಹಾತ್ಮ ಗಾಂಧಿ ಹಾಗೂ ಸಮಾಜ ಸುಧಾರಕ ಜ್ಯೋತಿ ಭಾಪುಲೆ ಅವರು ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ರಾಜಸ್ಥಾನ ಸರ್ಕಾರದ ಸಚಿವ–ಶಾಸಕರಲ್ಲಿ ಯಾರೊಬ್ಬರೂ ಪೈಲಟ್ ಅವರ ಸತ್ಯಾಗ್ರಹದಲ್ಲಿ ಭಾಗವಹಿಸಲಿಲ್ಲ. ಸತ್ಯಾಗ್ರಹದಲ್ಲಿ ಭಾಗವಹಿಸದಂತೆ ಪೈಲಟ್ ಅವರೇ ಮನವಿ ಮಾಡಿದ್ದರು. ಆದರೆ, ಮಾಜಿ ಶಾಸಕ ಸಂತೋಷ್ ಸಹರಣ್ ಹಾಗೂ ರಾಮ್‌ನಾರಾಯಣ್ ಗುರ್ಜರ್ ಸೇರಿದಂತೆ ಇತರ ಮುಖಂಡರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಲಂಡನ್‌ನಲ್ಲಿ ಪ್ರಜಾಪ್ರಭುತ್ವದ ವಿರುದ್ಧ ಮಾಡಿದ್ದಾರೆ ಎನ್ನಲಾದ ಭಾಷಣವನ್ನು ಟೀಕಿಸಿ ಹೇಳಿಕೆ ನೀಡಿದ್ದ ಪ್ರವಾಸೋದ್ಯಮ ಸಚಿವ ವಿಶ್ವೇಂದ್ರ ಸಿಂಗ್ ಮಗ ಅನಿರುದ್ಧ್ ಸಿಂಗ್ ಅವರೂ ಸತ್ಯಾಗ್ರಾಹದಲ್ಲಿ ಭಾಗವಹಿಸಿದ್ದರು.



ಬಿಜೆಪಿ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸರ್ಕಾರವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಜೈಪುರದ ಶಹೀದ್ ಸ್ಮಾರಕ್‌ನಲ್ಲಿ ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಿದರು —ಪಿಟಿಐ ಚಿತ್ರ

'ಮಿಷನ್ 2030' ವಿಡಿಯೊ ಬಿಡುಗಡೆ

ಒಂದೆಡೆ ಸಚಿನ್ ಪೈಲಟ್ ಅವರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೆ, ಇನ್ನೊಂದೆಡೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್ 2030ರ ವೇಳೆಗೆ ರಾಜಸ್ಥಾನವನ್ನು ಅಗ್ರಗಣ್ಯ ರಾಜ್ಯವಾಗಿಸುವ ತಮ್ಮ ಕನಸನ್ನು ವಿವರಿಸುವ ವಿಡಿಯೊವನ್ನು ಬಿಡುಗಡೆ ಮಾಡಿದರು. ತಮ್ಮ ಅಭಿವೃದ್ಧಿ ಯೋಜನೆಗಳ ಕುರಿತು ಗೆಹಲೋತ್ ಅವರು ವಿಡಿಯೊದಲ್ಲಿ ಮಾತನಾಡಿದ್ದು, 'ಮಿಷನ್ 2030' ಕುರಿತೂ ಹೇಳಿದ್ದಾರೆ.

ಪಕ್ಷದ ಎಚ್ಚರಿಕೆ ನಡುವೆಯೂ ಸತ್ಯಾಗ್ರಹ

ಉಪವಾಸ ಸತ್ಯಾಗ್ರಹ ನಡೆಸುವುದು ಪಕ್ಷ ವಿರೋಧಿ ಚಟುವಟಿಕೆ ಆಗಲಿದೆ ಎಂದು ಸೋಮವಾರ ರಾತ್ರಿಯೇ ಕಾಂಗ್ರೆಸ್ ಎಚ್ಚರಿಕೆ ನೀಡಿದ್ದರೂ ಸಚಿನ್ ಪೈಲಟ್ ಅವರು ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ.

ರಾಜಸ್ಥಾನ ಉಸ್ತುವಾರಿ ಸುಖ್ಜಿಂದರ್ ಸಿಂಗ್ ರಾಂಧವಾ ಅವರು ಸಚಿನ್ ಪೈಲಟ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. 'ತಮ್ಮದೇ ಸರ್ಕಾರದ ವಿರುದ್ಧವೇ ಸಾರ್ವಜನಿಕವಾಗಿ ಈ ರೀತಿ ವಿರೋಧ ವ್ಯಕ್ತಪಡಿಸುವ ಬದಲು, ಪಕ್ಷದ ಒಳಗೇ ಈ ವಿಷಯಗಳನ್ನು ಪ್ರಸ್ತಾಪಿಸಿ ಎಂದು ಹೇಳಿದ್ದೇನೆ' ಎಂದು ರಾಂಧವಾ ಹೇಳಿದರು.

'ನಾನು ರಾಜಸ್ಥಾನದ ಉಸ್ತುವಾರಿಯಾಗಿ ಐದು ತಿಂಗಳು ಕಳೆದಿವೆ. ಈ ಅವಧಿಯಲ್ಲಿ ಒಮ್ಮೆಯೂ ಪೈಲಟ್ ಅವರು ಈ ವಿಷಯಗಳ ಕುರಿತು ಮಾತನಾಡಿಲ್ಲ. ಅವರು ಈ ಪಕ್ಷದ ಆಸ್ತಿ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ನಾನು ಪೈಲಟ್ ಅವರೊಂದಿಗೆ ನಿರಂತರ ಸಂಪರ್ಕದಲ್ಲಿ ಇದ್ದೇನೆ' ಎಂದರು.

ಸತ್ಯಾಗ್ರಹ ನಿಲ್ಲಿಸಲು ಸೂಚಿಸಿಲ್ಲ: 'ರಾಂಧವಾ ಹಾಗೂ ಪೈಲಟ್ ಅವರ ಮಧ್ಯೆ ಮಾತುಕತೆ ನಡೆದಿದ್ದು ನಿಜ. ಆದರೆ, ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವಂತೆ ರಾಂಧವಾ ಅವರು ಪೈಲಟ್ ಅವರಲ್ಲಿ ಕೇಳಿಕೊಂಡಿಲ್ಲ. ಪೈಲಟ್ ಅವರ ಸತ್ಯಾಗ್ರಹವು ವಸುಂಧರಾ ರಾಜೇ ಅವರ ಆಡಳಿತದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಚಾರಾದ ವಿರುದ್ಧವೇ ಹೊರತು, ಬೇರೆ ಯಾರಮೇಲೂ ಅಲ್ಲ' ಎಂದು ಪೈಲಟ್ ಆಪ್ತರು ತಿಳಿಸಿದ್ದಾರೆ.

ಹೋರಾಟ ನಿಲ್ಲಲ್ಲ: ಪೈಲಟ್ ಘೋಷಣೆ

ಉಪವಾಸ ಸತ್ಯಾಗ್ರಹವು ಸಂಜೆ 4 ಗಂಟೆಗೆ ಮುಗಿಯುತ್ತಿದ್ದಂತೆಯೇ ಸಚಿನ್ ಪೈಲಟ್ ಮಾತನಾಡಿ, 'ಭ್ರಷ್ಟಾಚಾರದ ವಿರುದ್ಧದ ಹೋರಾಟವು ಮುಂದುವರಿಯಲಿದೆ' ಎಂದರು.

ಬಿಜೆಪಿ ಸರ್ಕಾರ ನಡೆಸಿದ ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಜನರಿಗೆ ನಾವು ಭರವಸೆ ಕೊಟ್ಟಿದ್ದೇವೆ. ಆದ್ದರಿಂದ ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ' ಎಂದರು.

'ಬೆಳಕಿನ ಮಾಲಿನ್ಯದಿಂದ ಸೊಳ್ಳೆ ಕಚ್ಚುವ ಅವಧಿ ವಿಸ್ತರಣೆ'

ನವದೆಹಲಿ (ಪಿಟಿಐ): ನಗರ ಪ್ರದೇಶಗಳಲ್ಲಿ ಕಂಡುಬರುವ 'ಬೆಳಕಿನ ಮಾಲಿನ್ಯ'ಕ್ಕೂ, ಸೊಳ್ಳೆಗಳು ಮನುಷ್ಯ ಮತ್ತು ಪ್ರಾಣಿಗಳಿಗೆ ಕಚ್ಚುವ ಅವಧಿ ವಿಸ್ತರಣೆಯಾಗುವುದಕ್ಕೂ ಸಂಬಂಧ ಇರುವುದು ಅಧ್ಯಯನವೊಂದರಿಂದ ತಿಳಿದು ಬಂದಿದೆ.

ಈ ಕುರಿತು ಅಮೆರಿಕದ ಓಹಿಯೊ ಸ್ಟೇಟ್ ವಿಶ್ವವಿದ್ಯಾಲಯ ಸಂಶೋಧಕರು ಅಧ್ಯಯನ ನಡೆಸಿದ್ದು, 'ಇನ್‌ಸೆಕ್ಟ್ಸ್' ಎಂಬ ನಿಯತಕಾಲಿಕದಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ.

ನಗರಗಳಲ್ಲಿ ರಾತ್ರಿ ವೇಳೆಯೂ ವಿದ್ಯುತ್‌ದೀಪಗಳು ಬೆಳಗುತ್ತವೆ. ಚಳಿಗಾಲ ಆರಂಭಗೊಂಡ ನಂತರ ಪರಿಸರದಲ್ಲಿ ಆಗುವ ಬದಲಾವಣೆಗಳ ಮೇಲೆ ಈ ಕೃತಕ ಬೆಳಕು ಪರಿಣಾಮ ಬೀರುತ್ತದೆ.

ಇನ್ನೊಂದೆಡೆ, ಈ ಕೃತಕ ಬೆಳಕು ಚಳಿಗಾಲದ ವೇಳೆ ಸೊಳ್ಳೆಗಳು ವಿಕಾಸ ಹೊಂದುವ ಪ್ರಕ್ರಿಯೆ ಕುಂಠಿತಗೊಳ್ಳುವಂತೆ ಮಾಡುತ್ತದೆ. ಸೊಳ್ಳೆಗಳ ವಿಕಾಸ ಕುಂಠಿತಗೊಂಡಿದೆ ಎಂದರೆ, ಅವುಗಳು ಕಚ್ಚುವ ಅವಧಿಯೂ ವಿಸ್ತರಣೆಗೊಂಡಿದೆ ಎಂದರ್ಥ. ಈ ಕಾರಣಗಳಿಂದಾಗಿ, ಸೊಳ್ಳೆಗಳು ಮನುಷ್ಯರು ಹಾಗೂ ಪ್ರಾಣಿಗಳಿಗೆ ಹೆಚ್ಚು ಕಾಲದವರೆಗೆ ಕಚ್ಚುತ್ತವೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಸೊಳ್ಳೆಗಳು ಕಚ್ಚುವುದನ್ನು ಮುಂದುವರಿಸಿವೆ ಎಂದರೆ, ಅವು 'ವೆಸ್ಟ್ ನೈಲ್' ಎಂಬ ವೈರಸ್ ಸೋಂಕಿಗೆ ಒಳಗಾಗಿವೆ ಎಂಬುದನ್ನೂ ತೋರಿಸುತ್ತದೆ. ಈ ಸೋಂಕಿತ ಸೊಳ್ಳೆಗಳು ಜನರಿಗೆ ಕಚ್ಚುವ ಅಪಾಯವೂ ಹೆಚ್ಚು ಎಂದು ಅಧ್ಯಯನ ತಂಡದ ಸಂಶೋಧಕ ಮೇಗನ್ ಮೆವುಟಿ ಹೇಳಿದ್ದಾರೆ.

ವಯನಾಡಿನಲ್ಲಿ ರಾಹುಲ್ ಗಾಂಧಿಗೆ ಭವ್ಯ ಸ್ವಾಗತ

ಬಿಜೆಪಿ ಟೀಕೆ: ಸರಿ ದಾರಿಯಲ್ಲಿ ಸಾಗುತ್ತಿರುವುದರ ಸೂಚನೆ

ವಯನಾಡು, ಕೇರಳ (ಪಿಟಿಐ): 'ಸಂಸದ ಸ್ಥಾನದಿಂದ ಅನರ್ಹಗೊಳಿಸುವುದು ಅಥವಾ ಅಧಿಕೃತ ನಿವಾಸ ಖಾಲಿ ಮಾಡಿಸುವುದೂ ಸೇರಿದಂತೆ ಬಿಜೆಪಿ ಎಂತಹುದೇ ತಂತ್ರ ಅನುಸರಿಸಲಿ. ನಾನಂತೂ ಹೆದರುವುದಿಲ್ಲ. ಬಿಜೆಪಿಯವರು ಟೀಕೆ ಮಾಡಿದಾಗಲೆಲ್ಲಾ ನಾನು ಸರಿ ದಾರಿಯಲ್ಲಿ ಸಾಗುತ್ತಿರುವುದರ ಅರಿವಾಗುತ್ತದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಸಂಸದ ಸ್ಥಾನದಿಂದ ಅನರ್ಹಗೊಂಡ ಬಳಿಕ ಇದೇ ಮೊದಲ ಬಾರಿಗೆ ವಯನಾಡು ಲೋಕಸಭಾ ಕ್ಷೇತ್ರದ ಕಾಲ್‌ಪೆಟ್ಟಾ ಪ್ರದೇಶಕ್ಕೆ ಭೇಟಿ ನೀಡಿದ್ದ ಅವರಿಗೆ ಕ್ಷೇತ್ರದ ಜನರು ಹಾಗೂ ಬೆಂಬಲಿಗರಿಂದ ಅದ್ದೂರಿ ಸ್ವಾಗತ ದೊರೆಯಿತು. 'ಸತ್ಯಮೇವ ಜಯತೆ' ಹೆಸರಿನಡಿ ಮಂಗಳವಾರ ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಯಾತ್ರೆಗೆ ಭಾರಿ ಬೆಂಬಲ ವ್ಯಕ್ತವಾಯಿತು. ರಾಹುಲ್ ಹಾಗೂ ಅವರ ತಂಗಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು. ಮಾರ್ಗದ ಇಕ್ಕೆಲಗಳಲ್ಲೂ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

'ಸಂಸದ ಸ್ಥಾನವೆಂಬುದು ಒಂದು ಹಣೆಪಟ್ಟಿ. ಅದೊಂದು ಹುದ್ದೆ ಮಾತ್ರ. ಬಿಜೆಪಿಯು ನನ್ನಿಂದ ಈ ಹಣೆಪಟ್ಟಿ ಅಥವಾ ಹುದ್ದೆ ಕಿತ್ತುಕೊಳ್ಳಬಹುದು. ನನಗೆ ಹಂಚಿಕೆ ಮಾಡಿದ್ದ ಮನೆಯನ್ನೂ ಹಿಂದಕ್ಕೆ ಪಡೆಯಬಹುದು. ಹೆಚ್ಚೆಂದರೆ ಜೈಲಿಗೆ ಕಳುಹಿಸಬಹುದು. ಆದರೆ ವಯನಾಡಿನ ಜನರನ್ನು ಪ್ರತಿನಿಧಿಸುವುದನ್ನು ತಡೆಯುವುದಕ್ಕೆ ಅವರಿಂದ ಸಾಧ್ಯವೇ ಇಲ್ಲ' ಎಂದು ಹೇಳಿದ್ದಾರೆ.



ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನರತ್ತ ಕೈಬೀಸಿದರು —ಪಿಟಿಐ ಚಿತ್ರ

'ಪೊಲೀಸರನ್ನು ಮನೆಗೆ ಕಳಿಸಿದಾಕ್ಷಣ ಹೆದರಿಬಿಡುತ್ತೇನೆ. ಅಧಿಕೃತ ನಿವಾಸದಿಂದ ಹೊರಹಾಕಿದರೆ ವಿಚಲಿತನಾಗಿಬಿಡುತ್ತೇನೆ ಎಂದು ಅವರು ಭಾವಿಸಿರಬಹುದು. ವಯನಾಡು ಹಾಗೂ ದೇಶದ ಸಮಸ್ಯೆಗಳ ಕುರಿತು ಪ್ರಶ್ನೆ ಕೇಳದಂತೆ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬಿಜೆಪಿಯವರು ನನ್ನಿಂದ ಮನೆ ಹಿಂಪಡೆದಿರುವುದು ಖುಷಿ ನೀಡಿದೆ. ಆ ಮನೆಯಲ್ಲಿ ಇರುವುದಕ್ಕೆ ನನಗೆ ಆಸಕ್ತಿಯೇ ಇರಲಿಲ್ಲ' ಎಂದಿದ್ದಾರೆ.

'ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವುದು ಬಿಜೆಪಿಯವರು ನನಗೆ ನೀಡಿರುವ ಬಹುದೊಡ್ಡ ಕೊಡುಗೆ. ಅನರ್ಹಗೊಂಡರೂ ವಯನಾಡಿನಲ್ಲಿ ಅಭಿವೃದ್ಧಿ ಕೆಲಸಗಳು ನಿಲ್ಲುವುದಿಲ್ಲ. ಇಲ್ಲಿನ ಜನರ ಜೊತೆಗಿನ ಒಡನಾಟ ಹೀಗೆ ಇರಲಿದೆ' ಎಂದಿದ್ದಾರೆ.

'ಪ್ರಶ್ನೆ ಕೇಳಿದ್ದಕ್ಕೆ ನಿರ್ದಯ ದಾಳಿ': 'ರಾಹುಲ್, ಸರ್ಕಾರವನ್ನು ಪ್ರಶ್ನಿಸುತ್ತಾರೆ ಎಂಬ ಕಾರಣಕ್ಕೆ ಅವರ ಮೇಲೆ ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿಯ ಎಲ್ಲಾ ನಾಯಕರೂ ನಿರ್ದಯವಾಗಿ ವಾಗ್ದಾಳಿ ನಡೆಸುತ್ತಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ದೂರಿದ್ದಾರೆ.

'ಪ್ರಶ್ನೆಗಳನ್ನು ಕೇಳುವುದು ಸಂಸದರ ಕರ್ತವ್ಯ. ಅವರು ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆಯಬೇಕಾಗುತ್ತದೆ. ನ್ಯಾಯಕ್ಕಾಗಿ ಒತ್ತಾಯಿಸಬೇಕಾಗುತ್ತದೆ. ರಾಹುಲ್ ಅವರು ಧೈರ್ಯಶಾಲಿ ಹಾಗೂ ಸಹಾನುಭೂತಿಯುಳ್ಳ ವ್ಯಕ್ತಿ. ಬೆದರಿಕೆಗಳಿಗೆಲ್ಲಾ ಬಗ್ಗುವುದಿಲ್ಲ' ಎಂದು ತಿಳಿಸಿದ್ದಾರೆ.

2024ರಲ್ಲಿ ಬಿಜೆಪಿಗೆ 300ಕ್ಕೂ ಹೆಚ್ಚು ಸ್ಥಾನ: ಶಾ ವಿಶ್ವಾಸ

ದಿಬ್ರುಗಢ, ಅಸ್ಸಾಂ (ಪಿಟಿಐ): 'ಲೋಕಸಭೆಗೆ ಮುಂದಿನ ವರ್ಷ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ 300ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲಿದ್ದು, ನರೇಂದ್ರ ಮೋದಿ ನೇತೃತ್ವದಲ್ಲಿ ಅಧಿಕಾರಕ್ಕೆ ಮರಳಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಅಮಿತ್ ಶಾ

ಪಕ್ಷ ಇಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಈಶಾನ್ಯ ರಾಜ್ಯಗಳಲ್ಲಿರುವ 14 ಕ್ಷೇತ್ರಗಳ ಪೈಕಿ ಕನಿಷ್ಠ 12 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಗಳಿಸಲಿದೆ' ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಈಶಾನ್ಯ ರಾಜ್ಯಗಳನ್ನು ಕಾಂಗ್ರೆಸ್‌ನ ಕೋಟೆ ಎನ್ನಲಾಗುತ್ತಿತ್ತು. ಆದರೆ, ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆ ನಂತರವೂ ಇಲ್ಲಿ ಉತ್ತಮ ಸಾಧನೆ ತೋರಲು ಆ ಪಕ್ಷ ವಿಫಲವಾಯಿತು ಎಂದು ಕುಟುಕಿದರು.

ಮೇಘಾಲಯ, ತ್ರಿಪುರಾ, ನಾಗಾಲ್ಯಾಂಡ್ ವಿಧಾನಸಭೆಗಳಿಗೆ ನಡೆದ ಚುನಾವಣೆ ಬಳಿಕ ಬಿಜೆಪಿ ತ್ರಿಪುರಾದಲ್ಲಿ ಸ್ವಂತಬಲದಿಂದ ಹಾಗೂ ಇತರೆ ಎರಡು ರಾಜ್ಯಗಳಲ್ಲಿ ಮೈತ್ರಿಪಕ್ಷಗಳ ಜೊತೆಗೂಡಿ ಸರ್ಕಾರವನ್ನು ರಚಿಸಿತು ಎಂದು ಉಲ್ಲೇಖಿಸಿದರು.


ಲಂಡನ್‌ಗೆ ತೆರಳಿದ್ದಾಗ ರಾಹುಲ್ ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದ ಶಾ, 'ವಿದೇಶಿ ನೆಲದಲ್ಲಿ ನಿಂತು ರಾಹುಲ್ ಭಾರತಕ್ಕೆ ಅವಮಾನಿಸಿದ್ದಾರೆ. ಹೀಗೆಯೇ ಮುಂದುವರಿದರೆ ಈಶಾನ್ಯ ರಾಜ್ಯಗಳಲ್ಲಿ ಅಷ್ಟೇ ಅಲ್ಲ, ಇಡೀ ದೇಶದಿಂದಲೇ ಕಾಂಗ್ರೆಸ್ ನಾಪತ್ತೆಯಾಗಲಿದೆ' ಎಂದು ಎಚ್ಚರಿಸಿದರು. 'ಕಾಂಗ್ರೆಸ್‌ನವರು ಪ್ರಧಾನಿ ಮೋದಿ ಅವರಿಗೆ ಟೀಕಿಸಿದಷ್ಟೂ, ಬಿಜೆಪಿ ಇನ್ನಷ್ಟು ಬೆಳೆಯುತ್ತದೆ' ಎಂದು ಹೇಳಿದರು.

ಟೊಫೆಲ್ ಪರೀಕ್ಷಾ ಅವಧಿ ಕಡಿತ

ನವದೆಹಲಿ (ಪಿಟಿಐ): ಜಗತ್ತಿನ ಅತಿ ಪ್ರಸಿದ್ಧ ಭಾಷಾ ಅರ್ಹತಾ ಪರೀಕ್ಷೆಗಳಲ್ಲಿ ಒಂದೆನಿಸಿರುವ 'ದಿ ಟೆಸ್ಟ್ ಆಫ್ ಇಂಗ್ಲಿಷ್ ಆ್ಯಸ್ ಆ್ಯನ್ ಫಾರಿನ್ ಲಾಂಗ್ವೇಜ್' (ಟಿಒಇಎಫ್‌ಎಲ್ ಅಥವಾ ಟೊಫೆಲ್) ಪರೀಕ್ಷೆಯ ಅವಧಿಯನ್ನು ಕಡಿತಗೊಳಿಸಲಾಗಿದೆ.

'ಈ ಹಿಂದೆ ಮೂರು ಗಂಟೆ ಇದ್ದ ಪರೀಕ್ಷಾ ಅವಧಿಯನ್ನು 1 ಗಂಟೆ 56 ನಿಮಿಷಗಳಿಗೆ ತಗ್ಗಿಸಲಾಗಿದೆ. ಇನ್ನು ಮುಂದೆ ಅಭ್ಯರ್ಥಿಗಳು ಪರೀಕ್ಷೆ ಪೂರ್ಣಗೊಳಿಸಿದ ಕೂಡಲೇ ಅಂಕ ಬಿಡುಗಡೆಯ ಅಧಿಕೃತ ದಿನಾಂಕದ ಕುರಿತು ಮಾಹಿತಿ ಪಡೆಯಬಹುದಾಗಿದೆ. ಇದರ ಜೊತೆಗೆ ಇನ್ನಿತರ ಬದಲಾವಣೆಗಳನ್ನು ಮಾಡಲಾಗಿದ್ದು, ಇದು ಈ ವರ್ಷದ ಜುಲೈ 26ರಿಂದಲೇ ಜಾರಿಗೊಳ್ಳಲಿದೆ' ಎಂದು ಎಜುಕೇಷನಲ್ ಟೆಸ್ಟಿಂಗ್ ಸರ್ವಿಸಸ್ (ಇ.ಟಿ.ಎಸ್) ತಿಳಿಸಿದೆ. ಇ.ಟಿ.ಎಸ್, ಟೊಫೆಲ್ ಹಾಗೂ ಗ್ರಾಜುಯೇಟ್ ರೆಕಾರ್ಡ್ ಎಕ್ಸಾಮಿನೇಷನ್ಸ್ (ಜಿಆರ್‌ಇ) ಪರೀಕ್ಷೆಗಳನ್ನು ಆಯೋಜಿಸುತ್ತದೆ.

ಉದ್ಯೋಗ ವಾಣಿ



ರೋಹಿತ್ ಉತ್ತಮ ಬ್ಯಾಟಿಂಗ್; ಚಾವ್ಲಾ, ಜೇಸನ್‌ಗೆ 3 ವಿಕೆಟ್: ಡೆಲ್ಲಿಗೆ ನಾಲ್ಕನೇ ಸೋಲು

ಮುಂಬೈ ಇಂಡಿಯನ್ಸ್‌ಗೆ ಮೊದಲ ಜಯ



ರೋಹಿತ್ ಶರ್ಮಾ ಆಟದ ಪರಿ– ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಕೊನೆಯ ಓವರ್‌ನಲ್ಲಿ ಒತ್ತಡವನ್ನು ಮೀರಿನಿಂತ ಮುಂಬೈ ಇಂಡಿಯನ್ಸ್ ತಂಡವು ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಮೊದಲ ಜಯದ ಸಿಹಿ ಸವಿಯಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮುಂಬೈ 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿತು. ಡೆಲ್ಲಿಗೆ ಇದು ಸತತ ನಾಲ್ಕನೇ ಸೋಲು.

ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೆಲ್ಲಿ 19.4 ಓವರ್‌ಗಳಲ್ಲಿ 172 ರನ್ ಗಳಿಸಿ ಆಲೌಟ್ ಆಯಿತು. ಮುಂಬೈ ತಂಡವು 4 ವಿಕೆಟ್ ಕಳೆದುಕೊಂಡು ಕೊನೆಯ ಓವರ್‌ನ ಕೊನೆಯ ಎಸೆತದಲ್ಲಿ ಗೆಲುವಿನ ದಡ ಸೇರಿತು.

ಕೊನೆಯ ಓವರ್ ರೋಚಕತೆ: ಎನ್ರಿಚ್ ನಾಕಿಯಾ ಹಾಕಿದ ಕೊನೆಯ ಓವರ್‌ನಲ್ಲಿ ಮುಂಬೈ ತಂಡಕ್ಕೆ 5 ರನ್ ಬೇಕಿತ್ತು. ಮುಂಬೈ ತಂಡದ ಕೆಮರಾನ್ ಗ್ರೀನ್ ಮೊದಲ ಎಸೆತದಲ್ಲಿ 1 ರನ್ ಗಳಿಸಿದರು. ಎರಡು ಮತ್ತು ಮೂರನೇ ಎಸೆತಗಳನ್ನು ಆಡಿದ ಟಿಮ್ ಡೇವಿಡ್ ಅವರಿಂದ ರನ್ ದಾಖಲಾಗಲಿಲ್ಲ. ಎರಡನೇ ಎಸೆತದಲ್ಲಿ ಮುಕೇಶ್ ಅವರು ಡೇವಿಡ್ ಅವರ ಕ್ಯಾಚ್ ಚೆಲ್ಲಿದರು. ನಾಲ್ಕು ಮತ್ತು ಐದನೇ ಎಸೆತಗಳಲ್ಲಿ ಡೇವಿಡ್ ಹಾಗೂ ಗ್ರೀನ್ ತಲಾ ಒಂದು ರನ್ ಗಳಿಸಿದರು. ಕೊನೆಯ ಎಸೆತದಲ್ಲಿ ಡೇವಿಡ್ ಎರಡು ರನ್ ಗಳಿಸಿ ತಂಡವು ನಿಟ್ಟುಸಿರು ಬಿಡುವಂತೆ ಮಾಡಿದರು.

ಇದಕ್ಕೂ ಮೊದಲು ನಾಯಕ ರೋಹಿತ್ ಶರ್ಮಾ (65) ಹಾಗೂ ಇಶಾನ್ ಕಿಶನ್ (31) ಮೊದಲ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿ ಮುಂಬೈಗೆ ಉತ್ತಮ ಆರಂಭ ನೀಡಿದ್ದರು. ತಿಲಕ್ ವರ್ಮಾ (41) ಕೊಡುಗೆ ನೀಡಿದರು. ಟಿಮ್ ಡೇವಿಡ್ ಔಟಾಗದೆ 13 ಮತ್ತು ಗ್ರೀನ್ ಅಜೇಯ 17 ರನ್ ಗಳಿಸಿದರು.

ಡೆಲ್ಲಿ ಸವಾಲಿನ ಮೊತ್ತ: ಅಕ್ಷರ್ ಪಟೇಲ್ ಮತ್ತು ನಾಯಕ ಡೇವಿಡ್ ವಾರ್ನರ್ ಅವರ ಅರ್ಧಶತಕಗಳ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಸವಾಲಿನ ಮೊತ್ತ ಕಲೆಹಾಕಿತ್ತು. ವಾರ್ನರ್ (51 ರನ್, 47 ಎ) ತಾಳ್ಮೆಯ ಆಟವಾಡಿ ಇನಿಂಗ್ಸ್‌ಗೆ ಬಲ ತುಂಬಿದರೆ, ಅಕ್ಷರ್ (54 ರನ್, 25 ಎ., 4X4, 6X5) ಬಿರುಸಿನ ಹೊಡೆತಗಳ ಮೂಲಕ ರನ್ ವೇಗ ಹೆಚ್ಚಿಸಿದರು.

ಪೀಯೂಷ್ ಚಾವ್ಲಾ (22ಕ್ಕೆ 3) ಮತ್ತು ಜೇಸನ್ ಬೆಹ್ರೆನ್‌ಡಾರ್ಫ್ (23ಕ್ಕೆ 3) ಬಿಗುವಾದ ದಾಳಿ ನಡೆಸಿ, ಡೆಲ್ಲಿ ತಂಡ ಬೃಹತ್ ಮೊತ್ತ ಗಳಿಸದಂತೆ ನೋಡಿಕೊಂಡರು.

ಇದಕ್ಕೂ ಮೊದಲು ಆರಂಭಿಕ ಆಟಗಾರ ಪೃಥ್ವಿ ಶಾ (15) ಮೂರು ಬೌಂಡರಿ ಹೊಡೆದರೂ ಹೆಚ್ಚು ಹೊತ್ತು ನಿಲ್ಲಲಿಲ್ಲ. ಹೃತಿಕ್ ಶೋಕೀನ್ ಎಸೆತದಲ್ಲಿ ಗ್ರೀನ್ ಅವರಿಗೆ ಕ್ಯಾಚಿತ್ತು ಔಟಾದರು.

ಬಳಿಕ ಮನೀಷ್ ಪಾಂಡೆ (26) ಅವರು ವಾರ್ನರ್ ಜತೆ ಎರಡನೇ ವಿಕೆಟ್‌ಗೆ 43 ರನ್ ಸೇರಿಸಿದರು. ಚಾವ್ಲಾ ಬೌಲಿಂಗ್‌ನಲ್ಲಿ ಪಾಂಡೆ ಪೆವಿಲಿಯನ್‌ಗೆ ಮರಳಿದರು. ಆ ಬಳಿಕ ಬೆನ್ನುಬೆನ್ನಿಗೆ ಮೂರು ವಿಕೆಟ್‌ಗಳು ಬಿದ್ದವು.

13ನೇ ಓವರ್‌ನಲ್ಲಿ ಐದು ವಿಕೆಟ್‌ಗೆ 98 ರನ್ ಗಳಿಸಿ ಡೆಲ್ಲಿ ಕುಸಿತದ ಹಾದಿ ಹಿಡಿದಿತ್ತು. ಈ ವೇಳೆ ಅಕ್ಷರ್ ಬೀಸಾಟವಾಡಿದ್ದರಿಂದ ಇನಿಂಗ್ಸ್‌ಗೆ ಕಳೆ ಏರಿತು. ನಾಲ್ಕು ಬೌಂಡರಿ ಮತ್ತು ಐದು ಸಿಕ್ಸರ್ ಹೊಡೆದರು. ವಾರ್ನರ್ ಜತೆ 6ನೇ ವಿಕೆಟ್‌ಗೆ 67 ರನ್ ಸೇರಿಸಿದರು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 172 (19.4 ಓವರ್‌ಗಳಲ್ಲಿ)

ವಾರ್ನರ್ ಸಿ ಮೆರೆಡಿತ್ ಬಿ ಬೆಹ್ರೆನ್‌ಡಾರ್ಫ್ 51 (47 ಎ., 4X6)
ಪೃಥ್ವಿ ಸಿ ಗ್ರೀನ್ ಬಿ ಶೋಕೀನ್ 15 (10 ಎ., 4X3)
ಪಾಂಡೆ ಸಿ ಬೆಹ್ರೆನ್‌ಡಾರ್ಫ್ ಬಿ ಚಾವ್ಲಾ 26 (18 ಎ., 4X5)
ಯಶ್ ಸಿ ವಡೇರಾ ಬಿ ಮೆರೆಡಿತ್ 2 (4 ಎ)
ಪೊವೆಲ್ ಎಲ್‌ಬಿಡಬ್ಲ್ಯು ಬಿ ಚಾವ್ಲಾ 4 (4 ಎ., 4X1)
ಲಲಿತ್ ಬಿ ಚಾವ್ಲಾ 2 (4 ಎ)
ಅಕ್ಷರ್ ಸಿ ಅರ್ಶದ್ ಬಿ ಬೆಹ್ರೆನ್‌ಡಾರ್ಫ್ 54 (25 ಎ., 4X4, 6X5)
ಅಭಿಷೇಕ್ ಸಿ ಗ್ರೀನ್ ಬಿ ಬೆಹ್ರೆನ್‌ಡಾರ್ಫ್ 1 (3 ಎ)
ಕುಲದೀಪ್ ರನೌಟ್ 0 (1 ಎ)
ಎನ್ರಿಚ್ ನಾಕಿಯಾ ಬಿ ಮೆರೆಡಿತ್ 5 (3 ಎ., 4X1)
ಮುಸ್ತಫಿಜುರ್ ಔಟಾಗದೆ 1 (1 ಎ)

ಇತರೆ: 11 (ಲೆಗ್ ಬೈ 1, ನೋಬಾಲ್ 2, ವೈಡ್ 8)

ವಿಕೆಟ್ ಪತನ: 1–33 (ಪೃಥ್ವಿ ಶಾ; 3.4), 2–76 (ಮನೀಷ್ ಪಾಂಡೆ; 8.3), 3–81 (ಯಶ್ ಧುಲ್; 9.5), 4–86 (ರೊವ್ಮನ್ ಪೊವೆಲ್; 10.4), 5–98 (ಲಲಿತ್ ಯಾದವ್; 12.3), 6–165 (ಅಕ್ಷರ್ ಪಟೇಲ್; 18.1), 7–166 (ಡೇವಿಡ್ ವಾರ್ನರ್; 18.3), 8–166 (ಕುಲದೀಪ್ ಯಾದವ್; 18.4), 9–166 (ಅಭಿಷೇಕ್ ಪೊರೆಲ್; 18.6), 10–172 (ಎನ್ರಿಚ್ ನಾಕಿಯಾ; 19.4)

ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 3–0–23–3, ಅರ್ಶದ್ ಖಾನ್ 1–0–12–0, ಕೆಮರಾನ್ ಗ್ರೀನ್ 3–0–30–0, ಹೃತಿಕ್ ಶೋಕೀನ್ 4–0–43–1, ರಿಲಿ ಮೆರೆಡಿತ್ 3.4–0–34–2, ಪೀಯೂಷ್ ಚಾವ್ಲಾ 4–0–22–3, ತಿಲಕ್ ವರ್ಮಾ 1–0–7–0

ಮುಂಬೈ ಇಂಡಿಯನ್ಸ್ 4ಕ್ಕೆ 173 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಸಿ ಅಭಿಷೇಕ್ ಬಿ ಮುಸ್ತಫಿಜುರ್ 65 (45 ಎ., 4X6, 6X4)
ಕಿಶನ್ ರನೌಟ್ 31 (26 ಎ., 4X6)
ತಿಲಕ್ ವರ್ಮಾ ಸಿ ಪಾಂಡೆ ಬಿ ಮುಕೇಶ್ 41 (29 ಎ., 4X1, 6X4)
ಸೂರ್ಯಕುಮಾರ್ ಸಿ ಕುಲದೀಪ್ ಬಿ ಮುಕೇಶ್ 0 (1 ಎ)
ಟಿಮ್ ಡೇವಿಡ್ ಔಟಾಗದೆ 13 (11 ಎ., 6X1)
ಕೆಮರಾನ್ ಗ್ರೀನ್ ಔಟಾಗದೆ 17 (8 ಎ., 4X1, 6X1)

ಇತರೆ: 6 (ಲೆಗ್‌ಬೈ 4, ವೈಡ್ 2)

ವಿಕೆಟ್ ಪತನ: 1–71 (ಇಶಾನ್ ಕಿಶನ್; 7.3), 2–139 (ತಿಲಕ್ ವರ್ಮಾ; 15.5), 3–139 (ಸೂರ್ಯಕುಮಾರ್ ಯಾದವ್; 15.6), 4–143 (ರೋಹಿತ್ ಶರ್ಮಾ; 16.5)

ಬೌಲಿಂಗ್: ಮುಕೇಶ್ ಕುಮಾರ್ 2–0–30–2, ಮುಸ್ತಫಿಜುರ್ ರೆಹ್ಮಾನ್ 4–0–38–1, ಎನ್ರಿಚ್ ನಾಕಿಯಾ 4–0–35–0, ಲಲಿತ್ ಯಾದವ್ 4–0–23–0, ಅಕ್ಷರ್ ಪಟೇಲ್ 4–0–20–0, ಕುಲದೀಪ್ ಯಾದವ್ 2–0–23–0

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್ ಗೆಲುವು

ಜೈಸ್ವಾಲ್, ಬಟ್ಲರ್‌ಗೆ 'ಸ್ಪಿನ್' ಪರೀಕ್ಷೆ

ರಾಜಸ್ಥಾನ ರಾಯಲ್ಸ್‌ಗೆ ಚೆನ್ನೈ ಸೂಪರ್ ಕಿಂಗ್ಸ್ ಸವಾಲು

ಚೆನ್ನೈ (ಪಿಟಿಐ): ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಐಪಿಎಲ್ ಪಂದ್ಯದಲ್ಲಿ ಬುಧವಾರ ಇಲ್ಲಿ ಎದುರಾಗಲಿದ್ದು, ಎಲ್ಲರ ಚಿತ್ತ ರಾಯಲ್ಸ್ ತಂಡದ ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ ಹಾಗೂ ಜೋಸ್ ಬಟ್ಲರ್ ಅವರ ಮೇಲೆ ನೆಟ್ಟಿದೆ.

ಉತ್ತಮ ಲಯದಲ್ಲಿರುವ ಇಬ್ಬರಿಗೂ ಚೆಪಾಕ್ ಕ್ರೀಡಾಂಗಣದ ಪಿಚ್‌ನಲ್ಲಿ 'ಸ್ಪಿನ್' ಪರೀಕ್ಷೆ ಎದುರಾಗಲಿದ್ದು, ಸೂಪರ್‌ಕಿಂಗ್ಸ್ ತಂಡದ ಸ್ಪಿನ್ ದಾಳಿಯನ್ನು ಎಷ್ಟರ ಮಟ್ಟಿಗೆ ಎದುರಿಸಿ ನಿಲ್ಲುವರು ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಹಿಂದಿನ ಪಂದ್ಯಗಳಲ್ಲಿ ರಾಯಲ್ಸ್‌ಗೆ ಬಿರುಸಿನ ಆರಂಭ ನೀಡಿದ್ದ ಜೈಸ್ವಾಲ್ ಮತ್ತು ಬಟ್ಲರ್ ತಲಾ ಎರಡು ಅರ್ಧಶತಗಳನ್ನು ಗಳಿಸಿದ್ದಾರೆ. ಇವರು ಕ್ರಮವಾಗಿ 164.47 ಹಾಗೂ 180.47ರ ಸ್ಟ್ರೈಕ್‌ರೇಟ್ ಹೊಂದಿದ್ದಾರೆ.

ಆದರೆ ರಾಯಲ್ಸ್ ತಂಡ ತನ್ನ ಎಲ್ಲ ಮೂರೂ ಪಂದ್ಯಗಳನ್ನು ಬ್ಯಾಟರ್‌ಗಳಿಗೆ ನೆರವು ನೀಡುವ ಪಿಚ್‌ಗಳಲ್ಲಿ ಆಡಿತ್ತು. ಗುವಾಹಟಿ ಮತ್ತು ಹೈದರಾಬಾದ್ ಕ್ರೀಡಾಂಗಣದ ಪಿಚ್ 'ಬ್ಯಾಟರ್ ಸ್ನೇಹಿ' ಆಗಿತ್ತು. ಸ್ಪಿನ್ನರ್‌ಗಳಿಗೆ ನೆರವು ನೀಡುವ ಚೆನ್ನೈನ ಪಿಚ್‌ನಲ್ಲಿ ರಾಯಲ್ಸ್ ತಂಡದ ಬ್ಯಾಟರ್‌ಗಳಿಗೆ ನಿಜವಾದ ಸವಾಲು ಎದುರಾಗಲಿದೆ.

ಸೂಪರ್‌ಕಿಂಗ್ಸ್ ತಂಡದ ಸ್ಪಿನ್ ವಿಭಾಗವು ಮೊಯೀನ್ ಅಲಿ, ರವೀಂದ್ರ ಜಡೇಜ ಮತ್ತು ಮಿಚೆಲ್ ಸ್ಯಾಂಟ್ನರ್ ಅವರನ್ನು ಒಳಗೊಂಡಿದೆ. ಈ ಮೂವರು ಇದುವರೆಗೆ ಒಟ್ಟು 11 ವಿಕೆಟ್‌ಗಳನ್ನು ತಮ್ಮೊಳಗೆ ಹಂಚಿಕೊಂಡಿದ್ದಾರೆ. ಮಾತ್ರವಲ್ಲ, ರನ್ ವೇಗಕ್ಕೆ ಲಗಾಮು ತೊಡಿಸುವಲ್ಲೂ ಯಶ ಕಂಡಿದ್ದಾರೆ.

ಎರಡು ಪಂದ್ಯಗಳನ್ನು ಆಡಿರುವ ಮೊಯೀನ್ ಅವರ ಎಕಾನಮಿ ರೇಟ್ 6.50 ಆಗಿದೆ. ಜಡೇಜ (6.88) ಮತ್ತು ಸ್ಯಾಂಟನೆರ್ (6.75) ಅವರೂ ಓವರ್‌ನಲ್ಲಿ ಏಳಕ್ಕಿಂತ ಹೆಚ್ಚು ರನ್ ಬಿಟ್ಟುಕೊಟ್ಟಿಲ್ಲ. ಅನಾರೋಗ್ಯದ ಕಾರಣ ಕಳೆದ ಪಂದ್ಯದಲ್ಲಿ ವಿಶ್ರಾಂತಿ ಪಡೆದಿದ್ದ ಮೊಯೀನ್, ಮಂಗಳವಾರ ಕಣಕ್ಕಿಳಿಯಲಿದ್ದಾರೆ.

ರಾಯಲ್ಸ್ ತಂಡ ಕೂಡಾ ಅತ್ಯುತ್ತಮ ಸ್ಪಿನ್ನರ್‌ಗಳನ್ನು ಹೊಂದಿರುವುರಿಂದ ಈ ಪಂದ್ಯದ ರೋಚಕತೆ ಹೆಚ್ಚಲಿದೆ. ಆರ್. ಅಶ್ವಿನ್ ಮತ್ತು ಯಜುವೇಂದ್ರ ಚಾಹಲ್ ಅವರು ಮಹೇಂದ್ರ ಸಿಂಗ್ ಧೋನಿ ಬಳಗವನ್ನು ಕಾಡಲು ಸಜ್ಜಾಗಿದ್ದಾರೆ. ಚೆಪಾಕ್ ಪಿಚ್‌ನ ಗುಣವನ್ನು ಚೆನ್ನಾಗಿ ಅರಿತುಕೊಂಡಿರುವ ಅಶ್ವಿನ್‌ಗೆ ಇದು ಒಂದು ರೀತಿಯಲ್ಲಿ 'ತವರು' ಪಂದ್ಯ ಆಗಿದೆ.

ಚೆನ್ನೈ ತಂಡದ ದೀಪಕ್ ಚಾಹರ್ ಈ ಪಂದ್ಯದಲ್ಲಿ ಆಡುತ್ತಿಲ್ಲ. ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿರುವ ಅವರು ಟೂರ್ನಿಯಿಂದಲೇ ಹೊರಬೀಳುವ ಸಾಧ್ಯತೆಯಿದೆ.

ಧೋನಿ ಬಳಗವು ಬ್ಯಾಟಿಂಗ್‌ನಲ್ಲಿ ಋತುರಾಜ್ ಗಾಯಕವಾಡ್ ಮತ್ತು ಅಜಿಂಕ್ಯ ರಹಾನೆ ಅವರನ್ನು ನೆಚ್ಚಿಕೊಂಡಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಲಖನೌ	4	3	1	0	6	1.048
ರಾಜಸ್ಥಾನ	3	2	1	0	4	2.067
ಕೋಲ್ಕತ್ತ	3	2	1	0	4	1.375
ಗುಜರಾತ್	3	2	1	0	4	0.431
ಚೆನ್ನೈ	3	2	1	0	4	0.356
ಪಂಜಾಬ್	3	2	1	0	4	-0.281
ಬೆಂಗಳೂರು	3	1	2	0	2	-0.800
ಮುಂಬೈ	3	1	2	0	2	-0.879
ಹೈದರಾಬಾದ್	3	1	2	0	2	-1.502
ಡೆಲ್ಲಿ	4	0	4	0	0	-1.576

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)


ಆಟಗಾರ	ತಂಡ	ರನ್
ಶಿಖರ್	ಪಂಜಾಬ್	225

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಮಾರ್ಕ್ ವುಡ್	ಲಖನೌ	9

ಹೆಲ್ಮೆಟ್ ಎಸೆದಿದ್ದ ಆವೇಶ್ ಖಾನ್‌ಗೆ ವಾಗ್ದಂಡನೆ

ಫಫ್ ಡುಪ್ಲೆಸಿಗೆ ₹12 ಲಕ್ಷ ದಂಡ



ಫಫ್ ಡುಪ್ಲೆಸಿ

ಬೆಂಗಳೂರು (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸೋಮವಾರ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ನಾಯಕ ಫಫ್ ಡುಪ್ಲೆಸಿ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ತನ್ನ ಪಾಲಿನ ಓವರುಗಳನ್ನು ಪೂರೈಸಲು ನಿಗದಿಗಿಂತಲೂ ಹೆಚ್ಚಿನ ಸಮಯ ತೆಗೆದುಕೊಂಡಿರುವುದು ಐಪಿಎಲ್ ನಿಯಮದ ಉಲ್ಲಂಘನೆಯಾಗಿದೆ. ಈ ಆವೃತ್ತಿಯಲ್ಲಿ ತಂಡದಿಂದ ಆಗಿರುವ ಮೊದಲ ಉಲ್ಲಂಘನೆ ಇದಾಗಿದ್ದು, ನಾಯಕ ಡುಪ್ಲೆಸಿ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ' ಎಂದು ಐಪಿಎಲ್ ಆಡಳಿತ ಸಮಿತಿ ಪ್ರಕಟಣೆ ತಿಳಿಸಿದೆ.

ಆವೇಶ್‌ಗೆ ವಾಗ್ದಂಡನೆ: ಗೆಲುವಿನ ಸಂಭ್ರಮದಲ್ಲಿ ಹೆಲ್ಮೆಟ್‌ಅನ್ನು ಜೋರಾಗಿ ನೆಲಕ್ಕೆ ಎಸೆದಿದ್ದ ಲಖನೌ ತಂಡದ ವೇಗದ ಬೌಲರ್ ಆವೇಶ್ ಖಾನ್ ಅವರಿಗೆ ಪಂದ್ಯದ ರೆಫರಿ ಎಚ್ಚರಿಕೆ ನೀಡಿದ್ದಾರೆ.

'ಆವೇಶ್ ತೋರಿದ ವರ್ತನೆಯು ಐಪಿಎಲ್ ನಿಯಮದಡಿ ಲೆವೆಲ್–1 ಅಪರಾಧವಾಗಿದೆ. ಅವರನ್ನು ವಾಗ್ದಂಡನೆಗೆ ಒಳಪಡಿಸಲಾಗಿದೆ' ಎಂದು ಪ್ರಕಟಣೆ ಹೇಳಿದೆ. ಲೆವೆಲ್ –1 ಅಪರಾಧಗಳಿಗೆ ಸಂಬಂಧಿಸಿದಂತೆ ಪಂದ್ಯದ ರೆಫರಿ ನೀಡುವ ತೀರ್ಪು ಅಂತಿಮವಾಗಿದೆ.

ರಾಹುಲ್ ಸಮರ್ಥನೆ: ಸೋಮವಾರದ ಪಂದ್ಯದಲ್ಲಿ ತಾವು ತುಂಬಾ ನಿಧಾನಗತಿಯಲ್ಲಿ ಬ್ಯಾಟಿಂಗ್ ಮಾಡಿದ್ದನ್ನು ಲಖನೌ ತಂಡದ ನಾಯಕ ಕೆ.ಎಲ್.ರಾಹುಲ್ ಅವರು ಸಮರ್ಥಿಸಿಕೊಂಡಿದ್ದಾರೆ.

ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯವನ್ನು ಲಖನೌ ತಂಡ ಒಂದು ವಿಕೆಟ್‌ನಿಂದ ಗೆದ್ದಿತ್ತು. ಆರ್‌ಸಿಬಿ ನೀಡಿದ್ದ 213 ರನ್‌ಗಳ ಗುರಿಯನ್ನು ಬೆನ್ನಟ್ಟುವಲ್ಲಿ ಯಶಸ್ವಿಯಾಗಿತ್ತು. ಸವಾಲಿ ಮೊತ್ತ ಮುಂದಿದ್ದರೂ, ತಾಳ್ಮೆಯಿಂದ ಆಡಿದ್ದ ರಾಹುಲ್ 20 ಎಸೆತಗಳಲ್ಲಿ 18 ರನ್ ಗಳಿಸಿದ್ದರು.

'ಪಂದ್ಯದ ಪರಿಸ್ಥಿತಿಯನ್ನು ನೋಡಿಕೊಂಡು ಬ್ಯಾಟ್ ಮಾಡಿದೆ. ನನ್ನ ನಿರ್ಧಾರ ಸರಿಯಾಗಿಯೇ ಇತ್ತು. ಮುಂದಿನ ಪಂದ್ಯಗಳಲ್ಲಿ ಒಂದೆರಡು ಅಬ್ಬರದ ಇನಿಂಗ್ಸ್ ಆಡಿದರೆ ನನ್ನ ಸ್ಟ್ರೈಕ್‌ರೇಟ್ ಉತ್ತಮಗೊಳ್ಳುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ರಾಹುಲ್ ನಿಧಾನಗತಿಯಲ್ಲಿ ಆಡಿದ್ದರಿಂದ ಇತರ ಬ್ಯಾಟ್ಸ್‌ಮನ್‌ಗಳ ಮೇಲಿನ ಒತ್ತಡ ಹೆಚ್ಚಿತ್ತು. ನಿಕೊಲಸ್ ಪೂರನ್ (62 ರನ್, 19ಎ.) ಮತ್ತು ಮಾರ್ಕಸ್ ಸ್ಟೊಯಿನಿಸ್ (65 ರನ್, 30 ಎ.) ಅಬ್ಬರದ ಆಟದಿಂದಾಗಿ ತಂಡ ಗೆದ್ದಿತ್ತು.

ಕಷ್ಟದ ದಿನಗಳ ಬಿಚ್ಚಿಟ್ಟ ಕೆಕೆಆರ್ ಆಟಗಾರ ರಿಂಕು

'ಐಪಿಎಲ್ ಹರಾಜಿನಲ್ಲಿ ಬಂದ ಹಣದಿಂದ ಮನೆ ಕಟ್ಟಿಸಿದೆನಲ್ಲದೇ, ಅಪ್ಪನಿಗಾಗಿ ಕಾರನ್ನೂ ಖರೀದಿಸಿದೆ' ಎಂದು ರಿಂಕು ಸ್ಮರಿಸಿಕೊಂಡರು.

ಕ್ರಿಕೆಟ್ ಆಡಿದ್ದಕ್ಕೆ ಏಟು ತಿಂದಿದ್ದೆ!

ಬೆಂಗಳೂರು: ಕ್ರಿಕೆಟಿಗನಾಗಬೇಕೆಂಬ ಬಯಕೆ ಈಡೇರಿಸುವ ಹಾದಿಯಲ್ಲಿ ಮನೆಯವರಿಂದ ಸೂಕ್ತ ಬೆಂಬಲ ಸಿಗಲಿಲ್ಲ. ನಾನು ಕ್ರಿಕೆಟ್ ಆಡುವುದು ಅಪ್ಪನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಕ್ರಿಕೆಟ್ ಆಡಿದ್ದಕ್ಕೆ ಅಪ್ಪನಿಂದ ಹಲವು ಸಲ ಏಟುಗಳನ್ನು ತಿಂದಿದ್ದೆ...

ಐಪಿಎಲ್ ಪಂದ್ಯದ ಕೊನೆಯ ಓವರ್‌ನಲ್ಲಿ ಐದು ಸಿಕ್ಸರ್ ಹೊಡೆದು 'ಹೀರೊ' ಆಗಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ರಿಂಕು ಸಿಂಗ್ ಅವರು ಬಾಲ್ಯದಲ್ಲಿ ಎದುರಿಸಿದ್ದ ಬವಣೆಯನ್ನು ಹೀಗೆ ಬಿಚ್ಚಿಟ್ಟಿದ್ದಾರೆ. ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಆಕಾಶ್ ಚೋಪ್ರಾ ಅವರು ಜಿಯೊಸಿನೆಮಾದಲ್ಲಿ ಆಯೋಜಿಸುವ 'ಆಕಾಶ್‌ವಾಣಿ' ಕಾರ್ಯಕ್ರಮದಲ್ಲಿ ರಿಂಕು ಮುಕ್ತವಾಗಿ ಮಾತನಾಡಿದರು.



'ಹಾಸ್ಟೆಲ್‌ನ ಟೂರ್ನಿಯಲ್ಲಿ ಪಾಲ್ಗೊಳ್ಳಲು ಒಮ್ಮೆ ಕಾನ್ಪುರಕ್ಕೆ ಹೋಗಿದ್ದೆ. ಖರ್ಚಿಗಾಗಿ ಅಮ್ಮ ₹ 1,000 ಕೊಟ್ಟಿದ್ದರು. ಆದರೆ ಅಪ್ಪನಿಂದ ಏಟು ಮಾತ್ರ ಸಿಕ್ಕಿತ್ತು' ಎಂದು ಅಲೀಗಢದಲ್ಲಿ ಜನಿಸಿದ ರಿಂಕು ಹೇಳಿದರು.

'ನನ್ನ ಸಹೋದರ ಕೋಚಿಂಗ್ ಸೆಂಟರ್‌ವೊಂದರಲ್ಲಿ ನೆಲ ಒರೆಸುವ ಕೆಲಸ ಮಾಡುತ್ತಿದ್ದ. ನನ್ನನ್ನೂ ಅಲ್ಲಿ ಕೆಲಸ ಮಾಡಲು ಕರೆದೊಯ್ಯುತ್ತಿದ್ದ. ಬೆಳಿಗ್ಗೆ ಬೇಗನೇ ಬಂದು ನೆಲ ಒರೆಸಿ ಹೋದರೆ ಯಾರಿಗೂ ತಿಳಿಯದು ಎನ್ನುತ್ತಿದ್ದ. ಆದರೆ ನನಗೆ ಆ ಕೆಲಸ ಇಷ್ಟವೇ ಇರಲಿಲ್ಲ. ಕ್ರಿಕೆಟ್‌ನತ್ತ ಗಮನ ಕೇಂದ್ರೀಕರಿಸತೊಡಗಿದೆ' ಎಂದು ಮೆಲುಕು ಹಾಕಿಕೊಂಡರು.

'2012ರಲ್ಲಿ ಅಂತರರಾಷ್ಟ್ರೀಯ ಮಟ್ಟದ ಶಾಲಾ ಟೂರ್ನಿಯೊಂದರಲ್ಲಿ ಡೆಲ್ಲಿ ಪಬ್ಲಿಕ್ ಸ್ಕೂಲ್ ತಂಡವನ್ನು ಪ್ರತಿನಿಧಿಸುವ ಅವಕಾಶ ಲಭಿಸಿತ್ತು. ಪಾಕಿಸ್ತಾನ, ಶ್ರೀಲಂಕಾ, ದುಬೈ ಮತ್ತು ಬಾಂಗ್ಲಾದೇಶದಿಂದ ತಂಡಗಳು ಬಂದಿದ್ದವು. ಟೂರ್ನಿಯ ಶ್ರೇಷ್ಠ ಆಟಗಾರನಾದ ನನಗೆ ಬಹುಮಾನವಾಗಿ ಬೈಕ್ ದೊರೆತಿತ್ತು. ಆ ಸಾಧನೆ ವೃತ್ತಿಜೀವನಕ್ಕೆ ತಿರುವು ನೀಡಿತು. ಆ ಬಳಿಕ ಅಪ್ಪನ ಬೆಂಬಲವೂ ಲಭಿಸತೊಡಗಿತು' ಎಂದರು.

'ಐಪಿಎಲ್ ಹರಾಜಿನಲ್ಲಿ ನನಗೆ ಅಷ್ಟೊಂದು ಮೌಲ್ಯ ದೊರೆಯಬಹುದು ಅಂದುಕೊಂಡಿರಲಿಲ್ಲ. ₹ 20–25 ಲಕ್ಷಕ್ಕೆ ಮುಂಬೈ ತಂಡದ ಪಾಲಾಗಬಹುದು ಅಂದುಕೊಂಡಿದ್ದೆ. ಆದರೆ ಹರಾಜಿನಲ್ಲಿ ನನ್ನ ಬೆಲೆ ಏರುತ್ತಲೇ ಹೋಯಿತು. ಅಂತಿಮವಾಗಿ ₹ 80 ಲಕ್ಷಕ್ಕೆ ಕೆಕೆಆರ್ ತಂಡವನ್ನು ಸೇರಿಕೊಂಡೆ' ಎಂದರು.



ಪ್ರಶಸ್ತಿ ಗೆದ್ದ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡ. ಎಡದಿಂದ–ನಿಂತವರು: ಕಬಿಯಾ ಬದೋನಿ, ತ್ರಿಶಾನಾ, ಸುಮಿತ್ರಾ, ಶಿವಾನಿ ಕೃಷ್ಣ, ದೀಪಾ ಕುಮಾರಿ, ಶಿವಾನಿ ಜಂಗೀದ್, ದೀಪಿಕಾ ತಿವಾರಿ ಹಾಗೂ ತುಲಿಕಾ ರಜಪೂತ್. ಕುಳಿತವರು: ಸುಮನ್, ನಜ್ಮಾ, ಸೋನಲ್, ಸಂಜನಾ, ನಿವೇದಿತಾ ಹಾಗೂ ಸೋನಾಲಿ – ಪ್ರಜಾವಾಣಿ ಚಿತ್ರ

ಅಂತರ ವಿಶ್ವವಿದ್ಯಾಲಯ ಮಹಿಳಾ ಕ್ರಿಕೆಟ್

ಲವ್ಲಿ ಪ್ರೊಫೆಷನಲ್ ವಿ.ವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ನಜ್ಮಾ ಗಳಿಸಿದ ಆಕರ್ಷಕ ಅರ್ಧ ಶತಕ (65) ಹಾಗೂ ನಾಯಕಿ ಸೋನಾಲ್ (17ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡವು ಅಂತರ ವಿಶ್ವವಿದ್ಯಾಲಯ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡಿತು.

ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ, ಪಂಜಾಬ್ ತಂಡವು 4 ವಿಕೆಟ್‌ಗಳಿಂದ ಹರಿಯಾಣದ ರೋಹ್ಟಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು.

ಇದುವರೆಗಿನ ಪಂದ್ಯಗಳಲ್ಲಿ ಉತ್ತಮ ಮೊತ್ತ ಪೇರಿಸುತ್ತ ಬಂದಿದ್ದ ರೋಹ್ಟಕ್ ತಂಡವು ಫೈನಲ್‌ನಲ್ಲಿ 126 ರನ್‌ಗಳ (24.4 ಓವರ್) ಸಾಧಾರಣ ಮೊತ್ತಕ್ಕೆ ಆಲೌಟ್ ಆಯಿತು. ಭಾವನಾ ಓಹ್ಲಾನ್ (55) ಮಾತ್ರ ಹೋರಾಟ ತೋರಿದರು. ನಾಯಕಿ ಸೋನಾಲ್ ಅವರೊಂದಿಗೆ ಶಿವಾನಿ ಜಂಗೀದ್ (24ಕ್ಕೆ2) ಶಿಸ್ತಿನ ಬೌಲಿಂಗ್ ಪ್ರದರ್ಶಿಸಿ ಹರಿಯಾಣ ತಂಡವನ್ನು ಕಾಡಿದರು.

ಗುರಿ ಬೆನ್ನಟ್ಟಿದ ಲವ್ಲಿ ಪ್ರೊಫೆಷನಲ್ ವಿ.ವಿ. ತಂಡವು ಆರಂಭದಲ್ಲೇ ಆಘಾತ ಅನುಭವಿಸಿತು. ದೀಪಿಕಾ ತಿವಾರಿ (9), ಶಿವಾನಿ ಕೃಷ್ಣ (0), ಸುಮನ್ (7) ಬೇಗನೇ ನಿರ್ಗಮಿಸಿದರು. 52 ರನ್ನಿಗೆ 4 ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟದಲ್ಲಿತ್ತು. ಈ ವೇಳೆ ದೀಪಾ ಕುಮಾರಿ (25) ಅವರೊಂದಿಗೆ ತಾಳ್ಮೆಯ ಆಟವಾಡಿದ ನಜ್ಮಾ (65, 4X9) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ತಂಡದ ಮೊತ್ತ 119 ರನ್ ಆಗಿದ್ದಾಗ ಇಬ್ಬರೂ ಔಟಾದರು. ಆದರೆ ಸಂಜನಾ ಹಾಗೂ ಶಿವಾನಿ ಜಂಗೀದ್ ಐದು ಎಸೆತಗಳಿರುವಂತೆ ಗುರಿ ತಲುಪಿಸಿದರು.

3ನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯ ತಂಡವು 3 ವಿಕೆಟ್‌ಗಳಿಂದ ಮಹಾರಾಷ್ಟ್ರದ ಪುಣೆಯ ಸಾವಿತ್ರಿಬಾಯಿಫುಲೆ ವಿಶ್ವವಿದ್ಯಾಲಯ ವಿರುದ್ಧ ಗೆಲುವು ಸಾಧಿಸಿತು. ಪುಣೆ ತಂಡವು 25 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ಅಮೃತಸರ ತಂಡವು 24 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 161 ರನ್ ಹೊಡೆದು ಗೆಲುವಿನ ನಗೆಬೀರಿತು.

ಕೋಲ್ಕತ ರೇಸ್

ಅನಸ್ತೇಸಿಯಾ ಗೆಲ್ಲುವ ನಿರೀಕ್ಷೆ

ಲೆವೆಲ್‌ಅಪ್ 11 ಕಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅನಸ್ತೇಸಿಯಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಸ್ಟೆರಿಕ್ಸ್ 1, ಇಂಡಿಯನ್ ಸ್ಟಾರ್ 2, ಟಿಕರ್ 4
2ನೇ ರೇಸ್: ಈಸ್ಟ್‌ಸೈಡ್ 1, ಅಹ್ರೆನ್ 4, ಟ್ರೆಸ್ ಬೀನ್ 2
3ನೇ ರೇಸ್: ಬಂಡಲ್ ಆಫ್ ಚಾರ್ಮ್ 3, ರೊಮೆರೊ 7, ವೆರೊನಿಕಾ 11
4ನೇ ರೇಸ್: ವಿಸ್ಲ್ ಬ್ಲೋವರ್ 4, ಸ್ಟಾರ್ ಜಸ್ಟೀಸ್ 1, ರಿಮೆಲ್ 3
5ನೇ ರೇಸ್: ಟೈಮ್ 1, ಡ್ರೀಮ್ ಸ್ಟೇಷನ್ 2, ಆಲ್ಟೋಜ್ 6
6ನೇ ರೇಸ್: ಟೊರಿನೊ 2, ಮಹಾಬಲ 1, ಅಕಂತ 4
7ನೇ ರೇಸ್: ಸ್ವಾವಿ ಚಿಕ್ 9, ಒನ್ಲಿ ಯೂ 5, ಮಾರ್ನಿಂಗ್ ಸ್ಟಾರ್ 4
8ನೇ ರೇಸ್: ಅನಸ್ತೇಸಿಯಾ 1, ಡೆಲ್ಫಿನಿ 4, ಫುಲ್ ವಾಲ್ಯೂಮ್ 5
9ನೇ ರೇಸ್: ರೆಡಿ ಟು ವಿನ್ 5, ಏಂಜೆಲ್ ಲೈಟ್ 1, ದಿ ಮೆಂಟಲಿಸ್ಟ್ 3

ಉತ್ತಮ ಬೆಟ್: ಸ್ವಾವಿ ಚಿಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಸುಧಾ, ಮಯೂರ ಓದಿರಿ

ಫೈನಲ್‌ಗೆ ನಿಶಾ



ನಿಶಾ ದಹಿಯಾ

ಅಸ್ತಾನ, ಕಜಕಸ್ತಾನ (ಪಿಟಿಐ): ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಸ್ಪರ್ಧಿಸಿರುವ ಭಾರತದ ನಿಶಾ ದಹಿಯಾ ಮಂಗಳವಾರ ಫೈನಲ್ ತಲುಪಿದ್ದು, ಟೂರ್ನಿಯನ್ನು ಸ್ಮರಣೀಯವಾಗಿಸಿಕೊಳ್ಳುವ ಹಾದಿಯಲ್ಲಿದ್ದಾರೆ.

ಮಹಿಳೆಯರ 68 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ನಿಶಾ 7-6ರಿಂದ ಚೀನಾದ ಫೆಂಗ್ ಜೊ ಅವರನ್ನು ಪರಾಭವಗೊಳಿಸಿದರು. ಕ್ವಾರ್ಟರ್‌ಫೈನಲ್‌ನಲ್ಲಿ ನಿಶಾ, ಮಂಗೋಲಿಯಾದ ಡೆಲ್ಗೆರ್‌ಮಾ ಎಂಕ್‌ಸೈಖಾನ್ ಅವರನ್ನು ಮಣಿಸಿದ್ದರು. ಚಿನ್ನದ ಪದಕ ಸುತ್ತಿನಲ್ಲಿ ನಿಶಾ ಅವರಿಗೆ ಜಪಾನ್‌ನ ಅಮಿ ಇಶೀ ಸವಾಲು ಎದುರಾಗಿದೆ. ಭಾರತದ ನೀಲಂ (50 ಕೆಜಿ ವಿಭಾಗ) ಮತ್ತು ಪ್ರಿಯಾ (76 ಕೆಜಿ) ಕಂಚಿನ ಪದಕದ ಸುತ್ತು ಪ್ರವೇಶಿಸಿದ್ದಾರೆ.

ವಿಶ್ವ ರ‍್ಯಾಂಕಿಂಗ್: ಪ್ರಿಯಾಂಶುಗೆ ಬಡ್ತಿ

ನವದೆಹಲಿ (ಪಿಟಿಐ): ಭಾರತದ ಪ್ರಿಯಾಂಶು ರಾಜಾವತ್ ಅವರು ಬಿಡಬ್ಲ್ಯುಎಫ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮಂಗಳವಾರ 38ನೇ ಸ್ಥಾನಕ್ಕೇರಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅವರಿಗೆ 20 ಸ್ಥಾನಗಳ ಬಡ್ತಿ ಸಿಕ್ಕಿದೆ.

21 ವರ್ಷದ ಪ್ರಿಯಾಂಶು, ಇತ್ತೀಚೆಗೆ ಫ್ರಾನ್ಸ್‌ನಲ್ಲಿ ನಡೆದ ಆರ್ಲಿಯಾನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ಸದ್ಯ ಪ್ರಿಯಾಂಶು ಅವರ ಬಳಿ 30,786 ಪಾಯಿಂಟ್‌ಗಳಿವೆ.

ಭಾರತದ ಲಕ್ಷ್ಯ ಸೇನ್ 24ನೇ ಸ್ಥಾನಕ್ಕೇರಿದ್ದರೆ, ಕಿದಂಬಿ ಶ್ರೀಕಾಂತ್ ಎರಡು ಸ್ಥಾನ ಕುಸಿತ ಕಂಡು 23ನೇ ಸ್ಥಾನದಲ್ಲಿದ್ದಾರೆ. ಎಚ್.ಎಸ್. ಪ್ರಣಯ್ ಎಂಟನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪಿ.ವಿ. ಸಿಂಧು ಎರಡು ಸ್ಥಾನ ಕುಸಿತ ಕಂಡು 11ನೇ ಸ್ಥಾನದಲ್ಲಿದ್ದರೆ, ಸೈನಾ ನೆಹ್ವಾಲ್ ಅವರು 31ನೇ ಸ್ಥಾನದಲ್ಲಿದ್ದಾರೆ.

ಅಂಕಿತಾ ಮಿಂಚು: ಭಾರತಕ್ಕೆ ಜಯ



ಅಂಕಿತಾ ರೈನಾ

ತಾಷ್ಕೆಂಟ್, ಉಜ್ಬೇಕಿಸ್ತಾನ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದ ಭಾರತ ತಂಡದವರು ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್‌ನ ಏಷ್ಯಾ–ಒಷಾನಿಯಾ ಸ್ಪರ್ಧೆಯ ಮೊದಲ ದಿನ ಥಾಯ್ಲೆಂಡ್ ತಂಡಕ್ಕೆ ಸೋಲುಣಿಸಿದರು.

ಬುಧವಾರ ಇಲ್ಲಿ ನಡೆದ ಹಣಾಹಣಿಯಲ್ಲಿ ಭಾರತ 2–1ರಿಂದ ಗೆದ್ದಿತು. ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಋತುಜಾ ಭೋಸ್ಲೆ ಅವರು 2–6, 1–6ರಿಂದ ಥಾಯ್ಲೆಂಡ್‌ನ ಲುಕ್ಸಿಕಾ ಕುಮ್‌ಕುಮ್ ಎದುರು ಸೋತರು.

ಆದರೆ ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಅಂಕಿತಾ ರೈನಾ ನಿರಾಸೆಗೊಳಿಸಲಿಲ್ಲ. ಅನುಭವಿ ಆಟಗಾರ್ತಿ 5-7, 6-1, 6-3ರಿಂದ ಪಿಯಂಗ್‌ತಾರ್ನ್ ಪ್ಲಿಪೆಚ್ ಎದುರು ಗೆದ್ದು ಭಾರತ ಸಮಬಲ ಸಾಧಿಸುವಂತೆ ಮಾಡಿದರು.

ಡಬಲ್ಸ್ ಸೆಣಸಾಟದಲ್ಲಿ ಅಂಕಿತಾ ಹಾಗೂ ಋತುಜಾ ಜೋಡಿ 4-6, 6-3, 6-2ರಿಂದ ಕುಮ್‌ಕುಮ್ – ಪ್ಲಿಪೆಚ್ ಅವರನ್ನು ಮಣಿಸಿದರು.

ಚೆಸ್: ಇಶಾನ್ ಯಶಸ್ಸಿನ ಓಟ ಅಬಾಧಿತ

ಮುಂಬೈ (ಪಿಟಿಐ): ಪ್ರಮುಖ ಆಟಗಾರರ ವಿರುದ್ಧ ಯಶಸ್ಸಿನ ಓಟ ಮುಂದುವರಿಸಿರುವ 12ರ ಬಾಲಕ ಇಶಾನ್ ತೆಂಡೂಲ್ಕರ್, ಅಖಿಲ ಭಾರತ ಫಿಡೆ ರೇಟೆಡ್ ಟೂರ್ನಿಯ ಆರನೇ ಸುತ್ತಿನಲ್ಲಿ ಮಂಗಳವಾರ ಫಿಡೆ ಮಾಸ್ಟರ್ ಸೌರವ್ ಖೆರ್ಡೇಕರ್ ವಿರುದ್ಧ ಜಯಗಳಿಸಿದ್ದಾನೆ. ಸೌರವ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದರು.

6ನೇ ಸುತ್ತಿನ ನಂತರ ಇಶಾನ್, ಇತರ ಮೂವರು ಆಟಗಾರರ (ತಲಾ 5.5 ಅಂಕ) ಅಗ್ರಸ್ಥಾನ ಹಂಚಿಕೊಂಡಿದ್ದಾನೆ. ಅರ್ನವ್ ಖೆರ್ಡೇಕರ್ (ರೇಟಿಂಗ್: 1722), ಆಯುಷ್ ಶಿರೋಡ್ಕರ್, ಅಗ್ರ ಶ್ರೇಯಾಂಕದ ವಿಕ್ರಮಾದಿತ್ಯ ಕುಲಕರ್ಣಿ (2251) ಕೂಡ ಐದೂವರೆ ಅಂಕ ಸಂಗ್ರಹಿಸಿದ್ದಾರೆ.

ಸೌಕರ್ಯಗಳ ಬಗ್ಗೆ ಪ್ರೇಕ್ಷಕರ ಅಸಮಾಧಾನ

5 ಕ್ರೀಡಾಂಗಣ ಅಭಿವೃದ್ಧಿಗೆ ಬಿಸಿಸಿಐ ಯೋಜನೆ

ನವದೆಹಲಿ (ಪಿಟಿಐ): ಬರುವ ಅಕ್ಟೋಬರ್– ನವೆಂಬರ್‌ನಲ್ಲಿ ನಿಗದಿಯಾಗಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ದೃಷ್ಟಿಯಲ್ಲಿಟ್ಟುಕೊಂಡು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಕನಿಷ್ಠ ಐದು ಕ್ರೀಡಾಂಗಣಗಳನ್ನು ದೊಡ್ಡ ಪ್ರಮಾಣದಲ್ಲಿ ನವೀಕರಿಸಲು ಯೋಜನೆ ಹಾಕಿಕೊಂಡಿದೆ. ಇದಕ್ಕಾಗಿ ₹500 ಕೋಟಿ ವೆಚ್ಚ ಮಾಡಲು ಉದ್ದೇಶಿಸಿದೆ.

ಆಟದ ಜನಪ್ರಿಯತೆಯಿಂದಾಗಿ ಬಿಸಿಸಿಐಗೆ ಭಾರಿ ಪ್ರಮಾಣದಲ್ಲಿ ಆದಾಯ ಹರಿದುಬರುತ್ತಿದೆ. ಶ್ರೀಮಂತ ಕ್ರಿಕೆಟ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಬಿಸಿಸಿಐ ಪಾತ್ರವಾಗಿದೆ. ಆದರೆ, ಟಿಕೆಟ್ ಖರೀದಿಸಿ ಬರುವ ಪ್ರೇಕ್ಷಕರು ಹೆಚ್ಚಿನ ಕ್ರೀಡಾಂಗಣಗಳಲ್ಲಿ ಸಮರ್ಪಕ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ.

12 ಕ್ರೀಡಾಂಗಣಗಳಲ್ಲಿ ಪಂದ್ಯ

ವಿಶ್ವಕಪ್ ಪಂದ್ಯಗಳ ಆಯೋಜನೆಗಾಗಿ 12 ಕ್ರೀಡಾಂಗಣಗಳನ್ನು ಸದ್ಯಕ್ಕೆ ಪಟ್ಟಿ ಮಾಡಲಾಗಿದೆ. ಅವುಗಳು – ಬೆಂಗಳೂರು, ಚೆನ್ನೈ, ದೆಹಲಿ, ಧರ್ಮಶಾಲಾ, ಗುವಾಹಟಿ, ಹೈದರಾಬಾದ್, ಕೋಲ್ಕತ್ತ, ಲಖನೌ, ಇಂದೋರ್, ರಾಜಕೋಟ್, ಮುಂಬೈ ಮತ್ತು ಅಹಮದಾಬಾದ್. ಫೈನಲ್ ಅಹಮದಾಬಾದ್‌ನಲ್ಲಿ ನಡೆಯುವ ಸಾಧ್ಯತೆಯಿದೆ. ವಿಶ್ವಕಪ್ ಟೂರ್ನಿ 46 ದಿನಗಳ ಕಾಲ ನಡೆಯಲಿದ್ದು, 48 ಪಂದ್ಯಗಳು ಇರುತ್ತವೆ. ಭಾರತ 2011ರಲ್ಲಿ ಕೊನೆಯ ಬಾರಿ ಏಕದಿನ ವಿಶ್ವಕಪ್ ಆತಿಥ್ಯ ವಹಿಸಿದ್ದು, ಆ ಕೂಟದಲ್ಲಿ ಮಹೇಂದ್ರ ಸಿಂಗ್ ಧೋನಿ ನೇತೃತ್ವದ ತಂಡ ಟ್ರೋಫಿ ಎತ್ತಿಹಿಡಿದಿತ್ತು.

ಫೆಬ್ರುವರಿ –ಮಾರ್ಚ್ ತಿಂಗಳಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯ ವೇಳೆ, ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸ್ವಚ್ಛತೆಯಿಲ್ಲದ ಶೌಚಾಲಯದ ದುರವಸ್ಥೆ ಕಂಡು ಪ್ರೇಕ್ಷಕರು ಆಕ್ರೋಶ ವ್ಯಕ್ತಪಡಿಸಿದ್ದರು.

ಈಗ ನವೀಕರಣಕ್ಕೆ ಉದ್ದೇಶಿಸಿರುವ ಐದು ಕ್ರೀಡಾಂಗಣದಲ್ಲಿ ದೆಹಲಿ ಕ್ರೀಡಾಂಗಣವೂ ಒಂದಾಗಿದೆ.

ಈಗಿರುವ ವ್ಯವಸ್ಥೆ ಮತ್ತು ಮಾದರಿ ಕ್ರೀಡಾಂಗಣ ಹೇಗಿರಬೇಕೆಂಬ ವಿಶ್ಲೇಷಣೆ ನಡೆಸಿ ಕ್ರೀಡಾಂಗಣಗಳ ಪಟ್ಟಿ ಮಾಡಲಾಗಿದೆ.

ಪಿಟಿಐಗೆ ಲಭ್ಯವಾಗಿರುವ ಪಟ್ಟಿಯಲ್ಲಿ, ದೆಹಲಿಯ ಜೊತೆ ಹೈದರಾಬಾದ್, ಕೋಲ್ಕತ್ತ, ಮೊಹಾಲಿ ಮತ್ತು ಮುಂಬೈನ ಕ್ರೀಡಾಂಗಣಗಳ ಹೆಸರು ಇದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲೂ ನೈರ್ಮಲ್ಯ ಕಾಪಾಡದಿರುವ ಬಗ್ಗೆಯೂ ಪ್ರೇಕ್ಷಕರು ದೂರಿದ್ದರು.

ದೆಹಲಿ ಕ್ರೀಡಾಂಗಣದ ನವೀಕರಣಕ್ಕೆ ₹100 ಕೋಟಿ, ಹೈದರಾಬಾದ್‌ನ ಕ್ರೀಡಾಂಗಣಕ್ಕೆ ಹೊಸರೂಪ ನೀಡಲು ₹117.17 ಕೋಟಿ, ಕೋಲ್ಕತ್ತದ ಈಡನ್ ಗಾರ್ಡನ್ ಕ್ರೀಡಾಂಗಣಕ್ಕೆ 124.47 ಕೋಟಿ, ಮೊಹಾಲಿಯ ಕ್ರೀಡಾಂಗಣಕ್ಕೆ ₹78.82 ಕೋಟಿ ವೆಚ್ಚವಾಗಲಿದೆ. ಚಾವಣಿಯ ಕೆಲಸಕ್ಕೆ ಕೈಹಾಕಿದ್ದಲ್ಲಿ ಈ ವೆಚ್ಚ ಇನ್ನೂ ಹೆಚ್ಚಲಿದೆ.#

ವಿಶ್ವಕಪ್: ಚೆನ್ನೈ, ಕೋಲ್ಕತ್ತದಲ್ಲಿ ಆಡಲು ಪಾಕಿಸ್ತಾನ ಬಯಕೆ

ನವದೆಹಲಿ (ಪಿಟಿಐ): ಭಾರತದಲ್ಲಿ ನಡೆಯಲಿರುವ ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ವೇಳೆ ಪಾಕಿಸ್ತಾನ ತಂಡದವರು ತಮ್ಮ ಪಂದ್ಯಗಳನ್ನು ಚೆನ್ನೈ ಹಾಗೂ ಕೋಲ್ಕತ್ತದಲ್ಲಿ ಆಡಲು ಬಯಸಿದ್ದಾರೆ ಎಂದು ಐಸಿಸಿಯ ಮೂಲಗಳು ಹೇಳಿವೆ.

ವಿಶ್ವಕಪ್ ಟೂರ್ನಿ ಅ.5 ರಿಂದ ನಡೆಯಲಿದ್ದು, ಒಟ್ಟು 46 ಪಂದ್ಯಗಳು ಆಯೋಜನೆಯಾಗಿವೆ. ಪಂದ್ಯ ನಡೆಯಲಿರುವ 12 ತಾಣಗಳನ್ನು ಬಿಸಿಸಿಐ ಈಗಾಗಲೇ ಗುರುತಿಸಿದೆ.

ಪಾಕಿಸ್ತಾನ ತಂಡವು ತನ್ನ ಪಂದ್ಯಗಳನ್ನು ಭಾರತದಲ್ಲಿ ಆಡುವ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಆದರೂ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧಿಕಾರಿಗಳು ಐಸಿಸಿಯ ಹಿರಿಯ ಅಧಿಕಾರಿಯೊಬ್ಬರ ಜತೆ ಈ ಬಗ್ಗೆ ಮಾತುಕತೆ ನಡೆಸಿರುವುದಾಗಿ ಮೂಲಗಳು ತಿಳಿಸಿವೆ.

'ಪಾಕಿಸ್ತಾನದ ಪಂದ್ಯಗಳು ಎಲ್ಲಿ ನಡೆಯಲಿವೆ ಎಂಬುದು ಬಿಸಿಸಿಐ ಮತ್ತು ಭಾರತ ಸರ್ಕಾರದ ನಿರ್ಧಾರವನ್ನು ಅವಲಂಬಿಸಿರುತ್ತದೆ. ಆದರೂ ಪಾಕಿಸ್ತಾನವು ತನ್ನ ಹೆಚ್ಚಿನ ಪಂದ್ಯಗಳನ್ನು ಚೆನ್ನೈ ಮತ್ತು ಕೋಲ್ಕತ್ತದಲ್ಲಿ ಆಡುವ ಸಾಧ್ಯತೆಯೇ ಅಧಿಕ. ಈ ಎರಡು ತಾಣಗಳಲ್ಲಿ ಆಡುವಾಗ ಪಾಕ್ ಆಟಗಾರರಿಗೆ ಸುರಕ್ಷತೆಯ ಭಾವ ಮೂಡುವುದೇ ಇದಕ್ಕೆ ಕಾರಣ' ಎಂದು ಹೇಳಿವೆ.

1996ರ ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳ ನಡುವಣ ಕ್ವಾರ್ಟರ್ ಪಂದ್ಯ ಬೆಂಗಳೂರಿನಲ್ಲಿ ನಡೆದಿತ್ತು.